ಬೆಂಗಳೂರು
ಶನಿವಾರ, 21 ಮಾರ್ಚ್ 2026
ಸಂಪುಟ 33, ಸಂಚಿಕೆ 139, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸನಾತನ ಧರ್ಮಕ್ಕೆ ಅವಮಾನ: ಬಿಜೆಪಿ ಕಿಡಿ | 0೫
ಅಫ್ಘಾನ್‌ಗೆ ಭಾರತದಿಂದ ನೆರವು | 0೫
ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಧನೆ | 0೩

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅಶ್ವಿನಿ

ದಿನದ ಮಾತು

ವಿದ್ಯೆ ಎಂಬ ಗುಪ್ತ ಧನವು ಪ್ರಳಯ ಕಾಲದಲ್ಲೂ ನಾಶವಾಗುವುದಿಲ್ಲ.

▲ ನೀತಿಶತಕ

ನೀವು ವಿನಾ ಕಾರಣ ಮಾತನಾಡುತ್ತೀರಾ?

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ದಶಾವತಾರಿ, ಯಕ್ಷಗುರು ಗೋವಿಂದ ಭಟ್ ಇನ್ನಿಲ್ಲ



• **ತೀರ್ಥಹಳ್ಳಿ:** 'ನಡೆದಾಡುವ ವಿಶ್ವಕೋಶ', 'ದಶಾವತಾರಿ', 'ಯಕ್ಷಗುರು' ಎಂದೇ ಯಕ್ಷಗಾನ ಕ್ಷೇತ್ರದಲ್ಲಿ ಖ್ಯಾತರಾಗಿದ್ದ ಸೂರಿಕುಮೇರಿ ಕೆ. ಗೋವಿಂದ ಭಟ್ (90) ಹೆದ್ದೂರಿನ ಸಮೀಪದ ಸಂತೆಕೊಪ್ಪದಲ್ಲಿ ಅವರ ಮಗನ ಮನೆಯಲ್ಲಿ ಶುಕ್ರವಾರ ವಿಧಿವಶರಾಗಿದ್ದಾರೆ. ಅಂತಿಮ ಕ್ರಿಯೆಯನ್ನು ಶನಿವಾರ ಹೆದ್ದೂರು ಸಂತೆಕೊಪ್ಪದಲ್ಲಿ ನಡೆಸಲಾಗುವುದು ಎಂದು ಕುಟುಂಬ ಮೂಲಗಳಿಂದ ತಿಳಿದು ಬಂದಿದೆ. ಶ್ರೀಕ್ಷೇತ್ರ ಧರ್ಮಸ್ಥಳ ಮೇಳವೊಂದರಲ್ಲಿಯೇ ಸುಮಾರು 50 ವರ್ಷಗಳ ಕಾಲ ತಿರುಗಾಟ ನಡೆಸಿದ್ದ ಇವರು ಕೆಲವು ವರ್ಷಗಳ ಹಿಂದೆ ವಯೋಸಹಜದ ಕಾರಣ ಮೇಳದಿಂದ ನಿವೃತ್ತರಾಗಿದ್ದರು. ➡ಪುಟ ೨

ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್

• **ಬೆಂಗಳೂರು:** 2026-27ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆಯಲ್ಲಿ ಉಚಿತವಾಗಿ ಶೂ ಮತ್ತು ಸಾಕ್ಸ್ ವಿತರಿಸಲು ಸರ್ಕಾರ ಆದೇಶಿಸಿದೆ.

• ಪುಟ ೩

ಗಲ್ಫ್ ಮೇಲಿನ ಇರಾನ್ ದಾಳಿ ಖಂಡಿಸಿದ ಮೋದಿ

• **ಹೊಸದಿಲ್ಲಿ:** ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ. ಕತಾರ್, ಫ್ರಾನ್ಸ್, ಜೋರ್ಡನ್, ಒಮನ್ ಹಾಗೂ ಮಲೇಷ್ಯಾ ನಾಯಕರ ಜತೆ ಮಧ್ಯಪ್ರಾಚ್ಯ ಯುದ್ಧ ಕುರಿತು ಚರ್ಚೆ ನಡೆಸಿದ ಪ್ರಧಾನಿ ಮೋದಿ, ಪ್ರದೇಶದಲ್ಲಿ ಯುದ್ಧ ತೀವ್ರತೆ ಹೆಚ್ಚುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

• ಪುಟ ೫

ಕೆನಡಾದಲ್ಲಿ ಭಾರತ ಗುಪ್ತ ಚಟುವಟಿಕೆ ನಡೆಸುತ್ತಿಲ್ಲ

• ಪುಟ ೫

300 ಬೆಟ್ಟಿಂಗ್ ಆ್ಯಪ್‌ಗಳಿಗೆ ಕೇಂದ್ರ ಸರ್ಕಾರ ನಿರ್ಬಂಧ

• ಪುಟ ೫

ಇಂಧನ ಘಟಕಗಳ ಮೇಲೆ ಪರಸ್ಪರ ದಾಳಿ, ಜಾಗತಿಕ ಆತಂಕ

ಅನಿಲ ಪೂರೈಕೆ ಬಾಧಿತ



• **ದುಬೈ/ಹೊಸದಿಲ್ಲಿ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮೂರನೇ ವಾರವೂ ಮುಂದುವರಿದಿದ್ದು, ಪ್ರಮುಖ ಇಂಧನ ಘಟಕಗಳನ್ನು ಗುರಿಯಾಗಿಸಿ ಪರಸ್ಪರ ದಾಳಿಗಳು ನಡೆಯುತ್ತಿದ್ದು, ಜಾಗತಿಕ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಮಧ್ಯಪ್ರಾಚ್ಯ ಯುದ್ಧದಿಂದ ಆಮದು ಮೇಲೆ ಮಾರಕ ಪರಿಣಾಮ ಬಿದ್ದಿದ್ದು, ಎಲ್‌ಪಿಜಿ ಪೂರೈಕೆ ಕಳವಳಕಾರಿ ಎಂದು ಕೇಂದ್ರ ಸರ್ಕಾರ ಹೇಳಿದೆ. ಹೊಸದಿಲ್ಲಿಯಲ್ಲಿ ಶುಕ್ರವಾರ ನಡೆದ ದೈನಂದಿನ ಮಾಹಿತಿ ನೀಡುವ ಸಭೆಯಲ್ಲಿ ಪೆಟ್ರೋಲಿಯಂ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು, ಸರಬರಾಜು ಸಾಮಾನ್ಯವಾಗಿದ್ದರೂ ಬೇಡಿಕೆ ಏರಿಕೆಯಿಂದ ಪರಿಸ್ಥಿತಿ ಚಿಂತಾ ಜನಕವಾಗಿದೆ ಎಂದರು. ಗ್ರಾಹಕರು ಸಾಧ್ಯವಾದಲ್ಲಿ ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಬಳಕೆಗೆ ಆದ್ಯತೆ ನೀಡ ಬೇಕು ಎಂದು ಮನವಿ ಮಾಡಿದರು. ಒತ್ತಡ ಕಡಿಮೆ ಮಾಡಲು 13,700ಕ್ಕೂ ಹೆಚ್ಚು ಪಿಎನ್‌ಜಿ ಸಂಪರ್ಕಗಳನ್ನು ನೀಡಲಾಗಿದೆ. ➡ಪುಟ ೨



6 ಭಾರತೀಯರ ಬಲಿ

ಮಧ್ಯಪ್ರಾಚ್ಯ ಯುದ್ಧದ ವಿವಿಧ ಘಟನೆಗಳಲ್ಲಿ ಆರು ಭಾರತೀಯರು ಮೃತಪಟ್ಟಿದ್ದು, ಇನ್ನೊಬ್ಬರು ಕಾಣೆಯಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶುಕ್ರವಾರ ತಿಳಿಸಿದೆ.

ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ

ಗಲ್ಫ್ ಪ್ರದೇಶದ ಇಂಧನ ತಾಣಗಳ ಮೇಲೆ ದಾಳಿ ಮತ್ತು ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆಗೆ ಅಡಚಣೆ ಉಂಟಾಗಿರುವುದು ಜಾಗತಿಕ ಇಂಧನ ಸಂಕಷ್ಟದ ಭೀತಿಯನ್ನು ಹೆಚ್ಚಿಸಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.47 ಏರಿಕೆಯಾಗಿ 107ಕ್ಕೆ ತಲುಪಿದ್ದು, ಇಂಧನ ಮತ್ತು ಆಹಾರ ದರಗಳು ವಿಶ್ವಾದ್ಯಂತ ಏರಿಕೆಯಾಗುತ್ತಿವೆ. ಹೀಲಿಯಂ ಮತ್ತು ಸಲ್ಫರ್ ಮುಂತಾದ ಪ್ರಮುಖ ಮೂಲ ವಸ್ತುಗಳ ಸರಬರಾಜು ಅಡಚಣೆಗೆ ಒಳಗಾಗಿದ್ದು, ಸರಕು ಸರಪಳಿಯಲ್ಲಿ ಮತ್ತಷ್ಟು ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ.

ಪ್ರವಾಸಿ ತಾಣಗಳು ಇರಾನ್ ಗುರಿ

ಪ್ರವಾಸಿ ತಾಣಗಳೂ ಶತ್ರುಗಳಿಗೆ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಸೇನಾ ವಕ್ತಾರ ಜನರಲ್ ಅಬೋಲ್ಫಝುಲ್ ಶೆಕಾರ್ಚಿ ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ನೌಕಾಪಡೆ ಮತ್ತು ವಾಯುಪಡೆಯು ಕುಸಿದಿದೆ ಎಂದು ಹೇಳಿದ್ದರೆ, ಇರಾನ್ ಅದನ್ನು ತಳ್ಳಿಹಾಕಿದೆ. ಕ್ರಾಂತಿಕಾರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನಾಇನಿ, 'ಯುದ್ಧದ ನಡುವೆಯೂ ಕ್ಷಿಪಣಿ ಉತ್ಪಾದನೆ ನಡೆಯುತ್ತಿದೆ; ಸಂಗ್ರಹದಲ್ಲಿ ಸಮಸ್ಯೆ ಇಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯ ಕೆಲವೇ ಗಂಟೆಗಳ ನಂತರ ಅವರು ವಾಯುದಾಳಿಯಲ್ಲಿ ಮೃತಪಟ್ಟಿದ್ದಾರೆ. ಜತೆಗೆ ಬಸಿಜ್ ಫೋರ್ಸ್‌ನ ಇಂಟೆಲಿಜೆನ್ಸ್ ಡೈರೆಕ್ಟರೇಟ್ ಮುಖ್ಯಸ್ಥ ಇಸ್ಮೈಲ್ ಅಹಮದಿ ಕೂಡಾ ಮೃತಪಟ್ಟಿದ್ದಾರೆ. ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಶತ್ರುಗಳ ಭದ್ರತೆಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದ್ದಾರೆ.

ಮತ್ತಷ್ಟು ನೌಕೆ ರವಾನೆ

ಇರಾನ್ ಕೇಂದ್ರೀಕೃತ ಯುದ್ಧ ಸನ್ನಿವೇಶ ಉಲ್ಬಣಿಸುತ್ತಿರುವ ನಡುವೆಯೇ ಅಮೆರಿಕ ಮಧ್ಯಪ್ರಾಚ್ಯದಲ್ಲಿ ತನ್ನ ಸೈನಿಕ ಹಾಜರಾತಿಯನ್ನು ಮತ್ತಷ್ಟು ಬಲಪಡಿಸಿದೆ. ಮೂರು ಹೆಚ್ಚುವರಿ ಯುದ್ಧನೌಕೆಗಳೊಂದಿಗೆ ಸುಮಾರು 2,500ಕ್ಕೂ ಹೆಚ್ಚು ಮೆರೈನ್ಸ್‌ನ್ನು ಪ್ರದೇಶದತ್ತ ಕಳುಹಿಸಿರುವುದು ಪಶ್ಚಿಮ ಏಷ್ಯಾದ ಉದ್ವಿಗ್ನತೆಯನ್ನು ಇನ್ನಷ್ಟು ಗಂಭೀರಗೊಳಿಸಿದೆ. ಅಮೆರಿಕದ ಯುಎಸ್‌ಎಸ್ ಬಾಕ್ಸರ್ ಸೇರಿ ಇನ್ನೆರಡು ಅಂಭಿಬಿಯಸ್ ಅಸಾಲ್ಟ್ ಶಿಪ್‌ಗಳು ಸ್ಯಾನ್ ಡಿಯಾಗೋದಿಂದ ಹೊರಟಿದ್ದು, 11ನೇ ಮೆರೈನ್ ಎಕ್ಸ್‌ಪಿಡಿಶನರಿ ಯುನಿಟ್‌ನ ಸೈನಿಕರೂ ಈ ದಳದ ಭಾಗವಾಗಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ದೃಢಪಡಿಸಿದ್ದಾರೆ.

ಗಲ್ಫ್ ದೇಶಗಳ ಮೇಲೆ ದಾಳಿ

ಕುವೈತ್, ಕತಾರ್ ಸೇರಿದಂತೆ ಗಲ್ಫ್ ದೇಶಗಳಲ್ಲಿರುವ ರಿಫೈನರಿ ಘಟಕಗಳನ್ನೂ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಕತಾರ್‌ನ ಮಿನಾ ಅಲ್-ಅಹ್ಮದಿ ರಿಫೈನರಿ ಮೇಲೆ ಎರಡು ಹಂತದ ದಾಳಿ ನಡೆಸಲಾಗಿದೆ. ಕುವೈತ್‌ನ ಪ್ರಮುಖ ತೈಲ ರಿಫೈನರಿ ಮೇಲೆ ಡ್ರೋನ್ ದಾಳಿ ನಡೆಸಿದ್ದು, ಬೆಂಕಿ ಕಾಣಿಸಿಕೊಂಡಿದೆ. ಬಹ್ರೇನ್ ಮತ್ತು ಸೌದಿ ಅರೇಬಿಯಾದಲ್ಲಿಯೂ ದಾಳಿಗಳ ಪ್ರಯತ್ನ ನಡೆದಿದೆ. ದುಬೈನಲ್ಲಿ ಈದ್-ಉಲ್-ಫಿತ್ರ್ ಸಂದರ್ಭದಲ್ಲಿ ಸ್ಫೋಟಗಳು ಕೇಳಿಬಂದಿದ್ದು, ಕ್ಷಿಪಣಿಗಳನ್ನು ಧ್ವಂಸ ಮಾಡಲಾಗಿದೆ. ಟೆಹ್ರಾನ್ ಮತ್ತು ಜೆರುಸಲೇಮ್ ನಲ್ಲಿಯೂ ಸ್ಫೋಟಗಳು ವರದಿಯಾಗಿವೆ. ಇನ್ನೊಂದೆಡೆ ಇಸ್ರೇಲ್, ಲೆಬನಾನ್ ಮತ್ತು ಸಿರಿಯಾದಲ್ಲಿಯೂ ದಾಳಿ ವಿಸ್ತರಿಸಿದೆ.

ಬಹ್ರೈನ್ ಕಿಂಗ್ ಜತೆ ಮೋದಿ ಮಾತುಕತೆ

• ಪುಟ ೨

ಪ್ರೀಮಿಯಂ ತೈಲ ದರ ಏರಿಕೆ

• ಪುಟ ೨

ಮೂಡದ ಒಮ್ಮತ | ಹೈಕಮಾಂಡ್ ಪ್ರವೇಶ

ದಾವಣಗೆರೆ ದಕ್ಷಿಣ ಕಾಂಗ್ರೆಸ್ ಕಗ್ಗಂಟು



" ದಾವಣಗೆರೆಯಲ್ಲಿ ಶಾಮನೂರು ಕುಟುಂಬ ಟಿಕೆಟ್ ಕೇಳುತ್ತಿದೆ. ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ಕುಟುಂಬಕ್ಕೆ ಟಿಕೆಟ್ ಕೊಡುತ್ತಿಲ್ಲವೇ? ಹಾಗೆಯೇ ಇಲ್ಲಿಯೂ ತಮ್ಮ ಕುಟುಂಬಕ್ಕೆ ಕೊಡಬೇಕು ಎಂದು ಹೇಳುತ್ತಿದೆ. ಅತ್ತ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದರಲ್ಲಿ ತಪ್ಪೇನಿಲ್ಲ. ಆದರೆ, ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ.

■ ಎಂ.ಬಿ.ಪಾಟೀಲ್, ಸಚಿವ

• **ಬೆಂಗಳೂರು:** ಎರಡು ವಿಧಾನಸಭಾ ಕ್ಷೇತ್ರಗಳ ಪೈಕಿ ಬಾಗಲಕೋಟೆಗೆ ಅಭ್ಯರ್ಥಿ ಆಯ್ಕೆ ಬಹುತೇಕ ಅಂತಿಮವಾಗಿದ್ದರೂ, ದಾವಣಗೆರೆ ದಕ್ಷಿಣ ಮಾತ್ರ ನಾಯಕರು ಪಟ್ಟು ಸಡಿಲಿಸದ ಹಿನ್ನೆಲೆಯಲ್ಲಿ ಖುದ್ದು ರಾಜ್ಯ ಉಸ್ತುವಾರಿಯ ಮಧ್ಯಪ್ರವೇಶದ ನಂತರವೂ ಕಗ್ಗಂಟಾಗಿಯೇ ಉಳಿದಿದೆ. ಪರಿಣಾಮ ಈ ವಿಚಾರ ಈಗ ಹೈಕಮಾಂಡ್ ಅಂಗಳಕ್ಕೆ ಹೋಗಿದ್ದು, ಎರಡು ದಿನಗಳಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ.

ಅಭ್ಯರ್ಥಿಗಳ ಆಯ್ಕೆ ವಿಚಾರಕ್ಕಾಗಿಯೇ ಶುಕ್ರವಾರ ನಗರಕ್ಕೆ ಆಗಮಿಸಿದ್ದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಪಕ್ಷದ ಪ್ರಬಲ ಆಕಾಂಕ್ಷಿಗಳು ಹಾಗೂ ವೀರಶೈವ-ಲಿಂಗಾಯತ, ಅಲ್ಪಸಂಖ್ಯಾತ ಸೇರಿದಂತೆ ನಾಯಕರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದರು. ಆದಾಗ್ಯೂ ಒಮ್ಮತ ಮೂಡಲಿಲ್ಲ ಎಂದು ಮೂಲಗಳು ತಿಳಿಸಿವೆ. ಮಧ್ಯಾಹ್ನ ನೇರವಾಗಿ ಹೋಟೆಲ್ ತಾಜ್ ವೆಸ್ಟ್‌ಎಂಡ್ ಬಂದಿಳಿದ ಸುರ್ಜೇವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಒಂದು ಸುತ್ತಿನ ಸಭೆ ನಡೆಸಿದರು. ➡ಪುಟ ೨

ಬಿಜೆಪಿಯಿಂದ ವೀರಣ್ಣ ಚರಂತಿಮಠ ನಾಮಪತ್ರ

• **ಬಾಗಲಕೋಟೆ:** ಶಾಸಕ ಎಚ್.ವೈ. ಮೇಟಿ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದು, ಪಕ್ಷದ ಮುಖಂಡ ವೀರಣ್ಣ ಚರಂತಿಮಠ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ಪತ್ನಿ ರಾಜೇಶ್ವರಿ ಅವರೊಂದಿಗೆ ತಹಶೀಲ್ದಾರ ಕಚೇರಿಗೆ ಆಗಮಿಸಿದ ವೀರಣ್ಣ ಚರಂತಿಮಠ ಅವರು ಚುನಾವಣಾ ಅಧಿಕಾರಿ ಸಂತೋಷ್ ಜಗಲಾಸರ್ ಅವರಿಗೆ ನಾಮಪತ್ರ ಸಲ್ಲಿಸಿದರು. ಶುಭ ಮುಹೂರ್ತದ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು. ➡ಪುಟ ೨

2 ಕ್ಷೇತ್ರಗಳ ಅಭಿಪ್ರಾಯ ಸಂಗ್ರಹಿಸಿದ್ದೇವೆ: ಡಿಸಿಎಂ

• ಪುಟ ೨

ಮಧ್ಯಪ್ರಾಚ್ಯ ಯುದ್ಧ: ಕೇಂದ್ರದ ನಿಲುವಿಗೆ ಕೈ ಸಂಸದರ ಮೆಚ್ಚುಗೆ

ತಟಸ್ಥ ನೀತಿ ಜವಾಬ್ದಾರಿ ನಡೆ





• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಯಾವುದೇ ಪಕ್ಷದ ಪರವಾಗಿಲ್ಲದೆ ತಟಸ್ಥ ನಿಲುವನ್ನು ಅನುಸರಿಸುತ್ತಿರುವುದು ರಾಜಕೀಯ ಚರ್ಚೆಗೆ ಕಾರಣವಾಗಿದೆ. ಕೆಲ ವಿರೋಧ ಪಕ್ಷಗಳು ಇದನ್ನು ಟೀಕಿಸುತ್ತಿದ್ದರೂ, ಕಾಂಗ್ರೆಸ್ ಸಂಸದರಾದ ಶಶಿ ತರೂರ್ ಮತ್ತು ಮನೀಶ್ ತಿವಾರಿ ಕೇಂದ್ರ ಸರ್ಕಾರದ ಕ್ರಮವನ್ನು ಸಮರ್ಥಿಸಿದ್ದಾರೆ. ಕೇಂದ್ರದ ಈ ನಿಲುವು ಪ್ರಬುದ್ಧ ಮತ್ತು ಜವಾಬ್ದಾರಿಯುತ ಕಾರ್ಯತಂತ್ರದ ಸೂಚಕ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾರ್ಯತಂತ್ರದ ವಿವೇಕ: ಭಾರತದ ಮೌನವನ್ನು ತಪ್ಪಾಗಿ ಅರ್ಥೈಸಬಾರದು ಎಂದು ತಿರುವನಂತ ಪುರಂನ ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ. ➡ಪುಟ ೨

ವಿಭಿನ್ನ ಅಭಿಪ್ರಾಯಗಳ ನಡುವೆ ಕೆಲವರ ಬೆಂಬಲ

ಮಧ್ಯಪ್ರಾಚ್ಯ ಯುದ್ಧ ಸಂಬಂಧ ಕೇಂದ್ರ ಸರ್ಕಾರದ ನಿಲುವುಗಳ ಬಗ್ಗೆ ಕಾಂಗ್ರೆಸ್‌ನೊಳಗೆ ಭಿನ್ನ ಅಭಿಪ್ರಾಯಗಳಿದ್ದರೂ, ಆ ಪಕ್ಷದ ಕೆಲವು ಸಂಸದರು ಕೇಂದ್ರ ಸರ್ಕಾರದ ತಟಸ್ಥ ನಿಲುವಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಜಾಗತಿಕ ಉದ್ವಿಗ್ನ ಪರಿಸ್ಥಿತಿಯಲ್ಲಿ ಭಾರತ ತನ್ನ ಕಾರ್ಯತಂತ್ರದ ಸ್ವಾಯತ್ತತೆಯನ್ನು ಉಳಿಸಿಕೊಂಡು, ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವ ದಿಸೆಯಲ್ಲಿ ನಡೆದುಕೊಳ್ಳುತ್ತಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಏಕತೆ, ಅನುಶಾಸನ, ಧರ್ಮದ ಅನುಸರಣೆಯಿಂದ ಶಾಶ್ವತ ಶಾಂತಿ

ಸಂಘರ್ಷಕ್ಕೆ ಸ್ವಾರ್ಥ ಮೂಲ ಕಾರಣ



• **ನಾಗಪುರ:** ಸ್ವಾರ್ಥಪೂರಿತ ಹಿತಾಸಕ್ತಿಗಳು ಮತ್ತು ಪ್ರಾಬಲ್ಯ ಮೆರೆಯುವ ದುರ್ಬಯಕೆಯೇ ಇಂದು ವಿಶ್ವದಲ್ಲಿ ಕಂಡುಬರುತ್ತಿರುವ ಸಂಘರ್ಷಗಳಿಗೆ ಮೂಲ ಕಾರಣವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಶುಕ್ರವಾರ ಹೇಳಿದ್ದು, ಏಕತೆ, ಅನುಶಾಸನ ಮತ್ತು ಧರ್ಮ ಅನುಸರಣೆಯಿಂದ ಮಾತ್ರವೇ ಶಾಶ್ವತ ಶಾಂತಿ ಸಾಧಿಸಲು ಸಾಧ್ಯ ಎಂದಿದ್ದಾರೆ.

ಅವರು ನಾಗಪುರದಲ್ಲಿ ವಿಶ್ವ ಹಿಂದು ಪರಿಷತ್ತಿನ ವಿದರ್ಭ ಪ್ರಾಂತ ಕಾರ್ಯಾಲಯಕ್ಕೆ ಶಿಲಾನ್ಯಾಸಗೈದು ಮಾತನಾಡಿದರು. ಕಳೆದ 2000 ವರ್ಷಗಳಿಂದ ಜಗತ್ತು ವಿವಿಧ ವಿಚಾರಗಳೊಂದಿಗೆ ಪ್ರಯೋಗಗಳನ್ನು ನಡೆಸಿಯೂ ಸಂಘರ್ಷ ಪರಿಹಾರದಲ್ಲಿ ಅತ್ಯಲ್ಪ ಯಶಸ್ಸು ಮಾತ್ರವೇ ಲಭಿಸಿದೆ ಎಂಬುದರತ್ತ ಅವರು ಬೊಟ್ಟು ಮಾಡಿದರು. ➡ಪುಟ ೨

ಭಾರತದತ್ತ ಭರವಸೆಯ ದೃಷ್ಟಿ

ಜಾಗತಿಕ ಸಂಘರ್ಷ ಮುಂದುವರಿಯುತ್ತಿರುವಂತೆಯೇ, ಭಾರತ ಮಾತ್ರವೇ ಯುದ್ಧಗಳನ್ನು ಅಂತ್ಯಗೊಳಿಸಬಹುದು. ಯಾಕೆಂದರೆ ಇದು ಭಾರತದ ಸಹಜ ಸ್ವಭಾವ ಎಂಬ ಧ್ವನಿಗಳು ಜಗತ್ತಿನೆಲ್ಲೆಡೆಯಿಂದ ಮೂಡಿಬರುತ್ತಿದೆ. ಭಾರತೀಯರು ಮಾನವೀಯ ನಿಯಮಗಳನ್ನು ಅನುಸರಿಸಿದರೆ, ಉಳಿದ ಜಗತ್ತು ಕಾಡಿನ ನ್ಯಾಯವನ್ನು ಅನುಸರಿಸುತ್ತಿರುವ ಈ ಸಂದರ್ಭ, ಮುಗ್ಗರಿಸುತ್ತಿರುವ ಜಗತ್ತಿಗೆ ಧರ್ಮದ ಅಡಿಪಾಯವನ್ನು ಒದಗಿಸಿ ಸಮತೋಲನವನ್ನು ಪುನಸ್ಥಾಪಿಸುವ ಹೊಣೆಗಾರಿಕೆ ಭಾರತಕ್ಕಿದೆ ಎಂದು ಮೋಹನ್ ಭಾಗ್ವತ್ ದೃಢವಾಗಿ ಸಾರಿದರು.

ನೀರಾನೆ ದಾಳಿಗೆ ಪಶುವೈದ್ಯೆ ಸಾವು

• **ಶಿವಮೊಗ್ಗ:** ಸಮೀಪದ ತ್ಯಾವರೆಕೊಪ್ಪದ ಹುಲಿ-ಸಿಂಹಧಾಮದಲ್ಲಿ ಗರ್ಭಿಣಿ ನೀರಾನೆ ಪರೀಕ್ಷಿಸಲು ತೆರಳಿದ್ದ ತರಬೇತಿ ನಿರತ ಪಶುವೈದ್ಯೆಯೊಬ್ಬರು ನೀರಾನೆ ದಾಳಿಗೆ ಬಲಿಯಾಗಿದ್ದಾರೆ. ಬೆಂಗಳೂರು ಪಶುವೈದ್ಯ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದ ಡಾ.ಸಮೀಕ್ಷಾ ರೆಡ್ಡಿ (27) ಮೃತಪಟ್ಟವರು. ನೀರಾನೆ ದಾಳಿಯಿಂದ ತೀವ್ರ ಗಾಯಗೊಂಡ ಸಮೀಕ್ಷಾ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ವೈದ್ಯೆ ಸಾವು ಹಲವು ಅನುಮಾನಗಳಿಗೆ ಕಾರಣವಾಗಿದ್ದು, ಈ ಕುರಿತು ತನಿಖೆ ನಡೆಸುವಂತೆ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ. ➡ಪುಟ ೨

- ತ್ಯಾವರೆಕೊಪ್ಪದ ಹುಲಿ-ಸಿಂಹಧಾಮದಲ್ಲಿ ದುರಂತ
- ಚಿಕಿತ್ಸೆ ವೇಳೆ ಘಟನೆ

ವಾರದಲ್ಲಿ ವರದಿ ನೀಡಲು ಖಂಡ್ರೆ ಸೂಚನೆ

• ಪುಟ ೨

ಶ್ರೀರಾಮ ಯಂತ್ರ ಸ್ಥಾಪನೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಹೇಳಿಕೆ

ಅಯೋಧ್ಯೆ ಧೂಳನ್ನು ಸ್ಪರ್ಶಿಸಿದ್ದು ಸೌಭಾಗ್ಯ

• **ಅಯೋಧ್ಯೆ:** ಪ್ರಭು ಶ್ರೀರಾಮ ಜನಿಸಿದ ನಗರವಾದ ಅಯೋಧ್ಯೆಯ ಪವಿತ್ರ ಧೂಳನ್ನು ಸ್ಪರ್ಶಿಸಿದ್ದು ನನ್ನ ಪರಮ ಸೌಭಾಗ್ಯವೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ದ್ವಿತೀಯ ಮಹಡಿಯಲ್ಲಿ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 2083ರ ಸಂವತ್ಸರದ ಆರಂಭ ಮತ್ತು ನವರಾತ್ರಿಯ ಮೊದಲ ದಿನವಾದ ಚೈತ್ರ ಶುಕ್ಲ ಪ್ರತಿಪದದಂದು ಭಗವಂತನ ದರ್ಶನ ನಿಜಕ್ಕೂ ಅವಿಸ್ಮರಣೀಯ ಎಂದು ಹೇಳಿದರು.

ಭಾರತವು ಸಮಗ್ರವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದ ಮುರ್ಮು ಅವರು, ಪ್ರಭು ಶ್ರೀರಾಮನ ಆಶೀರ್ವಾದದಿಂದ ಭಾರತ ತನ್ನ ಗುರಿಗಳನ್ನು 2047ರ ವೇಳೆಗೆ ತಲುಪುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಮ ರಾಜ್ಯದ ಆದರ್ಶವು ಆರ್ಥಿಕ ಸಮೃದ್ಧಿ ಮತ್ತು ಸಾಮಾಜಿಕ ಸಾಮರಸ್ಯದ ಅತ್ಯುನ್ನತ ಮಾನದಂಡಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪುನರುಜ್ಜೀವನವು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳಲ್ಲಿ ನಡೆಯುತ್ತಿದೆ, ನಾಗರಿಕರು ಏಕತೆಯ ಮನೋಭಾವದಿಂದ ಮುಂದುವರಿಯಬೇಕು ಎಂದು ಮುರ್ಮು ಹೇಳಿದರು. ➡ಪುಟ ೨



ಸರಯೂ ನೀರಿನಿಂದ ಅಯೋಧ್ಯೆ ಪವಿತ್ರ: ಯೋಗಿ

ಸರಯೂ ತಾಯಿ ತನ್ನ ಶುದ್ಧ ನೀರಿನಿಂದ ಇಡೀ ಪ್ರದೇಶದ ಜತೆಗೆ ಅಯೋಧ್ಯಾ ಧಾಮವನ್ನು ಪವಿತ್ರಗೊಳಿಸುತ್ತಿದ್ದಾಳೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು. ರಾಮರಾಜ್ಯದ ಅನುಭವವನ್ನು ಉಲ್ಲೇಖಿಸಿದ ಅವರು, ಪ್ರಪಂಚದಾದ್ಯಂತ ಯುದ್ಧಗಳು ನಡೆಯುತ್ತಿದ್ದರೂ, ನಾವು ಶ್ರೀರಾಮ ಯಂತ್ರದ ಸ್ಥಾಪನೆಯಲ್ಲಿ ಭಾಗವಹಿಸುತ್ತಿದ್ದೇವೆ ಎಂದರು. ➡ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,55,000 (2,60,000) ಅಪರಂಜಿ ಚಿನ್ನ: 1,50,930 (1,50,280) ಆಭರಣ ಚಿನ್ನ: 1,38,350 (1,37,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ ಬಿಎಸ್‌ಇ 74,532 (325↑) ಎನ್‌ಎಸ್‌ಇ 23,114 (112↑) | $1 = ₹93.70

ದಾಖಲಾತಿ ಆಂದೋಲನ ಯಶಸ್ಸಿಗೆ ಸಚಿವರ ಸೂಚನೆ



» ಡಿಸಿ, ಜಿಪಂ ಸಿಇಒಗಳಿಗೆ ಮಧು ಬಂಗಾರಪ್ಪ ಪತ್ರ

• **ಬೆಂಗಳೂರು:** ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಆಂದೋಲನವನ್ನು ಯಶಸ್ವಿಯಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪತ್ರ ಬರೆದು ಮನವಿ ಮಾಡಿದ್ದಾರೆ.

ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಸರ್ಕಾರವು ಮಹತ್ವದ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಪ್ರಮುಖವಾಗಿ ಮೂಲ ಸೌಕರ್ಯ, ಶಿಕ್ಷಕರ ನೇಮಕಾತಿ, ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ, ನಮ್ಮ ಶಾಲೆ ನಮ್ಮ ಜವಾಬ್ದಾರಿ, ಪಾಲಕರ ಸಭೆ ಸೇರಿದಂತೆ ಇನ್ನಿತರ ಕಾರ್ಯಕ್ರಮಜಾರಿಹಾಗೂಸೌಲಭ್ಯನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗದಂತೆ ಜಿಲ್ಲೆಯಾದ್ಯಂತ ವ್ಯವಸ್ಥಿತವಾಗಿ ದಾಖಲಾತಿ ಆಂದೋಲನ ಕೈಗೊಳ್ಳುವಂತೆ ಸಚಿವರು ಸೂಚಿಸಿದ್ದಾರೆ. ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಮತ್ತು ಹಳೆಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಮನೆ ಮನೆಗೆ ಭೇಟಿ ನೀಡಿ, ದಾಖಲಾತಿಗೆ ಮನವೊಲಿಸಬೇಕು, ಹಳೆಯ ವಿದ್ಯಾರ್ಥಿಗಳ ವಾಟ್ಸಾಪ್ ಗ್ರೂಪ್ಗಳ ಮೂಲಕ ಶಾಲಾಬಿವೃದ್ಧಿ ಮತ್ತು ದಾಖಲಾತಿ ಹೆಚ್ಚಿಸುವಲ್ಲಿ ಅವರ ನೆರವು ಪಡೆಯಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ದಶಾವತಾರಿ, ಯಕ್ಷಗುರು ಗೋವಿಂದ ಭಟ್ ಇನ್ನಿಲ್ಲ

ಪುಟ 1➡ ತೆಂಕುತಿಟ್ಟು ಯಕ್ಷಗಾನ ಇದುವರೆಗೆ ಕಂಡ ಸರ್ವಶ್ರೇಷ್ಠ ಕಲಾವಿದ. ತೆಂಕು, ಬಡಗು ಎರಡೂ ತಿಟ್ಟುಗಳಲ್ಲಿ ಯಾವುದೇ ಪಾತ್ರವನ್ನಾದರೂ ಲೀಲಾಜಾಲವಾಗಿ ಮಾಡಬಲ್ಲವರಾಗಿದ್ದರು. ಅನಿವಾರ್ಯ ಸ್ಥಿತಿಯಲ್ಲಿ ಭಾಗವತ, ಚೆಂಡೆಗಾರ, ಮದ್ದಳೆಗಾರನಾಗಿಯೂ ಹಿಮ್ಮೇಳದಲ್ಲಿ ಕೆಲಸ ನಿಭಾಯಿಸಿದ್ದರು. ಮೇಳದ ಮ್ಯಾನೇಜರ್ ಇಲ್ಲದ ಕಾಲದಲ್ಲಿ ಮ್ಯಾನೇಜರ್ ಆಗಿಯೂ ಕಾರ್ಯವಹಿಸಿದ್ದರು. ಅವರೊಬ್ಬ ಸರ್ವಾಂಗೀಣ ಪರಿಪೂರ್ಣ ಕಲಾವಿದ. ನಾಯಕ, ಪ್ರತಿನಾಯಕ, ರಕ್ಕಸ, ರಕ್ಕಸಿ, ಹಾಸ್ಯ, ಮಂತ್ರಿ, ಪುಂಡುವೇಷ ಹೀಗೆ ಎಲ್ಲ ವೇಷಗಳನ್ನು ಲೀಲಾಜಾಲವಾಗಿ ನಿಭಾಯಿಸಿದ್ದ ಯಕ್ಷರಂಗದ ಸವ್ಯಸಾಚಿ.



1951ರಲ್ಲಿ ಯಕ್ಷಗಾನ ಮೇಳಕ್ಕೆ ಸೇರ್ಪಡೆಗೊಂಡು ಸುಮಾರು 70 ವರ್ಷಗಳ ಕಾಲ ಧರ್ಮಸ್ಥಳ, ಮೂಲ್ಕಿ, ಕೂಡ್ಲು, ಸುರತ್ಕಲ್ (ಕೆಳಗಿನ ಮಾರಿಗುಡಿ) ಇರಾ ಸೋಮನಾಥೇಶ್ವರ ಮೇಳಗಳಲ್ಲಿ ತಿರುಗಾಟ ನಡೆಸಿದ್ದಾರೆ. ಕೌರವ, ರಕ್ತಬೀಜ, ಇಂದ್ರಜಿತು, ಮಾಗಧ, ಕರ್ಣ, ಅತಿಕಾಯ ನರಕಾಸುರ, ತಾಮ್ರಾಕ್ಷ , ಹಿರಣ್ಯಕಶಿಪು, ದೇವೇಂದ್ರ, ಅರ್ಜುನ , ಹನುಮಂತ, ಭೀಷ್ಮ , ಬಾಹುಬಲಿ, ವಿಶ್ವಾಮಿತ್ರ ಅವರಿಗೆ ಹೆಸರು ತಂದು ಕೊಟ್ಟ ಪಾತ್ರಗಳಾಗಿವೆ.

ಅಪೂರ್ವ ವಾಗ್ವೈಖರಿ, ಛಂದೋಬದ್ಧವಾದ ಮಾತಿನ ಜತೆಗೆ ನೃತ್ಯದಲ್ಲೂ ಪ್ರಾವೀಣ್ಯ ಪಡೆದಿದ್ದರು. ಅವರಿಗೆ 2008ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2016ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ ಪುರಸ್ಕಾರ, ಕರ್ನಾಟಕ ಜಾನಪದ ಅಕಾಡೆಮಿ ಸಾಧನಾ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಗೌರವ ಸಮ್ಮಾನಗಳು ದೊರೆತಿವೆ. ಗೋವಿಂದ ಭಟ್ಟರು ಜನಿಸಿದ್ದು 1940ರ ಮಾರ್ಚ್ 22ರಂದು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲದ ಬಳಿಯ ಕೋಡಪದವು ಕುಕ್ಕೆಮನೆಯಲ್ಲಿ. ಅವರದು ಕಡು ಬಡತನದ ಕುಟುಂಬವಾಗಿತ್ತು. ಲಕ್ಷ್ಮೀ ಅಮ್ಮ ಮತ್ತು ಕಿನಿಲ ಶಂಕರನಾರಾಯಣ ಭಟ್ಟರ ಐವರು ಮಕ್ಕಳಲ್ಲಿ ಗೋವಿಂದ ಭಟ್ಟರು ಮೂರನೆಯವರು. ಗೋವಿಂದ ಭಟ್ಟರ ಬಾಲ್ಯದ ಬದುಕು ವಸ್ತುಶಃ ಕಣ್ಣೀರ ಕತೆಯಾಗಿತ್ತು.

ಕುಣಿತ ಆವಿಷ್ಕಾರ: ಏಕತಾಳಕ್ಕೆ ದಾಖಲೆಯ 24 ಕುಣಿತಗಳನ್ನು ಆವಿಷ್ಕರಿಸಿದ್ದಾರೆ. 7ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ಪಡೆದಿರುವ ಗೋವಿಂದ ಭಟ್ಟರು ಬಳಿಕ ಯಕ್ಷಗಾನದತ್ತ ಒಲವು ಬೆಳೆಸಿಕೊಂಡರು. ಕುರಿಯ ವಿಠಲ ಶಾಸ್ತ್ರಿ, ಪರಮಶಿವನ್, ಮಾಧವ ಮೆನನ್, ರಾಜನ್ ಅಯ್ಯರ್ ಅವರಲ್ಲಿ ಯಕ್ಷಗಾನ ನೃತ್ಯ ಅಭ್ಯಸಿಸಿದರು. ಗೋವಿಂದ ಭಟ್ಟರಿಗೆ ಮೂವರು ಮಕ್ಕಳು, ಮೂವರು ಸೊಸೆಯಂದಿರು ಮತ್ತು ಮೂವರು ಮೊಮ್ಮಕ್ಕಳಿದ್ದಾರೆ. ಮಣಿ ಮೇಖಲೆ, ಕನಕ ರೇಖೆ, ಕಾವೇರಿ ಮಹಾತ್ಮೆ, ಮೂರುವರೆ ವಜ್ರಗಳು ರಾಜಶೇಖರ ವಿಲಾಸ, ಮಹಾವೀರ ಸಾಮ್ರಾಟ ಅಶೋಕ, ನಹುಷೇಂದ್ರ ಎಂಬ ಏಳು ಯಕ್ಷ ಪ್ರಸಂಗಗಳನ್ನು ಬರೆದಿದ್ದಾರೆ. ಜಪಾನ್, ಅಬುದಾಬಿ, ಬಹ್ರೈನ್, ದುಬೈಗಳಲ್ಲಿ ಯಕ್ಷಗಾನ ಪ್ರದರ್ಶಿಸಿದ್ದಾರೆ. ದಿಲ್ಲಿಯಲ್ಲಿ ರಾಷ್ಟ್ರಪತಿ ಎದುರು ಯಕ್ಷಗಾನ ಪ್ರದರ್ಶಿಸಿದ್ದರು. ಡಾ.ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ ವತಿಯಿಂದ ಗೋವಿಂದ ಭಟ್ಟರ ಜೀವನ ಚರಿತ್ರೆ ಯಕ್ಷೋಪಾಸನೆ ಮತ್ತು ಅಭಿನಂದನಾ ಗ್ರಂಥ ಸವ್ಯಸಾಚಿ ಪ್ರಕಟಿಸಲಾಗಿದೆ.

ಕಾರಂತರೂ ಅಚ್ಚರಿಪಟ್ಟಿದ್ದರು

1985ರಲ್ಲಿ ಉಡುಪಿಯಲ್ಲಿ ಡಾ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಯಕ್ಷಗಾನ ಪ್ರಾತ್ಯಕ್ಷಿಕೆಯಲ್ಲಿ ಗೋವಿಂದ ಭಟ್ಟರು ಮತ್ತು ವಿಶ್ವೇಶ್ವರ ಭಟ್ಟರು ತೆಂಕುತಿಟ್ಟಿನ ಆವಿಷ್ಕಾರಿಕ ನೃತ್ಯ ವೈವಿಧ್ಯವನ್ನು ಪ್ರದರ್ಶಿಸಿದ್ದರು. ಶಿವರಾಮ ಕಾರಂತರು ತೆಂಕುತಿಟ್ಟಿನಲ್ಲಿ ಇಷ್ಟೂ ನರ್ತನ ವೈವಿಧ್ಯ ಇದೆಯೇ ಎಂದು ಅಚ್ಚರಿ ಪಟ್ಟು ಮೆಚ್ಚುಗೆ ವ್ಯಕ್ತ ಪಡಿಸಿದ್ದರು.

ಡಿಜಿಪಿ ರಾಮಚಂದ್ರರಾವ್ ವಿಡಿಯೋ ನಕಲಿಯಲ್ಲ

• **ಬೆಂಗಳೂರು:** ಸಮವಸ್ತ್ರದಲ್ಲಿಯೇ ಕಚೇರಿಯಲ್ಲಿ ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸಿ ವಿವಾದಕ್ಕೀಡಾಗಿದ್ದ ಅಮಾನತುಗೊಂಡಿರುವ ಡಿಜಿಪಿ ಕೆ.ರಾಮಚಂದ್ರ ರಾವ್ ಅವರಿಗೆ ಸಂಕಷ್ಟ ಎದುರಾಗಿದೆ. ವೈರಲ್ ಆಗಿದ್ದ ವಿಡಿಯೋಗಳು ಸಂಪೂರ್ಣ ಅಸಲಿ ಎಂದು ವಿಧಿ ವಿಜ್ಞಾನ ಪ್ರಯೋಗಾಲಯ ದೃಢಪಡಿಸಿದ್ದು, ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದೆ. ಎಡಿಜಿಪಿ ಆರ್. ಹಿತೇಂದ್ರ ನೇತೃತ್ವದ ನಾಲ್ವರು ಐಪಿಎಸ್ ಅಧಿಕಾರಿಗಳ ತನಿಖಾ ತಂಡ 100 ಪುಟಗಳ ವರದಿ ಸಲ್ಲಿಸಿದೆ.

ಈ ದೃಶ್ಯಗಳು 2016-17ರಲ್ಲಿ ರಾಮಚಂದ್ರ ರಾವ್ ಅವರು ಬೆಳಗಾವಿ ವಲಯದ ಐಜಿಪಿ ಆಗಿದ್ದ ಅವಧಿಯಲ್ಲಿ ಚಿತ್ರೀಕರಿಸಲ್ಪಟ್ಟಿವೆ. ಈ ಪೈಕಿ ಒಬ್ಬ ಮಹಿಳೆಯೇ ತನ್ನ ಮೊಬೈಲ್‌ನಲ್ಲಿ ಈ ದೃಶ್ಯಗಳನ್ನು ಉದ್ದೇಶಪೂರ್ವಕವಾಗಿ ಸೆರೆಹಿಡಿದಿದ್ದರು ಎಂಬ ಅಂಶವೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಮಧ್ಯೆ ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ ರಾಮಚಂದ್ರ ರಾವ್ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಇಲಾಖಾ ತನಿಖೆ ಆರಂಭಿಸಿದೆ. ಮೇ31ರಂದು ರಾವ್ ನಿವೃತ್ತಿಯಾಗಲಿದ್ದರೂ, ಈ ಗಂಭೀರ ಪ್ರಕರಣದ ಹಿನ್ನೆಲೆಯಲ್ಲಿ ಅವರ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯುವ ಸಾಧ್ಯತೆ ಹೆಚ್ಚಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ದೇವೇಗೌಡರ ಡೇಟಿಂಗ್ ಆದುದು ನನ್ನೊಂದಿಗೆ, ಆದರೆ ಅವರು ಮದುವೆಯಾದುದು ಮೋದಿಯೊಂದಿಗೆ
- ಖರ್ಗೆಯವರ ಹಾಸ್ಯ
- **ಡೇಟಿಂಗ್ ಅಂದರೆ ಚೀಟಿಂಗ್ ಅಂತ ಈಗಲಾದರೂ ಗೊತ್ತಾಯಿತಾ?**

ದಿನ ಭವಿಷ್ಯ

ಮೇಷ ನಿಮಗೆ ಒದಗಿ ಬರುವ ಅವಕಾಶ ಚೆನ್ನಾಗಿ ಬಳಸಿಕೊಳ್ಳಿ. ದೀರ್ಘಾವಧಿ ಯೋಜನೆ ಪೂರ್ಣ ಆಗಲಿದೆ. ನಿಮ್ಮ ನಿರ್ಧಾರಕ್ಕೆ ಸಂಗಾತಿ ಬೆಂಬಲ.

ವೃಷಭ ಕಠಿಣ ಪರಿಶ್ರಮದ ಫಲ ಸಿಗಲಿದೆ. ಉದ್ಯೋಗ ಹುಡುಕುವವರಿಗೆ ಶುಭಸುದ್ದಿ. ಕೌಟುಂಬಿಕ ಉದ್ವಿಗ್ನತೆ ನಿವಾರಣೆ. ಹೂಡಿಕೆಯಿಂದ ಲಾಭ.

ಮಿಥುನ ನಿಮ್ಮ ನಡೆನುಡಿ ಎಲ್ಲರ ಗಮನ ಸೆಳೆಯಲಿದೆ. ವೃತ್ತಿಯಲ್ಲಿ ಸಫಲತೆ. ಪ್ರೀತಿಯ ವಿಷಯದಲ್ಲಿ ನಿರಾಶೆ ಉಂಟಾದೀತು. ದೇಹಾಲಸ್ಯ ಸಂಭವ.

ಕಟಕ ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಎದುರಾಡಬೇಡಿ. ಸಹನೆ ಕಾಯ್ದುಕೊಳ್ಳಿ. ಹಣದ ಹರಿವಿಗೆ ತಡೆ ಒದಗೀತು. ಖರ್ಚು ಕಡಿಮೆ ಮಾಡಿ.

ಸಿಂಹ ತೃಪ್ತಿಕರ ಬೆಳವಣಿಗೆ. ಸಂಘಟಿತ ಕಾರ್ಯದಲ್ಲಿ ಸಫಲತೆ. ಕೊಟ್ಟ ಹಣ ಮರಳಿ ಸಿಗಲಿದೆ. ಪ್ರೀತಿಪಾತ್ರರ ಜತೆ ಕಾಲಕ್ಷೇಪ.

ಕನ್ಯಾ ನಿಮ್ಮಿಷ್ಟದವರ ಪ್ರೀತಿ ಗಳಿಸುವ ಯತ್ನ ಸಫಲ. ಹಾಗೆಂದು ನಿಮ್ಮ ಗುರಿ ಮರೆಯಬೇಡಿ. ಅತ್ತವೂ ಗಮನ ಕೊಡಿ. ಬಂಧುಗಳ ಕಿರಿಕಿರಿ ಎದುರಿಸುವಿರಿ.

ತುಲಾ ನಡೆನುಡಿಯಿಂದ ಎಲ್ಲರ ಆಕರ್ಷಣೆಯ ಕೇಂದ್ರವಾಗುವಿರಿ. ಖಾಸಗಿ ಮತ್ತು ವೃತ್ತಿ ಬದುಕು ತೃಪ್ತಿಕರ. ಅಜೀರ್ಣದ ಸಮಸ್ಯೆ, ಹೊಟ್ಟೆ ಕೆಡಿಸೀತು.

ವೃಶ್ಚಿಕ ಅನಗತ್ಯ ವಸ್ತು ಖರೀದಿಯಿಂದ ಧನವ್ಯಯ. ಬಿಕ್ಕಟ್ಟಿಗೆ ಸಂಬಂಧಿಸಿ ಯುಕ್ತ ಸಲಹೆ ಬಂದರೆ ಸ್ವೀಕರಿಸಿ. ಹಠ ಸ್ವಭಾವ ತೋರದಿರಿ.

ಧನು ಅಧಿಕ ಕೆಲಸದಿಂದ ಆರೋಗ್ಯ ಕೆಡಬಹುದು. ಆದಾಯದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪೂರಕ ಬೆಳವಣಿಗೆ. ನಿಮ್ಮ ಮಾತಿಗೆ ಬೆಲೆ ಸಿಗಲಿದೆ.

ಮಕರ ಕೆಲಸದಲ್ಲಿ ಹೆಚ್ಚು ಪರಿಶ್ರಮ ಬೇಕಾಗುವುದು. ಹಣ ಹೂಡಿಕೆಯಿಂದ ಲಾಭ ಸಿಗಲಿದೆ. ಕೇಡು ಬಯಸುವವರ ಕುರಿತಂತೆ ಒಂದು ಕಣ್ಣಿಡಿ.

ಕುಂಭ ಎಲ್ಲರ ಜತೆಗಿನ ಸಂಬಂಧ ಚೆನ್ನಾಗಿಡಿ. ಕೆಡುಕು ಮಾತು ಬಿಡಿ. ಸಂಗಾತಿ ಜತೆಗೆ ಸಾಮರಸ್ಯ ಕಾಯ್ದುಕೊಳ್ಳಿ. ಮಕ್ಕಳ ಸಾಧನೆಯಿಂದ ತೃಪ್ತಿ.

ಮೀನ ನಿಮ್ಮ ಸಿಡುಕುತನ ಸಂಬಂಧ ಹಾಳು ಮಾಡೀತು. ಕೆಲವರು ನಿಮ್ಮ ಒಳ್ಳೆತನ ದುರುಪಯೋಗ ಮಾಡುವರು. ಖರೀದಿ ಉತ್ಸಾಹ, ಧನವ್ಯಯ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 7,0,4,1

ಹೆಣ್ಣೆಂದು ತಂದೆಯಿಂದಲೇ ಹಸುಗೂಸಿನ ಹತ್ಯೆ

• **ಬೆಳಗಾವಿ:** ಹೆಣ್ಣುಮಗು ಎನ್ನುವ ಕಾರಣಕ್ಕೆ 15 ದಿನದ ಹಿಂದೆ ಜನಸಿದ್ದ ಹಸುಗೂಸಿಗೆ ವಿಷವುಣಿಸಿ ಕೊಲೆ ಮಾಡಿದ್ದ ತಂದೆಯನ್ನು ಇದೀಗ ಪೊಲೀಸರು ಬಂಧಿಸಿದ್ದಾರೆ. ಭೀಮರಾಯ ಬಂಧಿತ ಆರೋಪಿ. ತಾಲೂಕಿನ ಉಕ್ಕಡ ಗ್ರಾಮದಲ್ಲಿ ಕಳೆದ 15 ದಿನಗಳ ಹಿಂದಷ್ಟೇ ಜನಿಸಿದ್ದ ಹಸುಗೂಸು ಏಕಾಏಕಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಕೈಗೊಂಡಾಗ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಹೆತ್ತ ತಂದೆಯೇ ಹೆಣ್ಣುಮಗು ಎಂಬ ಕಾರಣಕ್ಕೆ ವಿಷವುಣಿಸಿ ಕೊಲೆ ಮಾಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ. ಮಗುವಿನ ಸಾವಿಗೆ ತಂದೆಯೇ ಕಾರಣ ಎಂದು ಕುಟುಂಬಸ್ಥರೇ ಆರೋಪ ಮಾಡಿದ್ದರು. ಕೂಲಿ ಕೆಲಸ ಮಾಡಿಕೊಂಡಿದ್ದ ಭೀಮರಾಯಗೆ ಗಂಡು ಮಕ್ಕಳೆಂದರೆ ಹುಚ್ಚು. ಆದರೆ 15 ದಿನದ ಹಿಂದೆ ಹೆಣ್ಣು ಮಗು ಆಗಿದ್ದಕ್ಕೆ ನೊಂದುಕೊಂಡಿದ್ದರು. ಪತ್ನಿ ತವರು ಮನೆಗೆ ಬಂದಿದ್ದ ಭೀಮರಾಯ ಮಗು ನೋಡಿ ವಾಪಸ್ ಹೋಗಿದ್ದರು. ಅವರು ಅತ್ತ ಹೋಗ್ತಿದ್ದಂತೆ ಮಗು ಅಸ್ವಸ್ಥಗೊಂಡಿತ್ತು. ಕೂಡಲೇ ಬೆಳಗಾವಿ ಬಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅಷ್ಟರಲ್ಲಿ ಮಗು ಮೃತಪಟ್ಟಿತ್ತು. ಹತ್ತಿ ಬೆಳೆಗೆ ಸಿಂಪಡಣೆ ಮಾಡುವ ಔಷಧಿಯನ್ನು ಮಗುವಿಗೆ ಉಣಿಸಲಾಗಿದೆ ಎಂಬ ಅನುಮಾನ ವ್ಯಕ್ತವಾಗಿತ್ತು. ಮಗುವನ್ನ ಬಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ಶಿಫ್ಟ್ ಮಾಡಿ, ಮರಣೋತ್ತರ ಪರೀಕ್ಷೆ ಬಳಿಕವೇ ಮಗುವಿನ ಸಾವಿನ ನಿಖರ ಕಾರಣ ಬಹಿರಂಗವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಸ್ಥಳಕ್ಕೆ ಡಿಸಿಪಿ ನಾರಾಯಣ್ ಭರಮನಿ, ಬೆಳಗಾವಿ ಗ್ರಾಮೀಣ ಎಸಿಪಿ ಹಾಗೂ ಕಾಕತಿ ಸಿಪಿಐ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಆರೋಪಿ ಭೀಮರಾಯನನ್ನು ಕಾಕತಿ ಪೊಲೀಸರು ಬಂಧಿಸಿದ್ದಾರೆ.

ವರಿಷ್ಠರಿಂದಲೇ ಅಭ್ಯರ್ಥಿ ಅಂತಿಮ ಆಯ್ಕೆ | ಟಿಕೆಟ್‌ಗೆ ಪೈಪೋಟಿ ಸಹಜ

ಪಕ್ಷದಲ್ಲಿ ಒತ್ತಡಕ್ಕಿಲ್ಲ ಅವಕಾಶ

• **ಬೆಂಗಳೂರು:** ಕಾಂಗ್ರೆಸ್‌ಗೆ ಯಾರೂ ಒತ್ತಡ ಹೇರಲು ಆಗುವುದಿಲ್ಲ, ಬ್ಲಾಕ್‌ಮೇಲ್ ಮಾಡಲೂ ಆಗುವುದಿಲ್ಲ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಶಾಮನೂರು ಕುಟುಂಬವೂ ಕೇಳುತ್ತಿದೆ. ಹಾಗೆಯೇ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದು ತಪ್ಪೇನಲ್ಲ, ಆದರೆ, ಯಾರೂ ಒತ್ತಡ ಹಾಕಲು ಬರುವುದಿಲ್ಲ, ಬ್ಲ್ಯಾಕ್‌ಮೇಲ್ ಮಾಡಲಿಕ್ಕೂ ಆಗದು ಎಂದು ಹೇಳಿದರು. ಈಗಾಗಲೇ ನಾಮಪತ್ರ ಕೂಡ ಸಲ್ಲಿಸಿದ್ದಾರಲ್ಲ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಯಾರೋ ಮುಹೂರ್ತ ಹೇಳಿರುತ್ತಾರೆ. ಅದಕ್ಕಾಗಿ ನಾಮಪತ್ರ ಸಲ್ಲಿಸಿರುತ್ತಾರೆ. ಅದು ಸಹಜ ಕೂಡ. ನಾವೂ ಕೆಲವು ಸಲ ಹಾಗೆ ಸಲ್ಲಿಸಿದ್ದುಂಟು. ಅದೆಲ್ಲವೂ ಇದ್ದೇ ಇರುತ್ತದೆ ಎಂದು ಸಮಜಾಯಿಷಿ ನೀಡಿದರು.

ದಾವಣಗೆರೆ ಟಿಕೆಟ್ ಗೊಂದಲ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಎಂ.ಬಿ.ಪಾಟೀಲ್, ಶಾಮನೂರು ಕುಟುಂಬ ಟಿಕೆಟ್ ಕೇಳುತ್ತಿದೆ. ಬಾಗಲಕೋಟೆಯಲ್ಲಿ ಎಚ್. ವೈ. ಮೇಟಿ ಕುಟುಂಬಕ್ಕೆ ಟಿಕೆಟ್ ಕೊಡುತ್ತಿಲ್ಲವೇ? ಹಾಗೆಯೇ ಇಲ್ಲಿಯೂ ತಮ್ಮ ಕುಟುಂಬಕ್ಕೆ ಕೊಡಬೇಕು ಎಂದು ಹೇಳುತ್ತಿದೆ. ಅತ್ತ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದರಲ್ಲಿ ತಪ್ಪೇನಿಲ್ಲ. ಆದರೆ, ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ ಎಂದರು.

ಸಂಸದರ ಸಭೆ ದಿನಾಂಕ ಮರುನಿಗದಿ: ಮಂಗಳವಾರ ಹೊಸದಿಲ್ಲಿಯಲ್ಲಿ ನಡೆದ ರಾಜ್ಯದ ನೀರಾವರಿ ಯೋಜನೆಗಳ ಕುರಿತು ಪ್ರತಿಕ್ರಿಯಿಸಿದ ಎಂ.ಬಿ. ಪಾಟೀಲ್, ಬೇರೆ ಬೇರೆ ರಾಜ್ಯಗಳ ಚುನಾವಣೆಗಳು ನಡೆಯುತ್ತಿವೆ. ಈ ಹಂತದಲ್ಲಿ ಸಭೆ ನಡೆಸಿ, ಸರ್ವಪಕ್ಷ ನಿಯೋಗ ಪ್ರಧಾನಿ ಭೇಟಿ ಮಾಡುವುದರಿಂದ ಮುಜುಗರ ಆಗಬಹುದು ಎಂದು ಬೇರೆ ದಿನಾಂಕ ನಿಗದಿ ಮಾಡಲು ಕೇಳಿದರು. ಚುನಾವಣೆ ಮುಗಿದ ಬಳಿಕ ಮತ್ತೆ ದಿನಾಂಕ ನಿಗದಿ ಆಗಲಿದೆ. ಆಗ ರಾಜ್ಯದ ಸಂಸದರ ಜತೆ ಚರ್ಚಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಆಲಮಟ್ಟಿ ಯೋಜನೆ ಎತ್ತರ ವಿಚಾರಕ್ಕೆ ಪ್ರತಿಕ್ರಿಯಿಸಿದ ಪಾಟೀಲ್, ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ ಪ್ರಕಾರ 173 ಟಿಎಂಸಿ ನೀರು ನಮಗೆ ಸಿಕ್ಕಿದೆ. ಅದಕ್ಕಾಗಿ ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಿಸಬೇಕು. ಹತ್ತು ವರ್ಷವಾದರೂ ಅಧಿಸೂಚನೆ ಆಗಿರಲಿಲ್ಲ. ಈ ಯೋಜನೆಗಾಗಿ ಅಗತ್ಯ ಭೂಸ್ವಾಧೀನಕ್ಕೆ ಯಾವುದೇ ಅಡೆತಡೆ ಇಲ್ಲ. ನಮ್ಮ ಸ್ವಂತ ರಿಸ್ಕ್ ಮೇಲೆ ಸ್ವಾಧೀನ ಪ್ರಕ್ರಿಯೆ ನಡೆಸಲಾಗುತ್ತಿದೆ. ನೆರೆಯ ಆಂಧ್ರಪ್ರದೇಶ ತಕರಾರು ಸಲ್ಲಿಸಿದರೂ, ಅದು ಗಣನೆಗೆ ಬರುವುದಿಲ್ಲ ಎಂದು ಹೇಳಿದರು.

2ನೇ ಏರ್‌ಪೋರ್ಟ್‌ಗೆ ಟೆಂಡರ್: ಎಂ.ಬಿ. ಪಾಟೀಲ



ರಾಜ್ಯದಲ್ಲಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಕರೆದಿದ್ದೇವೆ. ಅದರಲ್ಲಿ ನಾಲ್ಕು ಸಂಸ್ಥೆಯವರು ಭಾಗವಹಿಸಿದ್ದಾರೆ ಎಂದು ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ತಿಳಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟೆಂಡನರ್‌ನಲ್ಲಿ ನಾಲ್ಕು ಸಂಸ್ಥೆಯವರು ಭಾಗಿಯಾಗಿದ್ದು, ಮೂರು ಸ್ಥಳ ನೋಡಿಕೊಂಡು ಹೋಗಿದ್ದಾರೆ. ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಿಗದಿತ ಸಮಯ ಇರುತ್ತದೆ. ಆ ಸಮಯ ಮುಗಿದ ಬಳಿಕ ವರದಿ ಬರಲಿದೆ. ನಂತರ ಮುಂದಿನ ಹೆಜ್ಜೆ ಇಡಲಿದ್ದೇವೆ ಎಂದರು.

ಗೆಲ್ಲುವ ಅಭ್ಯರ್ಥಿಗೆ ಟಿಕೆಟ್: ಡಾ.ಜಿ. ಪರಮೇಶ್ವರ

• **ಬೆಂಗಳೂರು:** ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಈಚೆಗೆ ಅಗಲಿದ ಮಾಜಿ ಶಾಸಕರಿಬ್ಬರ ಕುಟುಂಬಗಳಿಂದ ಟಿಕೆಟ್‌ಗಾಗಿ ಬೇಡಿಕೆ ಇದೆ. ಆದರೆ, ಅಂತಿಮವಾಗಿ ಗೆಲ್ಲುವ ಅಭ್ಯರ್ಥಿಯನ್ನು ಪಕ್ಷ ಆಯ್ಕೆ ಮಾಡುತ್ತದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಕೆಟ್ ಘೋಷಣೆ ಕಷ್ಟ ಏನಿಲ್ಲ. ಗೆಲ್ಲಲೇಬೇಕಾದಂತಹ ಅಭ್ಯರ್ಥಿ ಆಯ್ಕೆಗಾಗಿ ಚರ್ಚೆ ಮಾಡುತ್ತಿದ್ದಾರೆ. ಯಾರಿಗೆ ಟಿಕೆಟ್ ನೀಡಿದರೆ ಸೂಕ್ತ ಎಂಬುದನ್ನು ಎಲ್ಲ ದೃಷ್ಟಿಯಿಂದ ನೋಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ. ಮೇಟಿ ಎರಡೂ ಕುಟುಂಬಗಳಿಂದಲೂ ಬೇಡಿಕೆ ಇದೆ. ಅದು ಸಹಜ ಎಂದು ಹೇಳಿದರು. ವಿಶೇಷವಾಗಿ ದಾವಣಗೆರೆಯಲ್ಲಿ ಒಂದು ಕಡೆ ಹೆಚ್ಚು ಅಲ್ಪಸಂಖ್ಯಾತರಿದ್ದಾರೆ. ಮತ್ತೊಂದು ಕಡೆ ಲಿಂಗಾಯತರೂ ಇದ್ದಾರೆ. ಎರಡೂ ಕಡೆ ನೋಡುತ್ತಿದ್ದಾರೆ. ಇನ್ನು ಬಾಗಲಕೋಟೆಯಲ್ಲಿ ಮೇಟಿ ಅವರ ಮಗನಿಗೆ ಕೊಡಬೇಕು. ಆದರೆ, ಬಹಳ ಜನ ಆಕಾಂಕ್ಷಿಗಳಿದ್ದಾರೆ. ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ ಎಂದರು.



ಅನಿಲ ಪೂರೈಕೆ ಬಾಧಿತ

ಪುಟ 1➡ ಆನ್‌ಲೈನ್ ಬುಕ್ಕಿಂಗ್ ಪ್ರಮಾಣ 93%ಕ್ಕೆ ಏರಿಕೆಯಾಗಿದೆ ಮತ್ತು ಗುರುವಾರ ಸುಮಾರು 55 ಲಕ್ಷ ರೀಫಿಲ್ ವಿನಂತಿಗಳು ಬಂದಿವೆ. ಪ್ಯಾನಿಕ್ ಬುಕ್ಕಿಂಗ್ ಕಡಿಮೆಯಾದರೂ ಬೇಡಿಕೆ ಇನ್ನೂ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಒಂದು ವಾರದಲ್ಲಿ 11,300 ಟನ್ ವಾಣಿಜ್ಯ ಎಲ್‌ಪಿಜಿ ವಿತರಿಸಲಾಗಿದೆ. ರಾಜ್ಯಗಳಿಗೆ ಸಂಗ್ರಹಣೆ ತಡೆಯಲು ಕಟ್ಟುನಿಟ್ಟಿನ ಮೇಲ್ವಿಚಾರಣೆ ಕೈಗೊಳ್ಳಲು ಕೇಂದ್ರ ಸರ್ಕಾರ ಸೂಚಿಸಿದೆ. ಬಂದರುಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ಸರಕು ಸರಬರಾಜು ಸುಗಮವಾಗಿದೆ. ಮಧ್ಯ ಪ್ರಾಚ್ಯದ ಪರಿಸ್ಥಿತಿಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಒಮಾನ್ ಮತ್ತು ಫ್ರಾನ್ಸ್ ನಾಯಕರೊಂದಿಗೆ ಚರ್ಚೆ ನಡೆಸಿದ್ದಾರೆ.

ಪ್ರೀಮಿಯಂ ತೈಲ ದರ ಏರಿಕೆ

ಭಾರತದಲ್ಲಿ ಪ್ರೀಮಿಯಂ ಪೆಟ್ರೋಲ್ ಬೆಲೆ ಶುಕ್ರವಾರದಿಂದ ಲೀಟರ್‌ಗೆ ಗರಿಷ್ಠ 2 ರೂ. 35 ಪೈಸೆಯವರೆಗೆ ಏರಿಕೆಯಾಗಿದೆ. ಆದರೆ, ಸಾಮಾನ್ಯ ಪೆಟ್ರೋಲ್ ದರ ಯಥಾಸ್ಥಿತಿಯಲ್ಲಿ ಮುಂದುವರಿದಿದೆ. ಬಿಪಿಸಿಎಲ್‌ನ ಸ್ಪೀಡ್, ಎಚ್‌ಪಿಸಿಎಲ್‌ನ ಪವರ್, ಐಒಸಿಎಲ್‌ನ ಎಕ್ಸ್‌ಪಿ95 ಪೆಟ್ರೋಲ್ ಬೆಲೆಗಳು ಲೀಟರ್‌ಗೆ 2.09 ರೂ.ನಿಂದ 2.35 ರೂ.ವರೆಗೆ ಹೆಚ್ಚಳ ಕಂಡಿವೆ. ಎಚ್‌ಪಿಸಿಎಲ್, ಐಒಸಿಎಲ್ ಮತ್ತು ಬಿಪಿಸಿಎಲ್ ಇತರ ತೈಲ ಮಾರಾಟ ಕಂಪನಿಗಳು, ಪವರ್ ಪೆಟ್ರೋಲ್, ಎಕ್ಸ್‌ಪಿ95 ಮತ್ತು ಸ್ಪೀಡ್ ಪೆಟ್ರೋಲ್ ಹೈ-ಆಕ್ಟೇನ್ ಇಂಧನಗಳ ಬೆಲೆಯನ್ನು ಹೆಚ್ಚಿಸಿವೆ. ಇರಾನ್ ಯುದ್ಧದ ಹಿನ್ನೆಲೆ ಜಾಗತಿಕ ಕಚ್ಚಾ ತೈಲದ ಬೆಲೆ ಏರಿಕೆಯಿಂದ, ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವೆಚ್ಚವನ್ನು ಕಂಪನಿ ಗಳು ಹೆಚ್ಚಿಸುತ್ತಿರುವುದರಿಂದ ಈ ಏರಿಕೆ ಮಾಡಲಾಗಿದೆ.

ಬಹ್ರೈನ್ ಕಿಂಗ್ ಜತೆ ಮೋದಿ ಮಾತುಕತೆ

ಪಶ್ಚಿಮ ಏಷ್ಯಾದಲ್ಲಿ ತೀವ್ರಗೊಳ್ಳುತ್ತಿರುವ ಸಂಘರ್ಷದ ನಡುವೆ, ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಬಹ್ರೈನ್ ನ ರಾಜ ಹಮದ್ ಬಿನ್ ಇಸಾ ಅಲ್ ಖಲೀಫಾ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪ್ರದೇಶದ ಇಂಧನ ಮತ್ತು ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ತೀವ್ರವಾಗಿ ಖಂಡಿಸಿದರು. ಈ ವೇಳೆ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯನ್ನು ವಿವರವಾಗಿ ಚರ್ಚಿಸಿದರು. ಈ ಸಂದರ್ಭ, ಇಂಧನ ಹಾಗೂ ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳು ಜಾಗತಿಕ ಮಟ್ಟದಲ್ಲಿ ಆಹಾರ, ಇಂಧನ ಮತ್ತು ರಸಗೊಬ್ಬರ ಭದ್ರತೆಗೆ ದುಷ್ಪರಿಣಾಮ ಬೀರುತ್ತವೆ ಎಂದು ಅವರು ಎಚ್ಚರಿಸಿದರು. ಇದೇ ವೇಳೆ, ಸಮುದ್ರ ಮಾರ್ಗಗಳ ಸ್ವಾತಂತ್ರ್ಯ ಮತ್ತು ಸಾಗಣೆ ವ್ಯವಸ್ಥೆಯ ನಿರಂತರತೆ ಅತ್ಯಂತ ಮುಖ್ಯ ಎಂದು ಪ್ರಧಾನಿ ಪುನರುಚ್ಚರಿಸಿದರು. ಇದಕ್ಕೆ ಜೊತೆಗೆ, ಬಹ್ರೈನ್‌ನ ಭಾರತೀಯ ಸಮುದಾಯದ ಕಲ್ಯಾಣಕ್ಕಾಗಿ ನೀಡುತ್ತಿರುವ ನಿರಂತರ ಬೆಂಬಲಕ್ಕೆ ಮೋದಿ ಅವರು ರಾಜನಿಗೆ ಧನ್ಯವಾದಗಳನ್ನು ತಿಳಿಸಿದರು.



ನೀರಾನೆ ದಾಳಿಗೆ ಪಶುವೈದ್ಯೆ ಸಾವು

ಪುಟ 1➡ ಮೂಲತಃ ಬೆಂಗಳೂರಿನ ಬನ್ನೇರುಘಟ್ಟ ನಿವಾಸಿಯಾಗಿದ್ದ ಸಮೀಕ್ಷಾ ಅವರು, ಕಳೆದ ಫೆಬ್ರವರಿಯಲ್ಲಿ ಪಶು ವೈದ್ಯಾಧಿಕಾರಿಯಾಗಿ ಆಯ್ಕೆಯಾಗಿ ಮೃಗಾಲಯದ ಪಶುವೈದ್ಯರಿಂದ ತರಬೇತಿ ಪಡೆಯುತ್ತಿದ್ದರು.

ಮಾ.19ರಂದು ರಾತ್ರಿ 10.30ಕ್ಕೆ ಮೃಗಾಲಯದ ಆಸ್ಪತ್ರೆಗೆ ತೆರಳಿ ಸನ್‌ಕೊನ್ಯೂರ್ ಪಕ್ಷಿಗೆ ಫಾಲೊ ಅಪ್ ಚಿಕಿತ್ಸೆ ನೀಡಿದ್ದರು. ನಂತರ ರಾತ್ರಿ 11.45ಕ್ಕೆ ಥರ್ಮಲ್ ಕ್ಯಾಮೆರಾ ಬಳಸಿ ಗರ್ಭಿಣಿ ನೀರಾನೆ(ಹಿಪ್ಪೊಪೊಟಮಸ್) ತಾಪಮಾನ ಪರೀಕ್ಷಿಸುವ ವೇಳೆ ಈ ದಾಳಿ ನಡೆದಿದೆ. ಕೂಡಲೇ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಬೆಳಗ್ಗೆ 6.30ಕ್ಕೆ ಮೃತಪಟ್ಟಿದ್ದಾರೆ ಎಂದು ಹುಲಿ-ಸಿಂಹಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ ತಿಳಿಸಿದ್ದಾರೆ.

ಹತ್ತಾರು ಅನುಮಾನ: ಯುವ ಪಶು ವೈದ್ಯೆ ಸಾವು ಹಲವು ಅನುಮಾನಗಳಿಗೆ ಕಾರಣವಾಗಿದೆ. ರಾತ್ರಿ 11ರ ನಂತರ ತರಬೇತಿನಿರತ ಪಶುವೈದ್ಯೆಯನ್ನು ಚಿಕಿತ್ಸೆಗೆ ಕಳುಹಿಸಿದ್ದು ಯಾರು ಎಂಬ ಪ್ರಶ್ನೆ ಎದ್ದಿದೆ. ಇಲ್ಲಿ ಕರ್ತವ್ಯದಲ್ಲಿದ್ದ ಹಿರಿಯ ಪಶುವೈದ್ಯರು ಇದೀಗ ಸಕ್ರೆಬೈಲು ಆನೆ ಬಿಡಾರಕ್ಕೆ ನಿಯೋಜನೆಗೊಂಡಿದ್ದಾರೆ. ಆ ಸ್ಥಾನಕ್ಕೆ ಬೇರೆ ಪಶುವೈದ್ಯರ ನೇಮಕ ಇನ್ನೂ ಆಗಿಲ್ಲ. ರಾತ್ರಿ ವೇಳೆ ಪ್ರಾಣಿಗಳಿಗೆ ಮೃಗಾಲಯಗಳಲ್ಲಿ ಚಿಕಿತ್ಸೆ ನೀಡುವಾಗ ಸಹಾಯಕ ಸಿಬ್ಬಂದಿ ಜತೆಯಲ್ಲಿ ತೆರಳಬೇಕು, ಅರವಳಿಕೆ ನೀಡಿ ನಂತರ ಚಿಕಿತ್ಸೆ ನೀಡಬೇಕು ಎಂಬ ಮಾರ್ಗಸೂಚಿ ಇದೆ. ಇಲ್ಲಿ ಅದ್ಯಾವುದೂ ಪಾಲನೆ ಆಗಿಲ್ಲ ಎಂಬ ಆರೋಪ ಕೇಳಿಬರುತ್ತಿದೆ.

ವಾರದಲ್ಲಿ ವರದಿ ನೀಡಲು ಖಂಡ್ರೆ ಸೂಚನೆ

ವನ್ಯಜೀವಿಗೆ ಚಿಕಿತ್ಸೆ ನೀಡಲು ತೆರಳಿದ್ದಾಗ ಪಶುವೈದ್ಯೆ ಮೃತಪಟ್ಟಿರುವುದಕ್ಕೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ. ರಾಜ್ಯದ ಎಲ್ಲಾ ಮೃಗಾಲಯಗಳಲ್ಲಿನ ಪಶುವೈದ್ಯರು ಯಾವುದೇ ವನ್ಯಜೀವಿಗೆ ಚಿಕಿತ್ಸೆ ನೀಡುವಾಗ ಪ್ರಮಾಣಿತ ಮಾನದಂಡ ಪಾಲಿಸಬೇಕು. ಈ ದುರಂತದ ಬಗ್ಗೆ ಹಿರಿಯ ಪಶುವೈದ್ಯರು ಹಾಗೂ ಅರಣ್ಯಾಧಿಕಾರಿ ಒಳಗೊಂಡ ತಂಡ ತನಿಖೆ ನಡೆಸಿ 7 ದಿನಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಅಯೋಧ್ಯೆ ಧೂಳನ್ನು ಸ್ಪರ್ಶಿಸಿದ್ದು ಸೌಭಾಗ್ಯ


ಪುಟ 1➡ ಶ್ರೀರಾಮನ ಮೇಲಿನ ಭಕ್ತಿಯ ಪವಿತ್ರ ಬಂಧದಿಂದ ಒಗ್ಗೂಡಿ, ಎಲ್ಲರು ಒಂದು ಎಂಬ ಭಾವನೆಯನ್ನು ಅಳವಡಿಸಿಕೊಂಡು, ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮ ಮುಕ್ತಾಯವಾದ ನಂತರ ರಾಷ್ಟ್ರಪತಿ ಮುರ್ಮು ಅವರು, ಸಪ್ತ ಮಂದಿರಗಳ ದರ್ಶನ ಪಡೆದು ಅಯೋಧ್ಯೆಯಿಂದ ನಿರ್ಗಮಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಮಾತಾ ಅಮೃತಾನಂದಮಯಿ, ಉತ್ತರ ಪ್ರದೇಶದ ರಾಜ್ಯಪಾಲೆ ಆನಂದಿಬೆನ್ ಪಟೇಲ್, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಸುರೇಶ್ ಭಯ್ಯಾಜಿ ಜೋಶಿ ಉಪಸ್ಥಿತರಿದ್ದರು. ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಕೋಶಾಧ್ಯಕ್ಷ ಗೋವಿಂದ ದೇವಗಿರಿ ಮಹಾರಾಜ, ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನಕಾರ್ಯದರ್ಶಿ ಚಂಪತ್ ರಾಯ್, ಗೋಪಾಲ ಹಾಗೂ ಇತರ ಪ್ರಮುಖ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸರಯೂ ನೀರಿನಿಂದ ಅಯೋಧ್ಯೆ ಪವಿತ್ರ: ಯೋಗಿ

ಪುಟ 1➡ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ಶ್ರೀ ರಾಮ ಜನ್ಮಭೂಮಿ ದೇವಾಲಯ ನಿರ್ಮಾಣಕ್ಕಾಗಿ ಭೂಮಿ ಪೂಜೆ ಕಾರ್ಯಕ್ರಮ, ಶ್ರೀ ರಾಮಲಲಾ ಪ್ರಾಣ ಪ್ರತಿಷ್ಠೆ, ರಾಮ ಪರಿವಾರದ ಪವಿತ್ರ ವಿಗ್ರಹ ಸ್ಥಾಪನೆ, ಧ್ವಜಾರೋಹಣ ಮತ್ತು ಶ್ರೀ ರಾಮ ಯಂತ್ರದ ಸ್ಥಾಪನೆಯು ಸನಾತನ ಧರ್ಮದ ಪ್ರತಿಯೊಬ್ಬ ಅನುಯಾಯಿ ಮತ್ತು ನಿಜವಾದ ಭಾರತೀಯನನ್ನು ಸಂತೋಷಗೊಳಿಸಿದೆ ಎಂದು ಯೋಗಿ ಆದಿತ್ಯನಾಥ್ ಹೇಳಿದರು.

ಸಂಘರ್ಷಕ್ಕೆ ಸ್ವಾರ್ಥ ಮೂಲ ಕಾರಣ

ಪುಟ 1➡ ಮತೀಯ ಅಸಹಿಷ್ಣುತೆ, ಬಲವಂತದ ಮತಾಂತರಗಳು, ಪಾರಮ್ಯದ ವಿಚಾರಗಳು, ಮೇಲರಿಮೆ ಮತ್ತು ಕೀಳರಿಮೆಗಳು ಈಗಲೂ ಅಸ್ತಿತ್ವದಲ್ಲಿರುವುದನ್ನು ಎತ್ತಿ ತೋರಿದರು.



ಭಾರತದ ಪ್ರಾಚೀನ ಜ್ಞಾನವು ''ಎಲ್ಲರೂ ಪರಸ್ಪರ ಅವಲಂಬಿತರು ಮತ್ತು ಒಂದೇ'' ಎನ್ನುತ್ತದೆ. ಈ ಸನಾತನ ಚಿಂತನೆಯಿಂದ ನಾವು ಸಂಘರ್ಷದ ಹಾದಿಯನ್ನು ಬಿಟ್ಟು ಸೌಹಾರ್ದ ಮತ್ತು ಸಹಕಾರದ ಹಾದಿಯನ್ನು ಹಿಡಿಯಬೇಕಾಗಿದೆ. ಇದೀಗ ಆಧುನಿಕ ವಿಜ್ಞಾನ ಕೂಡ ನಿಧಾನವಾಗಿ ಇದನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದೆ ಎಂದು ಅವರು ವಿವರಿಸಿದರು.

ಧರ್ಮವು ಕೇವಲ ಗ್ರಂಥಗಳಿಗೆ ಸೀಮಿತವಾಗಿದ್ದರೆ ಸಾಲದು, ಬದಲಾಗಿ ಅದು ನಮ್ಮ ನಡವಳಿಕೆಯಲ್ಲಿ ಪ್ರತಿಫಲಿಸಬೇಕು.

ಶಿಸ್ತು, ನೈತಿಕ ಮೌಲ್ಯಗಳ ಅನುಸರಣೆಗೆ ತೀವ್ರವಾದ ಅಭ್ಯಾಸಗಳು ಅಗತ್ಯವಿದೆ ಮತ್ತು ಇಂತಹ ಹಾದಿಯಲ್ಲಿ ಕೊಲವೊಮ್ಮೆ ಕಷ್ಟ-ಸವಾಲುಗಳು ಎದುರಿಸಬೇಕಾಗಿಯೂ ಬರಬಹುದು. ಭಾರತ ಮಾನವೀಯತೆಯಲ್ಲಿ ನಂಬಿಕೆ ಹೊಂದಿರುವುದು ಇದೇ ಹಿನ್ನೆಲೆಯಲ್ಲಿ.

ಇತರರು ಅಸ್ತಿತ್ವಕ್ಕಾಗಿ ಹೋರಾಟ ಮತ್ತು ಶಕ್ತಿ ಇರುವವರೇ ಉಳಿಯುವುದು ಎಂಬ ತತ್ವದಲ್ಲಿ ನಂಬಿಕೆ ಹೊಂದಿರುವುದನ್ನು ಉಲ್ಲೇಖಿಸಿ, ಸಂಘರ್ಷಕ್ಕೆ ಶಕ್ತಿಯ ಈ ಸಿದ್ಧಾಂತ ಕಾರಣವಾಗುತ್ತಿದೆ. ಆದರೆ ವಿಶ್ವಕ್ಕಿಂದು ಬೇಕಾಗಿರುವುದು ಸಂಘರ್ಷವಲ್ಲ, ಬದಲಿಗೆ ಸೌಹಾರ್ದ ಎಂದು ಭಾಗ್ವತ್ ಬಲವಾಗಿ ಪ್ರತಿಪಾದಿಸಿದರು.

ದಾವಣಗೆರೆ ದಕ್ಷಿಣ ಕಾಂಗ್ರೆಸ್ ಕಗ್ಗಂಟು

ಪುಟ 1➡ ಈ ವೇಳೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೂ ಬುಲಾವ್ ನೀಡಲಾಗಿತ್ತು. ಅದರಂತೆ ಮಲ್ಲಿಕಾರ್ಜುನ್ ಅವರು ಈಶ್ವರ್ ಖಂಡ್ರೆ, ಜತೆಗೆ ಸುರ್ಜೇವಾಲ ಅವರನ್ನು ಭೇಟಿ ಮಾತುಕತೆ ನಡೆಸಿದರು. ಈ ವೇಳೆ ದಾವಣಗೆರೆಯಲ್ಲಿ ಕಾಂಗ್ರೆಸ್ ನೆಲೆ ಕಂಡುಕೊಳ್ಳುವಲ್ಲಿ ತಮ್ಮ ತಂದೆಯ ಶ್ರಮ ಇದೆ. ಕುಟುಂಬಕ್ಕೇ ಟಿಕೆಟ್ ನೀಡಬೇಕು. ಈಗಾಗಲೇ ಪುತ್ರ ಸಮರ್ಥ್ ನಾಮಪತ್ರ ಸಲ್ಲಿಸಿದ್ದಾರೆ. ಅನುಕಂಪ, ಸಮುದಾಯದ ಬೆಂಬಲ ಸೇರಿದಂತೆ ಎಲ್ಲವೂ ಕೆಲಸ ಮಾಡಲಿದೆ ಮಲ್ಲಿಕಾರ್ಜುನ್ ಸಮರ್ಥನೆಗಳನ್ನು ನೀಡಿದರು ಎನ್ನಲಾಗಿದೆ.

ಇಲ್ಲಿಂದ ಕೆಪಿಸಿಸಿ ಕಚೇರಿಯಲ್ಲೂ ಹಲವು ಸುತ್ತಿನ ಮಾತುಕತೆ ನಡೆಯಿತು. ಅಲ್ಲಿ ಸುರ್ಜೇವಾಲ, ಡಿ.ಕೆ. ಶಿವಕುಮಾರ್, ಎರಡೂ ಕ್ಷೇತ್ರಗಳ ಉಸ್ತುವಾರಿ ಸಮಿತಿಗಳ ಸಂಚಾಲಕರಾದ ಮಂಜುನಾಥ ಭಂಡಾರಿ ಮತ್ತು ವಸಂತ್ ಕುಮಾರ್, ಸಚಿವರು, ಪ್ರಮುಖ ಮುಖಂಡರೊಂದಿಗೆ ಸಮಾಲೋಚನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಸ್ಥಳೀಯ ಮುಖಂಡರು ನೀಡಿದ ವರದಿಯ ಅವಲೋಕನ, ನಾಯಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಖರ್ಗೆ ಭೇಟಿ ಮಾಡಿದ ಅಲ್ಪಸಂಖ್ಯಾತ ಮುಖಂಡರು: ಇನ್ನು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಬಿಗಿ ಪಟ್ಟು ಹಿಡಿದಿರುವ ಅಲ್ಪಸಂಖ್ಯಾತ ಮುಖಂಡರು, ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಸದಾಶಿವನಗರದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದಲ್ಲಿ ಆಗಮಿಸಿದ ಅಲ್ಪ ಸಮಖ್ಯಾತ ಮುಖಂಡರು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನಮ್ಮ ಸಮುದಾಯದ ಒಬ್ಬರಿಗೆ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ಬಿಜೆಪಿಯಿಂದ ವೀರಣ್ಣ ಚರಂತಿಮಠ ನಾಮಪತ್ರ

ಪುಟ 1➡ ರಾಜ್ಯದ ಪ್ರಮುಖ ನಾಯಕರ ಸಮ್ಮುಖದಲ್ಲಿ ವೀರಣ್ಣ ಚರಂತಿಮಠ ಅವರು ಅಧಿಕೃತವಾಗಿ ಇನ್ನೊಮ್ಮೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ಮೂಲಕ ಕ್ಷೇತ್ರದಲ್ಲಿ ಪಕ್ಷದ ಶಕ್ತಿ ಪ್ರದರ್ಶನಕ್ಕೂ ಬಿಜೆಪಿ ಸಜ್ಜಾಗಿದೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರು ಇದ್ದು, ಇವರಲ್ಲಿ 1,26,761 ಪುರುಷರು, 1,32,476 ಮಹಿಳೆಯರು ಮತ್ತು 23 ಇತರೆ ಮತದಾರರಿದ್ದಾರೆ.

2 ಕ್ಷೇತ್ರಗಳ ಅಭಿಪ್ರಾಯ ಸಂಗ್ರಹಿಸಿದ್ದೇವೆ: ಡಿಸಿಎಂ

• **ಬೆಂಗಳೂರು:** ಉಪ ಚುನಾವಣೆಯಲ್ಲಿ ಪಕ್ಷ ಯಾರಿಗೆ ಟಿಕೆಟ್ ಕೊಟ್ಟರೂ ಒಮ್ಮತದಿಂದ ಕೆಲಸ ಮಾಡುವುದಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ನಮ್ಮ ನಾಯಕರು ಹೇಳಿದ್ದಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಕೆಪಿಸಿಸಿ ಕಚೇರಿಯಲ್ಲಿ ಸುರ್ಜೇವಾಲಾ ಜತೆಗಿನ ಸಭೆ ಬಳಿಕ ಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ಪಕ್ಷದ ಮುಖಂಡರ ಸಭೆ ನಡೆಸಿದ್ದು, ಎಲ್ಲರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಎಲ್ಲರ ಅಭಿಪ್ರಾಯದಂತೆ ನಾವು ಹೈಕಮಾಂಡ್‌ಗೆ ನಮ್ಮ ಪಟ್ಟಿ ಕಳುಹಿಸುತ್ತೇವೆ. ಅಂತಿಮವಾಗಿ ಅವರು ತೀರ್ಮಾನ ಮಾಡಲಿದ್ದಾರೆ ಎಂದು ತಿಳಿಸಿದರು.



ಕುದುರೆಮುಖ ಕಾಡ್ಗಿಚ್ಚು ತನಿಖೆಗೆ ಖಂಡ್ರೆ ಆದೇಶ

• **ಬೆಂಗಳೂರು:** ಕುದುರೆಮುಖ ರಾಷ್ಟ್ರೀಯ ಉದ್ಯಾನದ 25ಕ್ಕೂ ಹೆಚ್ಚು ಕಡೆ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಮಂಗಳೂರು ವಿಭಾಗದ ಅರಣ್ಯಾಧಿಕಾರಿ ಮರಿಯಪ್ಪ ಕರಿಕಳನ್ ನೇತೃತ್ವದಲ್ಲಿ ತನಿಖೆಗೆ ಆದೇಶ ನೀಡಿದ್ದಾರೆ. ತಮ್ಮ ನಿವಾಸ ದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದ ಅವರು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮದ ಶಿಫಾರಸಿನೊಂದಿಗೆ 7 ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ಸೂಚಿಸಿದರು. ಕುದುರೆಮುಖ ಅರಣ್ಯದೊಳಗಿರುವ ಕೆಲವು ನಿವಾಸಿಗಳು ಸ್ವಯಂಪ್ರೇರಿತವಾಗಿ ಹೊರಬರಲು ಇಚ್ಛಿಸಿದ್ದು, ಈ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಿ, ಕಾಂಪಾ ನಿಧಿಯಿಂದ ಅರಣ್ಯ ವಾಸಿಗಳ ಸ್ಥಳಾಂತರ ಕುರಿತಂತೆ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಸೇರಿಸಿ ತಕ್ಷಣವೇ ಕಡತ ಸಲ್ಲಿಸುವಂತೆ ಸೂಚಿಸಿದರು.

ತಟಸ್ಥ ನೀತಿ ಜವಾಬ್ದಾರಿ ನಡೆ

ಪುಟ 1➡ ಅಂತೆಯೇ, ಯುದ್ಧವನ್ನು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ ಮತ್ತು ಇದು ಸಾರ್ವಭೌಮತ್ವದ ತತ್ವಗಳಿಗೆ ವಿರುದ್ಧವಾಗಿದೆ. ಆದರೆ, ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಭಾರತ ತಾಳ್ಮೆ ತೋರಿಸುತ್ತಿರುವುದು ಕಾರ್ಯತಂತ್ರದ ವಿವೇಕವನ್ನು ತೋರಿಸುತ್ತದೆ ಎಂದರು. ಮಾತ್ರವಲ್ಲದೇ, ಭಾರತದ ಮೌನವು ಯುದ್ಧಕ್ಕೆ ಬೆಂಬಲವಲ್ಲ ಅಥವಾ ದುರ್ಬಲತೆಗೂ ಸಂಕೇತವಲ್ಲ, ಬದಲಾಗಿ ದೇಶದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡ ತೀರ್ಮಾನ ಎಂದು ಶಶಿ ತರೂರ್ ಹೇಳಿದ್ದಾರೆ.

ಇದು ನಮ್ಮ ಯುದ್ಧವಲ್ಲ: ಚಂಡೀಗಢದ ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಕೂಡ ಇದೇ ನಿಲುವನ್ನು ಪ್ರತಿಪಾದಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಒಂದೇ ಒಂದು ಸಂಘರ್ಷವಲ್ಲ, ಹಲವು ಮಟ್ಟದ ಉದ್ವಿಗ್ನತೆಗಳು ನಡೆಯುತ್ತಿವೆ ಎಂದು ಅವರು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಭಾರತ ನೇರವಾಗಿ ತೊಡಗಿಕೊಳ್ಳದಿರುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು. ಇದು ನಮ್ಮ ಯುದ್ಧವಲ್ಲ, ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದು ಮುಖ್ಯ ಎಂದು ತಿವಾರಿ ಹೇಳಿದ್ದಾರೆ.

ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಲಿ ಪೆಟ್ಟು: ವಿಜಯೇಂದ್ರ

ಕಲಬುರಗಿ: ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತಿ ಚುನಾವಣೆ ನಡೆಸದಿರುವುದು ಪಂಚಾಯತ್ ರಾಜ್ ವ್ಯವಸ್ಥೆಗೆ ರಾಜ್ಯ ಸರ್ಕಾರ ನೀಡುತ್ತಿರುವ ಕೊಡಲಿ ಪೆಟ್ಟು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರದಿಂದ ಬರಬೇಕಿದ್ದ ಸುಮಾರು 14 ರಿಂದ 15 ಸಾವಿರ ಕೋಟಿ ರೂಪಾಯಿ ಅನುದಾನ ಕೈ ತಪ್ಪಿದೆ. ರಾಜ್ಯ ಸರ್ಕಾರದ ಈ ಧೋರಣೆಯೇ ಹಿನ್ನಡೆಗೆ ಮುಖ್ಯ ಕಾರಣ ಎಂದರು. ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಆರು-ಎಂಟು ತಿಂಗಳಿಂದ ರಾಜ್ಯ ಸರ್ಕಾರದಲ್ಲಿ ಅಸ್ಥಿರತೆ ಹಾಗೂ ಕುರ್ಚಿ ಕಿತ್ತಾಟ ಮುಂದುವರಿದಿದ್ದು, ಇದರಿಂದ ಆಡಳಿತದ ಮೇಲೆ ಪರಿಣಾಮ ಬಿದ್ದಿದೆ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ ಅವರ ಮೇಲ್ವಿಚಾರಣೆಯಲ್ಲಿದ್ದರೂ ಕಲಬುರಗಿ ಸೇರಿದಂತೆ ಈ ಭಾಗದಲ್ಲಿ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಂಡುಬರುತ್ತಿಲ್ಲ. ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೀಕೆ ಮಾಡುವುದಕ್ಕಿಂತ ಸ್ಥಳೀಯ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಚಿವ ಖರ್ಗೆಗೆ ಸಲಹೆ ನೀಡಿದರು.



ರಾಜ್ಯ ಸರ್ಕಾರದ ಆಂತರಿಕ ಕಲಹವು ಈಗ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದೆ. ಬಜೆಟ್ ಅಧಿವೇಶನದಲ್ಲಿ ಆಡಳಿತ ಪಕ್ಷದ ಶಾಸಕರೇ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈಗ ಎಲ್ಲರ ಮುಂದಿರುವ ಪ್ರಶ್ನೆ ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದೇ ಆಗಿದೆ.

■ ಬಿ.ವೈ.ವಿಜಯೇಂದ್ರ, ರಾಜ್ಯಾಧ್ಯಕ್ಷ, ಬಿಜೆಪಿ



ಜಾತ್ರಾ ಮಹೋತ್ಸವ

ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರಬೆಟ್ಟದಲ್ಲಿ ಶುಕ್ರವಾರ ನಡೆದ ಯುಗಾದಿ ಜಾತ್ರಾ ಮಹೋತ್ಸವದಲ್ಲಿ ಸೇರಿದ್ದ ಅಪಾರ ಜನಸ್ತೋಮ.

ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಮಹತ್ಸಾಧನೆ

ಬೆಂಗಳೂರು/ ಹೊಸದಿಲ್ಲಿ: ಸೌರಶಕ್ತಿ, ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತ ಮೂರನೇ ಅತಿದೊಡ್ಡ ರಾಷ್ಟ್ರವಾಗಿ ನಿಂತಿದ್ದು, ಊಹಿಸಲು ಅಸಾಧ್ಯ ಎನ್ನುವಂತೆ ಅಗಾಧ ಸಾಧನೆಗೈದಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.



ವಿಯೊನ್ ವತಿಯಿಂದ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, 2030ರ ವೇಳೆಗೆ 500 ಜಿಡಬ್ಲ್ಯೂ ನವೀಕರಿಸಬಹುದಾದ ಇಂಧನ ಗುರಿಯತ್ತ ಸಾಗಿರುವ ಭಾರತದ ಶುದ್ಧ ಇಂಧನ ಪ್ರಯಾಣ ಅಭೂತಪೂರ್ವ ವೇಗ ಪಡೆಯುತ್ತಿದೆ ಎಂದರು. ಭಾರತದ ಮಾಡ್ಯೂಲ್ ಮತ್ತು ಉತ್ಪಾದನಾ ಸಾಮರ್ಥ್ಯವು ಗಮನಾರ್ಹವಾಗಿ ವಿಸ್ತರಿಸಿದ್ದು, ದೇಶೀಯ ಸಾಮರ್ಥ್ಯಗಳನ್ನು ಬಲಪಡಿಸುತ್ತಿದೆ. ವಿತರಿಸಿದ ನವೀಕರಿಸಬಹುದಾದ ಇಂಧನ ಕೇವಲ 35 ಜಿಡಬ್ಲ್ಯೂ ತಲುಪಿದ್ದು, 55 ಲಕ್ಷ ವಿಕೇಂದ್ರೀಕೃತ ಸ್ಥಾಪನೆಗಳಿಂದ ನಡೆಸಲ್ಪಡುತ್ತದೆ, ಇದರಲ್ಲಿ 31 ಲಕ್ಷ ಮನೆಗಳು ಸೇರಿವೆ ಎಂದು ವಿವರಿಸಿದರು. ಪಿಎಂ ಸೂರ್ಯಘರ್ ಮತ್ತು ಪಿಎಂ ಕುಸುಮ್ ಅಡಿಯಲ್ಲಿ 23 ಲಕ್ಷ ಸೌರಶಕ್ತಿ ನೀರಾವರಿ ಪಂಪ್‌ಗಳಾಗಿ ಪರಿವರ್ತನೆಗೊಂಡಿವೆ. 25 ವರ್ಷಗಳ ಹಿಂದೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸುಮಾರು 20 ರೂ.ವೆಚ್ಚವಾಗುತ್ತಿತ್ತು. ಆದರೀಗ ಕೇವಲ 2.15 ರೂ. ಲಭ್ಯವಾಗುತ್ತಿದೆ. ಸಂಗ್ರಹಣೆ ವೆಚ್ಚ ಸೇರಿ ಸುಮಾರು 2.80 ರೂ. ಆಗಿದೆ. ಸೌರ, ಪವನ ಮತ್ತು ಬ್ಯಾಟರಿ ಸಂಯೋಜಿತವಾಗಿ ಪ್ರತಿ ಯೂನಿಟ್‌ಗೆ ಸುಮಾರು 4ರೂ. ತಲುಪುತ್ತಿದ್ದು, ಇದು ಉಷ್ಣ ವಿದ್ಯುತ್‌ಗೆ ಹೋಲಿಸಿದರೆ ಗಮನಾರ್ಹವಾಗಿ ಕಡಿಮೆಯಾಗಿದೆ ಎಂದರು.

ಭಾರತ ಪಳೆಯುಳಿಕೆಯೇತರ ಇಂಧನ ಪರಿವರ್ತನೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ. ಹಸಿರು ಜಲಜನಕ ವೆಚ್ಚ 279 ರೂ. ಕೆಜಿಗೆ ಇಳಿದರೆ, ಹಸಿರು ಅಮೋನಿಯಾ ಬೆಲೆ ಸುಮಾರು 45.70 ರೂ.ಕೆಜಿಗೆ ತಲುಪಿದ್ದು, ಇದು ವಿಶ್ವದಲ್ಲೇ ಅತ್ಯಂತ ಕಡಿಮೆಯಾಗಿದ್ದು, ಸುಸ್ಥಿರ ಕೈಗಾರಿಕಾ ಬಳಕೆಗೆ ಹೊಸ ಪಥವನ್ನು ಸೃಷ್ಟಿಸಿದೆ ಎಂದು ಪ್ರತಿಪಾದಿಸಿದರು.

ಕಿರುಸುದ್ದಿ

ಬಾಗಲಕೋಟೆ ಉಪ ಚುನಾವಣೆ ನಾಮಪತ್ರ ಸಲ್ಲಿಸಿದ ಚರಂತಿಮಠ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಶುಕ್ರವಾರ 5 ಅಭ್ಯರ್ಥಿಗಳಿಂದ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಆನಂದ ಜಕಾತಿ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ ತಲಾ 2 ನಾಮಪತ್ರ ಸಲ್ಲಿಸಿದರೆ, ಉತ್ತಮ ಪ್ರಜಾಕೀಯ ಪಕ್ಷದಿಂದ ಅಂತೋಷ ಸವ್ವಾಸೆ, ಭಾರತೀಯ ಜನತಾ ಪಕ್ಷದಿಂದ ವೀರಭದ್ರಯ್ಯ ಚರಂತಿಮಠ, ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ದಿಂದ ಗೋವಿಂದರಾಜ ಟಿ. ಬಳ್ಳಾರಿ ತಲಾ ಒಂದು ನಾಮಪತ್ರ ಸೇರಿ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದ್ದಾರೆ.

ಕಾಫಿ ತೋಟಕ್ಕೆ ಬೀಟಮ್ಮ ಗ್ಯಾಂಗ್ ಲಗ್ಗೆ



ಚಿಕ್ಕಮಗಳೂರು: ರೈತರ ನಿದ್ದೆಗೆಡಿಸಿದ್ದ ಕಾಡಾನೆ ಬೀಟಮ್ಮ ಹಿಂಡು ಮತ್ತೆ ಕಾಫಿ ತೋಟಗಳಿಗೆ ಲಗ್ಗೆ ಇಟ್ಟಿದೆ. ಇದರಿಂದ ರೈತರ ಆತಂಕ ಮತ್ತಷ್ಟು ಹೆಚ್ಚಿದೆ. ಅರಣ್ಯ ಇಲಾಖೆಯ ಕಾಲರ್ ಐಡಿ ಅಳವಡಿಸಲಾದ ಬೀಟಮ್ಮ ಮರಿಗಳಲ್ಲದೆ ಸೇರಿದಂತೆ ಐದಾರು ಆನೆಗಳೊಂದಿಗೆ ಕಾಫಿ ತೋಟಗಳಲ್ಲಿ ಸಂಚರಿಸುತ್ತಿದ್ದು, ಜನರು ಮನೆಯಿಂದ ಹೊರಬರಲು ಭಯಪಡುತ್ತಿದ್ದಾರೆ. ಬೀಟಮ್ಮ ಗ್ಯಾಂಗ್ ಮರಿಗಳನ್ನು ಕಾಳಜಿಯಿಂದ ಜತೆಯಲ್ಲಿ ಕರೆದೊಯ್ಯುವ ಅಪರೂಪದ ದೃಶ್ಯ ಅರಣ್ಯ ಇಲಾಖೆ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಮೂಡಿಗೆರೆ ತಾಲೂಕಿನ ಜಿ.ಹೊಸಳ್ಳಿ-ಕಸ್ಕೆಬೈಲು ಗ್ರಾಮದಲ್ಲಿ ಆನೆಗಳು ಮರಿಗಳ ಜತೆ ಜಾಗರೂಕತೆಯಿಂದ ಸಂಚರಿಸುತ್ತಿರುವ ದೃಶ್ಯ ಸೆರೆಸಿಕ್ಕಿದೆ.

ಮಾ.22ಕ್ಕೆ ಈ ಹೊತ್ತಿಗೆ ಹೊನಲು ಕಾರ್ಯಕ್ರಮ

ಬೆಂಗಳೂರು: ಈ ಹೊತ್ತಿಗೆ ವತಿಯಿಂದ ಮಾ.22ರಂದು ಬೆಳಗ್ಗೆ 10 ಗಂಟೆಗೆ ಜೆಪಿ ನಗರದಲ್ಲಿರುವ ಕಪ್ಪಣ್ಣ ಅಂಗಳದಲ್ಲಿ ಈ ಹೊತ್ತಿಗೆಯ 13ನೇ ವಾರ್ಷಿಕೋತ್ಸವ ಹೊನಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಿತ್ರದುರ್ಗದ ಡಾ.ತಾರಿಣಿ ಶುಭದಾಯಿನಿ ಅವರಿಗೆ ಕಾವ್ಯ ಪ್ರಶಸ್ತಿ ವಿಜೇತೆ ಹಾಗೂ ಕಾರ್ಕಳದ ಎಂ ಮನೋಹರ ಪೈ ಅವರಿಗೆ ಕಥಾಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್ ಸುನಂದಮ್ಮ ಪ್ರಶಸ್ತಿ ಪ್ರದಾನ ಮಾಡಲಿದ್ದು, ಇದೇ ಸಂದರ್ಭದಲ್ಲಿ ಪ್ರಶಸ್ತಿ ವಿಜೇತ ಕೃತಿಗಳ ಲೋಕಾರ್ಪಣೆಯಾಗಲಿದೆ.

ಪರಮ ವೈಭವ ಸ್ಥಿತಿಗಾಗಿ ಶ್ರಮಿಸೋಣ: ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್

ಆರೆಸ್ಸೆಸ್ ಅತಿ ಪ್ರಬಲ ಶಕ್ತಿ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ನೂರು ವರ್ಷಗಳ ಸಾರ್ಥಕ ಪಯಣದಲ್ಲಿ ಅನೇಕ ವಿರೋಧ ಮತ್ತು ಅಪಪ್ರಚಾರಗಳ ನಡುವೆಯೂ ಆರ್‌ಎಸ್‌ಎಸ್ ಇಂದು ಸಮಾಜದಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಬೆಳೆದು ನಿಂತಿದೆ ಎಂದು ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್ ಹೇಳಿದರು.

ಬಸವನಗುಡಿಯ ಮರಾಠಾ ಹಾಸ್ಟೆಲ್ ಮೈದಾನದಲ್ಲಿ ನಡೆದ ಆರ್‌ಎಸ್‌ಎಸ್‌ನ ಬೆಂಗಳೂರು ದಕ್ಷಿಣ ವಿಭಾಗದ ಯುಗಾದಿ ಉತ್ಸವದಲ್ಲಿ ಮಾತನಾಡಿದ ಅವರು, ನಿರಂತರವಾಗಿ ಸಾಗುತ್ತಿರು(ಚರೈವೇತಿ ಚರೈವೇತಿ) ಎಂಬ ಮಂತ್ರದಂತೆ ಆರ್‌ಎಸ್‌ಎಸ್ ಕಾರ್ಯಕರ್ತರು ಯಾವುದೇ ವಿಶ್ರಾಂತಿ ಇಲ್ಲದೆ ರಾಷ್ಟ್ರದ ಪರಮ ವೈಭವ ಸ್ಥಿತಿಗಾಗಿ ಶ್ರಮಿಸಬೇಕು. ನಮ್ಮ ಮನೆಗಳೇ ಸಮಾಜಕ್ಕೆ ಮಾದರಿಯಾಗುವಂತೆ ನಡೆದುಕೊಳ್ಳೋಣ. ಆರ್‌ಎಸ್‌ಎಸ್‌ನ ಆರು ಪ್ರಮುಖ ಉತ್ಸವಗಳಲ್ಲಿ ಯುಗಾದಿಯೂ ಒಂದಾಗಿದ್ದು, ಇದು ಪ್ರಕೃತಿಯ ಹೊಸ ಚಿಗುರಿನಂತೆ ಸಂಘದ ಕಾರ್ಯಕ್ಕೂ ಹೊಸ ಚೈತನ್ಯ ತುಂಬುತ್ತದೆ. ಸಂಘವು ವ್ಯಕ್ತಿಗಿಂತ ವಿಚಾರಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಾ ಬಂದಿದ್ದು, ಭಗವಾಧ್ವಜವನ್ನೇ ಗುರುವಾಗಿ ಸ್ವೀಕರಿಸಿರುವುದು ಸಂಘದ ವಿಶಿಷ್ಟ ಪರಂಪರೆಯಾಗಿದೆ. ವ್ಯಕ್ತಿಗಳು ಶಾಶ್ವತವಲ್ಲ, ಆದರೆ ತತ್ವ, ವಿಚಾರಗಳು ಶಾಶ್ವತ ಎಂಬ ದೂರದೃಷ್ಟಿಯ ಫಲವಾಗಿ ಇಂದು ಸಂಘವು ಐದನೇ ತಲೆಮಾರಿನ ಕಾರ್ಯಕರ್ತರನ್ನು ಸಜ್ಜುಗೊಳಿಸಿದೆ ಎಂದು ತಿಳಿಸಿದರು.

ಮುಕ್ತವಾಗಿ ಸಂಘ ಸ್ವೀಕಾರ: ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಗುರಿಯನ್ನು ಹೊಂದಿರುವ ಪ್ರಕ್ರಿಯೆಯು ನಿತ್ಯ ಶಾಖೆಗಳ ಮೂಲಕ ನಿರಂತರವಾಗಿ ನಡೆಯುತ್ತಿದೆ. ಇತ್ತೀಚಿನ ಹಿಂದು ಸಮ್ಮೇಳನ ಮತ್ತು ಮನೆ-ಮನೆ ಸಂಪರ್ಕ ಅಭಿಯಾನಗಳ ಮೂಲಕ ಸಮಾಜವು ಸಂಘದೊಂದಿಗೆ ಅಭೂತಪೂರ್ವವಾಗಿ ಕೈಜೋಡಿಸುತ್ತಿದೆ. ಪಂಚ ಪರಿವರ್ತನೆ ವಿಚಾರಗಳನ್ನು ಸಮಾಜವು ಮುಕ್ತವಾಗಿ ಸ್ವೀಕರಿಸುತ್ತಿದೆ.

ಕೇವಲ ಸ್ವಯಂಸೇವಕರಷ್ಟೇ ಅಲ್ಲದೆ, ಮಾತೃಶಕ್ತಿ ಮತ್ತು ಯುವಶಕ್ತಿಯೂ ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಈ ಕಾರ್ಯಗಳಿಗೆ ಬೆಂಬಲ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಅಷ್ಟೇ ಅಲ್ಲದೆ, ಪರಿಸರ ಸಂರಕ್ಷಣೆ ಮತ್ತು ಗೋಸೇವೆಯಂತಹ ಗತಿವಿಧಿಗಳ ಮೂಲಕ ವಿವಿಧ ಎನ್‌ಜಿಒಗಳು ಹಾಗೂ ಸಮಾಜದ ಬೇರೆ ಬೇರೆ ಸ್ತರದ ಜನರು ಸಂಘದೊಂದಿಗೆ ಸಹಭಾಗಿತ್ವ ಹೊಂದುತ್ತಿದ್ದಾರೆ ಎಂದು ಗುರುಪ್ರಸಾದ್ ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ಮಹಾನಗರ ಸಂಘಚಾಲಕ ಮಿಲಿಂದ್ ಗೋಖಲೆ, ವಿಭಾಗ ಸಂಘಚಾಲಕ ಹರೀಶ್ ಉಪಸ್ಥಿತರಿದ್ದರು.



ಸೆ.20ರಿಂದ ಶಾಖಾ ವಿಸ್ತಾರ ಸಪ್ತಾಹ

ಸಂಘದ ಶತಮಾನೋತ್ಸವ ಅಂಗವಾಗಿ ಸೆಪ್ಟೆಂಬರ್ 20ರಿಂದ 27ರವರೆಗೆ ಶಾಖಾ ವಿಸ್ತಾರ ಸಪ್ತಾಹ ಆಯೋಜಿಸಲು ನಿರ್ಧರಿಸಲಾಗಿದ್ದು, ಬೆಂಗಳೂರಿನ ಪ್ರತಿ ಉಪವಸತಿಗಳಲ್ಲಿ ಹೊಸ ಶಾಖೆ ಆರಂಭಿಸುವ ಗುರಿ ಹೊಂದಲಾಗಿದೆ. ಈ ಸಪ್ತಾಹದ ಮೂಲಕ ಸಂಘದ ಶಕ್ತಿಯನ್ನು ವಿಸ್ತರಿಸಲು ಪ್ರತಿಯೊಬ್ಬ ಕಾರ್ಯಕರ್ತನು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಗುರುಪ್ರಸಾದ್ ಕರೆನೀಡಿದರು.

ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್

ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಉಚಿತವಾಗಿ ಶೂ ಮತ್ತು ಸಾಕ್ಸ್ ವಿತರಿಸಲು ಸರ್ಕಾರ ಆದೇಶಿಸಿದೆ.



ಈ ಯೋಜನೆಗೆ ಒಟ್ಟು 104 ಕೋಟಿ ರೂ. ಮೊತ್ತವನ್ನು ಮೀಸಲಿಡಲಾಗಿದ್ದು, ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಪ್ರತಿ ವಿದ್ಯಾರ್ಥಿಗೂ ಅತ್ಯುತ್ತಮ ಗುಣಮಟ್ಟದ 1 ಜತೆ ಕಪ್ಪು ಬಣ್ಣದ ಶೂ ಹಾಗೂ 2 ಜತೆ ಬಿಳಿ ಬಣ್ಣದ ಸಾಕ್ಸ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. 2026-27ನೇ ಶೈಕ್ಷಣಿಕ ವರ್ಷದ ಜೂನ್ ತಿಂಗಳಿನಲ್ಲಿ ಆರಂಭವಾದ ಕೂಡಲೇ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್‌ಗಳನ್ನು ವಿತರಿಸುವ ಗುರಿಯನ್ನು ಶಾಲಾ ಶಿಕ್ಷಣ ಇಲಾಖೆ ಹೊಂದಿದೆ.

ಪ್ರತಿ ತರಗತಿಗೆ ನಿರ್ದಿಷ್ಟಪಡಿಸಿದ ಅಳತೆಯ ಶೂ ಮತ್ತು ಸಾಕ್ಸ್‌ಗಳನ್ನು ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಸರಬರಾಜುದಾರರಿಂದ ಪಡೆಯಲಾಗುವುದು. ಅಳತೆಯ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಶೇ.5ರಷ್ಟು ಹೆಚ್ಚುವರಿ ದಾಸ್ತಾನನ್ನು ಪ್ರತಿ ತಾಲೂಕು ಹಂತದಲ್ಲಿ ಇಟ್ಟುಕೊಂಡು ಸರಿಯಾದ ಶೂ ಮತ್ತು ಸಾಕ್ಸ್‌ಗಳನ್ನು 30 ದಿನಗಳಲ್ಲಿ ವಿತರಿಸಲಾಗುವುದು ಎಂದು ತಿಳಿಸಿ, ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ಖರೀದಿಸಿ ವಿರಣೆ ಮಾಡುವ ಸಂಬಂಧ ಕೇಂದ್ರೀಕೃತವಾಗಿ ಅಥವಾ ಪ್ರತಿ ವಿಭಾಗಕ್ಕೆ ಪ್ರತ್ಯೇಕವಾಗಿ ಕೆಟಿಪಿಪಿ ಕಾಯ್ದೆ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳಂತೆ ಟೆಂಡರ್ ಮೂಲಕ ಶೂ ಮತ್ತು ಸಾಕ್ಸ್‌ಗಳ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಅಧಿಕ ಮಳೆಯಾಗುವ ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಉಡುಪಿ ಮತ್ತು ದ.ಕನ್ನಡ ಜಿಲ್ಲೆಗಳ ಶಾಲೆಗಳಲ್ಲಿನ ಎಸ್‌ಡಿಎಂಸಿಗಳು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಶೂಗಳ ಬದಲು ಪಾದರಕ್ಷೆ ಸರಬರಾಜು ಮಾಡಲು ಕೋರಿದ್ದಾರೆ.

ತರಗತಿವಾರು ವೆಚ್ಚ

(ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣ ಶೂ, ಸಾಕ್ಸ್ ಬೆಲೆ ನಿಗದಿ)

- 1 ರಿಂದ 5ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 265 ರೂ.
- 6 ರಿಂದ 8ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 295 ರೂ.
- 9 ರಿಂದ 10ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 325 ರೂ.

ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜ್ ಭರವಸೆ

ಜೂನ್ ವೇಳೆಗೆ ಟಿಬಿ ಡ್ಯಾಂ ಕ್ರಸ್ಟ್ ಗೇಟ್

ವಿಜಯನಗರ: ಜೂನ್‌ನಲ್ಲಿ ಆರಂಭಗೊಳ್ಳುವ ಮುಂಗಾರಿಗೂ ಮುನ್ನವೇ ತುಂಗಭದ್ರಾ ಅಣೆಕಟ್ಟೆಯ ಎಲ್ಲ 33 ಕ್ರಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯ ಪೂರ್ಣಗೊಳ್ಳಲಿದೆ. ಜತೆಗೆ ಹೊಸ ಲಿಂಕ್ ಚೈನ್ ಕೂಡ ಅವಳಡಿಸಲಾಗವುದು. ಈ ಹಿನ್ನೆಲೆಯಲ್ಲಿ ಕೆಳ ಭಾಗದ ರೈತರು ಯಾವುದೇ ಕಾರಣಕ್ಕೂ ಆತಂಕಪಡುವ ಅಗತ್ಯವಿಲ್ಲ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್ ರೈತರಿಗೆ ಭರವಸೆ ನೀಡಿದ್ದಾರೆ.

ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯಕ್ಕೆ ಶುಕ್ರವಾರ ಭೇಟಿ ನೀಡಿ ಹೊಸ ಕ್ರಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯವನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ತುಂಗಭದ್ರಾ ಜಲಾಶಯದ 33 ಗೇಟ್‌ಗಳ ಪೈಕಿ ಹೊಸದಾಗಿ 18 ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಿ ಪರೀಕ್ಷಿಸಲಾಗಿದೆ. ಎಲ್ಲವೂ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ. 5 ಪ್ರಗತಿಯಲ್ಲಿದ್ದು, ಮಾರ್ಚ್ ಅಂತ್ಯದೊಳಗೆ 23 ಪೂರ್ಣಗೊಳ್ಳುತ್ತವೆ. ಏಪ್ರಿಲ್ ಅಂತ್ಯದೊಳಗೆ ಇನ್ನುಳಿದ 10 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲಾಗುವುದು. ಅವುಗಳನ್ನು ಸ್ಥಳದಲ್ಲೇ ನಿರ್ಮಿಸಿ ಅಳವಡಿಸಲು ತಂತ್ರಜ್ಞರು ಉದ್ದೇಶಿಸಿದ್ದಾರೆ. ಕ್ರಸ್ಟ್ ಗೇಟ್‌ಗಳ ಲಿಂಕ್ ಚೈನ್‌ಗಳು ಹಳೆಯದಾಗಿದ್ದು, ತುಕ್ಕು ಹಿಡಿದಿವೆ. ಅವುಗಳನ್ನೂ ಬದಲಿಸಬೇಕೆಂಬ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಅಭಿಪ್ರಾಯದಂತೆ ಹೊಸ ಸರಪಳಿ ಅಳವಡಿಸಲು 4.5 ಕೋಟಿ ರೂ. ಮೊತ್ತದಲ್ಲಿ ಚೆನ್ನೈ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದೆ. ಮೇ ಅಂತ್ಯದೊಳಗೆ ಹೊಸ ಸರಪಳಿಯನ್ನೂ ಅಳವಡಿಸಲಾಗುತ್ತದೆ. ನಿರೀಕ್ಷೆಯಂತೆ ಮುಂಗಾರು ಚುರುಕು ಪಡೆಯುವುದರೊಳಗೆ ಜಲಾಶಯದ ಕ್ರಸ್ಟ್ ಗೇಟ್‌ಗಳ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಸಮಾನಾಂತರ ಡ್ಯಾಂ

ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಕೊಪ್ಪಳ ಜಿಲ್ಲೆ ನವಿಲೆ ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ. ಆದರೆ, ಟಿಬಿ ಡ್ಯಾಂ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣಕ್ಕೆ ಸಂಬಂಧಿಸಿದ್ದರಿಂದ ಆಯಾ ರಾಜ್ಯಗಳ ಅನುಮತಿ ಬೇಕು. ಈ ಕುರಿತಂತೆ ಆಂಧ್ರದ ನೀರಾವರಿ ಸಚಿವರನ್ನು ಅಮರಾವತಿಯಲ್ಲಿ ಭೇಟಿ ಮಾಡಿ, ಮನವರಿಕೆ ಮಾಡಿಕೊಟ್ಟಿದ್ದೇವೆ. ಎರಡು ಮೂರು ತಿಂಗಳಲ್ಲಿ ವ್ಯಾಜ್ಯ ಮುಗಿಯುವ ಮುನ್ಸೂಚನೆಯಿದ್ದು, ಆದಷ್ಟು ಬೇಗ ನವಿಲೆ ಜಲಾಶಯ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗುವುದು. ಅದರಂತೆ ಮಾನವಿ ತಾಲೂಕಿನ ಚೀಕಲಪರವಿ ಬ್ರಿಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದ್ದು, ಇಂತಹದ್ದೇ ತಾಂತ್ರಿಕ ಸಮಸ್ಯೆ ಅಡ್ಡಿಯಾಗಿದೆ. ಆದಷ್ಟು ಬೇಗ ಅದನ್ನೂ ಸಾಕಾರಗೊಳಿಸಲು ಯತ್ನಿಸಲಾಗುತ್ತದೆ ಎಂದು ಸಚಿವ ಎನ್.ಎಸ್.ಬೋಸರಾಜ್ ವಿವರಿಸಿದರು.

ಹುಳಿಯಾರು ಠಾಣೆಯಲ್ಲಿ ಲಾಕಪ್ ಸಾವು

ತುಮಕೂರು: ಇಸ್ಪೀಟ್ ಆಡುತ್ತಿದ್ದಾರೆಂದು ವಶಕ್ಕೆ ಪಡೆದಿದ್ದ ವ್ಯಕ್ತಿ ಜಿಲ್ಲೆಯ ಹುಳಿಯಾರು ಪೊಲೀಸ್ ಠಾಣೆಯಲ್ಲೇ ವಿಚಾರಣಾಧೀನ ಕೈದಿಯೊಬ್ಬರು ಮೃತಪಟ್ಟಿದ್ದು, ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕುಟುಂಬಸ್ಥರು, ಗ್ರಾಮಸ್ಥರು, ಸಾರ್ವಜನಿಕರು ಠಾಣೆ ಮುಂದೆ ಶವವಿಟ್ಟು ಪ್ರತಿಭಟನೆ ನಡೆಸಿ ತನಿಖೆಗೆ ಆಗ್ರಹಿಸಿದ್ದಾರೆ. ಯಳನಾಡು ಗ್ರಾಮದ ಕಾಂತರಾಜು (45) ಮೃತಪಟ್ಟ ವ್ಯಕ್ತಿ. ಈ ಸಂಬಂಧ ಗ್ರಾಮಸ್ಥರು ಹುಳಿಯಾರು ಪೊಲೀಸ್ ಠಾಣೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು. ತೀವ್ರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್, ಮಾಜಿ ಸಚಿವ ಮಾಧುಸ್ವಾಮಿ, ಮಾಜಿ ಶಾಸಕ ಕಿರಣ್ ಕುಮಾರ್ ಠಾಣೆಗೆ ಆಗಮಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಯಳನಾಡು ಗ್ರಾಮದಲ್ಲಿ ಇಸ್ಪೀಟ್ ಆಡುತ್ತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ಹುಳಿಯಾರು ಪೊಲೀಸರು ದಾಳಿ ನಡೆಸಿದ್ದರು. ದಾಳಿ ವೇಳೆ ಕಾಂತರಾಜು(45) ಸೇರಿದಂತೆ ಐದು ಜನರನ್ನು ವಶಕ್ಕೆ ಪಡೆದ ಪೊಲೀಸರು ಖಾಸಗಿ ವಾಹನದಲ್ಲಿ ಠಾಣೆಗೆ ಕರೆತಂದಿದ್ದರು. ಆದರೆ, ಠಾಣೆಗೆ ಬಂದ ಕೆಲವೇ ಸಮಯದಲ್ಲಿ ಕಾಂತರಾಜು ಸಾವನ್ನಪ್ಪಿದ್ದಾರೆ. ಎಎಸ್‌ಐ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಕುಡಿಯಲು ನೀರು ಕೊಡದೆ, ತೀವ್ರವಾಗಿ ಹಲ್ಲೆ ಮಾಡಿ, ಹೆದರಿಸಿ ಭಯ ಮೂಡಿಸಿರುವುದರಿಂದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರ ಮತ್ತು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿ ಸಾವಿಗೆ ಕಾರಣವಾಗಿರುವ ಎಎಸ್‌ಐ, ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದರು.

ಎಸ್ಪಿ ಭರವಸೆ ಬಳಿಕ ಪ್ರತಿಭಟನೆ ಅಂತ್ಯ: ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಹುಳಿಯಾರು ಠಾಣೆಗೆ ಭೇಟಿ ನೀಡಿ ಆಕ್ರೋಶಗೊಂಡಿದ್ದ ಗ್ರಾಮಸ್ಥರು ಮತ್ತು ಮೃತನ ಕುಟುಂಬಸ್ಥರೊಂದಿಗೆ ಮಾತುಕತೆ ನಡೆಸಿದರು. ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು. ಒಂದು ವೇಳೆ ಪೊಲೀಸರ ತಪ್ಪು ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಎಸ್ಪಿ ಅವರ ಭರವಸೆಯ ನಂತರ ಗ್ರಾಮಸ್ಥರು ಪ್ರತಿಭಟನೆಯನ್ನು ಕೈಬಿಟ್ಟರು. ಬಳಿಕ ಮೃತದೇಹವನ್ನು ತುಮಕೂರು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಪರೀಕ್ಷೆಯ ನಂತರ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಹೃದಯಾಘಾತದಿಂದ ಸಾವು?: ಪ್ರಾಥಮಿಕ ಮಾಹಿತಿ ಪ್ರಕಾರ, ಠಾಣೆಗೆ ಕರೆತಂದ ಬಳಿಕ ಕಾಂತರಾಜು ಅವರಿಗೆ ಪೊಲೀಸರ ಭಯದಿಂದಾಗಿ ತೀವ್ರ ಹೃದಯಾಘಾತವಾಗಿದೆ ಎನ್ನಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವಷ್ಟೇ ಸಾವಿಗೆ ನಿಖರ ಕಾರಣ ತಿಳಿಯಲಿದೆ.

ಠಾಣೆಗೆ ಬೀಗ ಹಾಕಿ ಆಕ್ರೋಶ: ಕಾಂತರಾಜು ಪೊಲೀಸರ ದೌರ್ಜನ್ಯದಿಂದಲೇ ಸಾವನ್ನಪ್ಪಿದ್ದಾರೆಂದು ಆರೋಪಿಸಿ ನೂರಾರು ಗ್ರಾಮಸ್ಥರು, ಹುಳಿಯಾರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಬೀಗ ಹಾಕಿದ್ದಲ್ಲದೆ, ಮೃತದೇಹವನ್ನು ಠಾಣೆಯ ಒಳಗೇ ಇಟ್ಟುಕೊಂಡು, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಟ್ಟು ಹಿಡಿದರು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಯಿತು.

ಸಿಐಡಿ ತನಿಖೆಗೆ ಆದೇಶ

ಹುಳಿಯಾರು ಪೊಲೀಸ್ ಠಾಣೆಯಲ್ಲಿ ವ್ಯಕ್ತಿ ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗುವುದು. ಪೊಲೀಸ್ ಅಧಿಕಾರಿಗಳು ಕರ್ತವ್ಯಲೋಪವೆಸಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹಸಚಿವ ಪರಮೇಶ್ವರ್ ತಿಳಿಸಿದ್ದಾರೆ.

ಜ್ಞಾನ ಭಾರತಿ ಪ್ರಕಾಶನದ 8ನೇ ಪುಸ್ತಕ | ಕನ್ನಡ, ಮರಾಠಿಯಲ್ಲಿ ಲಭ್ಯ

ಕಾಫಿಟೇಬಲ್ ಪುಸ್ತಕ ಲೋಕಾರ್ಪಣೆ ಇಂದು

ಬೆಳಗಾವಿ: ವಿಕ್ರಮ ವಾರಪತ್ರಿಕೆಯ ಲಾಂಛನದಲ್ಲಿ ನಮ್ಮ ನೆಲದ ಹೆಮ್ಮೆಯ ಪುತ್ರ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ರೋಮಾಂಚಕ, ಸ್ಫೂರ್ತಿದಾಯಕ ಬದುಕು ಮತ್ತು ಸಾಧನೆಗಳ ಕುರಿತಾಗಿ ಶಕಾವತಾರ ವಿಶೇಷ ಕಾಫಿ ಟೇಬಲ್ ಪುಸ್ತಕ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಹೊರ ತರಲಾಗಿದ್ದು, ಈ ಪುಸ್ತಕವು ಶನಿವಾರ (ಮಾ.21) ಸಂಜೆ 5.30ಕ್ಕೆ ಕೆಎಲ್‌ಇಯ ಡಾ. ಬಿ.ಎಸ್.ಜಿರಗೆ ಸಭಾವನದಲ್ಲಿ ಬಿಡುಗಡೆ ಆಗಲಿದೆ.

ಈ ಸಮಾರಂಭದಲ್ಲಿ ಬೆಂಗಳೂರಿನ ಗವಿಪುರಂನ ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಪ.ಪೂ. ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಮಾಜಿ ಸಂಸದ ಪ್ರಭಾಕರ ಕೋರೆ ಆಗಮಿಸಲಿದ್ದಾರೆ. ಪ್ರಧಾನ ಭಾಷಣವನ್ನು ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಮಾಡಲಿದ್ದಾರೆ. ಆರ್‌ಎಸ್‌ಎಸ್ ಕರ್ನಾಟಕ ಉತ್ತರದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕ ನುಡಿ ಆಡುವರು. ಆರ್‌ಎಸ್‌ಎಸ್ ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖರಾದ ಅನಿಲ್ ಓಕ್ ಪಾಲ್ಗೊಳ್ಳುವರು. ಜ್ಞಾನ ಭಾರತಿ ಪ್ರಕಾಶನ ಲಿಮಿಟೆಡ್ನ ನಿರ್ದೇಶಕ ನಿರ್ಮಲ್ ಕುಮಾರ್ ಸುರಾನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಇದು ಸಂಸ್ಥೆಯ ಎಂಟನೇ ಕಾಫಿ ಟೇಬಲ್ ಪುಸ್ತಕ, ಈ ಸರಣಿಯಲ್ಲಿ ಇದುವರೆಗೆ ವಿಜಯ ನಗರ ಸಾಮ್ರಾಜ್ಯ, ಬಂಜಾರಾ ಸಮುದಾಯ, ಡಾ. ಬಿ ಆರ್ ಅಂಬೇಡ್ಕರ, ಮೈಸೂರು ಒಡೆಯರು, ಮಲೆನಾಡಿನ ಅರಸರ, ಕಿತ್ತೂರು ಕರ್ನಾಟಕ, ಮತ್ತು ಕಲ್ಯಾಣ ಕರ್ನಾಟಕ ಕುರಿತು ವಿಶೇಷ ಪುಸ್ತಕಗಳನ್ನು ಹೊರತರಲಾಗಿದೆ.

ಇದೀಗ ಬರುತ್ತಿರುವ ಛತ್ರಪತಿ ಶಿವಾಜಿ ಮಹಾರಾಜರ ಕುರಿತ ಈ ಪುಸ್ತಕ ನಿಶ್ಚಿತವಾಗಿಯೂ ನಮ್ಮ ಇದು ವರೆಗಿನ ಅತ್ಯಂತ ಪ್ರತಿಷ್ಠಿತ, ಸಮಗ್ರ ಗ್ರಂಥಗಳಲ್ಲೊಂದು. ಮರಾಠಿ ಭಾಷೆಯಲ್ಲಿ ನಮ್ಮ ಮೊತ್ತ ಮೊದಲ ಪ್ರಯತ್ನ ಕೂಡ. ಕರ್ನಾಟಕ ಮತ್ತು ಮಹಾರಾಷ್ಟ್ರದ ಪ್ರಖ್ಯಾತ ವಿದ್ವಾಂಸರು ಹಾಗೂ ಇತಿಹಾಸ ತಜ್ಞರು ಆಳವಾದ ಅಧ್ಯಯನ ಮತ್ತು ಆಕರ್ಷಕ ಶೈಲಿಯಿಂದ ಬರೆದಿರುವ ಮಹತ್ತರ ಲೇಖನಗಳ ಗುಚ್ಛ ಇದರಲ್ಲಿದೆ. ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಲಭ್ಯವಿರುವ ಇದರಲ್ಲಿ ಮಹಾರಾಜರ ಬಗ್ಗೆ ಐತಿಹಾಸಿಕ ಪುರಾವೆಗಳು ಹಾಗೂ ಚಿತ್ತಾಕರ್ಷಕ ಚಿತ್ರ ಗಳೊಂದಿಗೆ ಕಟ್ಟಿಕೊಡಲಾಗಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಪಿ.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- ಛತ್ರಪತಿ ಶಿವಾಜಿ ಮಹಾರಾಜರ ಪುಸ್ತಕ
- ರೋಮಾಂಚಕ, ಸ್ಫೂರ್ತಿದಾಯಕ ಬದುಕಿನ ಚಿತ್ರಣ
- ವಿಕ್ರಮ ವಾರಪತ್ರಿಕೆ ಲಾಂಛನದಲ್ಲಿ ಪ್ರಕಟಣೆ

ಶಾಮನೂರು ಕುಟುಂಬ, ಮುಸ್ಲಿಂ ಸಮುದಾಯ ಪಟ್ಟು | ಸಾದಿಕ್ ಪೈಲ್ವಾನ್ ನಾಮಪತ್ರ ಸಲ್ಲಿಕೆ

ದಾವಣಗೆರೆಯಲ್ಲಿ ಬಗೆಹರಿಯದ ಕೈ ಟಿಕೆಟ್ ಗೊಂದಲ

ಅರ್ಪಿತ್ ಎನ್.ಜಿ.

ದಿಗಂತ ವಿಶೇಷ

ದಾವಣಗೆರೆ: ಟಿಕೆಟ್ ಘೋಷಣೆಗೂ ಮುನ್ನವೇ ದಾವಣಗೆರೆ ದಕ್ಷಿಣ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ ಶಾಮನೂರು, ಅಲ್ಪ ಸಂಖ್ಯಾತ ಸಮುದಾಯದ ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಅವರು ನಾಮಪತ್ರ ಸಲ್ಲಿಸಿರುವುದರಿಂದ ಕಾಂಗ್ರೆಸ್ ಟಿಕೆಟ್‌ನ ಒಳಬೇಗುದಿ ಬಹಿರಂಗವಾಗಿದೆ.



ಸಾದಿಕ್



ಸಮರ್ಥ

ಸಮರ್ಥ ನಾಮಪತ್ರ ಸಲ್ಲಿಸುವ ಮೂಲಕ ಕ್ಷೇತ್ರ ಬಿಟ್ಟುಕೊಡುವ ಪ್ರಮೇಯವೇ ಇಲ್ಲವೆಂಬ ಸಂದೇಶ ರವಾನಿಸಿದರೆ, ಮತ್ತೊಂದೆಡೆ ಅಲ್ಪಸಂಖ್ಯಾತ ಸಮುದಾಯದ ಸಾದಿಕ್ ನಮಗೆ ಜಮೀರ್ ಸಾಥ್ ನೀಡುತ್ತಾರೆ ಎನ್ನುವ ಮೂಲಕ ತಮ್ಮ ಸಮಾಜ ಸಚಿವರ ಮೂಲಕ ಟಿಕೆಟ್‌ಗಾಗಿ ಪ್ರಯತ್ನ ಮುಂದುವರಿಸಿದೆ ಎಂಬ ಸ್ಪಷ್ಟನೆ ನೀಡಿದ್ದಾರೆ. ಎರಡೂ ಸಮುದಾಯಗಳ ನಡೆಯಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪಾರುಪತ್ಯ ಸಾಧಿಸಿಕೊಂಡು ಬಂದಿದ್ದ ಆಡಳಿತಾರೂಢ ಕಾಂಗ್ರೆಸ್‌ಗೆ ಇದು ಬಿಸಿತುಪ್ಪದಂತಾಗಿದೆ.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ಸುರ್ಜೇವಾಲ ಅವರ ಸಭೆಯ ಪೂರ್ವದಲ್ಲಿ ನಾಮಪತ್ರ ಸಲ್ಲಿಕೆಯ ಬೆಳವಣಿಗೆ ನಡೆದಿರುವುದು ತೀವ್ರ ಕುತೂಹಲ ಮೂಡಿಸಿದೆ. ಕಾಂಗ್ರೆಸ್ ಕಟ್ಟಿರುವುದೇ ಅಪ್ಪಾಜಿ ಶಾಮನೂರು ಶಿವಶಂಕರಪ್ಪನವರು ಎಂಬ ಸಮರ್ಥ ಶಾಮನೂರು ಅವರ ಹೇಳಿಕೆ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ನಮ್ಮನ್ನು ಪರಿಗಣಿಸದಿದ್ದರೆ ಕ್ಷೇತ್ರ ಕಳೆದುಕೊಳ್ಳುವಿರಿ ಎಂಬ ಪರೋಕ್ಷ ಎಚ್ಚರಿಕೆಯ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಿದಂತಿದೆ.

ಹಾಲಿ ಶಾಸಕ ನಿಧನ ಹೊಂದಿದರೆ ಅವರ ಕುಟುಂಬಕ್ಕೆ ಸ್ಪರ್ಧಿಸುವ ಅವಕಾಶ ನೀಡಿ ಅನುಕಂಪದಿಂದ ಗೆಲುವು ಸಾಧಿಸುವ ಲೆಕ್ಕಾಚಾರ ಸ್ವಾಭಾವಿಕ. ಆದರೆ ಶಾಮನೂರು ಶಿವಶಂಕರಪ್ಪ ಅವರ ವಿಚಾರ ಭಿನ್ನ. ಏಕೆಂದರೆ ಶಾಮನೂರು ಪ್ರಬಲ ವೀರಶೈವ ಲಿಂಗಾಯತ ಸಮುದಾಯದ ಅಗ್ರಗಣ್ಯರು, ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು. ಇಲ್ಲಿ ಅನುಕಂಪಕ್ಕಿಂತ ಶಾಮನೂರು ಸಾಹುಕಾರ್ ಎಂಬ ಹೆಸರೇ ಒಂದು ಮತ ಬ್ಯಾಂಕ್. ಹಾಗಾಗಿ ಕುಟುಂಬಕ್ಕೆ ಟಿಕೆಟ್ ನಿರಾಕರಿಸಲು ಕಾರಣ ಹುಡುಕಿದರೂ ಕಾಂಗ್ರೆಸ್‌ಗೆ ಸಿಗುತ್ತಿಲ್ಲ.

ಟಿಕೆಟ್‌ಗೆ ಬಿಗಿ ಪಟ್ಟು: ಇನ್ನೊಂದೆಡೆ ಕ್ಷೇತ್ರದಲ್ಲಿ ಅತಿಹೆಚ್ಚು ಮತದಾರರ ಸಂಖ್ಯೆ ಹೊಂದಿರುವ ಮುಸ್ಲಿಂ ಸಮುದಾಯ ಟಿಕೆಟ್‌ಗೆ ಬೇಡಿಕೆ ಸಲ್ಲಿಸಿ ಬಿಗಿ ಪಟ್ಟು ಹಿಡಿದಿದ್ದಾರೆ. ಅಲ್ಪಸಂಖ್ಯಾತರೂ ತಮ್ಮ ಸಮಾಜದ ಸಚಿವರ ಮೂಲಕ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಮುದಾಯದ ಪರ ಟಿಕೆಟ್ ಕೇಳುವುದರಲ್ಲಿ ತಪ್ಪೇನು ಎಂಬ ಮಂತ್ರಿ ಜಮೀರ್ ಅವರ ಮಾತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರನ್ನು ಕೆರಳಿಸಿತ್ತು.

ನೋಟಾ ಎಚ್ಚರಿಕೆ: ಮತ್ತೊಂದು ಕಡೆ ಎಸ್.ಎಸ್. ಮಲ್ಲಿಕಾರ್ಜುನ ಅವರ ಹೊರಗಿನವರಿಗೆ ಇಲ್ಲೇನು ಕೆಲಸ ಎಂಬ ಹೇಳಿಕೆ ಅಲ್ಪಸಂಖ್ಯಾತರು ಮಂಡಿಸಿದ್ದ ಟಿಕೆಟ್ ಬೇಡಿಕೆಯ ಪ್ರಬಲತೆ ಹೆಚ್ಚಿಸಿದೆ. ಮುಸ್ಲಿಂ ಸಮುದಾಯ ಕೂಡ ಶತಾಯಗತಾಯ ಟಿಕೆಟ್ ಪಡೆದುಕೊಳ್ಳುವ ಪ್ರತಿಜ್ಞೆ ಮಾಡಿ ಟಿಕೆಟ್ ಸಿಗದಿದ್ದರೆ ನೋಟಾ ಅಭಿಯಾನ ಮಾಡುವುದಾಗಿ ಕಾಂಗ್ರೆಸ್‌ಗೆ ಎಚ್ಚರಿಕೆ ರವಾನಿಸಿದೆ. ಈ ಎಲ್ಲಾ ಬೆಳವಣಿಗೆಗಳು ಸಚಿವದ್ವಯರಿಗೆ ಪ್ರತಿಷ್ಠೆಯ ವಿಚಾರವಾಗಿ ಮಾರ್ಪಟ್ಟಿದೆ. ಹೀಗಾಗಿ ಯಾರಿಗೆ ಅವಕಾಶ ಕೊಟ್ಟರೂ ಭಿನ್ನಾಭಿಪ್ರಾಯ ಏರ್ಪಟ್ಟು ಜೇನುಗೂಡಿಗೆ ಕಲ್ಲೆಸೆದಂತಾಗುವುದು ಸದ್ಯದ ಕಾಂಗ್ರೆಸ್ ಪರಿಸ್ಥಿತಿ.

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ ಕ: 08382-220556 E-mail: predkarwar@gmail.com

ಪಂರಾಇಂವಿ/ಕಾರವಾರ/ಟೆಂ/ಹೊ/ಪು/ಇ-ಟೆಂಡರ್/2025-26/58 ದಿನಾಂಕ: 18.03.2026

ಇ-ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮತ್ತು ಉಪ-ವಿಭಾಗಗಳಲ್ಲಿ ಖಾಲಿ ಇರುವ ಕಂಪ್ಯೂಟರ್ ಆಪರೇಟರ್, ಗ್ರೂಪ್ 'ಡಿ' ಹಾಗೂ ವಾಹನ ಚಾಲಕ ಖಾಲಿ ಇರುವ ಹುದ್ದೆಗಳಲ್ಲಿ ಒಟ್ಟೂ 18 ಸಿಬ್ಬಂದಿಗಳ ಸೇವೆಯನ್ನು ದಿನಾಂಕ: 01.04.2026 ರಿಂದ 11 ತಿಂಗಳ ಅವಧಿಗೆ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಇ-ಟೆಂಡರ್ ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ದಿನಾಂಕ: 26.03.2026 ರ ಸಂಜೆ 04.00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ವಿಳಾಸ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ: 18.03.2026 (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ. 54.88 ಲಕ್ಷ (3) ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.03.2026 ಸಂಜೆ 04.00 ಗಂಟೆ (4) ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಹಾಕಿರುವ ಟೆಂಡರ್ ತೆರೆಯುವ ದಿನಾಂಕ: 27.03.2026 ಸಂಜೆ 05.30 ಗಂಟೆಗೆ (5) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: ರೂ. 10000.00

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1231/25-26 dt. 20.03.2026

ಜಿಲ್ಲಾ ಪಂಚಾಯತ್ ಬೆಂಗಳೂರು ದಕ್ಷಿಣ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ

ಬೆಂಗಳೂರು ದಕ್ಷಿಣ ಜಿಲ್ಲೆ-562159 Phone: 080-29576058, e-mail : dhoramanagaram@gmail.com

ಸಂ.: ಜಿಆಕುಕ/ರಾ/ಹೊ.ಗು./ನಾನ್-ಕ್ಲಿನಿಕಲ್/01/2025-26 ದಿನಾಂಕ: 18.03.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಕಛೇರಿಯ ಅಧೀನದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನಾನ್-ಕ್ಲಿನಿಕಲ್ ಸ್ವಚ್ಛತಾಗಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪ್ರಾಯೋಜಿಸುವ ಬಗ್ಗೆ ಇ-ಟೆಂಡರ್.

1) ಟೆಂಡರ್ ಸಂಖ್ಯೆ: DHFWS/2025-26/SE1919/Call-2. 2) ಟೆಂಡರ್ ಪ್ರಕಟಣೆ ದಿನಾಂಕ: **18.03.2026. 3)** ಈ ಟೆಂಡರ್‌ನ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳಿದ್ದಲ್ಲಿ ಪ್ರಸ್ತುತ ಸರ್ಕಾರದ ಆದೇಶದ ಪತ್ರದೊಂದಿಗೆ ದೂರನ್ನು ಸಲ್ಲಿಸುವ ಕೊನೆಯ ದಿನಾಂಕ (ಅವಧಿ ಮುಗಿದ ನಂತರದಲ್ಲಿ ಬರುವ ಆಕ್ಷೇಪಣೆಗಳನ್ನು ಸ್ವೀಕರಿಸುವುದಿಲ್ಲ): ದಿನಾಂಕ: **25.03.2026ರಂದು ಸಂಜೆ 5.30 ಗಂಟೆಯವರೆಗೆ. 4)** ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್‌ಗೆ ಅಪ್ಲೋಡ್ ಮಾಡಲು ಕೊನೆಯ ದಿನಾಂಕ: ದಿನಾಂಕ: **26.03.2026ರ ಸಂಜೆ 5.30 ಗಂಟೆಯವರೆಗೆ. 5)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: **30.03.2026ರ ಬೆಳಿಗ್ಗೆ 11.00 ಗಂಟೆಗೆ.** ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ಜಿಲ್ಲೆ 6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: **01.04.2026ರ ಬೆಳಿಗ್ಗೆ 11.00 ಗಂಟೆಗೆ.** ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ಜಿಲ್ಲೆ.7) ಇ-ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ಅಂದಾಜು ಮೊತ್ತ ರೂ. 45.00 ಲಕ್ಷಕ್ಕೆ ಶೇ 20% ರೂ. 9,00,000/- (ಒಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಷರಾ:** ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆ)ಆಡಿ/ ನಾನ್‌ಕ್ಲಿನಿಕಲ್/53/14-15 ದಿನಾಂಕ: 16.02.2015. **9)** ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮತ್ತು ದೂರವಾಣಿ ಸಂ.: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಬೆಂಗಳೂರು ದಕ್ಷಿಣ ಜಿಲ್ಲೆ. (ಮೊ: 8073333281)

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಬೆಂಗಳೂರು ದಕ್ಷಿಣ ಜಿಲ್ಲೆ.

DIPR/BSD/712/SA/2025-26

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590002

ದೂರವಾಣಿ: 0831-2407207/2407212, ಇ-ಮೇಲ್ ವಿಳಾಸ: dsadmbgm@gmail.com

ಟೆಂಡರ್ ಪ್ರಕಟಣೆ (4ನೇ ಕರೆ)

ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸುವ ಸಲುವಾಗಿ.

ಉಪ ಕಾರ್ಯದರ್ಶಿಗಳು (ಆಡಳಿತ), ಜಿಲ್ಲಾ ಪಂಚಾಯತ ಬೆಳಗಾವಿ ಇವರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ಬೆಳಗಾವಿ ಜಿಲ್ಲೆಯ 477 ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸಲು ಅರ್ಹ ಬಿಡ್‌ದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಬಿಡ್‌ದಾರರು ಅಗತ್ಯವಾಗಿ ಮೇಲೆ ತಿಳಿಸಿದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ (4ನೇ ಕರೆ)	ನಂ./ಜಿಪಂಬೆ/ಆಡಳಿತ/ಗ್ರಂಥಾಲಯ/ ವಿವ-43/ 2024-25 ದಿನಾಂಕ: 19.02.2026
2	ಅಂದಾಜು ಬಿಡ್ ಮೌಲ್ಯ	ರೂ. 477 ಲಕ್ಷಗಳು
3	ಟೆಂಡರ್ ಡಾಕ್ಯೂಮೆಂಟ್ ಡೌನಲೋಡ್ ಮಾಡಲು ಲಭ್ಯವಾಗುವ ಮತ್ತು ಟೆಂಡರ್ ಪ್ರಾರಂಭದ ದಿನಾಂಕ	ದಿನಾಂಕ: 18.03.2026
4	ಬಿಡ್ ಪೂರ್ವ ಸಭೆ	ದಿನಾಂಕ: 24.03.2026 ಸಮಯ: 11.00 ಪೂರ್ವಾಹ್ನ @ ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
5	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 02.04.2026 ಸಮಯ: 05.00 ಅಪರಾಹ್ನ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 04.04.2026 ಸಮಯ: 11.00 ಪೂರ್ವಾಹ್ನ
7	ಮಾದರಿಗಳನ್ನು ಸಲ್ಲಿಸಲು ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 06.04.2026 ಸಮಯ: 11.00 ಪೂರ್ವಾಹ್ನ @ ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
8	ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 10.04.2026 ಸಮಯ: 11.00 ಪೂರ್ವಾಹ್ನ
9	ಇಎಂಡಿ ಮೊತ್ತ ಶೇ. 1.5% (ಎಲ್ಲ ಬಿಡ್‌ದಾರರಿಗೆ ಕಡ್ಡಾಯ)	ರೂ. 7,15,500/-

ಈ ಟೆಂಡರ್‌ನಲ್ಲಿ ಭಾಗವಹಿಸಲು ನಿರೀಕ್ಷಿತ ಪೂರೈಕೆದಾರರು https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು. ಯಾವುದೇ ಟೆಂಡರ್ ಸ್ಪಷ್ಟೀಕರಣಕ್ಕಾಗಿ ಮೊಬೈಲ್ ಸಂಖ್ಯೆ: 9480854001 & e-mail: dsadmbgm@gmail.com ಸಂಪರ್ಕಿಸಬಹುದು.

ಸಹಿ/- ಉಪಕಾರ್ಯದರ್ಶಿಗಳು (ಆಡಳಿತ) ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಟೆಂಡರ್ ಅನುಮೋದನೆ ಪ್ರಾಧಿಕಾರ

ವಾ.ಸಾ.ಇ/ಬೆಳಗಾವಿ/2127/ದೇಶಪಾಂಡೆಪಬ್ಲಿಸಿಟಿ/2025-26

BEFORE THE MOTOR ACCIDENT CLAIM TRIBUNAL, KASARAGOD

O.P(M.V) NO,957/2025

Between :
Thrivikrama Nayak ....Petitioner
And
PriyaVallitott and Others .....: Respondents

Notice to the 2nd Respondent
Manoj Kumar K.V.
S/O Narayanan
Kenoth Adiyodi,
R/at Flat No. A2-101
SNN Raj Etternia
Harlur Road,
Bangalore-560068
Karnataka State

NOTICE

Please take notice that the above case stands posted to 16.05.2026 for your appearance in the above Tribunal at 11 A.M. You are both directed to appear on that day before this Tribunal in person or by a pleader duly instructed. Failing which the matter will be heard and decided in your absence treating exparte.

By Order of the Court
Sd/-
Madavan Malakad
(Advocate for Petitioner)
Kasaragod
05.03.2026

IN THE COURT OF THE ASSISTANT COMMISSIONER, TUMAKURU TUMAKURU SUB DIVISION.

RA(GUB). No.813/2023

Appellant: Gowramma and others -V/s-
Respondents: Tahasildar, Gubbi and others
R-6. Basavaraju S/o Basavaiah, Major R/o Muganahunase, Chelur Hobli, Gubbi Taluk, Tumakuru Dist.

NOTICE

I have filed this appeal against the respondents for quest MR, you are the above named Basavaraju S/o Basavaiah, are made as respondent No.6, in the above appeal. In spite of several steps takes against you, but the notices were not served on you. Hence this paper publication. Through this publication, you the respondent No.6 hereby notified for to posted that, the above appearance 04.04.2026, 3:00pm Therefore after taking this notice, case your you should appear before this Hon'ble court, in person or through advocate, otherwise the case will be decided in your absence by placing exparte.

Given under my hand and the seal of the court, this day of 16.03.2026

BY THE ORDER OF THE AUTHORITY,
Sd/- **The Assistant Commissioner,**
Tumakuru Sub-division, Tumakuru.
Advocate petitioner
Sd/- **T.N.Girish.** B.A.LL.B
Advocate, M.G.Road, Gubbi.

ಸಾರ್ವಜನಿಕ ಸೂಚನೆ

ಇಲ್ಲಿನ ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ವಿವರಿಸಿದಂತೆ ಆಸ್ತಿಯನ್ನು ಅನುಸೂಚಿ ಆಸ್ತಿಯ ಪ್ರಸ್ತುತ ಮಾಲೀಕರಿಂದ ನಮ್ಮ ಗ್ರಾಹಕರಿಗೆ ಖರೀದಿಸಲು ಪರಿಗಣಿಸಲಾಗುತ್ತಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಆದ್ದರಿಂದ, ಮಾರಾಟ, ವಿನಿಮಯ, ಅಡಮಾನ, ಉಡುಗೊರೆ, ಉತ್ತರಾಧಿಕಾರ, ಸ್ವಾಧೀನ, ಗುತ್ತಿಗೆ, ಬಾಡಿಗೆ, ಸ್ವಾಮ್ಯ, ಪರವಾನಗಿ, ಶುಲ್ಕ, ಟ್ರಸ್ಟ್ ಅಥವಾ ಯಾವುದೇ ಒಪ್ಪಂದ, ಪತ್ರ, ತೀರ್ಪು, ತೀರ್ಪು ಅಥವಾ ಇತರ ರೀತಿಯಲ್ಲಿ ಉದ್ಭವಿಸುವ ಯಾವುದೇ ಹೊರೆ ಅಥವಾ ಹಕ್ಕಿನ ಮೂಲಕ ಅನುಸೂಚಿ ಆಸ್ತಿ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕು ಹೊಂದಿರುವ ಯಾವುದೇ ವ್ಯಕ್ತಿ(ಗಳು) ಈ ಬಗ್ಗೆ ಲಿಖಿತವಾಗಿ ಪೋಷಕ ದಾಖಲೆಗಳೊಂದಿಗೆ ಹಸಿತಾ ಮುರಳಿ, ವಕೀಲರು, 2/1, ನೆಲ ಮಹಡಿ, ಸಿಂಹಾದ್ರಿ ಮ್ಯಾನ್ಷನ್, ಕಾಕ್ಸ್ ಟೌನ್, ಬೆಂಗಳೂರು-560005 ರ ಚೇಂಬರ್ಸ್‌ನಲ್ಲಿ ಅವರ ಕಚೇರಿಯಲ್ಲಿ ತಿಳಿಸಲು/ಮಾಹಿತಿ ನೀಡಲು ಅಗತ್ಯವಾಗಿರುತ್ತದೆ. ದಿನಾಂಕ 21.03.2026, ಈ ಪ್ರಕಟಣೆಯ 7 ದಿನಗಳ ಒಳಗೆ (ಎರಡೂ ದಿನಗಳನ್ನು ಒಳಗೊಂಡಂತೆ), ವಿಫಲವಾದರೆ ಅಂತಹ ಹಕ್ಕುಗಳನ್ನು ಮನ್ನಾ ಮಾಡಲಾಗಿದೆ ಮತ್ತು/ಅಥವಾ ಕೈಬಿಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಶೆಡ್ಯೂಲ್ ಆಸ್ತಿ

ಸರ್ವೆ ನಂ.213 ರ ನಿವೇಶನ ಸಂಖ್ಯೆ 64 ರ ಸ್ಥಿರ ಭೂಮಿಯ ಎಲ್ಲಾ ಭಾಗ, 1,350 ಚದರ ಅಡಿ ವಿಸ್ತೀರ್ಣ, ಕೆ.ಆರ್.ಪುರಂ ಹೋಬಳಿಯ ಚಿಕ್ಕಬಾಣಸವಾಡಿಯಲ್ಲಿ ನೆಲೆಗೊಂಡಿರುವ ಆಸ್ತಿ, ಈಗ ಎರ್ರಪ್ಪ ರೆಡ್ಡಿ ಲೇಔಟ್ ಎಂದು ಕರೆಯಲ್ಪಡುತ್ತದೆ, ಬಾಣಸವಾಡಿ, ಬೆಂಗಳೂರು-560033, ಇದರ ಸುತ್ತಳತೆ:
ಪೂರ್ವಕ್ಕೆ: 25 ಅಡಿ ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 44, ಉತ್ತರಕ್ಕೆ: ನಿವೇಶನ ಸಂಖ್ಯೆ 65, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 63.

ಹಸಿತಾ ಮುರಳಿ, ಅಡ್ವೊಕೇಟ್
2/1, ನೆಲ ಮಹಡಿ, ಸಿಂಹಾದ್ರಿ ಭವನ, ರಾಮಕೃಷ್ಣಪ್ಪ ರಸ್ತೆ, ಕಾಕ್ಸ್ ಟೌನ್, ಬೆಂಗಳೂರು-560005
ಸಂಪರ್ಕಿಸಿ : 8147063631, 8553218058

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/CE/AEF/S&S Works/Shivamogga/KHB/SE0354
Date: 10.03.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕು, ಕಸಬಾ-2 ಹೋಬಳಿ ದೇವಕಾತಿಕೊಪ್ಪ ಗ್ರಾಮದ ಸರ್ವೆ ಸಂಖ್ಯೆ.3/1, 6/4, 7/1,3,4, 8/1 & ಇತರೆಗಳಲ್ಲಿ ಸುಮಾರು 24 ಎಕರೆ 21 ಗುಂಟೆಗಳ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 27.03.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/6385/ಆಕಾರ್/2025-26

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ಕಾರ್ಯಾಲಯ ಕಲಬುರಗಿ, ಜಿಲ್ಲೆ: ಕಲಬುರಗಿ

ನಂ: ಕಂ:ಸಿಬ್ಬಂದಿ/ಹೊಗು/ಬಾಜ/ಟೆಂಡರ್/36/2025-26 ದಿ.16-3-2026

:: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ::

(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಲಬುರಗಿ ಜಿಲ್ಲೆಯ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಬಾಂದೆ ಜವಾನರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ಆಸಕ್ತರು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ 07-04-2026 ಸಂಜೆ 05-00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನಲ್ಲಿ ಅರ್ಜಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಕಲಬುರಗಿ ಜಿಲ್ಲೆ

ವಾ.ಸಾ.ಸಂ.ಇ/ಕಲಬುರಗಿ/1199/ಕೆ.ಎಸ್.ಎಂ.ಸಿ.&ಎ/2025-26

IN THE COURT OF THE CIVIL JUDGE AND JMFC AT KRISHNARAJAPURAM BENGALURU EAST TALUK O. S. NO. 1066/2025

BETWEEN : Mr. GILBERT SYLVESTER CORNELIO, S/o Mr. Joachim Pascal Cornelio, Aged About 72 Years, R/at C/o AJ Pinto, No. 10. Jaladarshan Apartment, River Valley Road, Mandapeshwar, Borivali West, Mumbai-400103. Represented by her GPA Holder, Mr. G. S. ACCHAPPA. S/o Sri Srinivasaiah, Aged about 55 years, R/at No. 200, Sri Hari Nalaya, Near Government School, Dodda Gubbi, Bengaluru - 560077 ....PLAINTIFF

AND : Mr. JOSEPH CHACKO, S/o Late P.J. Chacko, Aged about 62 years, R/at No.176-B, Park Avenue, Agara, Horamavu Post, Bengaluru-560043 ....DEFENDANT

SUIT SUMMONS/NOTICE TO DEFENDANT

Mr. JOSEPH CHACKO, S/o Late P.J. Chacko, Aged about 62 years, R/at No. 176-B, Park Avenue, Agara, Horamavu Post, Bengaluru-560043

Whereas the above named Plaintiff has filed the above suit in O.S. No. 1066/2025 in the Court of Civil Judge and JMFC at K. R. Puram for the Relief of Permanent Injunction in respect of suit schedule property against you. Therefore you are hereby summoned to appear in person or through your Advocate in the court of Civil Judge and JMFC at Krishnarajapuram on **05/06/2026 at 11 O' Clock** in forenoon failing which the suit will be decided ex-parte.

SCHEDULE

All that piece and parcel of an immovable able property bearing Site Nos. 173 & 174, House list Khatha No.200. Situated at Kodda Gubbi Village, Athina Township, Bidarahalli Hobli. Bengaluru East Taluk. Bengaluru, measuring East to West 120 feet. North to South 80 feet, totally measuring 9,600 Sq. ft.. bounded on the: **East by:** House Site No. 172,
West by :House Site No. 157 & 158,
North by:House Site No. 160 & 161,
South by: Road

Given under my hand and seal of the court on this the 18 th day of March-2026.

By The Order of The Court Shirasthedar Civil Judge and JMFC at KR Puram Bengaluru East Taluk

Advocate For Plaintiff
Ramesh Babu R
Advocate No.2, 1 Floor, Mourya Mansion, 1 Cross, Gandhinagar, Bangalore-560009

ಶ್ರೀರಂಗಪಟ್ಟಣದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿ.ಮಿಸ್ ಸಂಖ್ಯೆ - 04/2026

[illegible]

ತಪ್ಪಿದಲ್ಲಿ ಸದರಿ ಅರ್ಜಿಯನ್ನ ಗುಣಾಂಶಗಳ ಆಧಾರದ ಮೇಲೆ ತೀರ್ಮಾನ ಮಾಡಲಾಗುವುದೆಂದು ತಿಳಿಯುವುದು. ದಿನಾಂಕ : 18/03/2026 ರಂದು ನನ್ನ ಸಹಿ ಮತ್ತು ಕೋರ್ಟ್ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆಜ್ಞೆ ಮೇರೆಗೆ
ಶಿರಸ್ತೇದಾರರು, ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಶ್ರೀರಂಗಪಟ್ಟಣ

ಅರ್ಜಿದಾರರ ಪರ ವಕೀಲರು : **ಧನಂಜಯ ಜಿ,** ಬಿ.ಕಾಂ.ಎಲ್.ಎಲ್.ಬಿ,ವಕೀಲರು, ಶ್ರೀರಂಗಪಟ್ಟಣ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ : ಮೈಅಪ್ರಾ/ವ.ಕ-2/5/2025-26 ದಿನಾಂಕ : 18.03.2026

ಪತ್ರಿಕಾ ಪ್ರಕಟಣೆ

ಶ್ರೀಮತಿ.ಲೀಲಾ ರವರಿಗೆ ಮೈಸೂರು ನಗರದ ಜೆ.ಸಿ.ಎಸ್.ಟಿ ಕೆ-ಬ್ಲಾಕ್ ಬಡಾವಣೆಯಲ್ಲಿ ನಿವೇಶನ ಸಂಖ್ಯೆ : 2121 ಅಳತೆ 20 x 30 ಅಡಿ ನಿವೇಶನವು ನಗರ ವಿಶ್ವಸ್ಥ ಮಂಡಳಿಯಿಂದ ದಿನಾಂಕ : 25-01-1980 ರಂದು ಮಂಜೂರಾಗಿದ್ದು, ದಿನಾಂಕ 23-07-1985 ರಂದು ಸ್ವಾಧೀನ ಪತ್ರವನ್ನು ಪಡೆದಿರುತ್ತಾರೆ. ಸದರಿಯವರು ಮಂಜೂರಾದ ನಿವೇಶನದಲ್ಲಿ ಮನೆ ನಿರ್ಮಿಸದೇ ನಿವೇಶನ ಸಂಖ್ಯೆ 2123ರಲ್ಲಿ ಮನೆ ನಿರ್ಮಿಸಿರುತ್ತಾರೆ. ಎರಡು ನಿವೇಶನವು ಒಂದೇ ಅಳತೆಯಾಗಿದ್ದು, ಸದರಿ ನಿವೇಶನ ಸಂಖ್ಯೆ 2123 ಯಾರಿಗೂ ಮಂಜೂರಾಗದೇ ಇರುವುದರಿಂದ ಸದರಿ ನಿವೇಶನವನ್ನು ಬದಲಿಯಾಗಿ ಮಂಜೂರು ಮಾಡಿ, ದಿನಾಂಕ: 12-04-2004 ರಂದು ಮಂಜುರಾತಿ ಪತ್ರ ನೀಡಲಾಗಿರುತ್ತದೆ.

ಕಡತ ಪರಿಶೀಲಿಸಲಾಗಿ ಮೂಲ ಮಂಜೂರಾತಿದಾರರಾದ ಶ್ರೀಮತಿ.ಲೀಲಾರವರು ಶ್ರೀ.ಎಸ್.ಮಂಜುನಾಥ್‌ರವರಿಗೆ ದಿನಾಂಕ : 09-0-1990 ರಂದು ಶುದ್ಧಕ್ರಯಕ್ಕೆ ಮಾರಾಟ ಮಾಡಿರುವುದು ಕಂಡು ಬಂದಿರುವುದರಿಂದ ಸದರಿ ನಿವೇಶನದ ಶುದ್ಧ ಕ್ರಯಪತ್ರದ ರದ್ದತಿ ಪತ್ರವನ್ನು ದಿನಾಂಕ : 15-10-2007 ರಂದು ನೊಂದಾಯಿಸಲಾಗಿರುತ್ತದೆ.

ನಂತರ ಶ್ರೀಮತಿ.ಲೀಲಾರವರು ದಿನಾಂಕ:05-05-2016 ರಂದು ಮರಣ ಹೊಂದಿರುತ್ತಾರೆ. ಇವರ ಪತಿಯಾದ ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ದಿನಾಂಕ : 24-05-2003 ರಂದು ಮೃತರಾಗಿರುತ್ತಾರೆ. ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ : RD5018882693181 ದಿನಾಂಕ : 06-05-2022 ರಂದು ಸಲ್ಲಿಸಿರುತ್ತಾರೆ. ಅದರಂತೆ ಶ್ರೀ.ಮಂಜುನಾಥ್ ಬಿ.ಎಸ್ ಮತ್ತು ಶ್ರೀಮತಿ ಉಷಾ.ಎಂ.ಎಸ್‌ರವರುಗಳು ಮೃತರ ವಾರಸುದಾರರ ಮಕ್ಕಳಾಗಿರುತ್ತಾರೆ. ವಿ.ರಾ.ನಿ. ರವರಿಂದ ಮಹಜರ್ ವರದಿಯನ್ನು ಸಹ ಪಡೆಯಲಾಗಿರುತ್ತದೆ.

ಲೇಟ್.ಶ್ರೀಮತಿ ಲೀಲಾ ರವರ ಮಕ್ಕಳುಗಳಾದ ಶ್ರೀ.ಮಂಜುನಾಥ್ ಬಿ.ಎಸ್ ಮತ್ತು ಶ್ರೀಮತಿ ಉಷಾ ಎಂ.ಎಸ್ ರವರು ಪೌತಿ ವರ್ಗಾವಣೆ ಹಾಗೂ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶವನ್ನು ಪೌತಿ ವರ್ಗಾವಣೆ ಹಾಗೂ ಕ್ರಯಪತ್ರ ನೀಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/-
ವಿಶೇಷ ತಹಸೀಲ್ದಾರ್
ವಲಯ ಕಛೇರಿ - 2
ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮೈಸೂರು.

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.ದೂರವಾಣಿ: 080-22255210

ಸಂಖ್ಯೆ: ಕಾಅ/ಕವಿ.1/ಎಇ-3/ಎಇ-2/ಎಇ-ಎಲ್‌ಹೆಚ್/2025-26/86 ದಿನಾಂಕ: 18.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಸೂಚಿತ ಸ್ಥಳಗಳಲ್ಲಿ ವುಡನ್ ಸ್ಟೋರೇಜ್ ಯೂನಿಟ್‌ಗಳು/ವಾರ್ಡ್‌ರೋಬ್‌ಗಳು, ಮಾಡ್ಯುಲರ್ ಕಿಚನ್, ಟಿವಿ ಯೂನಿಟ್‌ಗಳನ್ನು ಒದಗಿಸುವುದು, ಶೌಚಾಲಯ ದುರಸ್ತಿ, ಕಚೇರಿ ನವೀಕರಣ, ಆರ್ಕಿಟೆಕ್ಚರಲ್/ಒಳಾಂಗಣ/ಹೊರಾಂಗಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹಾ ಸೇವೆಗಳು, ಎಂಎಸ್ ಗ್ರೇಟಿಂಗ್ ಒದಗಿಸುವುದು, ಪಾರ್ಕಿಂಗ್ ಏರಿಯಾಗೆ ಫ್ಲೋರಿಂಗ್ ಟೈಲ್ಸ್ ಒದಗಿಸುವುದು, ಟೆರೇಸ್‌ನ ವಾಟರ್‌ಪ್ರೂಫಿಂಗ್, ಪೇಂಟಿಂಗ್ ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 05 ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.10.07 ಲಕ್ಷಗಳು, ಗರಿಷ್ಠ ರೂ.762.62 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.12,600/-, ಗರಿಷ್ಠ ರೂ.11,44,000/-** ಪ್ರತೀ ಕಾಮಗಾರಿಯ ಕಾಲಾವಧಿ: **2 ರಿಂದ 24 ತಿಂಗಳು (ಮಳೆಗಾಲ ಸೇರಿದಂತೆ).** ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: ಕ್ರ.ಸಂ.1ಕ್ಕೆ 23.03.2026, ಸಂಜೆ 5.00 ಗಂಟೆಯೊಳಗೆ ಮತ್ತು ಕ್ರ.ಸಂ.2 ರಿಂದ 5ಕ್ಕೆ 24.03.2026, ಸಂಜೆ 5.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ-ಸಿ.ಪಿ/6382/ಕೆಎಸ್‌ಎಂಸಿಎ/2025-26

THE HON'BLE SPECIAL DISTRICT JUDGE OF THANJAVUR (SDJ), TAMILNADU

M.C.O.P. No. 766 OF 2025

J. Haseena Begam, residing at No. 31, SNM Ragumman Nagar, Keelavasal, Thanjavur -613001 ...
Petitioner --Vs--
Mrs. R. Dhanalaksmi, W/o, Rasappan residing at No.10, SSS Building A.V.Road Samrajpet, Bangalore Karnataka - 560018
--3rd Respondents

NOTICE

The above named claimants had filed the above claim for the injuries of one Haseena Begam who was meet in a motor vehicle accident that happened on 27.12.2024 by the car and lorry bearing Reg. No. TN-49-CL-0994 and Reg. No. KA-01- AF-6411, belonging to the above mentioned Respondent. The above case is posted on 27.03.2026 for your appearance either in person or through an Advocate at 10.00 AM failing which you will be set exparty on 27.03.2026. /By Court order/ Counsel for the petitioner

S.SEBESTIAN., ADVOCATE,
Thanjavur - 613005, Tamilnadu

BEFORE THE DEPUTY REGISTRAR OF CHITS, FOURTH ZONE, MARGOSA ROAD, MALLESHWARAM, AT BENGALURU
DISPUTE NO.DRB-4/CFS/27/2024-25

DISPUTANT : M/s. Margadarsi Chits (K) Pvt. Ltd., No. 21 & 22, Krishna Tower,1st Floor, 3rd Main, Gandhinagar, Bangalore-560009.
Branch: Gandhinagar
Represented by its Foreman/Manager, **Sri. G.Satyanarayana.**
OPPONENTS
Mr. N.Girish gowda & others
OPPONENT No. 06 :
Mrs. Pushpalatha W/o N. Girishgowda, Water Service, No.53/8, 3rd Main, Kaveripura, Magadi Main Road, Kamakshipalya, Bengaluru-560079.

NOTICE OF CONDITIONAL ATTACHMENT OF IMMOVABLE PROPERTY OF OPPONENT NO.06 UNDER SECTION 68(1) OF THE CHIT FUNDS ACT-1982, THROUGH PAPER PUBLICATION

1. Whereas, the Disputant has filed the above dispute before the Deputy Registrar of Chits, 4th Zone Bengaluru, under Section 64(1) of the Chit Funds Act-1982, for recovery **Rs.39,81,715/- (Rupees Thirty Nine Lakh Eighty One Thousand Seven Hundred and Fifteen only)** from the opponent.
2. Where as it is brought to my notice by the disputant through an application filed under Section 68(1) of the Chit Funds Act-1982, accompanied by an affidavit stating that the Opponent No.06, is the Guarantor of this chit and now he is contemplating to dispose of the immovable property belonging to him, as mentioned in the schedule hereunder, with an intention to delay or defeat the enforcement or execution of the award that is likely to be passed in the above dispute against him.
3. The summons/ notice issued by RPAD to opponent No.06, appear before this Hon'ble Court on.16/12/2025 is not served. Therefore, the opponent No.06, is hereby summoned to appear in this Court in person on 10/04/2026, at 3.00 P.M. at Before The Deputy Registrar of Chits, Fourth Zone, Sahakara Soudha, 8th Cross, Margosa Road, Malleshwaram, Bangalore-560003, without fail Opponent to take notice that in default of appearance, the dispute will be heard and disposed ex- parte on merits.
4. Further the opponent No. 06 is hereby informed that if he desires to have this attachment raised, he shall furnish cash security to the extent of the dispute claim by depositing the amount to the Disputant Company and producing the original receipt issued by them to this Court on or before 10/04/2026, at 3.00 P.M without fail for raising the attachment. If they fail to do so within the stipulated period, this conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY BELONGS TO OPPONENT NO.06

All that piece and parcel of property bearing No.470/2, formed in Sy. No.53/8, Old BBMP Ward No.36, Old BBMP Ward No.103, situated at 3rd Main, Kaveripura, Saneguruvanahalli, Kamakshipalya Village, Yeshwanthpura Hobli, Bengaluru North Taluk, Bengaluru, measuring East to West 50 feet, North to South 30 feet, in total measuring 1,500 Sq. feet, along with ACC roofed residential building thereon, together with all rights, appurtenances whatsoever whether underneath or above the surface and bounded on. East by : : Road, West by : : Property belongs to Late Sri. Narayanappa, North by : Property belongs to Sri. H. Boraiah, South by Cremation Ground belongs to Sri. N. Girish Gowda's Family.

Given, under my hand and seal of this office on 13/03/2026, at Bangalore

THE DEPUTY REGISTRAR OF CHITS, FOURTH ZONE, MALLESHWARAM, AT BENGALURU

BEFORE THE DEPUTY REGISTRAR OF CHITS, FOURTH ZONE, MARGOSA ROAD, MALLESHWARAM, AT BENGALURU
DISPUTE NO.DRB-4/CFS/27/2024-25

DISPUTANT : M/s. Margadarsi Chits (K) Pvt. Ltd., No. 21 & 22, Krishna Tower, 1st Floor, 3rd Main, Gandhinagar, Bangalore-560009.
Branch: Gandhinagar
Represented by its Foreman/Manager, **Sri. G.Satyanarayana.**
OPPONENTS:
Mr. N.Girish gowda & others
OPPONENT No. 01
Mr. N. Girish Gowda S/o Narasimhaiah Bora, Class-1 Civil Contractor, No.106, 3rd Main, 2nd Stage, Near BSNL Office, Gruhalakshmi Layout, Kamalanagar, Bengaluru-560079.

NOTICE OF CONDITIONAL ATTACHMENT OF IMMOVABLE PROPERTY OF OPPONENT NO.01 UNDER SECTION 68(1) OF THE CHIT FUNDS ACT-1982, THROUGH PAPER PUBLICATION

1. Whereas, the Disputant has filed the above dispute before the Deputy Registrar of Chits, 4th Zone Bengaluru, under Section 64(1) of the Chit Funds Act-1982, for recovery **Rs.39,81,715/- (Rupees Thirty Nine Lakh Eighty One Thousand Seven Hundred and Fifteen only)** from the opponent.
2. Where as it is brought to my notice by the disputant through an application filed under Section 68(1) of the Chit Funds Act-1982, accompanied by an affidavit stating that the Opponent No.01, is the Guarantor of this chit and now he is contemplating to dispose of the immovable property belonging to him, as mentioned in the schedule hereunder, with an intention to delay or defeat the enforcement or execution of the award that is likely to be passed in the above dispute against him.
3. The summons/ notice issued by RPAD to opponent No.01, appear before this Hon'ble Court on.16/12/2025 is not served. Therefore, the opponent No.01, is hereby summoned to appear in this Court in person on 10/04/2026, at 3.00 P.M. at Before The Deputy Registrar of Chits, Fourth Zone, Sahakara Soudha, 8th Cross, Margosa Road, Malleshwaram, Bangalore-560003, without fail Opponent to take notice that in default of appearance, the dispute will be heard and disposed ex- parte on merits.
4. Further the opponent No.01, is hereby informed that if he desires to have this attachment raised, he shall furnish cash security to the extent of the dispute claim by depositing the amount to the Disputant Company and producing the original receipt issued by them to this Court on or before. 10/04/2026, at 3.00 P.M without fail for raising the attachment. If they fail to do so within the stipulated period, this conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTIES BELONGS TO OPPONENT NO.01

ITEM NO.1

All that piece and parcel of Vacant Land in Sy. No.58, situated at Saneguruvanahalli Village, Kamakashipalya, Yeshwanthpura Hobli, Bengaluru North Taluk, Bengaluru, measuring East to West 30 feet, North to South 40 feet, in total measuring 1,200 Sq. feet, together with all rights, appurtenances whatsoever whether underneath or above the surface and bounded on.
East by : : Property belongs to Sri. H. Boraiah, West by : Private Property, North by : : Road, South by : Property belongs to Sri. Mariyappa.

ITEM NO.2

All that piece and parcel of Factory shed in Sy. No.57, situated at Saneguruvanahalli Village, Kamakashipalya, Yeshwanthpura Hobli, Bengaluru North Taluk, Bengaluru, Shed known as "DAASANA THUNDA", measuring of East to West 33 feet and North to South 63 feet, totally measuring 2,079 Sq. feet, along with 15 Sq. feet RCC sheet shed, together with all rights, privileges and appurtenances there to whether whatsoever above the surface and bounded on:- East by : 3rd Main Road, West by : Private Property, North by : Private Property South by : Property belongs to Sri. H. Boraiah.

Given under my hand and seal of this office on 13/03/2026, at Bangalore.

THE DEPUTY REGISTRAR OF CHITS, FOURTH ZONE, MALLESHWARAM, AT BENGALURU

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ಸಂ: ಬಿಐಎಎಪಿಎ/ಟಿಪಿ/ಭೂಉಬ/44/2025-26/3498 ದಿನಾಂಕ : 17.03.2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : 27-01-2009 ಮತ್ತು ತಿದ್ದುಪಡಿ ಆದೇಶ ದಿನಾಂಕ : 29-01-2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1.	ಶ್ರೀ ಎಸ್.ವಿ.ರಾಜಣ್ಣ ಬಿನ್ ಅಪ್ಪಯ್ಯಣ್ಣ ಉರುಫ್ ವೆಂಕಟಶಾಮಪ್ಪ	ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	174	1-09	ಉದ್ಯಾನವನ / ಬಯಲುಜಾಗ	ವಸತಿ
2.	ಶ್ರೀ ಎಸ್.ವಿ.ರಾಜಣ್ಣ ಬಿನ್ ಅಪ್ಪಯ್ಯಣ್ಣ ಉರುಫ್ ವೆಂಕಟಶಾಮಪ್ಪ	ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	173	1-13 ಪೈಕಿ 0ಎ-27ಗು	ಉದ್ಯಾನವನ / ಬಯಲುಜಾಗ	ವಸತಿ
3.	ಶ್ರೀ ಹರ್ಷದ್ ಹರಿಬಾಯಿ ಪಟೇಲ್ ಬಿನ್ ಹರಿಬಾಯಿ ಜೀತಾಬಾಯಿ ಪಟೇಲ್	ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	171/4	0-30	ಉದ್ಯಾನವನ / ಬಯಲುಜಾಗ	ವಸತಿ
4.	ಶ್ರೀ ಸತೀಶ್ ಹರಿಬಾಯಿ ಪಟೇಲ್ ಬಿನ್ ಹರಿಬಾಯಿ ಜೀತಾಬಾಯಿ ಪಟೇಲ್	ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	171/2	0-33 ಪೈಕಿ 0ಎ-28ಗು	ಉದ್ಯಾನವನ / ಬಯಲುಜಾಗ	ವಸತಿ
5.	ಶ್ರೀ ಅಕ್ಷಯ್ ಕುಮಾರ್ ವಿನುಬಾಯಿ ವಸೋಯ ಬಿನ್ ವಿನೋಬಾಯಿ ಸೌಜಿಬಾಯಿ ವಸೋಯ, ಶ್ರೀ ಪಟೇಲ್ ಸುರೇಶ್ ಬಾಯಿ ಬಿನ್ ಪ್ರೇಮ್‌ಜೀ ಬಾಯಿ ಮತ್ತು ಶ್ರೀ ಹಸಮುಖ್ ಬಾಯಿ ಲಾಲ್‌ಜೀಬಾಯಿ ಸೊಜಿತ್ರ ಬಿನ್‌ಲಾಲ್‌ಜೀ ಬಾಯಿ ಸೊಜಿತ್ರ	ದೇವನಹಳ್ಳಿ	ಕಸಬಾ	ಚಿಕ್ಕಸಣ್ಣೆ	23/2	2-07 ಪೈಕಿ 1ಎ-15ಗು	ಉದ್ಯಾನವನ / ಬಯಲುಜಾಗ	ವಸತಿ

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/6383/ಶಿರಡಿ ಸಾಯಿ/2025-26

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18

ಕಛೇರಿ ☎ : 26678572 : 26600512 : 26609066 : ಟೆಲಿಫ್ಯಾಕ್ಸ್ : (080) 26617980

ಸ್ಥಿರ ಸ್ವತ್ತುಗಳ ಸ್ವಾಧೀನದ ಬಗ್ಗೆ ಪ್ರಕಟಣೆ (ಸಾಂಕೇತಿಕವಾಗಿ)

ಕೆಳಗೆ ಸಹಿ ಮಾಡಿರುವವರು ಬೆಂಗಳೂರು ಸಿಟಿ ಕೋ. ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಎಂ., ನಂ.3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18 ರ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯೂರಿಟಿ ಬಡ್ಡಿ ಜಾರಿ (ಎರಡನೇ) ಆರ್ಡಿನೆನ್ಸ್, 2002 (2002 ರ ಆದೇಶ 3) ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 9 ರೊಂದಿಗೆ ಓದಲಾದ ಸೆಕ್ಷನ್ 13(2) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸುವ ಮೂಲಕ ಹೊರಡಿಸಲಾಗಿದೆ ಮತ್ತು ಕೆಳಗೆ ಸಹಿ ಮಾಡಿದ ಸಾಲಗಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ನೋಟಿಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಕರೆ ನೀಡುವಂತೆ ಒತ್ತಾಯಿಸಲಾಗಿದೆ.

ಸಾಲಗಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿದವರು ಸದರಿ ನಿಯಮದ 9ನೇ ನಿಯಮದೊಂದಿಗೆ ಓದಲಾದ ಸದರಿ ಅಧ್ಯಾದೇಶದ ಸೆಕ್ಷನ್ 13(4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸಾಲಗಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಇಲ್ಲಿ ಸೂಚನೆ ನೀಡಲಾಗಿದೆ.

ಸಾಲಗಾರರು / ನಿರ್ದಿಷ್ಟವಾಗಿ ಕಾನೂನುಬದ್ಧ ಉತ್ತರಾಧಿಕಾರಿಗಳು ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರಗಳು ದಿ ಬೆಂಗಳೂರು ಸಿಟಿ ಕೋ. ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಎಂ., ನಂ.3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18 ರ ಶುಲ್ಕಕ್ಕೆ ಒಳಪಟ್ಟಿರುತ್ತವೆ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ಥಿರಾಸ್ತಿಗಳ ವಿವರ ಮತ್ತು ಅಳತೆ
ವಿಜಯನಗರ ಶಾಖೆ :			
01	ಶ್ರೀಮತಿ ಮುತ್ಯಾಲಮ್ಮ (ನಿಧನ) ಕಾನೂನುಬದ್ಧ ಉತ್ತರಾಧಿಕಾರಿಗಳು:- 1. ಕುಮಾರ್ ಪಿ (ಮಗ), 2. ಮುರಳಿ ಕುಮಾರ್ ಪಿ (ಮಗ) 3. ಕುಪೇಂದ್ರ ಪಿ (ಮಗ), 4. ಸಂತೋಷ್ ಪಿ (ಮಗ), 5. ಇಂದ್ರಾಣಿ ಪಿ (ಮಗಳು)	ತಗಾದೆ ನೋಟೀಸ್ ದಿನಾಂಕ: 16.12.2025 ಸ್ವಾಧೀನತೆ ನೋಟೀಸ್ ದಿನಾಂಕ : 16.03.2026 ಬಾಕಿ ಇರುವ ಮೊತ್ತ: 16.03.2026 ರಂದು ರಂತೆ ರೂ. 4,59,409/-	ಸ್ಥಿರಾಸ್ತಿಗಳ ವಿವರ :- ಹೊಸ ನಂ.35, ಹಳೆ ನಂ.306, 13ನೇ ಮುಖ್ಯ ವೆಂಕಟಸ್ವಾಮಿ ತೋಟ, ಜಗಜೀವನರಾಮ್ ನಗರದ ಬಿಬಿಎಂಪಿ ವಾರ್ಡ್ ನಂ.44, ಪಿಐಡಿ ನಂ.44-72-45 ಬೆಂಗಳೂರು. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 25 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 16.9 ಅಡಿ. ಪೂರ್ವಕ್ಕೆ : ಸೈಟ್ ಸಂಖ್ಯೆ 299, ಪಶ್ಚಿಮಕ್ಕೆ : 13ನೇ ಮುಖ್ಯ ರಸ್ತೆ, ಉತ್ತರಕ್ಕೆ : ಸೈಟ್ ಸಂಖ್ಯೆ 305, ದಕ್ಷಿಣಕ್ಕೆ : ಸೈಟ್ ಸಂಖ್ಯೆ 307
ಸಂಜಯನಗರ ಶಾಖೆ			
02	ಶ್ರೀ. ರಾಮಮೂರ್ತಿ. ಪಿ. ಖಾತರಿದಾರರು:- 1.ಪಿ ವಿಜಯಲಕ್ಷ್ಮಿ 2.ಪಿ ನಿಹಾರಿಕಾ 3.ಪಿ ಪ್ರಿಯಾಂಕಾ	ತಗಾದೆ ನೋಟೀಸ್ ದಿನಾಂಕ: 01.01.2026 ಸ್ವಾಧೀನತೆ ನೋಟೀಸ್ ದಿನಾಂಕ : 16.03.2026 ಬಾಕಿ ಇರುವ ಮೊತ್ತ: ದಿನಾಂಕ: 16.03.2026 ರಂತೆ ರೂ. 83,42,595/-	ಆಸ್ತಿ & ಅಳತೆ: – ಸಂಖ್ಯೆ 785, E-PID No.1228329242 ಹೊಸ ಬಿಬಿಎಂಪಿ ಸಂಖ್ಯೆ 744/2424/785, ನರಸೀಪುರ ಗ್ರಾಮದ 34 ರಿಂದ 39, 41 ರಿಂದ 51 (ಭಾಗ) ದಿಂದ ರಚಿಸಲಾಗಿದೆ, HMT ಲೇಔಟ್, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ವಿದ್ಯಾರಣ್ಯಪುರದ ಹೊಸ ಬಿಬಿಎಂಪಿ ವಾರ್ಡ್ ಸಂಖ್ಯೆ 09, ಬೆಂಗಳೂರು. ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 60 ಅಡಿ ಪೂರ್ವಕ್ಕೆ : ಮನೆ ಶ್ರೀ. ಚಿಕ್ಕಣ್ಣ (ಸೈಟ್ ನಂ. 786), ಪಶ್ಚಿಮಕ್ಕೆ : ಸೈಟ್ ಸಂಖ್ಯೆ 784, ಉತ್ತರಕ್ಕೆ : ಸೈಟ್ ಸಂಖ್ಯೆ 766, ದಕ್ಷಿಣಕ್ಕೆ : ರಸ್ತೆ
ಯಲಹಂಕ ಶಾಖೆ			
03	ಶ್ರೀಮತಿ ಪ್ರೇಮಾ ಖಾತರಿದಾರರು:- 1. ಸುಷ್ಮಾ ಆರ್	ತಗಾದೆ ನೋಟೀಸ್ ದಿನಾಂಕ: 12.01.2026 ಸ್ವಾಧೀನತೆ ನೋಟೀಸ್ ದಿನಾಂಕ : 16.03.2026 ಬಾಕಿ ಇರುವ ಮೊತ್ತ: 16.03.2026 ರಂದು ರಂತೆ ರೂ. 29,71,129/-	ಆಸ್ತಿ & ಅಳತೆ :-ನಿವೇಶನ ಸಂಖ್ಯೆ 21, ಬಿಬಿಎಂಪಿ ಖಾತಾ ಸಂಖ್ಯೆ 298/14/2, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 14/2/21, ಮುನೇಶ್ವರ ಲೇಔಟ್ನ ಮೌಲ್ಯಮಾಪನ ಸಂಖ್ಯೆ 14/2, ಅತ್ತೂರು ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಪ್ರಸ್ತುತ ಬಿಬಿಎಂಪಿ ವಾರ್ಡ್ ಸಂಖ್ಯೆ 03, ಬೆಂಗಳೂರು. ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 19 ಅಡಿ, ಪೂರ್ವಕ್ಕೆ : 10 ಅಡಿ ರಸ್ತೆ, ಪಶ್ಚಿಮಕ್ಕೆ : ಸೈಟ್ ಸಂಖ್ಯೆ 16 ವಾಸುದೇವ ರಾವ್ ಅವರಿಗೆ ಸೇರಿದೆ, ಉತ್ತರಕ್ಕೆ : ಸೈಟ್ ಸಂಖ್ಯೆ 20, ದಕ್ಷಿಣಕ್ಕೆ : ಆಸ್ತಿ ಎ.ಎಂ. ಹನುಮಂತಪ್ಪ ಅವರಿಗೆ ಸೇರಿದ್ದು.

ಸ್ಥಳ : ಬೆಂಗಳೂರು
ದಿನಾಂಕ : 20.03.2026

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರವಾಸಿ ತಾಣಗಳೇ ಟಾರ್ಗೆಟ್

- ಇರಾನ್‌ನಿಂದ ಅಮೆರಿಕ ಮಿತ್ರ ದೇಶಗಳಿಗೆ ಎಚ್ಚರಿಕೆ
- ಮೂರು ವಾರಗಳ ಬಳಿಕವೂ ಸೋಲದ ಇರಾನ್
- ಕ್ಷಿಪಣಿ ನಿರ್ಮಾಣ, ದಾಳಿ ನಿರಂತರ, ಗಲ್ಫ್ ದೇಶಗಳ ಮೇಲೆ ದಾಳಿ



ದುಬೈ: ಅಮೆರಿಕಾ-ಇಸ್ರೇಲ್ ದಾಳಿಗಳು ಆರಂಭವಾಗಿ ಮೂರು ವಾರಗಳು ಕಳೆದರೂ ಇರಾನ್ ತನ್ನ ದಾಳಿಯ ಸಾಮರ್ಥ್ಯ ಕಡಿಮೆಯಾಗಿಲ್ಲ ಎಂದು ತೋರಿಸಿದ್ದು, ವಿಶ್ವದ ಪ್ರವಾಸಿ ಹಾಗೂ ಮನರಂಜನಾ ತಾಣಗಳನ್ನು ಗುರಿಯಾಗಿಸಿ ದಾಳಿ ಮಾಡುತ್ತೇವೆ ಎಂದು ಗಂಭೀರ ಬೆದರಿಕೆ ಹಾಕಿದೆ. ಇದೇ ವೇಳೆ ಯುದ್ಧ ಪರಿಸ್ಥಿತಿಯಲ್ಲಿಯೂ ಕ್ಷಿಪಣಿಗಳ ನಿರ್ಮಾಣ ಮುಂದುವರಿದಿದೆ ಎಂದು ಘೋಷಿಸಿದ್ದು, ಮಧ್ಯಪ್ರಾಚ್ಯದ ಸಂಘರ್ಷವು ಜಾಗತಿಕ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್, ಇಸ್ರೇಲ್ ಹಾಗೂ ಗಲ್ಫ್ ಅರಬ್ ರಾಷ್ಟ್ರಗಳ ಇಂಧನ ತಾಣಗಳ ಮೇಲೆ ದಾಳಿಗಳನ್ನು ಮುಂದುವರೆಸಿದೆ. ಮುಸ್ಲಿಂ ಸಮುದಾಯದ ಪವಿತ್ರ ದಿನಗಳಲ್ಲಿಯೇ ಈ ದಾಳಿಗಳು ನಡೆದಿದ್ದು, ಪರ್ಷಿಯನ್ ಹೊಸ ವರ್ಷ ನವ್ರೋಜ್ ಆಚರಣೆ ಈ ಬಾರಿ ಮಂಕಾಗಿದೆ.

ಫೆ. 28ರಿಂದ ಆರಂಭವಾದ ಯುದ್ಧದಲ್ಲಿ ಇರಾನ್‌ನ ಅಣು, ಶಸ್ತ್ರಾಸ್ತ್ರ ಮತ್ತು ಇಂಧನ ತಾಣಗಳಿಗೆ ಎಷ್ಟು ಹಾನಿಯಾಗಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ದೇಶದ ಆಡಳಿತದ ಮೇಲಿನ ನಿಯಂತ್ರಣದ ವಿಷಯವೂ ಅನಿಶ್ಚಿತವಾಗಿದೆ. ಆದರೂ ಇರಾನ್ ಇನ್ನೂ ದಾಳಿ ನಡೆಸಿ ತೈಲ ಸರಬರಾಜನ್ನು ಅಸ್ತವ್ಯಸ್ತಗೊಳಿಸುವ ಮೂಲಕ ಜಾಗತಿಕ ಆರ್ಥಿಕತೆಗೆ ಹೊಡೆತ ನೀಡುತ್ತಿದೆ.

ಅಮೆರಿಕಾ ಮತ್ತು ಇಸ್ರೇಲ್ ಯುದ್ಧದ ಉದ್ದೇಶವಾಗಿ ಇರಾನ್ ಆಡಳಿತವನ್ನು ಉರುಳಿಸುವುದು ಅಥವಾ ಅದರ ಅಣು ಹಾಗೂ ಕ್ಷಿಪಣಿ ಕಾರ್ಯಕ್ರಮಗಳನ್ನು ನಾಶಪಡಿಸುವುದನ್ನು ಹೇಳುತ್ತಿದ್ದರೂ, ಇದುವರೆಗೆ ಯಾವುದೇ ಬಂಡಾಯದ ಲಕ್ಷಣಗಳು ಕಾಣಿಸಿಕೊಂಡಿಲ್ಲ. ಯುದ್ಧದ ಅಂತ್ಯ ಹೇಗಿರಬಹುದು ಎಂಬುದೂ ಸ್ಪಷ್ಟವಾಗಿಲ್ಲ.

ಇರಾನ್ ಸೇನಾ ವಕ್ತಾರ ಜನರಲ್ ಅಬೋಲ್ಫಝಲ್ ಶೆಕಾರ್ಚಿ, ಪ್ರವಾಸಿ ತಾಣಗಳೂ ಶತ್ರುಗಳಿಗೆ ಸುರಕ್ಷಿತವಾಗಿರುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ನೌಕಾಪಡೆ ಮತ್ತು ವಾಯುಪಡೆಯು ಕುಸಿದಿದೆ ಎಂದು ಹೇಳಿದ್ದರೆ, ಇರಾನ್ ಅದನ್ನು ತಳ್ಳಿಹಾಕಿದೆ. ಕ್ರಾಂತಿಕಾರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನಾಇನಿ, 'ಯುದ್ಧದ ನಡುವೆಯೂ ಕ್ಷಿಪಣಿ ಉತ್ಪಾದನೆ ನಡೆಯುತ್ತಿದೆ; ಸಂಗ್ರಹದಲ್ಲಿ ಸಮಸ್ಯೆ ಇಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯ ಕೆಲವೇ ಗಂಟೆಗಳ ನಂತರ ಅವರು ವಾಯುದಾಳಿಯಲ್ಲಿ ಮೃತಪಟ್ಟಿದ್ದಾರೆ. ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಶತ್ರುಗಳ ಭದ್ರತೆಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದ್ದಾರೆ.

ನ್ಯಾಟೋ ಮಿತ್ರರು ಹೇಡಿಗಳು: ಟ್ರಂಪ್

ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿಕೊಳ್ಳಲು ತನ್ನ ಮನವಿಯಂತೆ ಯುದ್ಧನೌಕೆಗಳನ್ನು ಕಳುಹಿಸಲು ಒಪ್ಪದ ನ್ಯಾಟೋ ಮಿತ್ರ ರಾಷ್ಟ್ರಗಳನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಡಿಗಳೆಂದು ಟೀಕಿಸಿದ್ದಾರೆ. ಅಮೆರಿಕ ಇಲ್ಲದಿದ್ದರೆ, ನ್ಯಾಟೋ ಕೇವಲ ಕಾಗದದ ಹುಲಿ ಅಷ್ಟೇ! ಪರಮಾಣು ಶಕ್ತಿಯುಳ್ಳ ಇರಾನ್ ತಡೆಗಟ್ಟಲು ಯುದ್ಧ ಮಾಡೋಣವೆಂದರೆ ನ್ಯಾಟೋ ರಾಷ್ಟ್ರಗಳು ಸಿದ್ಧವಿಲ್ಲ. ಹಾರ್ಮುಜ್ ಜಲಸಂಧಿ ತೆರೆಯಲು ನೆರವಾಗುತ್ತಿಲ್ಲ. ಆದರೆ ಯುದ್ಧದಿಂದ ತೈಲ ಬೆಲೆ ಏರಿಕೆಯಾಗಿದೆ ಎಂದು ದೂರುತ್ತಿವೆ. ಅಪಾಯ ಎದುರಿಸಲು ಸಿದ್ಧರಿಲ್ಲದೆ ಸುಲಭ ಮಾರ್ಗ ಹಿಡಿದಿವೆ. ನ್ಯಾಟೋ ಮಿತ್ರ ರಾಷ್ಟ್ರಗಳು ಹೇಡಿಗಳು, ನಾವು ನೆನಪಿನಲ್ಲಿ ಇಡುತ್ತೇವೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

1 ಕೋಟಿ ಡಾಲರ್‌ನ ಎಫ್-35ಗೆ ಹಾನಿ?

ಅಮೆರಿಕದ ಸೇನೆಯ ಬೆನ್ನೆಲುಬೆಂದೇ ಕರೆಯಲ್ಪಡುವ 1 ಕೋಟಿ ಡಾಲರ್ ಮೌಲ್ಯದ ಎಫ್-35 ಲೈಟ್ನಿಂಗ್-2 ಯುದ್ಧ ವಿಮಾನಕ್ಕೆ ಹಾನಿ ಮಾಡಿರುವುದಾಗಿ ಇರಾನ್ ಸೇನೆ ಹೇಳಿಕೊಂಡಿದೆ. ಇರಾನ್ ವಾಯುಪ್ರದೇಶದೊಳಗೆ ಬಂದ ಎಫ್-35 ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಇರಾನ್ ಹೇಳಿದೆ. ಹಾನಿಗೊಳಗಾದ ಎಫ್-35 ಅಮೆರಿಕ ಸೇನಾನೆಲೆಯಲ್ಲಿ ಸುರಕ್ಷಿತ ಲ್ಯಾಂಡಿಂಗ್ ನಡೆಸಿದ್ದು, ಪೈಲೆಟ್ ಸುರಕ್ಷಿತವಾಗಿದ್ದಾರೆ ಎಂದು ವರದಿಯಾಗಿದೆ. ಎಫ್-35 ಮೇಲೆ ಶತ್ರು ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದ್ದು ಇದೇ ಮೊದಲು, ಅದರ ರಾಡಾರ್, ಸೆನ್ಸಾರ್ ಒಳಗೊಂಡ ಅತ್ಯಾಧುನಿಕ ವಿನ್ಯಾಸದಿಂದಾಗಿ ಎಫ್-35 ಮೇಲೆ ದಾಳಿ ನಡೆಸುವುದೇ ಕಷ್ಟವೆಂದು ಪರಿಗಣಿಸಲಾಗುತ್ತದೆ.

16.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ

ಇರಾನ್‌ನೊಂದಿಗಿನ ಯುದ್ಧವು ತೀವ್ರಗೊಳ್ಳುತ್ತಿದ್ದಂತೆ ತಮ್ಮ ರಕ್ಷಣಾ ಸಾಮರ್ಥ್ಯ ಬಲಪಡಿಸಲು ಯುಎಸ್‌ಸ್ಟೇಟ್ ಡಿಪಾರ್ಟ್ಮೆಂಟ್ ಗಲ್ಫ್ ಮಿತ್ರರಾಷ್ಟ್ರಗಳಿಗೆ 16.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿದೆ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಸುಮಾರು 7 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಸಹ ಟ್ರಂಪ್ ಆಡಳಿತವು ಅನುಮೋದಿಸಿದೆ. ಪ್ರಾದೇಶಿಕ ಇಂಧನ ಮೂಲಸೌಕರ್ಯಕ್ಕೆ ಹಾನಿಯನ್ನುಂಟುಮಾಡಿರುವ ಇರಾನಿನ ಪ್ರಚೋದನೆ ಗಳಿಂದಾಗಿ ಕಾಂಗ್ರೆಸ್ಸಿನ ಪ್ರಮಾಣಿತ ಪರಿಶೀಲನಾ ಅವಧಿಗೂ ಕಾಯದೇ, ಈ ಒಪ್ಪಂದಗಳನ್ನು ತ್ವರಿತಗೊಳಿಸಲು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತುರ್ತು ವಿನಾಯಿತಿಗಳನ್ನು ನೀಡಿದರು.

11 ಗಲ್ಫ್ ವಾಯುಪ್ರದೇಶಕ್ಕೆ ಪ್ರವೇಶಿಸದಂತೆ ಡಿಜಿಸಿಎ ಸೂಚನೆ

ಯುದ್ಧದಿಂದಾಗಿ ಕೊಲ್ಲಿ ಪ್ರದೇಶದಾದ್ಯಂತ ವಿಮಾನ ಕಾರ್ಯಾಚರಣೆ ಭಾರೀ ಪ್ರಮಾಣದಲ್ಲಿ ಅಡ್ಡಿಪಡಿಸಿದೆ. ಈ ಹಿನ್ನಲೆ, ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ವಿಮಾನಯಾನ ಸಂಸ್ಥೆಗಳಿಗೆ 11 ಗಲ್ಫ್ ವಾಯುಪ್ರದೇಶಗಳಿಗೆ ತೆರಳದಿರಲು ಸೂಚಿಸಿದೆ. ಈ ಹಿಂದೆ, ಪಶ್ಚಿಮ ಏಷ್ಯಾದ ಪರಿಸ್ಥಿತಿಯು ಸಾಮಾನ್ಯ ವಿಮಾನ ಮಾರ್ಗಗಳಿಗೆ ಅಡ್ಡಿಪಡಿಸುವುದನ್ನು ಮುಂದುವರೆಸಿದ್ದರಿಂದ ವಾಯುಯಾನ ನಿಯಂತ್ರಕವು ಏರ್ ಇಂಡಿಯಾಗೆ ಸಿಬ್ಬಂದಿ ಕರ್ತವ್ಯದ ನಿಯಮಗಳ ಮೇಲೆ ತಾತ್ಕಾಲಿಕ ಪರಿಹಾರ ನೀಡಿತ್ತು. ಪ್ರಸ್ತುತ ಇರಾನಿನ ಮತ್ತು ಇರಾಕ್ ವಾಯುಪ್ರದೇಶಕ್ಕೆ ನಿರ್ಬಂಧಿಸಿರುವುದರಿಂದ, ವಿಮಾನಯಾನ ಸಂಸ್ಥೆ ತನ್ನ ವಿಮಾನಗಳನ್ನು ದೀರ್ಘ ಮಾರ್ಗಗಳಲ್ಲಿ ತಿರುಗಿಸಬೇಕಾಯಿತು. ಇದರಿಂದ ವಿಮಾನ ಹಾರಾಟದ ಸಮಯ ಕೂಡ ವಿಸ್ತಾರವಾಗಿತ್ತು.

ಕುವೈತ್ ತೈಲ ಘಟಕಗಳ ಮೇಲೆ ಇರಾನ್ ದಾಳಿ

ಕುವೈತ್‌ನ ಅತಿ ದೊಡ್ಡ ತೈಲ ಸಂಸ್ಕರಣಾಗಾರದ ಮೇಲೆ ಸತತ ಎರಡನೇ ದಿನ ಇರಾನ್ ಡ್ರೋನ್ ದಾಳಿ ನಡೆಸಿದೆ. ಗಲ್ಫ್ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುತ್ತಿರುವ ಇರಾನ್, ಶುಕ್ರವಾರ ಬೆಳಗ್ಗೆ ಮಿನಾ ಅಲ್-ಅಹ್ಮದಿ ತೈಲ ಸಂಸ್ಕರಣಾ ಘಟಕದ ಮೇಲೆ ಡ್ರೋನ್ ದಾಳಿ ನಡೆಸಿದೆ. ಪ್ರತಿ ದಿನ 7,30,000 ಬ್ಯಾರೆಲ್ ಕಚ್ಚಾ ತೈಲವನ್ನು ಶುದ್ಧೀಕರಿಸುವ ಘಟಕ ಇದಾಗಿದೆ. ಯಾವುದೇ ಹಾನಿಯಾಗಿಲ್ಲ ಎಂದು ಕುವೈತ್ ಹೇಳಿದೆ.

ಎಂಇಎ ಖಂಡನೆ

ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲೆ ಇರಾನ್ ನಡೆಸಿದ ದಾಳಿಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಖಂಡಿಸಿದ್ದು, ಇಂತಹ ದಾಳಿಗಳು ತಕ್ಷಣ ನಿಲ್ಲಬೇಕೆಂದು ಆಗ್ರಹಿಸಿದ್ದಾರೆ. ಯುದ್ಧ ಸಂಘರ್ಷದಲ್ಲಿ ನಾಗರಿಕ ಮೂಲಸೌಕರ್ಯ, ಅದರಲ್ಲೂ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಬಾರದೆಂದು ಭಾರತ ಹಿಂದೆಯೇ ಕರೆ ನೀಡಿತ್ತು. ಇಂತಹ ದಾಳಿಗಳಿಂದ ಈಗಾಗಲೇ ಅಸ್ಥಿರವಾದ ಜಾಗತಿಕ ಇಂಧನ ಪೂರೈಕೆ ಇನ್ನಷ್ಟು ಅಸ್ಥಿರಗೊಳ್ಳಲಿದೆ. ಇದು ಸ್ವೀಕಾರಾರ್ಹವಲ್ಲ ಎಂದು ಜೈಸ್ವಾಲ್ ಹೇಳಿದ್ದಾರೆ.

ಗಲ್ಫ್ ಮೇಲಿನ ದಾಳಿಗೆ ಮೋದಿ ಖಂಡನೆ

ಹೊಸದಿಲ್ಲಿ: ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ. ಕತಾರ್, ಫ್ರಾನ್ಸ್, ಜೋರ್ಡನ್, ಒಮನ್ ಹಾಗೂ ಮಲೇಷ್ಯಾ ನಾಯಕರ ಜತೆ ಮಧ್ಯಪ್ರಾಚ್ಯ ಯುದ್ಧ ಕುರಿತು ಚರ್ಚೆ ನಡೆಸಿದ ಪ್ರಧಾನಿ ಮೋದಿ, ಪ್ರದೇಶದಲ್ಲಿ ಯುದ್ಧ ತೀವ್ರತೆ ಹೆಚ್ಚುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ, ಪ್ರದೇಶದ ತೈಲ ಮೂಲಸೌಕರ್ಯಗಳ ಮೇಲಿನ ದಾಳಿಗಳನ್ನು ಪ್ರಧಾನಿ ಮೋದಿ ಬಲವಾಗಿ ಖಂಡಿಸಿದರು.

ಕತಾರ್ ಶೇಖ್ ತಮೀಮ್ ಬಿನ್ ಹಮದ್ ಬಿನ್ ಖಲೀಫಾ ಅಲ್ ಥಾನಿ, ಜೋರ್ಡನ್ ರಾಜ ಎರಡನೇ ಅಬ್ದುಲ್ಲಾ, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್, ಒಮನ್ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅಲ್ ಸಯೀದ್ ಮತ್ತು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂರೊಂದಿಗೆ ಪ್ರತ್ಯೇಕ ದೂರವಾಣಿ ಕರೆಗಳಲ್ಲಿ ಮಾತನಾಡಿದ ಮೋದಿ, ಮಧ್ಯಪ್ರಾಚ್ಯದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆ ನೆಲೆಗೊಳಿಸಲು ಸಂವಾದ ಮತ್ತು ರಾಜತಾಂತ್ರಿಕತೆಯ ಮಹತ್ವವನ್ನು ಅವರು ಒತ್ತಿ ಹೇಳಿದ್ದಾರೆ. ಅಲ್ಲದೆ, ಹಾರ್ಮುಜ್ ಜಲಸಂಧಿ ಮೂಲಕ ಸುರಕ್ಷಿತ ಮತ್ತು ಮುಕ್ತ ನೌಕಾ ಸಂಚಾರದ ಅಗತ್ಯವನ್ನೂ ಉಲ್ಲೇಖಿಸಿದ್ದಾರೆ.

ನನ್ನ ಸಹೋದರ ಕತಾರ್‌ನ ಶೇಖ್ ತಮೀಮ್ ಬಿನ್ ಹಮದ್‌ರೊಂದಿಗೆ ಮಾತನಾಡಿ, ಅವರಿಗೆ ಮತ್ತು ಕತಾರ್ ಜನತೆಗೆ ಹೃತ್ಪೂರ್ವಕ ಈದ್ ಶುಭಾಶಯಗಳನ್ನು ತಿಳಿಸಿದೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕತಾರ್ ಜತೆಗಿನ ಭಾರತದ ಐಕ್ಯತೆಯನ್ನು ಮೋದಿ ಪುನರುಚ್ಚರಿಸಿದ್ದಾರೆ.

ಜೋರ್ಡನ್‌ನ ರಾಜ ಎರಡನೇ ಅಬ್ದುಲ್ಲಾರನ್ನು ಸಹ ಸಹೋದರ ಎಂದು ಕರೆದ ಮೋದಿ, ಅವರಿಗೆ ಮುಂಗಡ ಈದ್ ಶುಭಾಶಯಗಳನ್ನು ತಿಳಿಸಿದರು. ಭಾರತ ಮತ್ತು ಜೋರ್ಡನ್ ಸರಕುಗಳ ಮತ್ತು ನಿರ್ಬಂಧರಹಿತ ತೈಲ ಸಾಗಣೆಗೆ ಬೆಂಬಲ ನೀಡುತ್ತವೆ. ಪ್ರದೇಶದಲ್ಲಿ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ಮರಳಿಸಲು ಜೋರ್ಡನ್ ಮಾಡಿದ ಪ್ರಯತ್ನಗಳನ್ನು ಮೋದಿ ಶ್ಲಾಘಿಸಿದ್ದಾರೆ.

- ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ಸರಿಯಲ್ಲ
- ಪಶ್ಚಿಮ ಏಷ್ಯಾ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ
- ಶಾಂತಿ, ಭದ್ರತೆ ಮತ್ತು ಸ್ಥಿರತೆ ನೆಲೆಗೊಳಿಸಲು ಪ್ರಧಾನಿ ಕರೆ

ಆರು ಭಾರತೀಯರ ಸಾವು

ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ಕೊಲ್ಲಿ ಪ್ರದೇಶದಾದ್ಯಂತ ನಡೆದ ಪ್ರತ್ಯೇಕ ಘಟನೆಗಳಲ್ಲಿ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದು, ಓರ್ವ ನಾಪತ್ತೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಶುಕ್ರವಾರ ಹೇಳಿದೆ. ಭಾರತೀಯ ರಾಯಭಾರ ಕಚೇರಿಗಳು ಸಹಾಯ ಮತ್ತು ವಾಪಸಾತಿಗಾಗಿ ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿವೆ ಎಂದು ಹೇಳಿದೆ. ಮಾರ್ಚ್ 18ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಭಾರತೀಯ ಪ್ರಜೆಯೊಬ್ಬ ಮೃತಪಟ್ಟಿದ್ದು, ಕೊಲ್ಲಿ ಪ್ರದೇಶದಲ್ಲಿ ಒಟ್ಟು ಭಾರತೀಯ ಮೃತರ ಸಂಖ್ಯೆ ಆರಕ್ಕೆ ಏರಿದೆ. ಸಾವು ಹೇಗೆ ಸಂಭವಿಸಿದೆ ಎಂಬ ಮಾಹಿತಿ ಇನ್ನೂ ಅಸ್ಪಷ್ಟವಾಗಿವೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಮಾರ್ಚ್ 18 ರಂದು ನಡೆದ ಇತ್ತೀಚಿನ ಘಟನೆಗಳಿಂದಾಗಿ ರಿಯಾದ್‌ನಲ್ಲಿ ಭಾರತೀಯ ಪ್ರಜೆಯೊಬ್ಬರ ದುರಂತ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಮೃತರ ಕುಟುಂಬ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಹೇಳಿದೆ. ಈ ವಿಷಯದಲ್ಲಿ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡಲು ನಾವು ಬದ್ಧರಾಗಿದ್ದೇವೆ ಎಂದು ಪೋಸ್ಟ್ ಸೇರಿಸಲಾಗಿದೆ. ಅಂತರ ಸಚಿವಾಲಯದವನ್ನುದ್ದೇಶಿಸಿ ಮಾತನಾಡಿದ ಎಂಇಎಯ ಹೆಚ್ಚುವರಿ ಕಾರ್ಯದರ್ಶಿ (ಗಲ್ಫ್) ಅಸೀಮ್ ಆರ್. ಮಹಾಜನ್, ನಾಪತ್ತೆಯಾದ ವ್ಯಕ್ತಿಯನ್ನು ಪತ್ತೆಹಚ್ಚಲು ಮತ್ತು ಮೃತರನ್ನು ಭಾರತಕ್ಕೆ ಮರಳಿಸಲು ಅನೇಕ ದೇಶಗಳಲ್ಲಿನ ಭಾರತೀಯ ರಾಯಭಾರ ಕಚೇರಿಗಳು ಅಧಿಕಾರಿಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ದುರದೃಷ್ಟವಶಾತ್ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದಾರೆ. ಸೌದಿ ಅರೇಬಿಯಾ, ಒಮಾನ್, ಇರಾಕ್ ಮತ್ತು ಯುಎಇಯಲ್ಲಿರುವ ನಮ್ಮ ನಿಯೋಗಗಳು ನಾಪತ್ತೆಯಾದ ಭಾರತೀಯ ಪ್ರಜೆಗೆ ಸಂಬಂಧಿಸಿದಂತೆ ಮತ್ತು ಮೃತ ಭಾರತೀಯ ಪ್ರಜೆಗಳ ಪಾರ್ಥಿವ ಶರೀರವನ್ನು ಶೀಘ್ರವಾಗಿ ಭಾರತಕ್ಕೆ ಮರಳಿಸಲು ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿವೆ ಎಂದು ಮಹಾಜನ್ ಹೇಳಿದರು.

ಕಿರುಸುದ್ದಿ

ಲಿಪುಲೇಖ್ ಮೂಲಕ ವ್ಯಾಪಾರ ಪುನರಾರಂಭ

ಹೊಸದಿಲ್ಲಿ: ಮಹತ್ವದ ರಾಜತಾಂತ್ರಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ, ಉತ್ತರಾಖಂಡದ ಪಿಥೌರಾಗಢ್ ಜಿಲ್ಲೆಯ ಲಿಪುಲೇಖ್ ಪಾಸ್ ಮೂಲಕ ಭಾರತ ಮತ್ತು ಚೀನಾ ನಡುವಿನ ಐತಿಹಾಸಿಕ ಗಡಿಯಾಚೆಗಿನ ವ್ಯಾಪಾರವು ಈ ಜೂನ್‌ನಲ್ಲಿ ಪುನರಾರಂಭಗೊಳ್ಳಲಿದೆ. 2025ರ ಆಗಸ್ಟ್‌ನಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ಚೀನಾದ ವಿದೇಶಾಂಗ ಸಚಿವ ಯಿ ನಡುವಿನ ಉನ್ನತ ಮಟ್ಟದ ರಾಜತಾಂತ್ರಿಕ ಮಾತುಕತೆಯ ನಂತರ, ಹಿಮಾಚಲ ಪ್ರದೇಶದ ಶಿಪ್ಕಿ ಲಾ ಮತ್ತು ಸಿಕ್ಕಿಂನ ನಾಥು ಲಾ ಸೇರಿದಂತೆ ಹಿಮಾಲಯದ ಪ್ರಮುಖ ವ್ಯಾಪಾರ ಮಾರ್ಗಗಳನ್ನು ಮತ್ತೆ ತೆರೆಯಲು ಎರಡೂ ರಾಷ್ಟ್ರಗಳು ಒಪ್ಪಿಕೊಂಡವು.

ಅಮೆರಿಕ ಯುದ್ಧ ವಿಮಾನ ನಿಲ್ಲಿಸಲು ಶ್ರೀಲಂಕಾ ಅಸಮ್ಮತಿ

ಕೊಲಂಬೊ: ಅಮೆರಿಕದ ತನ್ನ ಎರಡು ಯುದ್ಧ ವಿಮಾನಗಳನ್ನು ಮಟ್ಟಾಲ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಲ್ಲಿಸಲು ಅನುಮತಿ ನಿರಾಕರಿಸುವ ಮೂಲಕ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ತಟಸ್ಥ ನೀತಿ ದೋರಣೆಯನ್ನು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ದೃಢಪಡಿಸಿದ್ದಾರೆ.

300 ಬೆಟ್ಟಿಂಗ್ ಆ್ಯಪ್‌ಗೆ ಕೇಂದ್ರ ಸರ್ಕಾರ ನಿರ್ಬಂಧ

ಹೊಸದಿಲ್ಲಿ: ಕೇಂದ್ರ ಸರ್ಕಾರ ಅಕ್ರಮ ಬೆಟ್ಟಿಂಗ್ ಮೇಲೆ ಕಠಿಣ ಕ್ರಮ ಕೈಗೊಂಡಿದ್ದು, 300 ವೆಬ್‌ಸೈಟ್‌ಗಳು ಮತ್ತು ಆನ್‌ಲೈನ್ ಬೆಟ್ಟಿಂಗ್ ಅಪ್ಲಿಕೇಶನ್‌ಗಳನ್ನು ನಿರ್ಬಂಧಿಸಿದೆ. ಆನ್‌ಲೈನ್ ಕ್ರೀಡಾ ಬೆಟ್ಟಿಂಗ್, ಕ್ಯಾಸಿನೊ-ರೂಪದ ಗೇಮಿಂಗ್ ಮತ್ತು ಪೀರ್-ಟು-ಪೀರ್ ಬೆಟ್ಟಿಂಗ್, ಓಲ್ಡ್ ಸ್ಕೂಲ್ ಸತ್ತಾ ಆ್ಯಂಡ್ ಮಟ್ಕಾ ನೆಟ್‌ವರ್ಕ್, ಕ್ಯಾಸಿನೋ ಆ್ಯಪ್ ಸೇರಿದಂತೆ ವಿವಿಧ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ. ಆನ್‌ಲೈನ್ ಗೇಮಿಂಗ್ ಕಾಯ್ದೆಯ ಅಂಗೀಕಾರದ ನಂತರ ಕಾನೂನುಬಾಹಿರ ಚಟುವಟಿಕೆಗಳಿಗಾಗಿ ನಿರ್ಬಂಧಿಸಲಾದ ವೆಬ್‌ಸೈಟ್‌ಗಳು ಅಥವಾ ಅಪ್ಲಿಕೇಶನ್‌ಗಳ ಸಂಖ್ಯೆ 8,400 ಕ್ಕೆ ಏರಿದೆ. ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ, 2025 ಅನ್ನು 2025ರ ಆಗಸ್ಟ್ 21ರಂದು ಸಂಸತ್ತು ಅಂಗೀಕರಿಸಿತು. ಗೇಮಿಂಗ್ ಆಕ್ಟ್ ಎಲ್ಲಾ ರೀತಿಯ ಆನ್‌ಲೈನ್ ಮನಿ ಗೇಮ್‌ಗಳನ್ನು ಸಮಗ್ರವಾಗಿ ನಿಷೇಧಿಸುತ್ತದೆ. ಇದು ಕೌಶಲ್ಯದ ಆಟಗಳಾಗಿರಬಹುದು ಅಥವಾ ಯಾವುದೇ ಸಂಯೋಜನೆಯಾಗಿರಬಹುದು. ಇದು ಅಂತಹ ಆಟಗಳ ಜಾಹೀರಾತು, ಪ್ರಚಾರ ಮತ್ತು ಸೌಲಭ್ಯವನ್ನು ನಿಷೇಧಿಸುತ್ತದೆ. ಜತೆಗೆ ಬ್ಯಾಂಕುಗಳು ಅಥವಾ ಪಾವತಿ ವ್ಯವಸ್ಥೆಗಳ ಮೂಲಕ ಸಂಬಂಧಿತ ಹಣಕಾಸು ವಹಿವಾಟುಗಳ ಪ್ರಕ್ರಿಯೆಯನ್ನು ನಿಷೇಧಿಸುತ್ತದೆ. ಈ ಅಂಗೀಕಾರ ಡಿಜಿಟಲ್ ಗೇಮಿಂಗ್ ಮತ್ತು ಬೆಟ್ಟಿಂಗ್ ಚಟುವಟಿಕೆಗಳನ್ನು ನಿಯಂತ್ರಿಸಲು ಕಾನೂನು ಚೌಕಟ್ಟನ್ನು ಬಲಪಡಿಸಿತು. ಈ ವರ್ಷದ ಜನವರಿಯ ಆರಂಭದಲ್ಲಿ ಕೇಂದ್ರ ಸರ್ಕಾರವು 242 ಅಕ್ರಮ ಬೆಟ್ಟಿಂಗ್ ಮತ್ತು ಜೂಜಾಟ ವೆಬ್‌ಸೈಟ್ ಲಿಂಕ್‌ಗಳನ್ನು ನಿರ್ಬಂಧಿಸಿತ್ತು.

ಕೆನಡಾದಲ್ಲಿ ಭಾರತ ಗುಪ್ತ ಚಟುವಟಿಕೆ ನಡೆಸುತ್ತಿಲ್ಲ

ಒಟ್ಟಾವಾ: ಕೆನಡಾದಲ್ಲಿ ಭಾರತ ಸರ್ಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಗುಪ್ತ ಕಾರ್ಯಾಚರಣೆಗಳಾಗಲಿ, ದಮನಕಾರಿ ಚಟುವಟಿಕೆಗಳು ಈಗ ನಡೆಯುತ್ತಿಲ್ಲ ಎಂದು ಕೆನಡಾ ಪೊಲೀಸ್ ಮುಖ್ಯಸ್ಥರು ಹೇಳಿದ್ದಾರೆ. ರಾಯಲ್ ಕೆನೇಡಿಯನ್ ಮೌಂಟೆಡ್ ಪೊಲೀಸ್ ಆಯುಕ್ತ ಮೈಕ್ ಡುಹೆಮ್ ಸಿಟಿವಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಸ್ಪಷ್ಟನೆ ನೀಡಿದ್ದಾರೆ. ಭಾರತ ಪರ ಏಜೆಂಟ್‌ಗಳು ಕೆನಡಾದಲ್ಲಿರುವವರ ಮೇಲೆ ಒತ್ತಡ ಹೇರುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈಗಿನ ತನಿಖಾ ದಾಖಲೆಗಳಲ್ಲಿ ಯಾವುದೇ ವಿದೇಶಿ ರಾಷ್ಟ್ರದ ನೇರ ಸಂಪರ್ಕವನ್ನು ಸ್ಥಾಪಿಸಲು ಸಾಕ್ಷ್ಯ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

ಬೆದರಿಕೆ, ಕಿರುಕುಳ, ಒತ್ತಡದಂತಹ ಕೆಲವು ಪ್ರತ್ಯೇಕ ಘಟನೆಗಳು ದಾಖಲಾಗಿದ್ದರೂ, ಅವುಗಳನ್ನು ಭಾರತ ಅಥವಾ ಇತರ ಯಾವುದೇ ವಿದೇಶಿ ಸರ್ಕಾರದೊಂದಿಗೆ ನೇರವಾಗಿ ಕೊಂಡಿ ಹಾಕಲು ತನಿಖಾಧಿಕಾರಿಗಳ ಬಳಿ ಸಮರ್ಪಕ ಆಧಾರ ಇಲ್ಲ ಎಂದಿದ್ದಾರೆ. ಹೀಗಾಗಿ, ಈ ಹೇಳಿಕೆಯಿಂದಾಗಿ ಭಾರತ-ಕೆನಡಾ ನಡುವಿನ ಕಳೆದ ಕೆಲ ತಿಂಗಳ ರಾಜತಾಂತ್ರಿಕ ಉದ್ವಿಗ್ನತೆಗೆ ಹೊಸ ತಿರುವು ನೀಡಿದಂತಾಗಿದೆ.

2023ರಲ್ಲಿ ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತೀಯ ಸಂಪರ್ಕ ಇರಬಹುದು ಎಂದು ಆಗಿನ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೋ ಆರೋಪಿಸಿದ್ದರು. ಭಾರತವು ಅದನ್ನು ಅಂದೇ ತೀವ್ರವಾಗಿ ತಳ್ಳಿ ಹಾಕಿತ್ತು. ಇದಾದ ಮೇಲೆ ಉಭಯ ದೇಶಗಳ ರಾಜತಾಂತ್ರಿಕ ಸಂಬಂಧ ಹಾಳಾಗಿತ್ತು. ಸದ್ಯ ಕೆನಡಾದಲ್ಲಿನ ಕಾರ್ನಿ ಸರ್ಕಾರ, ಭಾರತದ ಜತೆ ಉತ್ತಮ ಸಂಬಂಧ ಏರ್ಪಡಿಸಿಕೊಳ್ಳಲು ಮುಂದಾಗಿದ್ದು, ಇತ್ತೀಚೆಗಷ್ಟೇ ಭೇಟಿಯನ್ನೂ ನೀಡಿದ್ದರು.

ಆಫ್ಘಾನ್‌ಗೆ ಭಾರತದಿಂದ ವೈದ್ಯಕೀಯ ನೆರವು

ಹೊಸದಿಲ್ಲಿ: ಮಾರ್ಚ್ 16ರ ದಾಳಿಯಲ್ಲಿ ಗಾಯಗೊಂಡ ಜನರ ಚಿಕಿತ್ಸೆಗೆ ಸಹಾಯ ಮಾಡುವ ನಿಟ್ಟಿನಲ್ಲಿ ಭಾರತವು 2.50 ಟನ್ ತುರ್ತು ವೈದ್ಯಕೀಯ ಸರಬರಾಜುಗಳನ್ನು ಆಫ್ಗಾನಿಸ್ತಾನಕ್ಕೆ ಕಳುಹಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪಾಕಿಸ್ತಾನದ ದಾಳಿಯಲ್ಲಿ ಅಫ್ಘಾನ್‌ನ ಅನೇಕ ಜನರು ಮೃತಪಟ್ಟಿದ್ದು, ಹಲವಾರು ಜನರು ಗಾಯಗೊಂಡಿದ್ದರು.



ನಗರದಲ್ಲಿ ತುರ್ತು ವೈದ್ಯಕೀಯ ಅಗತ್ಯಗಳನ್ನು ಅನಿವಾರ್ಯತೆಗಾಗಿ ಈ ಮಾನವೀಯ ನೆರವು ಕಳುಹಿಸಲಾಗಿದೆ. ಈ ರವಾನೆಯು ತುರ್ತು ಔಷಧಿಗಳು, ವೈದ್ಯಕೀಯ ವಸ್ತುಗಳು, ಕಿಟ್‌ಗಳು ಮತ್ತು ಉಪಕರಣಗಳನ್ನು ಒಳಗೊಂಡಿದ್ದು, ತಕ್ಷಣದ ಚಿಕಿತ್ಸೆ ಮತ್ತು ಚೇತರಿಕೆಯ ಪ್ರಯತ್ನಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ ಎಂದು ಎಂಇಎ ಹೇಳಿದೆ. ಭಾರತವು ಅಫ್ಘಾನ್ ಜನರೊಂದಿಗೆ ಒಗ್ಗಟ್ಟಿನಿಂದ ನಿಲ್ಲುತ್ತದೆ ಮತ್ತು ಈ ಕಷ್ಟದ ಸಮಯದಲ್ಲಿ ಸಾಧ್ಯವಿರುವ ಎಲ್ಲಾ ಮಾನವೀಯ ಬೆಂಬಲವನ್ನು ನೀಡುವುದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು. ಮಾರ್ಚ್ 16ರಂದು, ಕಾಬೂಲ್‌ನ ಆಸ್ಪತ್ರೆಯ ಮೇಲೆ ಪಾಕಿಸ್ತಾನದ ವಾಯುದಾಳಿಯಲ್ಲಿ ಕನಿಷ್ಠ 400 ಜನರು ಮೃತಪಟ್ಟಿದ್ದು, ಸುಮಾರು 250 ಜನರು ಗಾಯಗೊಂಡಿದ್ದರು.

ಅಮೋಘ್ ಜ್ವಾಲಾ ಸಮರಾಭ್ಯಾಸ ಯಶಸ್ವಿ

ಹೊಸದಿಲ್ಲಿ: ಭಾರತೀಯ ಸೇನೆಯ ದಕ್ಷಿಣ ಕಮಾಂಡ್, ಭವಿಷ್ಯದ ಯುದ್ಧ ತಂತ್ರಗಳನ್ನು ಪ್ರದರ್ಶಿಸುವ, ಸಾಂಪ್ರದಾಯಿಕ ಯುದ್ಧ ತಂತ್ರಗಳೊಂದಿಗೆ ತಂತ್ರಜ್ಞಾನ ಸಂಯೋಜಿಸುವ, 'ಅಮೋಘ್ ಜ್ವಾಲಾ' ಎಂಬ ಮಹತ್ವದ ಯುದ್ಧ ಸಮರಾಭ್ಯಸವನ್ನು ಮುಕ್ತಾಯಗೊಳಿಸಿತು. ಮಾರ್ಚ್ 6ರಿಂದ 18ರವರೆಗೆ ಬಬಿನಾ ಫೀಲ್ಡ್ ಫೈರಿಂಗ್ ಶ್ರೇಣಿಗಳಲ್ಲಿ ಅಮೋಘ್ ಜ್ವಾಲಾ ನಡೆಯಿತು. ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್, ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್, ದಕ್ಷಿಣ ಕಮಾಂಡ್, ಪಡೆಗಳನ್ನು ಅವರ ಸನ್ನದ್ಧತೆಗಾಗಿ ಶ್ಲಾಘಿಸಿದರು. ಆಧುನಿಕ ಯುದ್ಧವು ಭೂ ಕದನಗಳನ್ನು ಮೀರಿ, ವಾಯು, ಸೈಬರ್ ಮತ್ತು ಬಾಹ್ಯಾಕಾಶ ಕ್ಷೇತ್ರಗಳನ್ನು ಒಳಗೊಂಡಿದ್ದು, ಎಲ್ಲವೂ ನೈಜ ಸಮಯದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ಲೆಫ್ಟಿನೆಂಟ್ ಜನರಲ್ ಸೇಠ್ ಒತ್ತಿ ಹೇಳಿದರು. ವಿವಿಧ ಮಿಲಿಟರಿ ಶಸ್ತ್ರಾಸ್ತ್ರಗಳ ತಡೆರಹಿತ ಕಾರ್ಯಾಚರಣೆಯನ್ನು ಪರೀಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಟ್ಯಾಂಕ್‌ಗಳು ಮತ್ತು ಯಾಂತ್ರೀಕೃತ ಘಟಕಗಳು ದಾಳಿ ಹೆಲಿಕಾಪ್ಟರ್‌ಗಳು ಮತ್ತು ಫೈಟರ್ ಏರ್‌ಕ್ರಾಫ್ಟ್‌ಗಳೊಂದಿಗೆ ಸಮನ್ವಯಗೊಂಡವು, ಆದರೆ ಡ್ರೋನ್‌ಗಳು ನೇರ ಕಣ್ಗಾವಲು ಮತ್ತು ತ್ವರಿತ ಗುರಿಯನ್ನು ಗುರುತಿಸಿದವು.

11 ದಶಲಕ್ಷ ಡಾಲರ್ ಒಪ್ಪಂದ | ಬರಲಿದೆ ಇಸ್ರೇಲಿ ಎಐ-ಆಧಾರಿತ ಸ್ವದೇಶಿ ಡ್ರೋನ್

ದೇಸಿಡ್ರೋನ್ ಒಪ್ಪಂದಕ್ಕೆ ಭಾರತ-ಇಸ್ರೇಲ್ ಸಹಿ

ಹೊಸದಿಲ್ಲಿ: ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ನಡೆಸುತ್ತಿರುವ ಮಧ್ಯೆ, ಅಮೆರಿಕದಲ್ಲಿ ಉತ್ಪಾದನಾ ಘಟಕವಿರುವ ಇಸ್ರೇಲ್ ಕಂಪನಿಯ ಜತೆ ಭಾರತ ಎಐ-ಆಧಾರಿತ ಸ್ವದೇಶಿ ಡ್ರೋನ್ ಉತ್ಪಾದನೆಗಾಗಿ 11 ದಶಲಕ್ಷ ಡಾಲರ್ ಮೌಲ್ಯದ ಒಪ್ಪಂದ ಮಾಡಿಕೊಂಡಿದೆ. ಇಸ್ರೇಲ್‌ನ ಪ್ರಮುಖ ಎಐ-ಆಧಾರಿತ ರೋಬೋಟಿಕ್ಸ್ ಮತ್ತು ಸಾಫ್ಟ್‌ವೇರ್ ಕಂಪನಿ ಎಕ್ಸ್‌ಟೆಂಡ್ ಮೇಕ್ ಇನ್ ಇಂಡಿಯಾ ಅನ್ವಯದಲ್ಲಿ ಎಐ-ಆಧಾರಿತ ಮಾನವರಹಿತ ವಾಯುಯಾನ ವಾಹನ (ಯುಎವಿ)ಗಳನ್ನು ಉತ್ಪಾದಿಸಲಿದ್ದು, ಭಾರತದ ರಕ್ಷಣಾ ತಂತ್ರಜ್ಞಾನ ಕಂಪನಿ ರೇಯೋನಿಕ್ಸ್ ಟೆಕ್‌ನೊಂದಿಗೆ 11 ದಶಲಕ್ಷ ಡಾಲರ್ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

ರೇಯೋನಿಕ್ಸ್ ಟೆಕ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಎಕ್ಸ್‌ಟೆಂಡ್ ತನ್ನ ಎಐ-ಆಧಾರಿತ ಅಟೋನಮಿ ಪ್ಲ್ಯಾಟ್‌ಫಾರಂ ಎಕ್ಸ್‌ಒಎಸ್ ವ್ಯವಹಾರವನ್ನು ಭಾರತದ ಎಐ ಮಾರುಕಟ್ಟೆಗೆ ವಿಸ್ತರಿಸಿದೆ. ಒಪ್ಪಂದದ ಪ್ರಕಾರ, ಎಕ್ಸ್‌ಟೆಂಡ್ ಒಡೆತನದ ಎಕ್ಸ್‌ಒಎಸ್ ಆಪರೇಟಿಂಗ್ ಸಿಸ್ಟಂ ಮತ್ತು ತಂತ್ರಜ್ಞಾನದ ನೆರವಿನೊಂದಿಗೆ ಡ್ರೋನ್‌ಗಳ ಉತ್ಪಾದನೆ, ಪರೀಕ್ಷೆ ಮತ್ತು ಪೂರೈಕೆಯನ್ನು ರೇಯೋನಿಕ್ಸ್ ನಡೆಸಲಿದೆ. ಕಳೆದ ವರ್ಷ ಇಸ್ರೇಲ್ ಸೇನೆಗೆ 5,000 ಅಸಾಲ್ಟ್ ಡ್ರೋನ್‌ಗಳನ್ನು ಪೂರೈಕೆ ಮಾಡುವ ಒಪ್ಪಂದವನ್ನು ಎಕ್ಸ್‌ಟೆಂಡ್ ಪಡೆದುಕೊಂಡಿತ್ತು.



ಸ್ವದೇಶಿ ಡ್ರೋನ್‌ಗಳಿಗೆ ಇಸ್ರೇಲಿ ತಂತ್ರಜ್ಞಾನ: ಮೇಕ್ ಇನ್ ಇಂಡಿಯಾ ಅನ್ವಯದಲ್ಲಿ, ರೇಯೋನಿಕ್ಸ್ ನಿರ್ಮಾಣದ ಡ್ರೋನ್‌ಗಳಿಗೆ ಸಾಫ್ಟ್‌ವೇರ್ ಬೆನ್ನೆಲುಬಾಗಿ ಎಕ್ಸ್‌ಒಎಸ್ ಕೆಲಸ ಮಾಡಲಿದೆ. ಇಸ್ರೇಲಿ ಆಪರೇಟಿಂಗ್ ಸಿಸ್ಟಂ ಸಾಫ್ಟ್‌ವೇರ್ ಎಐ-ಆಧಾರಿತ ಕಣ್ಗಾವಲು, ಮಿಷನ್ ಯೋಜನೆ ಮತ್ತು ನೈಜ ಸಮಯದ ಕಾರ್ಯಾಚರಣೆ ನಿಯಂತ್ರಣದಲ್ಲಿ ನೆರವಾಗಲಿದೆ. ಈಗಾಗಲೇ ಎಕ್ಸ್‌ಟೆಂಡ್ ಕಂಪನಿಯ ಕೆಲವು ಉತ್ಪನ್ನಗಳ ಉತ್ಪಾದನೆ ಮತ್ತು ಪೂರೈಕೆ ಪಾಲುದಾರಿಕೆ ಮಾಡಿರುವ ರೇಯೋನಿಕ್ಸ್ ಹೊಸ ಒಪ್ಪಂದ ಮಾಡಿಕೊಂಡಿದೆ.

> **ಭಾರತವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗದಲ್ಲಿ ಪ್ರಗತಿ ಕಾಣುತ್ತಿರುವ ರಕ್ಷಣಾ ತಂತ್ರಜ್ಞಾನ ಮಾರುಕಟ್ಟೆಯಾಗಿದೆ. ಭಾರತೀಯ ರಕ್ಷಣಾ ಮಾರುಕಟ್ಟೆಯಲ್ಲಿ ಸ್ವದೇಶಿ ಉತ್ಪಾದನೆ ಮತ್ತು ಎಐ-ಆಧಾರಿತ ತಂತ್ರಜ್ಞಾನಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ.**
> ■ **ಅವೀವ್ ಶಪೀರ, ಎಕ್ಸ್‌ಟೆಂಡ್ ಸಿಇಒ ಮತ್ತು ಸಹ-ಸಂಸ್ಥಾಪಕ**

> **ಯುದ್ಧಗಳಲ್ಲಿ ಸಾಬೀತಾಗಿರುವ ಎಕ್ಸ್‌ಟೆಂಡ್‌ನ ಎಐ-ಆಧಾರಿತ ತಂತ್ರಜ್ಞಾನವನ್ನು ಭಾರತಕ್ಕೆ ಕರೆತರುವುದೇ ಈ ಒಪ್ಪಂದದ ಮುಖ್ಯ ಉದ್ದೇಶವಾಗಿದೆ. ಮೇಕ್ ಇನ್ ಇಂಡಿಯಾ ದೃಷ್ಟಿಕೋನದ ಮುಖೇನ ರಕ್ಷಣಾ ಕ್ಷೇತ್ರದಲ್ಲಿನ ಆತ್ಮನಿರ್ಭರ ಭಾರತದ ಕನಸು ನನಸಾಗಿಸಲು ಕೊಡುಗೆ ನೀಡಲಿದ್ದೇವೆ.**
> ■ **ಅಮಿತ್ ಪಾಂಡೆ, ರೇಯೋನಿಕ್ಸ್ ಎಂ.ಡಿ.**

ಧಾರ್ಮಿಕ ಭಾವನೆಗಳಿಗೆ ಜಾರ್ಖಂಡ್ ಸಿಎಂ ಧಕ್ಕೆ

ಸನಾತನಕ್ಕೆ ಅವಮಾನ ಬಿಜೆಪಿ ಕಿಡಿ

ಹೊಸದಿಲ್ಲಿ : ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೆನ್ ಅವರು ವಿಧಾನಸಭೆಯಲ್ಲಿ ಸನಾತನ ಧರ್ಮ ಹಾಗೂ ಹಿಂದೂ ದೇವತೆಗಳ ಬಗ್ಗೆ ಮಾಡಿದ ಎನ್ನಲಾದ ಹೇಳಿಕೆಗಳ ಹಿನ್ನೆಲೆಯಲ್ಲಿ ಬಿಜೆಪಿ ಶುಕ್ರವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.



ಬಿಜೆಪಿ ಆರೋಪಿಸಿದಂತೆ, ಸೋರೆನ್ ಅವರ ಹೇಳಿಕೆಗಳು ಧಾರ್ಮಿಕ ಭಾವನೆಗಳಿಗೆ ಧಕ್ಕೆಯುನ್ನುಂಟುಮಾಡುವಂತಿವೆ. ಜೊತೆಗೆ, ಇಂಡಿ ವಿರೋಧ ಪಕ್ಷಗಳ ಮೈತ್ರಿಯ ನಾಯಕರಿಗೆ ಹಿಂದೂ ದೇವತೆಗಳನ್ನು ಹಾಸ್ಯ ಮಾಡುವುದೂ, ಅವರ ಸಂಸ್ಕೃತಿಯನ್ನು ಹಿಗ್ಗಾಮುಗ್ಗಾ ಟೀಕಿಸುವುದೂ ಒಂದು ಫ್ಯಾಷನ್ ಆಗಿಬಿಟ್ಟಿದೆ ಎಂದು ಪಕ್ಷ ಟೀಕಿಸಿದೆ.

ವಿಡಿಯೋದಲ್ಲೇನಿದೆ?: ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಒಂದು ವಿಡಿಯೋದಲ್ಲಿ, ಸೋರೆನ್ ಅವರು ನಾವು ಸರಸ್ವತಿ ಪೂಜೆ ಹೆಚ್ಚು ಆಚರಿಸುತ್ತೇವೆ, ಆದರೆ ಅತ್ಯಂತ ಪ್ರತಿಭಾವಂತ ಮಕ್ಕಳು ಜಪಾನ್‌ನಲ್ಲಿ ಹುಟ್ಟುತ್ತಾರೆ. ನಾವು ಲಕ್ಷ್ಮೀ ಪೂಜೆ ಹೆಚ್ಚು ಮಾಡುತ್ತೇವೆ, ಆದರೆ ಶ್ರೀಮಂತರಾದವರು ಅಮೆರಿಕದಲ್ಲಿ ಹುಟ್ಟುತ್ತಾರೆ. ಇದರಲ್ಲಿ ಮೂಲಭೂತವಾಗಿ ಏನೋ ತಪ್ಪಿದೆ ಎಂದು ಹೇಳಿರುವುದು ಕೇಳಿಬಂದಿದೆ.

ಈ ವಿಡಿಯೋವನ್ನು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡ ಬಿಜೆಪಿ, ಸೋರೆನ್ ಅವರ ಹೇಳಿಕೆಯನ್ನು 'ಸನಾತನದ ಮೇಲೆ ದಾಳಿ ಮತ್ತು ಭಾರತದ ಅವಮಾನ' ಎಂದು ಬಣ್ಣಿಸಿದೆ.

'ಸನಾತನದ ಮೇಲೆ ದಾಳಿ ಎಂದರೆ ಭಾರತದ ಮೇಲೆ ದಾಳಿ. ಮತಬ್ಯಾಂಕ್ ರಾಜಕಾರಣಕ್ಕಾಗಿ ಸನಾತನ ಅನುಯಾಯಿಗಳ ನಂಬಿಕೆ ಮತ್ತು ಸಂಸ್ಕೃತಿಯನ್ನು ಗುರಿಯಾಗಿಸುವುದು ಹೇಮಂತ್ ಸೋರೆನ್ ಹಾಗೂ ಇಂಡಿ ಮೈತ್ರಿ ನಾಯಕರ ಅಭ್ಯಾಸವಾಗಿದೆ. ದೇವತೆಗಳನ್ನು ಹಾಸ್ಯ ಮಾಡುವುದು, ಆಚರಣೆಗಳನ್ನು ಟೀಕಿಸುವುದು ಈಗ ಅವರಿಗೆ ಸಾಮಾನ್ಯವಾಗಿದೆ. ದೇಶದ ಜನರು ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ನೀಡುತ್ತಾರೆ,' ಎಂದು ಬಿಜೆಪಿ ಹೇಳಿದೆ.

ಸಂಪಾದಕೀಯ

ಬಿಗಡಾಯಿಸುತ್ತಿರುವ ತೈಲ ಬಿಕ್ಕಟ್ಟು

ಇರಾನ್- ಇಸ್ರೇಲ್- ಅಮೆರಿಕ ನಡುವಿನ ಸಮರವು ಮೂರನೇ ವಾರಕ್ಕೆ ಕಾಲಿಟ್ಟಿರುವಂತೆಯೆ ಜಾಗತಿಕ ತೈಲ ಬಿಕ್ಕಟ್ಟು ಮತ್ತು ಅಡುಗೆ ಅನಿಲ ಪೂರೈಕೆಯ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳುವ ಸಂಕೇತಗಳು ಕಾಣುತ್ತಿವೆಯೆ ಹೊರತು ಶಮನಗೊಳ್ಳುವಂತೆ ತೋರುತ್ತಿಲ್ಲ. ಇದೀಗ ತೈಲ ನಿಕ್ಷೇಪಗಳ ಮೇಲೆ, ತೈಲ ಸಂಗ್ರಹಾಗಾರಗಳ ಮೇಲೆ ಕೂಡಾ ಕ್ಷಿಪಣಿ ದಾಳಿ ನಡೆಯುತ್ತಿರುವುದರಿಂದಾಗಿ ತೈಲ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸುತ್ತಿರುವಂತೆ ಕಾಣುತ್ತಿದೆ.



ಇರಾನಿನ ದಕ್ಷಿಣ ಪಾರ್ಸ್ ಗ್ಯಾಸ್ ಫೀಲ್ಡ್ ಮೇಲೆ ಇಸ್ರೇಲ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಇರಾನ್ ಕೂಡಾ ಕುವೈತ್, ಕತಾರ್, ಬಹರೇನ್, ಅಬುದಾಬಿ ತೈಲ ನಿಕ್ಷೇಪಗಳ ಮೇಲೆ, ತೈಲ ಸಂಗ್ರಹಾಗಾರಗಳ ಮೇಲೆ ನಿರಂತರ ದಾಳಿ ನಡೆಸಲಾರಂಭಿಸಿದೆ. ಈ ಗ್ಯಾಸ್ ಫೀಲ್ಡ್ ಇರಾನಿನ ಪಾಲಿಗೆ ಜೀವನಾಡಿಯಂತಿದ್ದು, ವಿದ್ಯುತ್ ಉತ್ಪಾದನೆಗೆ, ಆಂತರಿಕ ಬಳಕೆಗೆ ಅತಿ ಮುಖ್ಯವಾಗಿದೆ. ಅದರ ಮೇಲೆ ನಡೆದ ದಾಳಿಗೆ ಇರಾನ್ ಪ್ರತೀಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಕೊಲ್ಲಿಯಲ್ಲಿ ಸಮರ ಆರಂಭವಾದಾಗಿನಿಂದ ಜಾಗತಿಕ ತೈಲ ಬೆಲೆ ಏರುತ್ತಾ ಬಂದಿದ್ದು ಈಗಂತೂ ಶೇ. 47ರಷ್ಟು ಏರಿಕೆ ಕಂಡಿದೆ ಎಂಬುದಾಗಿ ಮಾರುಕಟ್ಟೆ ಮೂಲಗಳು ಹೇಳುತ್ತಿವೆ. ಪ್ರತಿ ಬ್ಯಾರೆಲ್‌ಗೆ ತೈಲ ಬೆಲೆಯು 120 ಡಾಲರ್‌ಗೂ ಮೀರಬಹುದೆಂದು ಭೀತಿ ಪಡಲಾಗಿದ್ದು ಹಾಗಾದಲ್ಲಿ ಇದು ಜಾಗತಿಕವಾಗಿ ತೈಲ ಬೆಲೆಯನ್ನು ಗಗನಕ್ಕೇರಿಸಲಿದೆ.

ಭಾರತವು ಪೆಟ್ರೋಲ್, ಡೀಸೆಲ್ ಪೂರೈಕೆಯಲ್ಲಿ ಸದ್ಯಕ್ಕೆ ದೊಡ್ಡ ಪ್ರಮಾಣದ ಬಿಕ್ಕಟ್ಟು ಎದುರಿಸದಿದ್ದರೂ ಕೊಲ್ಲಿ ಸಮರವು ದೀರ್ಘಾವಧಿಗೆ ಎಳೆಯಲ್ಪಟ್ಟಲ್ಲಿ ತಾನೂ ಬಿಕ್ಕಟ್ಟು ಎದುರಿಸಬೇಕಾದೀತು. ಈಗಾಗಲೆ ಅಡುಗೆ ಅನಿಲದ ಸಮಸ್ಯೆಯು ದೇಶವನ್ನು ಗಂಭೀರವಾಗಿ ಕಾಡತೊಡಗಿದೆ. ಇದರ ಜತೆಗೇ ಪೆಟ್ರೋಲಿಯಂ ತೈಲಗಳ ಬೆಲೆ ಏರಿಕೆಯು ಸಹಜವಾಗಿಯೇ ಇನ್ನಿತರ ವಸ್ತುಗಳ ಬೆಲೆಯೇರಿಕೆಗೆ ಕಾರಣವಾಗಿ ದೇಶದ ಆರ್ಥಿಕತೆಯ ಮೇಲೆಯೇ ಪ್ರತಿಕೂಲ ಪರಿಣಾಮ ಬೀರಬಹುದು. ಇದರಿಂದಾಗಿ ದೇಶದ ಆರ್ಥಿಕ ಪ್ರಗತಿಯ ದರವು ಕುಂಠಿತವಾಗಬಹುದು. ಭಾರತವು ತನ್ನ ಕಚ್ಚಾ ತೈಲದ ಶೇ. 85ರಷ್ಟನ್ನು ಕೊಲ್ಲಿ ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿರುವುದರಿಂದ ಹಾಗೂ ಹೊರ್ಮುಜ್ ಜಲಸಂಧಿ ಇನ್ನೂ ಮುಕ್ತವಾಗದಿರುವುದರಿಂದ ಸಮರವು ಮುಂದುವರಿದಷ್ಟೂ ಭಾರತಕ್ಕೆ ಹಾನಿ ಹೆಚ್ಚಾದೀತು. ಭಾರತ ಸರಕಾರವು ದೇಶದಲ್ಲಿ ತೈಲ ಪೂರೈಕೆ ಮತ್ತು ಅಡುಗೆ ಅನಿಲ ಪೂರೈಕೆ ಅಭಾದಿತವಾಗಿರಲು ಸರ್ವಪ್ರಯತ್ನಗಳನ್ನು ಮಾಡುತ್ತಿದೆಯಾದರೂ, ಸಂಭವನೀಯ ಬಿಕ್ಕಟ್ಟಿನ ಪ್ರಮಾಣ ಕಡಿಮೆ ಮಾಡುವಲ್ಲಿ ನಾಗರಿಕರ ಪಾತ್ರವೂ ಮಹತ್ವದ್ದಾಗಿದೆ. ಇಂಧನದ ಮಿತಬಳಕೆಯತ್ತ ಮತ್ತು ಪರ್ಯಾಯ ಇಂಧನ ಬಳಸುವತ್ತ ಜನರು ಕೂಡಾ ಗಮನ ಹರಿಸಬೇಕಾಗಿದೆ.

ನೀವು ವಿನಾ ಕಾರಣ ಮಾತನಾಡುತ್ತೀರಾ?

ಮಾತನಾಡುವ ಕಲೆ ನಿಮ್ಮದಾದರೆ ನೀವು ಹೇಳಿದ ಭಾವನೆಗಳನ್ನೇ ಕೇಳುಗರು ಸಹಾ ಅರ್ಥ ಮಾಡಿಕೊಳ್ಳುವುದನ್ನು ನೀವು ಕಾಣುತ್ತೀರಿ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಹೌದು, ಎಲ್ಲರೂ ವಿನಾ ಕಾರಣ ಮಾತನಾಡುವುದು ಸಾಮಾನ್ಯ. ಅದರಿಂದ ಯಾವುದೇ ಪರಿಣಾಮ ಆಗುವುದಿಲ್ಲ ಎಂದು ಎಲ್ಲರೂ ಅಂದುಕೊಂಡಿದ್ದಾರೆ. ಅತಿಯಾಗಿ ಮಾತನಾಡುವುದರಿಂದ, ಅನವಶ್ಯವಾಗಿ ಮಾತನಾಡುವುದರಿಂದ, ವಿನಾ ಕಾರಣ ಮಾತನಾಡುವುದರಿಂದ ಎಲ್ಲರಿಗೂ ಕಿರಿಕಿರಿ, ಬೇಸರ, ನೋವು, ಅವಮಾನ ಹೀಗೆ ಏನೆಲ್ಲಾ ಆಗುತ್ತದೆ. ಕೆಲವರು ಅದನ್ನು ವ್ಯಕ್ತಪಡಿಸುತ್ತಾರೆ. ಕೆಲವರು ಮನದಲ್ಲೇ ಇಟ್ಟುಕೊಂಡು ನೋವನ್ನು ಅನುಭವಿಸುತ್ತಾರೆ.

ಅತಿಯಾದ ಮಾತು ನಿಮ್ಮ ಸಂಬಂಧವನ್ನು ಒಡೆಯುತ್ತದೆ. ಹಾಗೂ ದ್ವೇಷವನ್ನು ಹುಟ್ಟುಹಾಕುತ್ತದೆ. ಮಾತಿನ ತೂಕ ತಪ್ಪಿ ಗೌರವ ಹಾಳಾಗುತ್ತದೆ. ಇತರರ ದೃಷ್ಟಿಯಲ್ಲಿ ನೀವು ಹೀನರಾಗುತ್ತೀರಿ. ಜಗಳಗಳು ಸೃಷ್ಟಿಯಾಗುತ್ತವೆ. ಅನಗತ್ಯ ವಾದಗಳು, ಪರಸ್ಪರ ಅವಹೇಳನ, ಸಮಸ್ಯೆಗಳು ಉಂಟಾಗುತ್ತವೆ. ಕೆಲವೊಮ್ಮೆ ಬಾಯಿಚಪಲದಿಂದಾಗಿ ಅಮಾಯಕರಿಗೆ ತೊಂದರೆಯಾಗುತ್ತದೆ. ಮನೆಯವರಿಗೆ ಇರಿಸುಮುರುಸಾಗುತ್ತದೆ. ಅದರಲ್ಲೂ ಚಾಡಿಯಂತೂ ಇನ್ನೊಬ್ಬರ ಬಾಳನ್ನೇ ಹಾಳುಮಾಡಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬೇರೆಯವರಿಗೆ ಮಾತನಾಡಲೇ ಅವಕಾಶ ಕೊಡದಂತೆ ಮಾತನಾಡುವುದು ಗೀಳಾಗಿ ಪರಿವರ್ತನೆಯಾಗುತ್ತದೆ. ಸುಳ್ಳು ಮೊದಲಿಗೆ ಇನ್ನೊಬ್ಬರ ಬಾಳನ್ನು ಹಾಳುಮಾಡುತ್ತದೆ, ಬಳಿಕ ಅವರದೇ ಬಾಳನ್ನು ನುಂಗಿ ಹಾಕಿ ಬಿಡುತ್ತದೆ. ಹೀಗೆ ಮಾತಿನ ಸಮಸ್ಯೆಗಳು ಅಂದರೆ ಅತಿಯಾದ ಮಾತು, ಅನವಶ್ಯಕ ಮಾತು, ಚಾಡಿ ಹೇಳುವುದು, ಸುಳ್ಳು ಹೇಳುವುದು, ತುಂಬಾ ವಾದ ಮಾಡುವುದು, ಮಾತಿಗೆ ಮಾತು ಬೆಳೆಸುತ್ತಾ ಪರಸ್ಪರ ಹಳಿಯುವುದು, ಬೈಯುವುದು, ತೆಗಳುವುದು, ಕೆಟ್ಟ ಶಬ್ಧಗಳ ಬಳಕೆ ಮಾಡುವುದು. ಹೀಗೆ ಇವುಗಳಿಗೆಲ್ಲಾ ಕಾರಣ ವಿಶುದ್ಧ ಚಕ್ರದ ಅಸಮತೋಲನ.

ಮಾತನಾಡುವಾಗ ಉಗ್ಗುವುದು, ತಡೆತಡೆದು ಮಾತನಾಡುವುದು, ಸಂಕೋಚ ಪಡುವುದು, ಭಯ ಪಡುವುದು, ಗಂಟಲಿನಲ್ಲಿ ಕಿಚ್ ಕಿಚ್ ಆಗುವುದು, ಕೆಮ್ಮು ಬರುವುದು, ನಾಲಿಗೆ ಹಿಡಿದಂತೆ ಆಗುವುದು, ಮನಸ್ಸಿನಲ್ಲಿ ಒಂದು ಬಾಯಲ್ಲಿ ಇನ್ನೊಂದು ಬರುವುದು, ವಿರಾಮವೇ ಇಲ್ಲದೇ ಮಾತನಾಡುತ್ತಲೇ ಇರುವುದು, ಇನ್ನೊಬ್ಬರಿಗೆ ಮಾತನಾಡಲು ಬಿಡದೇ ಅವರನ್ನು ತಿವಿದು ತಿವಿದು ಮಾತನಾಡುವುದು ಇವೂ ಸಹಾ ವಿಶುದ್ಧ ಚಕ್ರದ ಅಸಮತೋಲನದ ಗುರುತುಗಳು. ಅದನ್ನು ನಿವಾರಿಸುವುದು, ಬಿಡುವುದು, ಸರಿಪಡಿಸುವುದು ಸುಲಭವಲ್ಲ. ಕೆಲವರಿಗೆ ಮಾತನಾಡುವ ಹುಚ್ಚೇ ಹಿಡಿದಿರುತ್ತದೆ. ಅವರಿಗೆ ಇನ್ನೊಬ್ಬರ ಮಾತೇ ಬೇಕಾಗಿಲ್ಲ. ಅಂತಹವರು ಜೀವನ ಪೂರ್ತಿ ಮಾತನಾಡುತ್ತಲೇ ಇರುತ್ತಾರೆ. ನಿಲ್ಲಿಸುವುದು ಒಂದೇ ಬಾರಿ!

ನಿಧಾನವಾಗಿ, ಸ್ಪಷ್ಟವಾಗಿ ಮಾತನಾಡುವುದು ಸರಿಪಡಿಸುವ ಮೊದಲ ಹೆಜ್ಜೆ. ನೀವು ಬಳಸುವ ಭಾಷೆ ನಾಗರಿಕ ಸಮಾಜ ಮೆಚ್ಚುವಂತೆ ಇರಬೇಕು. ಸ್ವರ ತೀರಾ ಚಿಕ್ಕದಾಗಿ ಅಲ್ಲದೇ, ಅತಿ ದೊಡ್ಡದಾಗಿ ಅಲ್ಲದೇ, ಮೃದುವಾಗಿ ಮತ್ತು ನೇರವಾಗಿ ಇರಬೇಕು. ನೀವು ಮೊದಮೊದಲು ಮಾತನಾಡಿದಾಗ ಎಲ್ಲರೂ ನಿಮ್ಮ ಮುಖವನ್ನೇ ನೋಡುತ್ತಿದ್ದಾರೆ ಎನ್ನಿಸಿತ್ತಾ?! ಆಗ ನಿಮಗೆ ಭಯ ಆತಂಕಗಳು ತಾನಾಗಿಯೇ ಬರುತ್ತವೆ. ಬಳಿಕ ನೀವು ಪ್ರಖ್ಯಾತರಾಗುತ್ತಾ ಹೋದಂತೆ, ನಿಮ್ಮ ಮಾತಿಗೆ ಬೆಲೆ ಸಿಕ್ಕಿತು. ಪರಿಣಾಮ ಗಂಟಲಿನ ಅಡಚಣೆಗಳು ಕಡಿಮೆಯಾಗುವುದು ಸಹಜ. ಎಷ್ಟೇ ಮಾತನಾಡಿದರು ಒಮ್ಮೆ ನಿಮಗೆ ಎಲ್ಲಾ ತರಹದ ಸಂಮಾನಗಳು ಸಿಕ್ಕಿದವು ಎಂದಾದರೆ ನಿಮ್ಮ ಮಾತೆಲ್ಲಾ ಮಾಣಿಕ್ಯ ಎನ್ನುವವರು ಇದ್ದಾರೆ.

ನೀವು ಪ್ರತಿಯೊಂದು ಕ್ರಿಯೆಗೂ, ಮಾತಿಗೂ, ಪ್ರಶ್ನೆಗೂ, ಉತ್ತರವನ್ನು ಮಾತಿನಲ್ಲೇ ಕೊಡಬೇಕೆಂದು ಎಂದವರು ಯಾರು. ನಿಮ್ಮ ಬಾಯಿಗಿಂತಲೂ ಪ್ರಬಲ ವಾದ ಕಣ್ಣುಗಳಿವೆ. ದೇಹಭಾಷೆಯನ್ನು ವ್ಯಕ್ತಪಡಿಸುವ ಕೈಗಳಿವೆ. ಮುಖವಿದೆ. ಇವುಗಳೂ ಸಹಾ ಮಾತನಾಡುತ್ತವೆ! ಪ್ರತಿಕ್ರಿಯೆಯನ್ನು ನೀಡುತ್ತವೆ!! ಭಾವನೆಗಳನ್ನು ವ್ಯಕ್ತ ಪಡಿಸಬಲ್ಲವು. ನೀವು ಪ್ರಯತ್ನ ಮಾಡಬೇಕು ಅಷ್ಟೇ!

ನೀವು ಮಾತನಾಡುವುದೇ ಆದರೆ ನಿಮ್ಮ ಸ್ವರ ಸ್ಪಷ್ಟವಾಗಿರಲಿ. ಭಾಷೆ ಯಾವುದೇ ಆದರೂ ನಿಮಗೆ ಗೊತ್ತಿರಲಿ. ಸಣ್ಣ ವಾಕ್ಯಗಳನ್ನು ಮಾಡಿ. ಅಂದರೆ ಕಡಿಮೆ ಪದಗಳಿಂದ ಕೂಡಿದ ವಾಕ್ಯಗಳನ್ನು ರಚನೆ ಮಾಡಿ ಮಾತನಾಡಿ. ಒಂದು ಸಂಗತಿ ಮುಗಿಯುವುದರ ಒಳಗೆ ಮತ್ತೊಂದು ಹೇಳಬೇಡಿ. ಕ್ರಮಬದ್ಧವಾಗಿ ಒಂದರ ನಂತರ ಇನ್ನೊಂದು ಸಂಗತಿಗಳನ್ನು ಹೇಳಿ. ಎಲ್ಲವನ್ನೂ ಒಟ್ಟಿಗೇ ಒದರಬೇಡಿ. ಹೀಗೆ ಹೇಳಲು ಪೂರ್ವ ತಯಾರಿ ಬೇಕೇಬೇಕು. ನಿಮ್ಮ ಮಾತುಗಳು ಹೆಚ್ಚು ಹೊತ್ತು ಇದ್ದರೆ ಕೇಳುಗರಿಗೆ ಬೇಸರ ಬರಬಹುದು. ಅದಕ್ಕಾಗಿ ಮಧ್ಯೆ ವಿಷಯಕ್ಕೆ ಪೂರಕವಾದ ಒಂದು ಆಟ ಆಡಿಸಿ. ಅಥವಾ ಕತೆ ಹೇಳಿ. ತಮಾಷೆ ಮಾಡಿ. ಆಡುವ ಮಾತುಗಳಲ್ಲಿ ಭಾವನೆಗಳಿಗೆ ತಕ್ಕಂತಹಾ ಏರಿಳಿತಗಳು ಇರಲಿ. ರಸಗಳು ತುಂಬಿರಲಿ. ನೀವು ಆಡುವ ಮಾತಿನ ಸತ್ಯ ಮತ್ತು ನಿಮ್ಮ ದೇಹ ಭಾಷೆ ಒಂದಕ್ಕೊಂದು ಪೂರಕವಾಗಿರಲಿ. ಮಾತನಾಡುವಾಗ ನಿಮ್ಮ ಮುಖದಲ್ಲಿ ಒಂದು ಸಣ್ಣ ಕಿರುನಗು ಇದ್ದರೆ ನೀವು ಆತ್ಮವಿಶ್ವಾಸದಿಂದ ಮಾತನಾಡಲು ಸಾಧ್ಯ ಎಂದು ಒಬ್ಬ ಶಿಷ್ಯನಲ್ಲಿ ಹೇಳಿದ್ದೆ. ಒಬ್ಬ ಗೆಳೆಯನ ತಂದೆ ತೀರಿಹೋಗಿದ್ದರು. ಅವರನ್ನು ಮಾತನಾಡಿಸಲು ಹೋಗಿದ್ದೆವು. ಈ ನನ್ನ ಶಿಷ್ಯ ಬಾಯಿ ತುಂಬಾ ನಗುತ್ತಾ ''ನಿಮ್ಮ ತಂದೆ ತೀರಿ ಹೋಗಿರುವುದು ಎಲ್ಲರಿಗೂ ತುಂಬಾ ದುಃಖದ ಸಂಗತಿ ಎಂದು ಪ್ರಾರಂಭಿಸಿದರು. ಅವರ ಮಕ್ಕಳಾದ ನೀವು ಅವರ ದಾರಿಯಲ್ಲೇ ನಡೆಯಿರಿ ಎಂದು ಹೇಳಿದರು'' ಪಕ್ಕದಲ್ಲಿದ್ದ ನನಗೆ ಏನಪ್ಪಾ ಹೀಗೆಲ್ಲಾ ಮಾತನಾಡುತ್ತಿದ್ದಾನೆ ಎಂದುಕೊಳ್ಳುತ್ತಿರುವಂತೆ ನನ್ನ ಕಡೆಯೇ ತಿರುಗಿ, ನನ್ನ ಮಾತು ಮತ್ತು ಭಾವನೆಗಳು ಎಲ್ಲಾ ಸರಿಯಗಿದೆಯಾ ಸಾರ್ ಎಂದು ಕೇಳಿದ. ಗೆಳೆಯ ನಮ್ಮಿಬ್ಬರನ್ನೂ ಸಿಟ್ಟಿನಿಂದ ನೋಡಿ ಇನ್ನೊಬ್ಬರನ್ನು ಮಾತನಾಡಿಸಲು ಹೋದ.

ನಿಮ್ಮ ಮನದಾಳದ ಮಾತುಗಳಾದರೆ ಅವು ಯಾವತ್ತೂ ಸಹಾನುಭೂತಿಯ ಜೊತೆ ನೇರವಾಗಿ ಇರುತ್ತದೆ. ಮತ್ತು ತಪ್ಪು ಗ್ರಹಿಕೆಯಾಗದಂತೆ ಪದಗಳ ಜೋಡಣೆ ಇರುತ್ತದೆ. ಅದು ಮನದಿಂದ ಬಂದ ಕಾರಣ ಅದಕ್ಕೆ ವಾದ ಇರುವುದಿಲ್ಲ. ಪೂರಕವಾದ ಸಂಗತಿಗಳು ಇರುತ್ತವೆ. ಅಥವಾ ಮೌನದ ಜೊತೆ ಇರುತ್ತದೆ. ನೀವದನ್ನು ಕೇಳಿಸಿಕೊಳ್ಳುತ್ತೀರಿ ಮತ್ತು ತಲೆದೂಗುತ್ತೀರಿ ಅಥವಾ ನಿಮಗದನ್ನು ಅನ್ವಯಿಸಿಕೊಳ್ಳುತ್ತೀರಿ. ಅದರಲ್ಲಿ ಯಾವುದೇ ಸಂಘರ್ಷ ಇರುವುದಿಲ್ಲ.

ಮಾತನಾಡುವ ಕಲೆ ನಿಮ್ಮದಾದರೆ ನೀವು ಭಾವನೆಗಳನ್ನು ಸೂಕ್ತವಾಗಿ ವ್ಯಕ್ತ ಪಡಿಸುವುದಷ್ಟೇ ಅಲ್ಲ, ನೀವು ಹೇಳಿದ ಭಾವನೆಗಳನ್ನೇ ಕೇಳುಗರು ಸಹಾ ಅರ್ಥ ಮಾಡಿಕೊಳ್ಳುವುದನ್ನು ನೀವು ಕಾಣುತ್ತೀರಿ. ನಿಮ್ಮ ಆಲೋಚನೆಗಳೆಲ್ಲಾ ನಿರ್ದಿಷ್ಟವಾದ ಪದಗಳಾಗಿ ಬದಲಾಗುತ್ತವೆ. ಅಂದರೆ ಹೃದಯ ಮತ್ತು ಮಿದುಳು ಜೊತೆಗೂಡುತ್ತವೆ. ಪರಿಣಾಮ ನಿಮ್ಮೊಳಗೆ ಒಂದು ಶಾಂತಿ ನೆಲೆಸುತ್ತದೆ. ಸೂಕ್ತವಾಗಿ ಹೊರ ಹಾಕಿದೆ ಎನ್ನುವ ನೆಮ್ಮದಿ ಅದು.

ವ್ಯಕ್ತಿಪರ ಮಾತುಗಳು

ಸಭೆಗಳು ಮತ್ತು ಸಮಾರಂಭಗಳು ನಿಮ್ಮನ್ನು ಅಗ್ನಿದಿವ್ಯಕ್ಕೆ ಒಳಗಾಗಿಸುತ್ತವೆ. ಅಂದರೆ ನಿಮ್ಮ ಸಾಮರ್ಥ್ಯವನ್ನು ನಿರ್ಣಯ ಮಾಡುವ ವೇದಿಕೆಗಳು. ಅಲ್ಲಿ ನಿಮ್ಮ ಮಾತೇ ನಿಮ್ಮ ವ್ಯಕ್ತಿತ್ವವನ್ನು ನಿರ್ಣಯಿಸುತ್ತದೆ. ನಿಮ್ಮ ದೇಹ ಭಾಷೆ, ನಿಮ್ಮ ನಿಲುವು, ನಿಮ್ಮ ತೀರ್ಮಾನಗಳು, ನಿಮ್ಮ ದೃಷ್ಟಿಕೋನ ಇವೆಲ್ಲವೂ ಅಲ್ಲಿ ಎಲ್ಲರಿಗೂ ಕಾಣುತ್ತದೆ. ನೀವು ನೀವಾಡುವ ಮಾತಿನಿಂದ ಮಾತ್ರವಲ್ಲ, ನಿಮ್ಮ ಎಲ್ಲಾ ರೀತಿಯ ಚರ್ಯೆಗಳಿಂದ ಗುರುತಿಸಲ್ಪಡುತ್ತೀರಿ. ನಿಮಗೆ ಅಲ್ಲಿ ಯಾವುದನ್ನೂ ಮುಚ್ಚಿಡಲು ಆಗುವುದಿಲ್ಲ. ನಿಮ್ಮ ಭಯ, ಆತಂಕಗಳು, ನಿಮ್ಮ ಒರಟುತನ, ನಿಮ್ಮ ಮೃದುತ್ವ ನಿಮ್ಮ ಆಲೋಚನಾ ರೀತಿಗಳು ಹೀಗೆ ಎಲ್ಲವೂ ನಿಮ್ಮ ವರ್ತನೆಯಿಂದಲೇ ಸಾರ್ವಜನಿಕರಿಗೆ ತಿಳಿದುಹೋಗುತ್ತದೆ. ಹೀಗಾಗಿ ನೀವು ಯಾರು, ಏನು, ಹೇಗೆ ಎನ್ನುವುದೆಲ್ಲಾ ಸಾರ್ವಜನಿಕ ಬದುಕಿನಲ್ಲಿ ಬಹಿರಂಗವಾಗುತ್ತದೆ.

ನೀವು ಮಾತನಾಡುವ ಸಭೆ ಅಥವಾ ಸಮಾರಂಭ ಯಾವುದು ಎನ್ನುವ ಅರಿವನ್ನು ಮೊದಲೇ ತಿಳಿದುಕೊಳ್ಳುವುದು ಒಳ್ಳೆಯದು. ಅದು ಬೃಹತ್ ಬಹಿರಂಗ ಸಭೆಯೋ, ಸಾಮಾನ್ಯ ಸಭೆಯೋ, ಗ್ರಾಮ ಸಭೆಯೋ ಅಥವಾ ನಿರ್ದೇಶಕರ ಸಭೆಯೋ ಹೀಗೆ ನಾನಾ ರೀತಿಯ ಸಭೆಗಳ ಕುರಿತು ನಿಮಗೆ ಮೊದಲೇ ಮಾಹಿತಿ ಇದ್ದರೆ ನೀವು ಅದಕ್ಕೆ ಬೇಕಾದ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಸಭೆಯಲ್ಲಿ ಚರ್ಚಿಸುವ ವಿಷಯಗಳ ಅರಿವೂ ಸಹಾ ತುಂಬಾ ಮುಖ್ಯ. ಅಲ್ಲಿ ನೀವು ಯಾವ ಉದ್ದೇಶದಿಂದ ಮಾತನಾಡಲು ಹೋಗುತ್ತೀರಿ ಎನ್ನುವುದು ನಿಮಗೆ ಗೊತ್ತಿರಬೇಕು. ನೀವು ವಿರೋಧಿಗಳೋ, ಪರವಾಗಿರುವವರೋ, ಅಥವಾ ಪ್ರತಿಕ್ರಿಯಿಸುವವರೋ ಎನ್ನುವುದನ್ನು ತಿಳಿದುಕೊಂಡು ಅದಕ್ಕೆ ತಕ್ಕ ತಯಾರಿಯೂ ಸಹಾ ಅಗತ್ಯ. ಹೀಗೆ ನೀವು ಬಾಲ್ಯದಿಂದಲೇ ಕಲಿಯುತ್ತಾ ಹೋದಂತೆ ನಿಮ್ಮ ವಿಶುದ್ಧ ಚಕ್ರ ಸದಾ ಸಮತೋಲನದಲ್ಲಿ ಇರುತ್ತದೆ.

ಸಮಾರಂಭಗಳಲ್ಲಿ ನೀವು ತುಂಬಾ ವಿಶೇಷವಾಗಿ ಮಾತನಾಡಬೇಕಾಗುತ್ತದೆ. ಅದು ಮದುವೆಯೋ, ವೈಕುಂಠ ಸಮಾರಾಧನೆಯೋ, ಹೋಮ ಹವನಗಳೋ, ನವರಾತ್ರಿ ಪೂಜೆಯೋ, ಸತ್ಯನಾರಾಯಣ ಕತೆಯೋ, ವಿದ್ವದ್ ಜನರ ಸಮಾವೇಶವೋ, ಹೀಗೆ ಯಾವುದು ಸಮಾರಂಭ ಎನ್ನುವುದು ತುಂಬಾ ಮುಖ್ಯ. ಇಲ್ಲದಿದ್ದರೆ ನೀವು ಜನರ ಮಧ್ಯೆ ಕಳೆದುಹೋಗುತ್ತೀರಿ. ನೀವು ತಮಾಶೆ ಮಾಡುವುದು ಮತ್ತು ನಿಮ್ಮನ್ನೇ ನೀವು ತಮಾಶೆಗೆ ಒಳಪಡಿಸಿಕೊಳ್ಳುವುದನ್ನು ಕಲಿತಿರಬೇಕು. ಗಂಭೀರವಾದ ವಿಷಯವನ್ನು ಮಾತನಾಡುವಾಗ ಅದರ ಸಂಪೂರ್ಣ ಜ್ಞಾನವನ್ನು ಪಡೆದುಕೊಂಡಿರಬೇಕು. ಮಾಹಿತಿಗಳು ಗೊತ್ತಿರಬೇಕು. ಆಗ ನಿಮ್ಮ ಮಾತು ಮೌಲ್ಯಯುತವಾಗಿರುತ್ತದೆ.

ಆತತಾಯಿಗಳು

ಅಗ್ನಿದೋ ದಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ।
ಕ್ಷೇತ್ರಧಾರಾಹರಶ್ಚೈವ ಷಡೇತೇ ಆತತಾಯಿನಃ॥

ಬೇರೆಯವರ ಆಸ್ತಿಗೆ ಬೆಂಕಿಯಿಡುವವ, ಪರರ ಬದುಕಿಗೆ ವಿಷವನ್ನು ಇಕ್ಕುವವ, ಆಯುಧ ಹಿಡಿದ ಕೊಲೆಗಾರ, ಸಂಪತ್ತನ್ನು ಅಪಹರಿಸುವವ, ಭೂಮಿಯನ್ನು ಕಬಳಿಸುವವ ಮತ್ತು ಪರಸ್ತ್ರೀಯನ್ನು ಅಪಹರಿಸುವವ- ಈ ಆರು ಬಗೆಯ ಜನರು ಆತತಾಯಿಗಳು- ಎಂಬುದು ಶ್ಲೋಕಾರ್ಥ.

ಆತತಾಯಿಗಳು ಎಂದರೆ ಕೊಲ್ಲುವ ಪ್ರಯತ್ನವುಳ್ಳವನು, ಕೊಲ್ಲುವ ಸ್ವಭಾವದವನು, ಇತರರನ್ನು ಹಿಂಸಿಸುವವನು ಎಂದರ್ಥ. ಸ್ವಾರ್ಥಕ್ಕಾಗಿಯೋ ವಿಕ್ಷಿಪ್ತ ಆತ್ಮಸಂತೋಷಕ್ಕಾಗಿಯೋ ಬೇರೆ ಬೇರೆ ಕಾರಣಕ್ಕಾಗಿ ಪರರನ್ನು ಹಿಂಸಿಸಿ ವಿಕೃತ ಖುಷಿಯನ್ನು ಅನುಭವಿಸುವ ಮಾನಸಿಕ ಸ್ಥಿತಿ ಇವರದು. ಇವರ ಮನಸ್ಸೇ ವಿಕ್ಷಿಪ್ತ. ಯಾವೆಲ್ಲ ಕಾರಣಕ್ಕಾಗಿ ಇವರು ಈ ರೀತಿ ವರ್ತಿಸುತ್ತಾರೆ ಎಂಬುದು ಊಹಿಸುವುದು ಕಷ್ಟ. ಆದರೂ ಪ್ರಕೃತ ಶ್ಲೋಕದಲ್ಲಿ ಆತತಾಯಿಗಳ ಆರು ಅಂಶವನ್ನು ಗುರುತಿಸಿ ನೀಡಲಾಗಿದೆ.



ಬೇರೆಯವರ ಆಸ್ತಿಗೆ ಬೆಂಕಿಯಿಡುವವರು ಆತತಾಯಿಗಳು. ಇವರಿಗೆ ಇನ್ನೊಬ್ಬರ ಸಂಪತ್ತು, ಆಸ್ತಿ, ಬೆಳವಣಿಗೆ ಇವುಗಳನ್ನು ನೋಡಿ ಸಹಿಸಿಕೊಳ್ಳಲು ಆಗುವುದಿಲ್ಲ. ಇತರರು ಸಂತೋಷದಿಂದ ಬದುಕುವುದನ್ನು ನೋಡಿ ಸಹಿಸಲಾರದೇ ಅವರನ್ನು ಹಾಳು ಮಾಡುವ ಕುತ್ಸಿತ ಮಾನಸಿಕತೆ ಇವರದ್ದು. ತಾವಂತೂ ಚೆನ್ನಾಗಿ ಬದುಕರು. ಚೆನ್ನಾಗಿ ಬದುಕುವವರನ್ನು ನೋಡಿ, ಮಾರ್ಗದರ್ಶನ ಪಡೆದು ತಾವೂ ಚೆನ್ನಾಗಿ ಬದುಕಲು ಬಯಸಬೇಕು. ಇದಕ್ಕೆ ಬದಲಾಗಿ ಚೆನ್ನಾಗಿರುವವರನ್ನು ನೋಡಿ ವಿಷಕಕ್ಕುವವರು, ವಿಷವಿಕ್ಕುವವರು ಆತತಾಯಿಗಳೆನಿಸುತ್ತಾರೆ. ಇವರಲ್ಲಿ ಮಾನವೀಯತೆ, ಸಭ್ಯತೆ, ಸಜ್ಜನಿಕೆ ಎಂದೆಂದೂ ಅರಳುವುದಿಲ್ಲ.

ಆಯುಧಾದಿಗಳನ್ನು ಹಿಡಿದು ಕೊಲ್ಲಲು ಮುಂದಾಗುವವರು, ಕೊಲ್ಲುವವರು ಆತತಾಯಿಗಳು. ಇವರು ಸ್ವಾರ್ಥಿಗಳಾಗಿರಬಹುದು ಅಥವಾ ಮತಾಂಧರಾಗಿರಬಹುದು. ಇವರಿಗೆ ಸ್ವಂತದಾದ ಉದ್ದೇಶವಿರುತ್ತದೆ. ಅದನ್ನು ಸಾಧಿಸಲು ಕೊಲ್ಲುವುದಕ್ಕೂ ಹೇಸುವುದಿಲ್ಲ. ಸ್ವಾರ್ಥ ಸಾಧನೆಯ ಮುಂದೆ ಯಾವ ಸಂಬಂಧವೂ ಇರುವುದಿಲ್ಲ.

ಇನ್ನೊಂದು ಬಗೆಯ ಆತತಾಯಿಗಳು ಸಂಪತ್ತನ್ನು ಅಪಹರಿಸುವವರು. ಇವರಿಗೆ ಹೇಗಾದರೂ ಮಾಡಿ ಸಂಪತ್ತನ್ನು ಕೂಡಿಹಾಕುವ ದುರಾಸೆ ಇರುತ್ತದೆ. ಸಂಪತ್ತಿನ ಗಳಿಕೆಗಾಗಿ ಯಾವ ಮಾರ್ಗವನ್ನೂ ತುಳಿಯಬಲ್ಲರು. ಕೊಲೆ, ಸುಲಿಗೆ, ವಂಚನೆ, ಮೋಸ.. ಇದಾವ ಪ್ರಶ್ನೆಯೂ ಇರುವುದಿಲ್ಲ. ತನ್ನವರು, ಬೇರೆಯವರು, ಸಜ್ಜನರು... ಇತ್ಯಾದಿ ಯಾವ ಭಾವನೆಯೂ ಇರುವುದಿಲ್ಲ. ಪಾಪ-ಪುಣ್ಯದ ಗೊಡವೆಯೂ ಇಲ್ಲದೆ ಯೇನಕೇನ ಪ್ರಕಾರೇಣ ಹಣ ಗಳಿಸಲು ಮುಂದಾಗುವವರೂ ಆತತಾಯಿಗಳೆನಿಸುತ್ತಾರೆ.

ಆಸ್ತಿಯನ್ನು ಕಬಳಿಸುವ ಸ್ವಭಾವದವರೂ ಆತತಾಯಿಗಳೇ. ಇಂಚಿಂಚಾಗಿ ಆಸ್ತಿಯನ್ನು ಕಬಳಿಸುವವರಿದ್ದಾರೆ. ಮೋಸದಿಂದ ಆಸ್ತಿಯನ್ನು ತಮ್ಮದಾಗಿಸಿಕೊಳ್ಳುವವರಿದ್ದಾರೆ. ತಮ್ಮದಲ್ಲದ ಆಸ್ತಿಯನ್ನು ಕೊಲೆ, ಮೋಸ, ಸುಲಿಗೆ ವಂಚನೆಗಳ ಮೂಲಕ ಹೊಡೆದು ತಿನ್ನುವವರೂ ಆತತಾಯಿಗಳು. ಪರಸ್ತ್ರೀಯರನ್ನು ಅಪಹರಿಸುವವರು ಒಂದು ಬಗೆಯ ಆತತಾಯಿಗಳು. ಆಸೆ ತೋರಿಸಿ, ಉಪಕಾರ ಮಾಡುವವರಂತೆ ನಟಿಸಿ, ಪರಮ ಹಿತೈಷಿಯಂತೆ ತೋರಿಸಿಕೊಂಡು, ಆತ್ಮೀಯತೆಯ ನಾಟಕವಾಡಿ, ಪ್ರೀತಿಯ ನೆಪವೊಡ್ಡಿ ಪರಸ್ತ್ರೀಯರನ್ನು, ಹುಡುಗಿಯರನ್ನು ಅಪಹರಿಸುವವರಿದ್ದಾರೆ. 'ಬ್ಲ್ಯಾಕ್‌ಮೇಲ್' ತಂತ್ರದ ಮೂಲಕ ಅಪಹರಿಸುವವರಿದ್ದಾರೆ. ಇವರು ಆತತಾಯಿಗಳಲ್ಲದೆ ಮತ್ತಾರು?

ಈ ಬಗೆಯ ಜನರೆಲ್ಲರೂ ಆತತಾಯಿಗಳೇ. ಇಂಥವರ ಬಗ್ಗೆ ನಾವು ಯಾವಾಗಲೂ ಜಾಗ್ರತವಾಗಿರಬೇಕು. ಸಮಾಜವನ್ನು ಎಚ್ಚರಗೊಳಿಸಬೇಕು. ಇದು ಲೋಕಹಿತೈಷಿಗಳ ಆದ್ಯ ಕರ್ತವ್ಯವಾಗಿದೆ.

ಸಂಘ ಶಾಖೆ - ಪುರುಷಸಿಂಹರ ನಿರ್ಮಾಣ ಕೇಂದ್ರ

ಒಳನೋಟ
• ಹೆ.ಬಾ. ಮಲ್ಯ



ಗುರೂಜೀ ಗೋಳ್ವಲ್ಕರ್ ಅವರು ಆಗಾಗ ಒಂದು ಶ್ಲೋಕವನ್ನು ಉಲ್ಲೇಖಿಸುತ್ತಿದ್ದರು -

''ನಾಭಿಷೇಕೋ ನ ಸಂಸ್ಕಾರಃ ಸಿಂಹಸ್ಯ ಕ್ರಿಯತೇ ವನೈಃ।
ವಿಕ್ರಮಾರ್ಜಿತ ಸತ್ವಸ್ಯ ಸ್ವಯಮೇವ ಮೃಗೇಂದ್ರತಾ॥

''ಸಿಂಹಕ್ಕೆ ಯಾರೋ ಬೇರೆಯವರು ರಾಜಾಭಿಷೇಕವನ್ನು, ಇತರ ಸಂಸ್ಕಾರಗಳನ್ನು ಮಾಡುವುದಿಲ್ಲ. ಅದು ತನ್ನ ಸ್ವಯಂ ಪರಾಕ್ರಮದಿಂದ ಗಳಿಸಿದ ಬಲದಿಂದ ಮೃಗರಾಜ ಎನಿಸಿಕೊಂಡಿದೆ''

ಕಾಡಿನಲ್ಲಿ ಹುಲಿ, ಚಿರತೆ, ಆನೆ, ಜಿರಾಫೆಯಂಥ ನೂರಾರು ಜಾತಿಯ ಪ್ರಾಣಿಗಳಿವೆ. ಆದರೆ ಅವುಗಳನ್ನು ಯಾರೂ ಮೃಗರಾಜ ಎನ್ನುವುದಿಲ್ಲ. ಸಿಂಹದಲ್ಲಿ ಧೈರ್ಯ, ಸಾಹಸ, ಬಲ, ಆತ್ಮವಿಶ್ವಾಸ ಮುಂತಾದ ಗುಣಗಳಿರುವುದರಿಂದ ಅದು ಕಾಡಿನ ಅನಭಿಷಕ್ತ ರಾಜ ಎನಿಸಿಕೊಂಡಿದೆ. ಮನುಷ್ಯರಲ್ಲೂ ಅಷ್ಟೆ- ಧೈರ್ಯ, ಸಾಹಸ, ಮುನ್ನುಗ್ಗುವಿಕೆಯ ಸ್ವಭಾವ, ಛಲ, ಪರಿಶ್ರಮ, ಏಕಾಂತಿಕನಿಷ್ಠೆ, ಆತ್ಮವಿಶ್ವಾಸ ಇವೇ ಮುಂತಾದ ಶ್ರೇಷ್ಠಗುಣಗಳಿದ್ದವನೇ ನಾಯಕನಾಗುತ್ತಾನೆ. Survival of the fittest (ಬಲಿಷ್ಠ ಮಾತ್ರ ಬದುಕಬಲ್ಲ) ಎಂಬುದು ಪಾಶ್ಚಾತ್ಯ ಡಾರ್ವಿನಿಯನ್ ಕಲ್ಪನೆ. ಆದರೆ ಭಾರತದ ಕಲ್ಪನೆಯೇ ಬೇರೆ. ಇಲ್ಲಿ ಬಲದೊಡನೆ ಧರ್ಮರಕ್ಷಣೆ, ಪ್ರಜಾಹಿತ, ದುಷ್ಟನಾಶ, ಶಿಷ್ಟರ ರಕ್ಷಣೆ ಮಾಡುವವನೇ ಶ್ರೇಷ್ಠ ಹಾಗೂ ಆದರ್ಶ ನಾಯಕ ಎನಿಸಿಕೊಳ್ಳುತ್ತಾನೆ. ಅಂಥವನೇ ಆಳಲು, ಚಕ್ರವರ್ತಿಯಾಗಲು ಅರ್ಹತೆ ಉಳ್ಳವನು ಎಂಬ ಭಾವನೆ ಇದೆ. ರಾವಣನಂತೆ ಕೇವಲ ಬಲವಿದ್ದರೆ ಸಾಲದು. ಧರ್ಮದಂತೆ ನಡೆಯುವವನಾಗಬೇಕು. ಇದು ಮಾನದಂಡ. ಅದಕ್ಕೆ ಶ್ರೀರಾಮ, ಶ್ರೀಕೃಷ್ಣ, ಛತ್ರಪತಿ ಶಿವಾಜಿ ಮುಂತಾದವರು ಅವತಾರಿ ಪುರುಷರೆನಿಸಿಕೊಂಡರು.

ಪ್ರಾಣಿಗಳು ಪ್ರಕೃತಿಗೆ ಅನುಗುಣವಾಗಿ ಜೀವಿಸುತ್ತವೆ. ಅವಕ್ಕೆ ಬುದ್ಧಿ ಕಡಿಮೆ. ಮನುಷ್ಯ ಹಾಗಲ್ಲ, ದೇವರು ಅವನಿಗೆ ಹೆಚ್ಚಿನ ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಕೊಟ್ಟಿದ್ದಾನೆ. ಅವನಲ್ಲಿ ಭಾವನೆಗಳನ್ನು ತುಂಬಿದ್ದಾನೆ. ಈ ಎಲ್ಲಾ ಶಕ್ತಿಗಳಿರುವುದರಿಂದಲೇ ಮಾನವ, ಪ್ರಾಣಿಲೋಕದ ಮೇಲೆ ಅಧಿಪತ್ಯ ಸಾಧಿಸಿದ್ದಾನೆ. ಆನೆ, ಹುಲಿ, ಸಿಂಹಗಳನ್ನು ಪಳಗಿಸಿ ತನ್ನ ಅಂಕೆಯಲ್ಲಿರಿಸಿಕೊಳ್ಳುವ ಬುದ್ಧಿಶಕ್ತಿ, ಸಾಮರ್ಥ್ಯಗಳನ್ನು ಹೊಂದಿದ್ದಾನೆ. ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸವೇನು?:-

ಆಹಾರನಿದ್ರಾಭಯಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನರಾಣಾಮ್।
ಧರ್ಮೋಹಿತೇಷಾಮಧಿಕೋ ವಿಶೇಷೋ ಧರ್ಮೇಣಹೀನಾಃ ಪಶುಭಿಃ ಸಮಾನಾಃ॥

''ಆಹಾರ, ನಿದ್ರೆ, ಭಯ, ಲೈಂಗಿಕತೆ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಸಮಾನ ಹಾಗೂ ಪ್ರಕೃತಿ ಸಹಜವಾದ ಸ್ವಭಾವಗಳು. ಆದರೆ ಪ್ರಾಣಿ ಮತ್ತು ಮನುಷ್ಯರಲ್ಲಿ ವ್ಯತ್ಯಾಸ ತೋರಿಸುವ ಗುಣವೆಂದರೆ ಅದು ಧರ್ಮ. ಧರ್ಮವಿಹೀನವಾದ ಮನುಷ್ಯ ಪ್ರಾಣಿಗೆ ಸಮಾನ''. ಇದು ಈ ಸುಭಾಷಿತದ ಅರ್ಥ. ಮನುಷ್ಯ ಜೀವನದ ಉದ್ದೇಶ ನರನನ್ನು ನಾರಾಯಣನನ್ನಾಗಿ ರೂಪಿಸುವುದು. ಶ್ರೇಷ್ಠ ಸಂಸ್ಕಾರ ಹಾಗೂ ಶಿಕ್ಷಣದಿಂದ ಇದನ್ನು ಸಾಧಿಸಲು ಸಾಧ್ಯ. ಇಂದು ಹಿಂದುಗಳು ಧರ್ಮವನ್ನು ಮರೆಯುತ್ತಿದ್ದಾರೆ. ಅದರಿಂದಲೆ ಎಲ್ಲ ಸಮಸ್ಯೆಗಳು. ವಿಶೇಷವಾಗಿ ಮುಸ್ಲಿಂ ಭಯೋತ್ಪಾದಕರ ಹಾಗೂ ವಿದೇಶೀ ಕ್ರೈಸ್ತ ಮತಾಂತರಿ ಮಿಷನರಿಗಳ ಸಮಸ್ಯೆ. ಇವುಗಳನ್ನೆದುರಿಸಲು ಹಿಂದುಗಳನ್ನು ಪುರುಷ ಸಿಂಹರನ್ನಾಗಿ ರೂಪಿಸಬೇಕಾಗಿದೆ. ಡಾಕ್ಟರ್‌ಜೀ ಮುಂದೆ ಬರಲಿರುವ ಅಪಾಯವನ್ನು ಮನಗಂಡು ರಾ.ಸ್ವ.ಸಂಘವನ್ನು ಸ್ಥಾಪಿಸಿದರು. ದೈನಂದಿನ ಸಂಘ ಶಾಖೆಗಳೇ ಈ ಸಂಸ್ಕಾರ ಶಿಕ್ಷಣ ನೀಡುವ ಕೇಂದ್ರಗಳು. ನೂರು ವರ್ಷಗಳಲ್ಲಿ ಈ ಶಾಖಾ ಶಿಕ್ಷಣ ಅದ್ಭುತ ಫಲ ನೀಡಿದೆ. ಇನ್ನೂ ಹೆಚ್ಚಿನ ಶಕ್ತಿ, ಧೈರ್ಯ-ಸಾಹಸ, ಮುನ್ನುಗ್ಗುವ, ದುಷ್ಟರ ವಿರುದ್ಧ ಹೋರಾಡಿ ಸದೆ ಬಡಿಯುವ ಸ್ವಭಾವವನ್ನು ಹಿಂದುಗಳಲ್ಲಿ ಬೆಳೆಸಬೇಕಾಗಿದೆ. ಸ್ವಯಂಸೇವಕರು, ಕಾರ್ಯಕರ್ತರಲ್ಲಿ ಈ ಸ್ವಭಾವಗಳು ಒಂದಷ್ಟರ ಮಟ್ಟಿಗೆ ವಿಕಾಸಗೊಂಡಿವೆ. ಆದರೆ ಸಮಸ್ತ ಹಿಂದುಗಳಲ್ಲಿ ಈ ಹೋರಾಡುವ ಸ್ವಭಾವ ಬೆಳೆಸಬೇಕಾಗಿದೆ. ಸಾಮಾನ್ಯ ಹಿಂದುಗಳನ್ನೂ ಪುರುಷಸಿಂಹರನ್ನಾಗಿ ರೂಪಿಸಬೇಕಾಗಿದೆ. ಪುರಾಣಕಾಲದಲ್ಲಿ ಭಾರತ ವಿಶ್ವಗುರು ಹಾಗೂ ವಿಶ್ವವಿಜಯಿಯಾಗಿತ್ತು ಎಂಬುದನ್ನು ಕೇಳಿದ್ದೇವೆ. ಗುರುಕುಲಗಳ ಅದ್ಭುತ ಶಿಕ್ಷಣ ವ್ಯವಸ್ಥೆ ಇಂಥ ಪುರುಷಸಿಂಹರನ್ನು ರೂಪಿಸುತ್ತಿತ್ತು. ಇಂದು ಪಾಶ್ಚಾತ್ಯ ಮೆಕಾಲೆ ಶಿಕ್ಷಣ ಹಿಂದುಗಳಲ್ಲಿನ ಈ ಸಂಸ್ಕಾರಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಿ ದಾಸ್ಯ ಮನೋಭಾವವನ್ನು ಬೆಳೆಸಿದೆ. ಮೊದಲು ಈ ಮಾನಸಿಕ ದಾಸ್ಯವನ್ನು ತೊಡೆದು ಹಾಕುವ ಅಗತ್ಯವಿದೆ.

ಮನುಷ್ಯ ಪ್ರಾಣಿಗಳನ್ನು ಅಂಕಿತದಲ್ಲಿಟ್ಟುಕೊಂಡಿದ್ದಾನೆ. ಸರ್ಕಸ್ ಸಿಂಹ ಗಳನ್ನು, ರಾಜರುಗಳು ಸಾಕಿದ ಆನೆಗಳನ್ನು ನಾವೆಲ್ಲ ನೋಡಿಯೇ ಇದ್ದೇವೆ. ಅಸಾಮಾನ್ಯ ಬಲವಿದ್ದರೂ ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಸಂಘೀಭಾವನೆ ಇಲ್ಲದ್ದರಿಂದ ತಮಗಿಂತಲೂ ದುರ್ಬಲನಾದ ಮನುಷ್ಯನಿಂದ ಗುಲಾಮರಂತಾಗಿವೆ. ಪುಕ್ಕಟೆ ಆಹಾರ, ವಸತಿ ಸಿಕ್ಕಿದಾಗ ಅವುಗಳಲ್ಲಿ ಅಡಗಿರುವ ಧೈರ್ಯ, ಸಾಹಸ, ಶಕ್ತಿ ಕ್ರಮೇಣ ಉಡುಗಿ ಹೋಗುತ್ತವೆ. ಭಾರತದಲ್ಲಿನ ಹಿಂದುಗಳ ಪರಿಸ್ಥಿತಿ ಇದೇ ಆಗಿದೆ. ಧೈರ್ಯ, ಶಕ್ತಿ, ಸಾಹಸ, ಪರಾಕ್ರಮ, ಧರ್ಮನಿಷ್ಠೆ, ಬುದ್ಧಿಶಕ್ತಿಯಲ್ಲಿ ಹಿಂದುಗಳು ಯಾರಿಗಿಂತಲೂ ಕಡಿಮೆ ಇರಲಿಲ್ಲ. ಆದರೆ ಕ್ರಮೇಣ ಸ್ವಾರ್ಥ, ಸಂಕುಚಿತತೆ, ಜಾತಿಭೇದಗಳಿಂದ, ಅಸಂಘಟನೆಯ ಕಾರಣದಿಂದ ಹಿಂದುಗಳ ಶಕ್ತಿ ಕುಗ್ಗಿತು. ಸಾವಿರ ವರ್ಷ ವಿದೇಶೀ ಆಕ್ರಮಕರ ಗುಲಾಮಗಿರಿಯಲ್ಲಿ ಕಳೆಯಬೇಕಾಯಿತು. ಮುಂದೆ ರಾಜಕೀಯ ಸ್ವಾತಂತ್ರ್ಯ ಬಂದ ಮೇಲೂ ಈ ಗುಲಾಮೀ ಮಾನಸಿಕತೆಯ ಜನ ವಿದೇಶೀಯರ ನೀತಿಗಳನ್ನೇ ಮುಂದುವರೆಸಿಕೊಂಡು ಬಂದರು. ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಲೇ ಇಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಉತ್ಕಟ ರಾಷ್ಟ್ರೀಯ ಭಾವನೆಯೇ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿತ್ತೆಂಬುದನ್ನು ಮರೆಯಬಾರದು. ಡಾಕ್ಟರ್‌ಜೀ ಭವಿಷ್ಯವನ್ನು ಊಹಿಸಿಯೇ ರಾಷ್ಟ್ರಭಾವನೆ ಜಾಗೃತ ಮಾಡುವ ಶಾಖಾ ಶಿಕ್ಷಣವನ್ನು ಪ್ರಾರಂಭಿಸಿದರು. ಆದ್ದರಿಂದಲೇ ಅವರನ್ನು ದ್ರಷ್ಟಾರರು ಎನ್ನುವುದು. ಹಿಂದಿನ ಗುಲಾಮೀ ಮಾನಸಿಕತೆಯ ಆಳರಸರ ಕೈಯಿಂದ 2014ರಲ್ಲಿ ರಾಜ್ಯಾಧಿಕಾರದ ಚುಕ್ಕಾಣಿ ಸಂಘ ಶಾಖೆಯ ಗರಡಿಯಲ್ಲಿ ತಯಾರಾದ ಆಳರಸರ ಕೈಗೆ ಬಂತು. ಈಗ ಗುಲಾಮರನ್ನು ತಯಾರಿಸುವ ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ಕಿತ್ತು ಹಾಕಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೆ ರಾಜ್ಯಾಧಿಕಾರ ಶಾಶ್ವತ ಎನ್ನಲಾಗದು. ಹಾಗಾಗಿ ಸಂಘಶಾಖೆಯಲ್ಲಿನ ಸಂಸ್ಕಾರದ ಶಿಕ್ಷಣ ಇನ್ನಷ್ಟು ಬೆಳೆಯಬೇಕು. ಅದು ಶಾಶ್ವತವಾದುದು. ಅದು ಚಂಚಲ ಮನಸ್ಸಿನ ಮತದಾರರ ಮರ್ಜಿಗೆ ಒಳಪಟ್ಟಿಲ್ಲ.

ರಾಷ್ಟ್ರೀಯ ಭಾವನೆಯ ಜಾಗರಣದ ಹಾಗೂ ಪುರುಷ ಸಿಂಹರನ್ನು ರೂಪಿಸುವ ಸಂಸ್ಕಾರದ ಶಿಕ್ಷಣವನ್ನು ಸಂಘ ಶಾಖೆ ನೀಡುತ್ತಿದೆ. ಮುಂದಿನ ದಿನಗಳಲ್ಲಿ, ಎಲ್ಲ ರಾಜ್ಯಗಳಲ್ಲಿ, ಕೇಂದ್ರದಲ್ಲಿ ಹಿಂದು ಪರ ಸರಕಾರ ಸ್ಥಾಪನೆಯಾದಾಗ ಈ ಶಾಖಾ ಶಿಕ್ಷಣ ಪ್ರತಿ ಶಾಲೆಯಲ್ಲೂ ಸಿಗುವಂತಾಗಬೇಕು. ಪ್ರತಿ ಶಾಲೆಯೂ ಸಂಘ ಶಾಖೆ ಮಾದರಿಯ ಶಿಕ್ಷಣ ನೀಡುವಂತಾಗಬೇಕು. ಮನೆ-ಮನೆಗಳಲ್ಲಿ ಈ ಶಿಕ್ಷಣ ಶಿಶುಗಳಿಗೆ, ಮಕ್ಕಳಿಗೆ ಸಿಗುವಂತಾಗಬೇಕು. ತಾಯಿಯೇ ಮೊದಲ ಗುರು, ಮನೆಯೇ ಮೊದಲ ಶಾಲೆ, ಶಾಲೆ ಹಾಗೂ ಸಮಾಜಗಳೇ ವ್ಯಾವಹಾರಿಕ ಶಿಕ್ಷಣ ನೀಡುವ ಕೇಂದ್ರಗಳಾಗಬೇಕು. ಪಾಶ್ಚಾತ್ಯ ದೇಶಗಳು ಭೋಗಭೂಮಿ. ಹಾಗಾಗಿ ಅವರದ್ದು ಭೋಗ ಪ್ರಧಾನ ಜೀವನ. ಭಾರತ ತ್ಯಾಗಭೂಮಿ- ಹಾಗಾಗಿ ಇಲ್ಲಿ ಧರ್ಮವೇ ಜೀವನದ ಆಧಾರ. ಅದಕ್ಕಾಗಿ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಕಲ್ಪನೆ. ತ್ಯಾಗ, ಸೇವೆ, ಪರಸ್ಪರ ಪ್ರೀತಿ-ವಿಶ್ವಾಸ, ಸಹಿಷ್ಣುತಾಭಾವ ಇಲ್ಲಿನ ಸಹಜ ಗುಣ.

ಶಾಖಾ ಶಿಕ್ಷಣದ ಗುರಿಯು ದೀರ್ಘಕಾಲದ ಗುಲಾಮಿ ಮಾನಸಿಕತೆಯಿಂದ ಬಳಲುತ್ತಾ ಬದುಕುತ್ತಿದ್ದ ಹಿಂದುಗಳನ್ನು ಸಿಂಹ, ಚಿರತೆ, ವ್ಯಾಘ್ರ, ಆನೆಗಳಂತೆ ಬಲಶಾಲಿಗಳನ್ನಾಗಿ, ಬುದ್ಧಿಶಾಲಿಗಳನ್ನಾಗಿ, ಪರಾಕ್ರಮಿಗಳನ್ನಾಗಿ ಪರಿವರ್ತಿಸಬೇಕೆಂಬುದೇ ಆಗಿದೆ. ಏಕೆಂದರೆ ಮುಸ್ಲಿಂ ಆಕ್ರಮಣಕಾರರು, ಪಾಶ್ಚಾತ್ಯ ಭೋಗವಾದಿಗಳು ಮತ್ತೆ ಭಾರತವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಪಾಕಿಸ್ತಾನ, ಬಾಂಗ್ಲಾದೇಶಗಳಂಥ ಶತ್ರು ದೇಶಗಳು ಅಕ್ಕಪಕ್ಕದಲ್ಲಿ ಇದ್ದೇ ಇವೆ. ಅಮೆರಿಕದ ಜಾರ್ಜ್ ಸೊರೋಸ್‌ನಂಥವರು, ವಿದೇಶೀ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಅಸಂತೋಷ ನಿರ್ಮಾಣ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ದೇಶದ ಒಳಗೇ ಅವರ ಹಸ್ತಕರಾದ ಹಿತಶತ್ರುಗಳಿದ್ದಾರೆ. ಮುಸ್ಲಿಂ ಭಯೋತ್ಪಾದಕರ ಒಳನುಸುಳುವಿಕೆ, ಭಯೋತ್ಪಾದಕ ದಾಳಿಗಳು ನಡೆಯುತ್ತಲೇ ಇವೆ. ಇವೆಲ್ಲವನ್ನೂ ಒಟ್ಟಾಗಿ ಎದುರಿಸಿ ಗೆಲ್ಲಬೇಕಾದರೆ ಬಲವಾದ ಸಾಮಾಜಿಕ ಶಕ್ತಿಯನ್ನು ಕಟ್ಟಿ ನಿಲ್ಲಿಸುವ ಆವಶ್ಯಕತೆ ಇದೆ. ತ್ಯಾಗ-ಬಲಿದಾನಗಳಿಗೆ ಸಿದ್ಧವಾದ ತರುಣ ಪೀಳಿಗೆಯನ್ನು ರೂಪಿಸುವ ಆವಶ್ಯಕತೆ ಇದೆ. ಭಾರತ ಭೂಮಿಯ ಮೇಲೆ ಭಾರತ ಮಾತೆಯ ಹಾಗೂ ಭಗವಂತನ ಅಪಾರ ಕೃಪೆ ಇದೆ. ಅವನ ಅನುಗ್ರಹ ಭಾರತದ ಮೇಲೆ ವಿಶೇಷವಾಗಿ ಇದೆ. ಹಿಂದುಗಳನ್ನು ಈ ಅನುಗ್ರಹಕ್ಕೆ ಯೋಗ್ಯರನ್ನಾಗಿ ರೂಪಿಸಬೇಕಾಗಿದೆ. ಅದಕ್ಕಾಗಿ ಪುರುಷ ಸಿಂಹರನ್ನು ನಿರ್ಮಾಣ ಮಾಡುವ ಅಗತ್ಯವಿದೆ. ಭಾರತ, ಸನಾತನ ಧರ್ಮಕ್ಕೆ ಅಳಿವಿಲ್ಲ. ಅದು ಅವಿನಾಶಿ. ಭಾರತದಲ್ಲಿ ಮಾತ್ರ ಪರಮಾತ್ಮ ಶಿಷ್ಟ ರಕ್ಷಣೆ-ದುಷ್ಟಶಿಕ್ಷಣಕ್ಕಾಗಿ 10 ಬಾರಿ ಅವತಾರ ತಾಳಿದ್ದಾನೆ. ಹಾಗಂತ ಪರಮಾತ್ಮ ಸ್ವತಃ ಏನೂ ಮಾಡುವುದಿಲ್ಲ. ನಾವು ಪ್ರಯತ್ನ ಮಾಡಬೇಕು. ಆಗ ಅವನು ನಮ್ಮಿಂದಲೇ ಮಾಡಿಸುತ್ತಾನೆ. ಅವನು ಗೆಲ್ಲಲು ಅನುಗ್ರಹ ನೀಡುತ್ತಾನೆ.

'ಬಳಿಕುಂಟೆ'ಯಿಂದ 'ಮಿನಿ ಇರಾನ್'ವರೆಗೆ: ಅಲಿಪುರದ ಬದಲಾವಣೆಯ ಕತೆ

▸ ಉತ್ಕರ್ಷ್ ಕೆ. ಎಸ್

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಅಲಿಪುರ ಗ್ರಾಮವು ಕೆಲವು ದಿನಗಳ ಹಿಂದೆ ರಾಜ್ಯದ ಸಾಮಾಜಿಕ ಹಾಗೂ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಯಿತು. ಒಂದು ಕಾಲದಲ್ಲಿ 'ಬಳಿಕುಂಟೆ' ಅಥವಾ 'ಬೆಳ್ಳಿಕುಂಟೆ' ಎಂದು ಕರೆಯಲ್ಪಡುತ್ತಿದ್ದ ಈ ಗ್ರಾಮವು ಕಾಲಕ್ರಮೇಣ 'ಅಲಿಪುರ' ಎಂಬ ಹೆಸರಿನಿಂದ ಪರಿಚಿತವಾಯಿತು. ಇತಿಹಾಸದಲ್ಲಿ ವಲಸೆ ಮತ್ತು ಜನಸಂಖ್ಯೆಯ ಬದಲಾವಣೆ ಗಳಿಂದ ಈ ಪ್ರದೇಶದ ಸಾಮಾಜಿಕ ರಚನೆ ಸಂಪೂರ್ಣವಾಗಿ ಬದಲಾಗಿದೆ. ಇಂದು ಅಲಿಪುರ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮುಸ್ಲಿಂ ಸಮುದಾಯದ ಪ್ರಾಬಲ್ಯ ಸ್ಪಷ್ಟವಾಗಿ ಕಂಡುಬರುತ್ತದೆ.

ಒಂದು ಕಾಲದಲ್ಲಿ ಸಾಮಾನ್ಯ ಕೃಷಿ ಆಧಾರಿತ ಗ್ರಾಮವಾಗಿದ್ದ ಬಳಿಕುಂಟೆ, ನಿಧಾನವಾಗಿ ವಿಭಿನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಗುರುತನ್ನು ಪಡೆದುಕೊಂಡಿದೆ. ಗೌರಿಬಿದನೂರು ಭಾಗದ ಕೆಲವು ಗ್ರಾಮಗಳಲ್ಲಿ ಜನಸಂಖ್ಯಾ ಸಮತೋಲನ ಬದಲಾಗಿರುವುದು ಸ್ಥಳೀಯ ಜನರಲ್ಲಿ ಚರ್ಚೆಗೆ ಕಾರಣವಾಗಿದೆ. ಅಲಿಪುರ ಗ್ರಾಮದಲ್ಲಿ ಇಂದು ಬಹುಪಾಲು ಜನರು ಶಿಯಾ ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾರೆ. ಈ ಸಮುದಾಯದ ಪ್ರಭಾವವು ಸುತ್ತಮುತ್ತಲಿನ ಪ್ರದೇಶಗಳ ಮೇಲೂ ಕಂಡುಬರುತ್ತಿದೆ ಎಂಬ ಮಾತು ಸ್ಥಳೀಯವಾಗಿ ಕೇಳಿಬರುತ್ತಿದೆ. ಈ ಗ್ರಾಮವನ್ನು ಕೆಲವರು 'ಮಿನಿ ಇರಾನ್' ಎಂದು ಕರೆಯುವ ಮಟ್ಟಕ್ಕೆ ಇರಾನ್ ದೇಶದೊಂದಿಗೆ ಇಲ್ಲಿ ಗಾಢ ನಂಟು ನಿರ್ಮಾಣವಾಗಿದೆ. ಹಲವಾರು ಕುಟುಂಬಗಳು ಇರಾನ್ ದೇಶದೊಂದಿಗೆ ಧಾರ್ಮಿಕ, ಶೈಕ್ಷಣಿಕ ಹಾಗೂ ವ್ಯಾಪಾರಿಕ ಸಂಬಂಧ ಹೊಂದಿರುವುದಾಗಿ ಹೇಳಲಾಗುತ್ತದೆ. ಅಲಿಪುರದ ಹಲವಾರು ಯುವಕರು ಧಾರ್ಮಿಕ ಶಿಕ್ಷಣಕ್ಕಾಗಿ ಇರಾನ್‌ಗೆ ತೆರಳುವುದು ಸಾಮಾನ್ಯ ಸಂಗತಿಯಾಗಿರುವುದೂ ಗಮನಾರ್ಹವಾಗಿದೆ. ಈ ಸಂಬಂಧ ಇನ್ನಷ್ಟು ಗಟ್ಟಿಯಾಗಲು ಕಾರಣವಾದ ಘಟನೆ ಎಂದರೆ ಇರಾನ್‌ನ ಧಾರ್ಮಿಕ ನಾಯಕ ಆಯತೊಲ್ಲಾ ಅಲಿ ಖಮೇನಿಯ ಅಲಿಪುರ ಭೇಟಿ. 1986ರಲ್ಲಿ ಅವರು ಈ ಗ್ರಾಮಕ್ಕೆ ಭೇಟಿ ನೀಡಿ ಸಂಪರ್ಕ ಬೆಳೆಸಿದ್ದರು. ಆ ಭೇಟಿಯ ನಂತರ ಅಲಿಪುರ ಮತ್ತು ಇರಾನ್ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಯಾಯಿತು. ಅಲ್ಲದೆ ಈ ಗ್ರಾಮದಲ್ಲಿ ಖಮೇನಿಯವರ ಹೆಸರಿನೊಂದಿಗೆ ಸಂಬಂಧಿಸಿದ ಆಸ್ಪತ್ರೆ ಮತ್ತು ಕೆಲವು ಸಂಸ್ಥೆಗಳು ಸ್ಥಾಪನೆಯಾಗಿದ್ದು ಆ ಸಂಬಂಧದ ಸಂಕೇತಗಳಾಗಿ ಇಂದಿಗೂ ಉಳಿದಿವೆ.

ಇತ್ತೀಚೆಗೆ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯ ಘಟನೆಗಳ ಹಿನ್ನೆಲೆಯಲ್ಲಿ ಅಲಿಪುರ ಗ್ರಾಮದಲ್ಲಿ ನಡೆದ ಪ್ರತಿಭಟನೆಗಳು ಜಾಗತಿಕ ಮಟ್ಟದಲ್ಲಿ ಆಶ್ಚರ್ಯ ಮತ್ತು ಚಿಂತೆಯನ್ನು ಹುಟ್ಟುಹಾಕಿವೆ. ಸಾವಿರಾರು ಜನರು ಕಪ್ಪು ಧ್ವಜಗಳೊಂದಿಗೆ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿರುವುದು ಗಮನ ಸೆಳೆದಿದೆ. ಭಾರತದಲ್ಲಿರುವ ಒಂದು ಗ್ರಾಮವು ವಿದೇಶಿ ರಾಜಕೀಯ ಘಟನೆಗಳ ಬಗ್ಗೆ ಇಷ್ಟೊಂದು ತೀವ್ರ ಪ್ರತಿಕ್ರಿಯೆ ನೀಡುವುದು ಸರಿಯೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇದೇ ಜನರು ಭಾರತದ ರಾಷ್ಟ್ರೀಯ ದುರಂತದ ಕ್ಷಣಗಳಲ್ಲಿ ಎಲ್ಲಿದ್ದರು? ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರ ಬಗ್ಗೆ ಇದೇ ಮಟ್ಟದ ಕಾಳಜಿ ಮತ್ತು ಪ್ರತಿಕ್ರಿಯೆ ಏಕೆ ಕಾಣಿಸಲಿಲ್ಲ? ಇದು ಕೇವಲ ಎರಡು ಘಟನೆಗಳ ವಿಚಾರವಲ್ಲ. ಕಾಶ್ಮೀರದಲ್ಲಿ ಪಂಡಿತರ ಹತ್ಯೆಗಳು ನಡೆದಾಗ, ದೇಶದ ಸೈನಿಕರು ಗಡಿಯಲ್ಲೇ ಉಗ್ರರ ವಿರುದ್ಧ ಹೋರಾಡಿ ಪ್ರಾಣ ತ್ಯಾಗ ಮಾಡಿದಾಗ ಅಥವಾ ಭಾರತವನ್ನು ಗುರಿಯಾಗಿಸಿ ನಡೆಯುವ ಉಗ್ರ ದಾಳಿಗಳ ಸಮಯದಲ್ಲಿ ಇದೇ ರೀತಿಯ ಭಾವನಾತ್ಮಕ ಪ್ರತಿಕ್ರಿಯೆ ಕಾಣಿಸಿಕೊಂಡಿದ್ದರೆ ಅದು ದೇಶಭಕ್ತಿಯ ನಿಜವಾದ ಉದಾಹರಣೆಯಾಗುತ್ತಿತ್ತು. ಆದರೆ ದೂರದ ದೇಶದ ನಾಯಕನಿಗಾಗಿ ಭಾವೋದ್ರೇಕ ತೋರಿಸಿ, ತನ್ನದೇ ದೇಶದ ನೋವಿನ ಕ್ಷಣಗಳಲ್ಲಿ ಮೌನವಾಗಿರುವುದು ಅನೇಕ ಜನರಲ್ಲಿ ಅಸಮಾಧಾನ ಮತ್ತು ಅನುಮಾನ ಹುಟ್ಟಿಸುವುದು ಸಹಜ.

ಭಾರತದಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ನಾಗರಿಕನಿಗೂ ಧಾರ್ಮಿಕ ನಂಬಿಕೆಗಳ ಸ್ವಾತಂತ್ರ್ಯ ಇದೆ. ಆದರೆ ಅವರಿಗಿಂತ ದೊಡ್ಡದು ರಾಷ್ಟ್ರಭಾವನೆ. ದೇಶದ ಭದ್ರತೆ, ಸೈನಿಕರ ತ್ಯಾಗ ಮತ್ತು ರಾಷ್ಟ್ರೀಯ ಗೌರವವೇ ಮೊದಲ ಆದ್ಯತೆಯಾಗಬೇಕು. ವಿದೇಶಿ ನಾಯಕರಿಗಾಗಿ ಬೀದಿಗೆ ಇಳಿಯುವಷ್ಟು ಉತ್ಸಾಹ ಇದ್ದರೆ, ದೇಶದ ಸೈನಿಕರಿಗಾಗಿ, ದುಃಖದ ಕ್ಷಣಗಳಿಗಾಗಿ ಮತ್ತು ಉಗ್ರವಾದದ ವಿರುದ್ಧವೂ ಅದೇ ಶಕ್ತಿಯಿಂದ ಧ್ವನಿ ಎತ್ತುವುದು ಅತ್ಯವಶ್ಯಕ. ವಿದೇಶಿ ರಾಜಕೀಯ ಅಥವಾ ಧಾರ್ಮಿಕ ಪ್ರಭಾವವು ಸ್ಥಳೀಯ ಸಮಾಜದ ಮೇಲೆ ಅತಿಯಾಗಿ ಪರಿಣಾಮ ಬೀರುವಂತಾಗುವುದು ಆರೋಗ್ಯಕರ ಬೆಳವಣಿಗೆ ಎಂದು ಹೇಳಲಾಗುವುದಿಲ್ಲ. ಈ ಲೇಖಕ ಸುಮಾರು ಮೂರು ತಿಂಗಳುಗಳ ಕಾಲ ಅಲಿಪುರ ಗ್ರಾಮದಲ್ಲೇ ವಾಸಿಸಿ ಅಲ್ಲಿನ ಸಾಮಾಜಿಕ ವಾತಾವರಣವನ್ನು ಸಮೀಪದಿಂದ ಗಮನಿಸಿದ್ದೇನೆ. ಆ ಅವಧಿಯಲ್ಲಿ ಸ್ಪಷ್ಟವಾಗಿ ಕಂಡ ಒಂದು ಸಂಗತಿ ಎಂದರೆ, ಅಲಿಪುರದ ಜನಸಂಖ್ಯಾ ಬದಲಾವಣೆಗಳು ಮತ್ತು ಅದರ ಪರಿಣಾಮವಾಗಿ ರೂಪುಗೊಂಡ ಸಾಮಾಜಿಕ ಪ್ರಭಾವವು ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿರುವ ಹಿಂದು ಸಮುದಾಯದ ಸ್ಥಿತಿಗೆ ಗಂಭೀರ ಪರಿಣಾಮ ಬೀರಿದೆ ಎಂಬುದು. ಹಲವೆಡೆ ಹಿಂದು ಕುಟುಂಬಗಳು ತಮ್ಮ ಹಿಂದಿನ ಸಾಮಾಜಿಕ ಪ್ರಭಾವವನ್ನು ಕಳೆದುಕೊಳ್ಳುತ್ತಿರುವ ಭಾವನೆ ವ್ಯಕ್ತಪಡಿಸುತ್ತಿರುವುದು ಕೇಳಿಬರುತ್ತದೆ.

ಇದೇ ಸಂದರ್ಭದಲ್ಲಿ ಅಲಿಪುರದಲ್ಲಿ ಕಂಡುಬರುವ ದೊಡ್ಡ ಕಟ್ಟಡಗಳು, ವಿಶಾಲ ಆಸ್ತಿಗಳು, ಅಲ್ಲಿರುವ ಹೆಲಿಪ್ಯಾಡ್ ಎಂಬ ಮೂಲಸೌಕರ್ಯಗಳು ಮತ್ತು ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ವ್ಯಾಪಾರ ಚಟುವಟಿಕೆಗಳು ಹಲವರಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ವಿಶೇಷವಾಗಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ದೊಡ್ಡ ವ್ಯವಹಾರ ಜಾಲಗಳು ಮತ್ತು ಆರ್ಥಿಕ ಚಟುವಟಿಕೆಗಳು ಎಲ್ಲಿಂದ ಹಣಕಾಸು ಬೆಂಬಲ ಪಡೆಯುತ್ತಿವೆ ಎಂಬ ಪ್ರಶ್ನೆ ಸ್ಥಳೀಯ ಮಟ್ಟದಲ್ಲಿ ಚರ್ಚೆಯಾಗುತ್ತಿವೆ. ಒಂದು ಗ್ರಾಮ ಅಭಿವೃದ್ಧಿಯಾಗುವುದು ಸಹಜವಾದ ಸಂಗತಿ. ಆದರೆ ಆ ಅಭಿವೃದ್ಧಿಯ ಹಿಂದಿರುವ ಹಣಕಾಸಿನ ಮೂಲಗಳು ಪಾರದರ್ಶಕವಾಗಿರಬೇಕು ಎಂಬುದೂ ಮುಖ್ಯವಾಗುತ್ತದೆ.

ಕಿರುಸುದ್ದಿ

ಬ್ರಹ್ಮರಥೋತ್ಸವಕ್ಕೆ ಚಾಲನೆ

ಕೆಜಿಎಫ್: ಇತಿಹಾಸ ಪ್ರಸಿದ್ಧ ಶಕ್ತಿ ದೇವತೆಗಳಲ್ಲಿ ಒಂದಾದ ಪಿಚ್ಚಹಳ್ಳಿ ಗ್ರಾಮದ ಚಾಮುಂಡೇಶ್ವರಿ ದೇವಾಲಯದ 9 ದಿನಗಳ ಜಾತ್ರಾ ಮಹೋತ್ಸವಕ್ಕೆ ದೇವಾಲಯದ ಕನ್ವೀನರ್ ನಾರಾಯಣ ರೆಡ್ಡಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸುಮಾರು 250 ವರ್ಷಗಳ ಇತಿಹಾಸ ಹೊಂದಿರುವ ಚಾಮುಂಡೇಶ್ವರಿ ದೇವಾಲಯವನ್ನು ಮೈಸೂರು ಮಹಾರಾಜರ ಅನುಮತಿಯಿಂದ ಸ್ಥಾಪಿಸಲಾಗಿದ್ದು, ಆ ಕಾಲದಿಂದಲೇ ಗ್ರಾಮಸ್ಥರು ಒಂದಾಗಿ ಜಾತ್ರೆಯನ್ನು ಆಚರಿಸುತ್ತಾ ಬಂದಿದ್ದಾರೆ ಎಂದು ಹೇಳಿದರು. ಹಬ್ಬದ ಸಂದರ್ಭದಲ್ಲಿಯೇ ದೇಶ-ವಿದೇಶಗಳಲ್ಲಿ ನೆಲೆಸಿರುವ ಊರಿನ ಜನರು ತಮ್ಮ ಊರಿಗೆ ಆಗಮಿಸುವುದು ಇಲ್ಲಿನ ವಿಶೇಷ ಸಂಪ್ರದಾಯವಾಗಿದೆ ಎಂದರು.

ಜಾತ್ರಾ ಕಾರ್ಯಕ್ರಮಗಳ ವಿವರ ನೀಡಿದ ಅವರು, ವೀರಶೈವ ಸಂಘದವರಿಂದ ಗಂಗಸಾಟು ಮೂಲಕ ಉತ್ಸವ ಆರಂಭವಾಗಲಿದ್ದು, ಮಾರ್ಚ್ 21ರಂದು ಧ್ವಜಾರೋಹಣ, 22ರಂದು ಸಿಂಹ ವಾಹನೋತ್ಸವ, 23ರಂದು ಬ್ರಹ್ಮರಥೋತ್ಸವ ಹಾಗೂ ರಾತ್ರಿ ಮಹಿಷಾಸುರ ವಾಹನೋತ್ಸವ, 24ರಂದು ಶಿರಸ್ಸು ಮತ್ತು ರಾತ್ರಿ ಮುತ್ಯಾಲಪಲ್ಲಕ್ಕಿ, 25ರಂದು ಅಶ್ವವಾಹನೋತ್ಸವ, 26ರಂದು ಪುಷ್ಪ ಪಲ್ಲಕ್ಕಿ, 27ರಂದು ಪಲ್ಲಕ್ಕಿ ಹಾಗೂ 28ರಂದು ವಸಂತೋತ್ಸವದೊಂದಿಗೆ ಜಾತ್ರೆ ಸಮಾಪ್ತಿಯಾಗಲಿದೆ ಎಂದು ಮಾಹಿತಿ ನೀಡಿದರು. ಇದಲ್ಲದೆ, ಮಾರ್ಚ್ 24ರಂದು ಶಿರಸ್ಸು ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಭಕ್ತರು ಹರಿಸಿಕೊಂಡಿರುವ ಹರಿಕೆಗಳನ್ನು ತೀರಿಸುವ ಉದ್ದೇಶದಿಂದ ಕುರಿ ಹಾಗೂ ಕೋಳಿ ಬಲಿ ನೀಡುವ ವಿಶೇಷ ಆಚರಣೆ ನಡೆಯಲಿದೆ ಎಂದು ತಿಳಿಸಿದರು.

ಬೇಸಿಗೆ ಶಿಬಿರಕ್ಕೆ ಅರ್ಜಿ ಅಹ್ವಾನ

ಹಾಸನ: 2026ನೇ ಸಾಲಿನಲ್ಲಿ ಜಿಲ್ಲಾ ಬಾಲಭವನ ಯೋಜನೆಯಡಿ 6 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಬೇಸಿಗೆ ಶಿಬಿರ ಚಟುವಟಿಕೆಗಳನ್ನು ಆಯೋಜಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಕರು ತಿಳಿಸಿದ್ದಾರೆ. ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಉಚಿತವಾಗಿ ಹಾಗೂ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ರೂ. 100 ಶುಲ್ಕದೊಂದಿಗೆ 200 ಮಕ್ಕಳ ಮಿತಿಯೊಳಗೆ 25 ದಿನಗಳ ಯೋಗ, ಸಂಗೀತ, ನೃತ್ಯ, ಅಬಕಾಸ್, ಆತ್ಮ ರಕ್ಷಣಾ ಕಲೆ, ಕರಾಟೆ, ಗಾಳಿಪಟ ತಯಾರಿ/ಕ್ರಾಫ್ಟ್, ಕ್ಯಾಲಿಗ್ರಾಫಿ, ಹಾಸ್ಯ ಮತ್ತು ಶೈಕ್ಷಣಿಕ ಚಲನಚಿತ್ರ ವೀಕ್ಷಣೆ, ವಾರ್ಲಿಕಲೆ, ಸ್ಪೋಕನ್ ಇಂಗ್ಲೀಷ್, ಬಾಲಕರ ರಂಗೋಲಿ ಸ್ಪರ್ಧೆ ಮತ್ತು ಸಾಂಸ್ಕೃತಿಕ ದಿನ ಈ ಚಟುವಟಿಕೆಗಳನ್ನೊಳಗೊಂಡ ಬೇಸಿಗೆ ಶಿಬಿರ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಆಸಕ್ತಿಯುಳ್ಳ ಮಕ್ಕಳು ಬೇಸಿಗೆ ಶಿಬಿರಕ್ಕೆ ಹೆಸರನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಾ.25 ರೊಳಗೆ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172-267218 ಬಾಲಭವನ ಕಾರ್ಯಕ್ರಮ ಸಂಯೋಜಕರು 8197132944 ಹಾಗೂ ಕಚೇರಿ ಸಹಾಯಕರು 8495839556 ರನ್ನು ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಕರು ತಿಳಿಸಿದ್ದಾರೆ.

ಧರ್ಮಸ್ಥಳ ಟ್ರಸ್ಟ್ ಕೊಡುಗೆ ಅನನ್ಯ : ಲಕ್ಷ್ಮಣ್ ಸಿಂಗ್

ತಾವರೆಕೆರೆ: ಕ್ಕುಗಳ ಜಾಗೃತಿ ಸಮಿತಿ ರಾಜ್ಯಾಧ್ಯಕ್ಷ ಲಕ್ಷ್ಮಣ್ ಸಿಂಗ್ ತಿಳಿಸಿದರು. ಹೊಸಕೋಟೆ ಹೊರವಲಯದ ಇಮ್ಮಡಿಹಳ್ಳಿಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ ಸುಜ್ಞಾನ ನಿಧಿ ಶಿಷ್ಯವೇತನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ,ಯಾವುದೇ ಒಂದು ದೇಶ ಪ್ರಗತಿಯಾಗಬೇಕಾದರೆ ಅದು ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ ಎಂಬ ವಿಷಯವನ್ನು ಮನಗಂಡ ಡಾ.ಡಿ.ವೀರೇಂದ್ರ ಹೆಗ್ಗಡೆ ಶೈಕ್ಷಣಿಕವಲಯದ ಪ್ರಗತಿಗೆ ಮುಂದಾಗಿ ಕೊಠಡಿಗಳು ಮತ್ತು ಶಿಕ್ಷಕರ ಕೊರತೆಯಿರುವ ಸರ್ಕಾರಿ ಶಾಲೆಗಳಿಗೆ ಕೊಠಡಿ ನಿರ್ಮಿಸಲು ಅನುದಾನ ನೀಡಿದ್ದಲ್ಲದೆ, ಅತಿಥಿ ಶಿಕ್ಷಕರನ್ನು ನೇಮಿಸಿ ಕಾಂಪೌಂಡ್ ಶೌಚಾಲಯ ನಿರ್ಮಾಣಕ್ಕೂಅನುದಾನ ನೀಡಿದ್ದು, ಹೆಚ್ಚಿನ ಫಲಿತಾಂಶಕ್ಕಾಗಿ ಹತ್ತನೇ ತರಗತಿ ಮಕ್ಕಳಿಗೆ ಉಚಿತ ಟ್ಯೂಷನ್ ಕೂಡ ಮಾಡುತಿದ್ದು, ಅವಶ್ಯವಿರುವ ಶಾಲೆಗಳಿಗೆ ಪ್ರತಿವರ್ಷ ಮೇಜು ಕುರ್ಚಿಗಳನ್ನೂ ಕೂಡ ಒದಗಿಸುತಿದ್ದು, ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿ ತಿಂಗಳೂ ಕೂಡ ಸುಜ್ಞಾನ ನಿಧಿ ಶಿಷ್ಯವೇತನ ನೀಡುವ ಮೂಲಕ ಅವರ ವಿದ್ಯಾಭ್ಯಾಸಕ್ಕೆ ನೆರವಾಗುತ್ತಿದ್ದಾರೆ. ಕೆ.ಆರ್.ಪುರಂ ವಲಯದ 15 ವಿದ್ಯಾರ್ಥಿಗಳಿಗೆ ಶಿಷ್ಯವೇತನ ಆದೇಶ ಪತ್ರ ನೀಡಿಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಕೆ.ಆರ್.ಪುರಂ ತಾಲೂಕು ಯೋಜನಾಧಿಕಾರಿಗಳಾದ ಪುರುಷೋತ್ತಮ್, ವಲಯ ಮೇಲ್ವಿಚಾರಕಿ ಭವ್ಯ, ಮುಖಂಡರಾದ ಯೋಗೇಶ್, ಆರಾಧ್ಯ,ಚಂದ್ರಪ್ಪ, ಒಕ್ಕೂಟಅಧ್ಯಕ್ಷರಾದ ಲಾವಣ್ಯ, ಉಪಾಧ್ಯಕ್ಷರಾದ ಶೋಭ ಹಾಗೂ ಸೇವಾ ಪ್ರತಿನಿಧಿ ಸೇರಿದಂತೆ ಪೋಷಕರುಇದ್ದರು.

ಕಂದಾಯ ಜಮೀನು ದಾಖಲೆ ರದ್ದುಗೊಳಿಸಿ | ಕಲ್ಲುಕುಟಿಕರಿಗೆ ಮೀಸಲಿಡಲು ರೈತಸಂಘ ಆಗ್ರಹ

ನಕಲಿ ದಾಖಲೆ ಸೃಷ್ಟಿಸಿದ ಅಧಿಕಾರಿಗಳು



ಮುಳಬಾಗಿಲು: ದೇವರಾಯಸಮುದ್ರ ಕಂದಾಯ ಸರ್ವೆ ನಂಬರ್ 117ರ 2 ಎಕರೆ 17 ಗುಂಟೆ ಬಂಡೆ ಖರಾಬ್ ಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕ್ಕೆಗೊಂಡು ದಾಖಲೆಗಳನ್ನು ರದ್ದು ಮಾಡಿ ಕಲ್ಲು ಕುಟುಕರಿಗೆ ಜಮೀನನ್ನು ಮೀಸಲಿಡಬೇಕೆಂದು ರೈತಸಂಘದಿಂದ ಆರ್.ಐ. ಸುಬ್ರಮಣಿ ಅವರಿಗೆ ಬಂಡೆ ಜಮೀನಿನಲ್ಲಿ ಮನವಿ ನೀಡಿ ಒತ್ತಾಯಿಸಲಾಯಿತು.

ಸರ್ಕಾರಿ ಆಸ್ತಿಗಳನ್ನು ಉಳಿಸಬೇಕಾದ ಕಂದಾಯ, ಸರ್ವೆ ಅಧಿಕಾರಿಗಳು ಭೂಗಳ್ಳರ ಜೊತೆ ಶಾಮೀಲಾಗಿ ಗ್ರಾಮೀಣ ಸೇವೆ ಮಾಡುವುದನ್ನು ಬಿಟ್ಟು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿ ಕೆರೆ, ಗೋಮಾಳ, ಗುಂಡುತೋಪು ಕಲ್ಲು ಬಂಡೆಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಕೋಟಿಕೋಟಿ ಬೆಲೆಗೆ ಮಾರಾಟ ಮಾಡುತ್ತಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುವಲ್ಲಿ ತಾಲೂಕು ದಂಡಾಧಿಕಾರಿಗಳು ವಿಫಲವಾಗಿದ್ದಾರೆಂದು ರೈತಸಂಘದ ರಾಜ್ಯ ಯುವ ಮುಖಂಡ ಕಮ್ಮದಟ್ಟಿ ಚಲಪತಿ ತಾಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.


ಆದರೂ ಕೆಲವರು ಸರ್ವೆ ಮತ್ತು ಕಂದಾಯ ಅಧಿಕಾರಿಗಳ ಮೇಲೆ ತಪ್ಪು ವರದಿ ನೀಡುವಂತೆ ಒತ್ತಡ ಹಾಕುತ್ತಿದ್ದಾರೆ. ಒಂದು ವೇಳೆ ತಪ್ಪು ವರದಿ ನೀಡಿದರೆ ನ್ಯಾಯಕ್ಕಾಗಿ ರಾಷ್ಟ್ರೀಯ ಹೆದ್ದಾರಿಯ ಮೇಲೆ ಜಾನುವಾರುಗಳು, ಟ್ರಾಕ್ಟರ್‌ಗಳನ್ನು ನಿಲ್ಲಿಸಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಬೆಂಗಳೂರು ಮೂಲದ ದಿವಂಗತ ಶಂಕರ್‌ರೆಡ್ಡಿ ಸರ್ವೆ ನಂಬರ್ 117 ರಲ್ಲಿ 2 ಎಕರೆ 18 ಗುಂಟೆ ಬಂಡೆ ಖರಾಬ್ ಸರ್ವೆ ನಂಬರ್ 118ರಲ್ಲಿ 10 ಎಕರೆ ಗೋಮಾಳ 4 ಎಕರೆಗೆ 20 ಗುಂಟೆ ಅರಣ್ಯ ಭೂಮಿ, ಕುರುಬರಹಳ್ಳಿ ಸರ್ವೆ ನಂಬರ್ 53 ರಲ್ಲಿ 8 ಎಕರೆ ಸರ್ಕಾರಿ ಆಸ್ತಿಗಳನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಿಸಿದ್ದಾರೆ ಎಂದರು. ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಮಾತನಾಡಿ, ಸರ್ಕಾರಿ ಆಸ್ತಿಗಳನ್ನು ಉಳಿಸುವಂತೆ ಪ್ರಾಮಾಣಿಕ ವಾಗಿ ಕೆಲಸ ಮಾಡುತ್ತಿರುವ ತಹಸೀಲ್ದಾರ್ ಅವರಿಗೆ ಕಂದಾಯ, ಸರ್ವೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ, ಸರ್ವೆ ಅಧಿಕಾರಿಗಳ ಮೇಲೆ ಕಂದಾಯ ಅಧಿಕಾರಿಗಳೇ ಒತ್ತಡ ಹಾಕಿ ತಪ್ಪು ವರದಿ ನೀಡಿ ನಮ್ಮ ಮೇಲೆ ಬಂದಿರುವ ಆರೋಪದಿಂದ ಮುಕ್ತಿ ಮಾಡಿ ಭೂಗಳ್ಳರಿಗೆ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನುಕೂಲ ಮಾಡಿ ಎಂದು ಒತ್ತಡ ಹಾಕುತ್ತಿರುವುದು ಯಾವ ನ್ಯಾಯ. ಕಂದಾಯ ಅಧಿಕಾರಿಗಳು ಹದಗೆಟ್ಟಿರುವುದಕ್ಕೆ ಪ್ರಮುಖ ಕಾರಣ ಒಂದೇ ಹೋಬಳಿಯಲ್ಲಿ 15-20 ವರ್ಷ ಠಿಕಾಣಿ ಹೂಡಿ ಬೇರು ಬಿಟ್ಟುಕೊಂಡಿರುವುದೇ ಇದಕ್ಕೆ ಮೂಲ ಕಾರಣವಾಗಿದೆ. ಜೊತೆಗೆ ಕ್ಷೇತ್ರದ ಅಭಿವೃದ್ಧಿಯ ಕನಸು ಹೊಂದಿರುವ ಶಾಸಕರಾದ ಸಮೃದ್ಧಿ ಮಂಜುನಾಥ್ ಅವರ ಆದೇಶಕ್ಕೂ ಕಂದಾಯ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಸಾವಿರಾರು ಎಕರೆ ಗೋಮಾಳ ಜಮೀನು ಭೂಗಳ್ಳರ ಪಾಲಾಗುತ್ತಿದ್ದರೂ ಕಂದಾಯ ಅಧಿಕಾರಿಗಳು ಮೌನವಾಗಿರುವ ಹಿಂದಿನ ರಹಸ್ಯ ಏನು ಶಾಸಕರ ಹಾಗೂ ತಹಸೀಲ್ದಾರರ ಆದೇಶಕ್ಕೂ ಬೆಲೆ ನೀಡದೆ ಇದ್ದರೆ ಇನ್ನು ಕಿರಿಯ ಅಧಿಕಾರಿಗಳ ಮೇಲೆ ಕ್ರಮಕ್ಕೆಗೊಳ್ಳುವವರು ಯಾರು. ಸರ್ಕಾರಿ ಆಸ್ತಿಗಳನ್ನು ಉಳಿಸುವವರು ಯಾರು ಎಂಬುದು ಪ್ರಶ್ನೆಯಾಗಿದೆ. ಮನವಿ ಸ್ವೀಕರಿಸಿ ಮಾತನಾಡಿದ ಆರ್.ಐ. ಸುಬ್ರಮಣಿ ರವರು, ಭೂಗಳ್ಳರಿಂದ ಹಾಗೂ ಕೆಲವು ರಾಜಕೀಯ ವ್ಯಕ್ತಿಗಳಿಂದ ನಮಗೆ ಒತ್ತಡ ಇದೆ. ತೆರವುಗೊಳಿಸುವಾಗ ನಮಗೂ ರಕ್ಷಣೆ ಬೇಕಾಗಿದೆ. ಎಷ್ಟೇ ಒತ್ತಡ ಬಂದರೂ ಭೂಗಳ್ಳರಿಂದ ಸರ್ಕಾರಿ ಆಸ್ತಿಗಳನ್ನು ಉಳಿಸುವ ಜೊತೆಗೆ ಸರ್ವೆ ನಂ.117ರಲ್ಲಿ ಬಂಡೆ ಖರಾಬಿನಲ್ಲಿ ರಸ್ತೆ ಮಾಡುವ ಜೊತೆಗೆ ದಾಖಲೆಗಳನ್ನು ಪರಿಶೀಲಿಸಿ ರದ್ದು ಮಾಡಿ ಸರ್ಕಾರಿ ಆಸ್ತಿಯನ್ನು ಉಳಿಸುವ ಭರವಸೆ ನೀಡಿದರು.

ಮನವಿನೀಡುವಾಗಜಿ.ಅ.ಈಕಂಬಳ್ಳಿಮಂಜುನಾಥ,ಕಮ್ಮದಟ್ಟಿ ಮಂಜುನಾಥ್, ದೇವರಾಜ್, ನಾಗಣ್ಣ, ರೆಡ್ಡಪ್ಪ, ರಾ.ಪ್ರ.ಕಾ.ಪಾರುಕ್ ಪಾಷ, ತಾ.ಪ್ರಕಾ.ರಾಜೇಶ್, ತಾ.ಅ.ಯಲುವಳ್ಳಿ ಪ್ರಭಾಕರ್, ಸುನಿಲ್‌ಕುಮಾರ್, ಜುಬೇರ್ ಪಾಷ, ನಾಗರಾಜ್, ಸುಪ್ರಿಂ ಚಲ, ಮಂಗಸಂದ್ರ ತಿಮ್ಮಣ್ಣ, ಗಿರೀಶ್, ಪುತ್ತೇರಿ ರಾಜು, ನಾಗೇಶ್, ಧರ್ಮ, ವೇಣು, ಕೇಶವ, ಶೈಲಜ, ರತ್ನಮ್ಮ, ಗಿರಿಜ, ನಿವೃತ್ತ ಯೋಧರು ಹಾಗೂ ಸುತ್ತಮುತ್ತಲ ಮಹಿಳೆಯರು ಮುಂತಾದವರು ಇದ್ದರು.

ಸರ್ವೇ ಸಾಬೀತು

ಸರ್ವೆ ದಾಖಲೆಗಳ ಪ್ರಕಾರ ಸರ್ವೆ ನಂಬರ್ 117 ರಲ್ಲಿ ಬಂಡೆ ಖರಾಬು ಎಂದು 2 ಎಕರೆ 17 ಗುಂಟೆಗೆ ದಾಖಲೆಯಿದೆ. ಆದರೆ ಕಂದಾಯ ಇಲಾಖೆಯಲ್ಲಿ ದಾಖಲೆಗಳನ್ನು ತಿದ್ದುಪಡಿ ಮಾಡಿರುವುದು ಸರ್ವೆ ಮಾಡಿದಾಗ ಸಾಬೀತಾಗಿದೆ. ಸರ್ವೆ ಶಿವಕುಮಾರ್ ಅವರು ಮಾಡಿರುವ ಸರ್ವೆ ಪ್ರಕಾರ 15 ಎಕರೆ ಸರ್ಕಾರಿ ಜಮೀನನ್ನು ಶಂಕರ್ ರೆಡ್ಡಿ ಕುಟುಂಬದವರು ಒತ್ತುವರಿ ಮಾಡಿಕೊಂಡಿರುವುದು ಸಾಬೀತಾಗಿದೆ.

ಚೆನ್ನಕೇಶವಸ್ವಾಮಿಗೆ ವಿಶೇಷ ಪೂಜೆ



ಬೇಲೂರು: ಐತಿಹಾಸಿಕ ಹಾಗೂ ಶಿಲ್ಪಕಲೆಯ ಅಪ್ರತಿಮ ಕೃತಿ ಆಗಿರುವ ಶ್ರೀ ಚೆನ್ನಕೇಶವ ಸ್ವಾಮಿ ದೇವಾಲಯದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಇಂದಿನಿಂದ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಆರಂಭಗೊಂಡಿವೆ.

ದೇಗುಲದ ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ ಮಾತನಾಡಿ, ಯುಗಾದಿ ಹಬ್ಬದ ದಿನದಿಂದಲೇ ಸ್ವಾಮಿಗೆ ವಿಶೇಷ ಅಭಿ ಷೇಕ, ಅಲಂಕಾರ ಹಾಗೂ ಪಂಚಾಂಗ ಶ್ರವಣದೊಂ ದಿಗೆ ಉತ್ಸವಗಳಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮಗಳು ಭವ್ಯ ರಥೋತ್ಸವದವರೆಗೆ ನಿರಂತರ ವಾಗಿ ನಡೆಯಲಿವೆ ಎಂದು ಹೇಳಿದರು.

ರಥೋತ್ಸ ವದ ಮುನ್ನ ಪ್ರತಿದಿನವೂ ಗರುಡ ವಾಹನ, ಹನುಮಂತ ವಾಹನ ಸೇರಿದಂತೆ ವಿವಿಧ ವಾಹನೋತ್ಸ ವಗಳು ಜರುಗಲಿವೆ.ದೇವಾಲಯದ ಆವರಣದಲ್ಲಿ ಮಂಟಪೋತ್ಸವಗಳು ಶಾಸ್ತ್ರೋಕ್ತವಾಗಿ ನೆರವೇರಲಿವೆ ಎಂದು ವಿವರಿಸಿದರು. ಈ ಆಚರಣೆಯ ಪ್ರಮುಖ ಆಕರ್ಷಣೆ ಯಾದ ಬ್ರಹ್ಮರಥೋತ್ಸ ವದ ದಿನ ಸಾವಿರಾರು ಭಕ್ತರು ಒಂದಾಗಿ ರಥವನ್ನು ಎಳೆಯುವ ಭವ್ಯ ದೃಶ್ಯ ಕಣ್ಮನ ಸೆಳೆಯು ತ್ತದೆ. ಧಾರ್ಮಿಕ ವಿಧಿವಿಧಾ ನಗಳ ಜೊತೆಗೆ ನಾಮಸಂ ಕೀರ್ತನೆ, ಭಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಗಳೂ ಆಯೋಜಿಸಲಾಗಿದ್ದು, ಭಕ್ತರಿಗೆ ಆಧ್ಯಾತ್ಮಿಕ ಅನುಭವವನ್ನುನೀಡಲಿವೆ. ಶಿಲ್ಪಕಲೆಯ ತವರೂರಾದ ಬೇಲೂರಿನಲ್ಲಿ ನಡೆಯುವ ಈ ಪವಿತ್ರ ಉತ್ಸವಗಳಲ್ಲಿ ಎಲ್ಲರೂ ಭಾಗವಹಿಸಿ ಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕು ಎಂದು ಅವರು ಮನವಿ ಮಾಡಿದರು.

ಬಿ.ವಿ.ಸತೀಶ್‌ಗೌಡರಿಂದ ಫುಡ್ ಕಿಟ್ ವಿತರಣೆ



ಹೊಸಕೋಟೆ: ರಂಜಾನ್ ಹಬ್ಬದ ಅಂಗವಾಗಿ ಬಮೂಲ್ ನಿರ್ದೇಶಕ ಬಿ.ವಿ ಸತೀಶ್ ಗೌಡರು ಅಲ್ಪಸಂಖ್ಯಾತ ಸಮುದಾಯವರಿಗೆ ಫುಡ್ ಕಿಟ್‌ಗಳನ್ನು ವಿತರಣೆ ಮಾಡಿದರು.

ಬೆಂಡಿಗಾನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಫುಡ್ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಂಜಾನ್ ಹಬ್ಬದ ಮೂಲ ಉದ್ದೇಶ ಆತ್ಮಪರಿಶೀಲನೆ ಮಾಡಿಕೊಳ್ಳುವುದು. ವರ್ಷಪೂರ್ತಿ ನಾವು ಮಾಡಿದ ಪಾಪ- ಪುಣ್ಯಗಳನ್ನು ಮನನ ಮಾಡಿಕೊಂಡು ಒಂದು ತಿಂಗಳು ಉಪವಾಸ ಆಚರಿಸುವ ಮೂಲಕ ಆತ್ಮಶುದ್ಧಿ ಮಾಡಿಕೊಳ್ಳಬೇಕು.ಬೆಳಗ್ಗಿನಿಂದ ರಾತ್ರಿ ತನಕ ಉಪವಾಸವಿದ್ದು, ಅನ್ನದ ಬೆಲೆ ಏನೆಂಬುದು ಅರಿತುಕೊಳ್ಳಬೇಕು. ದಿನಕ್ಕೆ ಐದು ಬಾರಿ ಕಡ್ಡಾಯವಾಗಿ ನಮಾಜ್ ಮಾಡುತ್ತಾ ಪವಿತ್ರ ರಮ್ಜಾನ್ ತಿಂಗಳನ್ನು ಭಕ್ತಿಯಿಂದ ಆಚರಿಸಲಾಗುತ್ತದೆ.ಹೊಸಕೋಟೆ ತಾಲೂಕಿನ ಎಲ್ಲ ಮುಸ್ಲಿಂ ಸಮುದಾಯದವರಿಗೆ ರಂಜಾನ್ ಹಬ್ಬ ಎಲ್ಲರಿಗೂ ಒಳಿತನ್ನುಂಟು ಮಾಡಲಿ ಎಂದರು. ಇದೇ ಸಂದರ್ಭದಲ್ಲಿ ದೊಡ್ಡ ಅರಳಿಗೆರೆ ಗ್ರಾಪಂ ವ್ಯಾಪ್ತಿಯ ತಮ್ಮರಸನಹಳ್ಳಿ ಗ್ರಾಮದ 200ಕ್ಕೂ ಹೆಚ್ಚು ಕುಟುಂಬಗಳಿಗೆ ಫುಡ್ ಕಿಟ್ ವಿತರಣೆ ಮಾಡಿದರು. ತಮ್ಮರಸನಹಳ್ಳಿ ಗ್ರಾಪಂ ಸದಸ್ಯ ಯಾರಬ್ ಹಾಗೂ ಮುಖಂಡರು ಹಾಜರಿದ್ದರು.

ಮಳೆ-ಬೆಳೆ ಸಮೃದ್ಧಿಯಾಗಲಿ



ಚನ್ನರಾಯಪಟ್ಟಣ: ತಾಲೂಕಿನ ಚನ್ನೇನಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬವನ್ನು ಭಕ್ತಿಭಾವ ಮತ್ತು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಹೊಸ ಸಂವತ್ಸರದ ಅಂಗವಾಗಿ ಗ್ರಾಮಸ್ಥರು ಸಂಪ್ರದಾಯಬದ್ಧವಾಗಿ ಹೊನ್ನಾರು ಕಟ್ಟುವ ಮೂಲಕ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಗ್ರಾಮದಲ್ಲಿ ಮಳೆ-ಬೆಳೆ ಸಮೃದ್ಧಿಯಾಗಲಿ, ಜನರಿಗೆ ಸುಖ-ಶಾಂತಿ ನೆಲೆಸಲಿ ಎಂದು ಕೋರಿದರು. ಗ್ರಾಮದಲ್ಲಿ ಯಾವುದೇ ಜಾತಿ-ಮತ ಭೇದಭಾವವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಗ್ರಾಮೀಣ ಏಕತೆ ಮತ್ತು ಸೌಹಾರ್ದತೆಯ ಪ್ರತೀಕವಾಗಿ ಕಾಣಿಸಿಕೊಂಡಿತು. ಈ ವರ್ಷ ಆನಂದ್ ಚನ್ನೇನಹಳ್ಳಿ ಹಾಗೂ ಮಂಜಣ್ಣ ಅವರು ಹೊನ್ನಾರು ಕಾರ್ಯಕ್ರಮವನ್ನು ಸಮರ್ಪಕವಾಗಿ ನಡೆಸಿಕೊಟ್ಟರು. ಕಾರ್ಯಕ್ರಮದ ವೇಳೆ ಗ್ರಾಮದ ಹಿರಿಯರು, ಮುಖಂಡರು, ಮಹಿಳೆಯರು ಮತ್ತು ಮಕ್ಕಳು ಉತ್ಸಾಹದಿಂದ ಭಾಗವಹಿಸಿ ಕೇಕೆಸಿಳ್ಳೆ, ಚಪ್ಪಾಳೆ ಹೊಡೆದು ಸಂಭ್ರಮಿಸಿದರು. ಹಬ್ಬದ ಉಲ್ಲಾಸ ಎಲ್ಲೆಡೆ ಮೂಡಿಬಂದಿದ್ದು, ನವ ಸಂವತ್ಸರವನ್ನು ಆತ್ಮೀಯವಾಗಿ ಸ್ವಾಗತಿಸಿದರು. ಒಟ್ಟಾರೆ, ಯುಗಾದಿ ಹಬ್ಬವು ಚನ್ನೇನಹಳ್ಳಿಯಲ್ಲಿ ಸಾಂಪ್ರದಾಯಿಕ ಮೌಲ್ಯಗಳು, ಭಕ್ತಿ ಮತ್ತು ಸಮೂಹಭಾವನೆಗಳನ್ನು ಒಟ್ಟುಗೂಡಿಸಿದ ವಿಶೇಷ ಆಚರಣೆಯಾಗಿ ಕಂಗೊಳಿಸಿತು.

ಅಂಗಾಳ ಪರಮೇಶ್ವರಿ ವಾರ್ಷಿಕೋತ್ಸವ



ತಾವರೆಕೆರೆ: ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದ ಶ್ರೀ ಅಂಗಾಳ ಪರಮೇಶ್ವರಿ ದೇವಾಲಯದ ಮೊದಲ ವರ್ಷದ ವಾರ್ಷಿಕೋತ್ಸವ ಹಾಗೂ ಕುಂಭಾಭಿಷೇಕ ಮಹೋತ್ಸವವು ದೇವಾಲಯದ ಪ್ರಧಾನ ಅರ್ಚಕರಾದ ಅಂಜಲಿ ಅವರ ನೇತೃತ್ವದಲ್ಲಿ ಎರಡು ದಿನಗಳ ಕಾಲ ವಿಶೇಷ ರೀತಿಯ ಪೂಜೆ ಹಾಗೂ ಹೋಮ ಅವನಗಳ ಮೂಲಕ ಪೂಜಾ ಕಾರ್ಯಕ್ರಮ ನೆರವೇರಿತು. ದೇವಾಲಯದ ಪ್ರಧಾನ ಅರ್ಚಕರಾದ ಅಂಜಲಿ ಮಾತನಾಡಿ ದೇವಾಲಯವು ಸ್ಥಾಪನೆಗೊಂಡು ಮೂರು ವರ್ಷಗಳಾಗಿದ್ದು ಆದರೆ ಪ್ರತ್ಯೇಕ ಗುಡಿ ಇಲ್ಲದ ಕಾರಣ ನಮ್ಮ ಮನೆಯ ಬಳಿಯೇ ಒಂದು ಸಣ್ಣ ಸ್ಥಳದಲ್ಲಿ ದೇವರ ವಿಗ್ರಹ ಇಟ್ಟು ವಿಶೇಷ ಪೂಜೆ ಹಾಗೂ ಪ್ರತಿ ಶುಕ್ರವಾರ ಮಂಗಳವಾರ ಭಾನುವಾರ ಹಾಗೂ ಅಮಾವಾಸ್ಯೆ ಹುಣ್ಣಿಮೆ ದಿನದಂದು ಪೂಜೆ ಸಲ್ಲಿಸುತ್ತಿದ್ದೆವು. ಎರಡು ದಿನಗಳ ಕಾಲ ಮುಳಬಾಗಿಲು ಗುರು ಸಂಜಯ್ ಹಾಗೂ ಸಂತೆಹಳ್ಳಿ ಸುಮಂಗಳಿ ಅಮ್ಮನವರಿಂದ ಪೂಜಾ ಕಾರ್ಯಕ್ರಮಗಳು ನೆರವೇರಿತು.ಶ್ರೀ ಅಂಗಳ ಪರಮೇಶ್ವರಿ ವಿಗ್ರಹಕ್ಕೆ ವಿಶೇಷ ರೀತಿಯ ಹೂವಿನ ಅಲಂಕಾರ ಹಾಗೂ ಶ್ರೀ ಮುನೇಶ್ವರ ಸ್ವಾಮಿಯ ವಿಶೇಷ ಪೂಜೆ ಹಾಗೂ ಮೆರವಣಿಗೆ ದೇವರ ಪ್ರದರ್ಶನದೊಂದಿಗೆ, ಗಣಪತಿ ಪೂಜೆ ,ಗಂಗೆ ಪೂಜೆ ,ಪುಣ್ಯಾಹ ಕಳಶಗಳ ಆರಾಧನೆ ,ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಮಹಾಗಣಪತಿ ಹೋಮ ,ದುರ್ಗಾ ಹೋಮ ಹಾಗೂ ಕರಗ ಮಹೋತ್ಸವದ ಜೊತೆಗೆ ಮರುದಿನ ತಂಬಿಟ್ಟಿನ ಆರತಿಯೊಂದಿಗೆ ಅಗ್ನಿಕೊಂಡ ಪ್ರವೇಶಿಸಲಾಯಿತು. ದೇವಾಲಯದ ಪ್ರಧಾನ ಅರ್ಚಕ ಅಂಜಲಿ ಮತ್ತು ಮುನಿರಾಜು, ಸುಮಂಗಳಮ್ಮ, ದೇವಾಲಯದ ಸೇವಕ ರಾಮಾಂಜಿ, ಲೋಕೇಶ್, ಟಿ,ಕೆ ಮಂಜುನಾಥ್, ಚಂದ್ರಶೇಖರ್, ಮುರಳಿ ರಿಷಿ, ನಾರಾಯಣಸ್ವಾಮಿ, ಲವಮ್ಮ ,ಕುಶಮ್ಮ, ಗುರು ಸಂಜಯ್, ಸುಭಾಷ್ ಜೆ ಹಾಗೂ ನೂರಾರು ಸಂಖ್ಯೆಯಲ್ಲಿ ಭಕ್ತ ಸಮೂಹ ಸ್ಥಳೀಯರು ಗ್ರಾಮಸ್ಥರು ಪೂಜಾ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪೂರ್ಣಿಮಾಗೆ ಹಿಂದಿ ಗೌರವ್ ಸಮ್ಮಾನ್ ಗೌರವ

ಮೈಸೂರು: ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಡಾ. ಪೂರ್ಣಿಮಾ ಎ.ಪಿ ಅವರಿಗೆ ದುಬೈನ (ಯುಎಇ) 'ಸಾಹಿತ್ಯ ಅರ್ಪಣ್' ಸಂಸ್ಥೆಯು ಪ್ರತಿಷ್ಠಿತ ಅಂತರಾಷ್ಟ್ರೀಯ ಪ್ರಶಸ್ತಿಯಾದ ಹಿಂದಿ ಗೌರವ್ ಸಮ್ಮಾನ್ 2026 ಅನ್ನು ನೀಡಿ ಗೌರವಿಸಿದೆ. ಹಿಂದಿ ಭಾಷೆ ಮತ್ತು ಸಾಹಿತ್ಯಕ್ಕೆ ಅವರು ಸಲ್ಲಿಸಿದ ಅಪಾರ ಸೇವೆ ಮತ್ತು ಸಮರ್ಪಣಾ ಮನೋಭಾವವನ್ನು ಗುರುತಿಸಿ ಈ ಜಾಗತಿಕ ಗೌರವವನ್ನು ನೀಡಲಾಗಿದೆ. ಡಾ. ಪೂರ್ಣಿಮಾ ಅವರು ಪ್ರಸ್ತುತ ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ (ಸ್ವಾಯತ್ತ) ಹಿಂದಿ ವಿಭಾಗದ



ಮುಖ್ಯಸ್ಥರಾಗಿ ಮತ್ತು ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 11 ವರ್ಷಗಳಿಗೂ ಹೆಚ್ಚು ಶೈಕ್ಷಣಿಕ ಅನುಭವ ಹೊಂದಿರುವ ಇವರು 2017 ರಿಂದ ಈ ಸಂಸ್ಥೆಯ ಅವಿಭಾಜ್ಯ ಅಂಗವಾಗಿದ್ದಾರೆ. ಇವರು ಇದುವರೆಗೆ 14 ಪುಸ್ತಕಗಳು ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ಯೂಟ್ಯೂಬ್‌ನಲ್ಲಿ ಹಿಂದಿ ವ್ಯಾಕರಣ ಮತ್ತು ಸಾಹಿತ್ಯದ ಕುರಿತು ಹಲವಾರು ಶೈಕ್ಷಣಿಕ ಉಪನ್ಯಾಸಗಳನ್ನು ನೀಡಿದ್ದಾರೆ. ಹಿಂದಿ ಗೌರವ್ ಸಮ್ಮಾನ್ 2026 ರೊಂದಿಗೆ ಡಾ. ಪೂರ್ಣಿಮಾ ಅವರು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಕ್ಕಾಗಿ ಒಟ್ಟು 14 ಪ್ರತಿಷ್ಠಿತ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿ ಇವರು 24 ಕ್ಕೂ ಹೆಚ್ಚು ಆಹ್ವಾನಿತ ಭಾಷಣಗಳನ್ನು ನೀಡಿದ್ದಾರೆ. ಇದರಲ್ಲಿ ಮಹಿಳಾ ಆರೋಗ್ಯ, ಹದಿಹರೆಯದವರ ಕ್ಷೇಮ ಮತ್ತು ಹಿಂದಿ ಭಾಷೆಯಲ್ಲಿನ ಉದ್ಯೋಗಾವಕಾಶಗಳ ಕುರಿತಾದ ಉಪನ್ಯಾಸಗಳು ಪ್ರಮುಖವಾಗಿವೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಮೈಸೂರು: ಮೈಸೂರಿನ ಮರುಳೇಶ್ವರ ನೇಗಿಲಯೋಗಿ ಭವನದಲ್ಲಿ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲ ಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾ.22 ರಂದು ಆಯೋಜಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ ಮಹಿಳೆಯರ ಪ್ರತಿಭೆಯನ್ನು ಉತ್ತೇಜಿಸುವ ಹಾಗೂ ಅವರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವ ಉದ್ದೇಶದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ರೀತಿಯ ಸ್ಪರ್ಧೆಗಳು, ನೃತ್ಯ, ಭಾವಗೀತೆ, ಭರತನಾಟ್ಯ ಮುಂತಾದ ಕಾರ್ಯಕ್ರಮಗಳು ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದತ್ತಾತ್ರೇಯ ಸಮಾಜ ಸಾಧುಮಠದ ಆವರಣದಲ್ಲಿ ಯುಗಾದಿ ಹಬ್ಬ ಆಚರಣೆ

ಪುಣ್ಯ ಫಲ ಪ್ರಾಪ್ತಿಗೆ ಪಂಚಾಂಗ ರಾಮಬಾಣ



ಚಿಕ್ಕಬಳ್ಳಾಪುರ: ಪುಣ್ಯ ಫಲ ಪ್ರಾಪ್ತಿಗೆ ಪಂಚಾಂಗ ಶ್ರವಣ ಒಂದು ರಾಮಬಾಣ, ದೇವರ ದರ್ಶನದಂತೆ ಪಂಚಾಂಗ ಶ್ರವಣವೂ ಎಲ್ಲರಲ್ಲೂ ದೈವೀ ಮನೋಭಾವನೆ ಮೂಡಿಸುತ್ತದೆ. ಪಂಚಾಂಗ ಶ್ರವಣವು ಬಹು ಮುಖ್ಯವಾಗಿ ಯುಗಾದಿ ಹಬ್ಬದ ದಿನದಂದು ನಡೆಯುವ ಒಂದು ಸಾಂಪ್ರದಾಯಿಕ ಧಾರ್ಮಿಕ ಕಾರ್ಯಕ್ರಮ ಇದಾಗಿದೆ .ಎಂದು ಶ್ರೀ ದತ್ತಾತ್ರೇಯ ಸಮಾಜ ಸಾಧು ಮಠದ ಪ್ರಧಾನ ಅರ್ಚಕ ಎನ್ ಬಾಲಚಂದ್ರ ಶರ್ಮ ಹೇಳಿದರು.

ಅವರು ಚಿಕ್ಕಬಳ್ಳಾಪುರ ನಗರದ ದತ್ತಾತ್ರೇಯ ಸಮಾಜ ಸಾಧು ಮಠ ಟ್ರಸ್ಟ್ ವತಿಯಿಂದ ದತ್ತಾತ್ರೇಯ ಸಮಾಜ ಸಾಧುಮಠದ ಆವರಣದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಆಯೋಜಿಸಿದ್ದ 'ಪಂಚಾಂಗ ಶ್ರವಣದ ಅರ್ಥ ತಿಳಿ ಹೇಳುತ್ತಾ ಮಾತನಾಡಿ, ಈ ಪಂಚಾಂಗವು ವೇದ ಪರಿಣಿತರು ಅವರವರ ರಾಶಿಗೆ ತಕ್ಕಂತೆ ಅಮೂಲಾಗ್ರವಾಗಿ ಸಿದ್ಧಪಡಿಸಿರುವುದಾಗಿರುತ್ತದೆ ಇದು ಎಲ್ಲರಿಗೂ ಒಳಿತೆ ಆಗಲಿದೆ ಇಲ್ಲವೇ ಎಲ್ಲರಿಗೂ ಕೆಡಕು ಉಂಟಾಗುತ್ತದೆ ಎಂದು ಹೇಳಲಾಗದು ಎಂದ ಅವರು ಸಂಜೆ ಇಲ್ಲವೇ ರಾತ್ರಿ ಹೊತ್ತು ಪಂಚಾಂಗ ಶ್ರವಣ ಮಾಡುವುದನ್ನು ಅನಾದಿ ಕಾಲದಿಂದಲೂ ಮಾಡಿ ಬಂದ ರೂಢಿ, ಆಚರಣೆ ಆಗಿದೆ ಇಲ್ಲಿ ಮಳೆ, ರಾಶಿ, ದವಸ, ಧಾನ್ಯ, ಪ್ರಕೃತಿಯಲ್ಲಿ ಉಂಟಾಗಲಿರುವ ಫಲಾ -ಫಲಗಳನ್ನ ವೇದಪರಿಣಿತರು ಸಿದ್ಧಪಡಿಸಿರುವ ಪಂಚಾಂಗದಲ್ಲಿನ ಅಂಶಗಳನ್ನು ತಿಳಿಯಲಾಗುತ್ತದೆ ಈ ದಿನ ಚಂದ್ರನ ದರ್ಶನವೂ ಮಾಡಲಾಗುತ್ತದೆ, ಗಣೇಶ ಚೌತಿ ದಿನ ಚಂದ್ರನ ದರ್ಶನವನ್ನು ಅಚಾನಕ್ ಮಾಡಿದ್ದರೂ ಆ ದೋಷವು ಯುಗಾದಿ ದಿನದ ಚಂದ್ರನನ್ನು ನೋಡಿದರೆ ನಿವಾರಣೆಯಾಗುತ್ತದೆ ಎಂಬ ನಂಬಿಕೆಯೂ ಇದೆ ಗ್ರಾಮೀಣ ಪ್ರದೇಶಗಳಲ್ಲಿ ಅನಾದಿ ಕಾಲದಿಂದಲೂ ಪಂಚಾಂಗ ಶ್ರವಣವನ್ನೂ ಮಾಡುತ್ತಾ ಬಂದಿದ್ದಾರೆ ಕಾಣಬಹುದಾಗಿದೆ ಎಂದರು. ದತ್ತಾತ್ರೆ ಸಮಾಜ ಸಾಧುಮಠ ಟ್ರಸ್ಟ್ ನ ಅಧ್ಯಕ್ಷ ವಿ. ಕೃಷ್ಣಮೂರ್ತಿ, ಅರ್ಚಕ ಬಿ.ಗಣೇಶಶರ್ಮ, ಲೋಕಕಲ್ಯಾಣಾರ್ಥವಾಗಿ ಪ್ರಧಾನ ಅರ್ಚಕ ಎನ್.ಬಾಲಚಂದ್ರಶರ್ಮ ಅವರ ಪ್ರಾರ್ಥನೆಯೊಂದಿಗೆ ಮಹಾಮಂಗಳಾರತಿ ಮಾಡಲಾಯಿತು. ದತ್ತಾತ್ರೇಯ ಸಮಾಜ ಸಾಧು ಮಠ ಟ್ರಸ್ಟಿನ ಸದಸ್ಯ ರಾದ ಕಣಿವೆ ಹರಿಕುಮಾರ್, ಶ್ರೀನಿವಾಸ್, ಆರ್.ಒ.ಪ್ರಭಾಕರ್ ಸದಸ್ಯ ಹಾಗೂ ಪತ್ರಕರ್ತ ಎಂಕೃಷ್ಣಪ್ಪ, ಸಾಧುಮಠದ ಗೀತ ಗಾಯನ ಮಹಿಳಾ ಮಂಡಳಿ ಸದಸ್ಯರು ಸೇರಿದಂತೆ ಪಂಚಾಂಗ ಶ್ರವಣವನ್ನು ಆಲಿಸಿದರು.

ನಟ ರವಿಚಂದ್ರನ್, ಯುವರಾಜ್ ಕುಮಾರ್,ಅರ್ಜುನ್ ಜನ್ಯ, ಅನುಶ್ರೀ ಭಾಗಿ

ಡಿಎಂಆರ್ ಫೌಂಡೇಷನ್‌ನಿಂದ ಯುಗಾದಿ



ಕೋಲಾರ: ನಗರದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಡಿಐಜಿಪಿ ದೇವರಾಜ್ ನೇತೃತ್ವದ ಶ್ರೀ ದ್ಯಾವೀರಪ್ಪ ಮತ್ತು ರತ್ನಮ್ಮ ಎಜುಕೇಶನ್ ಸೊಸೈಟಿ ಡಿಎಂಆರ್ ಫೌಂಡೇಶನ್ ಮತ್ತು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಭಾಗಿತ್ವದಲ್ಲಿ ಅದ್ದೂರಿಯಾಗಿ ನಡೆದ ಕೋಲಾರ ಯುಗಾದಿ ಉತ್ಸವ -2026 ಕಾರ್ಯಕ್ರಮ ರಾತ್ರಿ 12 ಗಂಟೆಯವರೆಗೂ ಜನತೆ ವೀಕ್ಷಿಸಿದ್ದು, 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಿಗೆ ಬೇವು,ಬೆಲ್ಲದ ಜತೆ ಸಂಗೀತದ ರಸದೌತಣ ಉಣಬಡಿಸಲಾಯಿತು.

ನಗರದ ಜೂನಿಯರ್ ಕಾಲೇಜು ಮೈದಾನದ ಸುಂದರ ವೇದಿಕೆಯಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್, ನಟಿ ಅನುಪ್ರಭಾಕರ್, ಸಂಗೀತ ಮಾಂತ್ರಿಕ ಅರ್ಜುನ್ ಜನ್ಯ, ನಿರೂಪಕಿ ಅನುಶ್ರೀ ಮತ್ತು ಅಖಿಲ ಪಜಮಣ್ಣು ಮ್ಯೂಸಿಕಲ್ ನೈಟ್ ವೀಕ್ಷಿಸಲು ಇಡೀ ಮೈದಾನ ಕಿಕ್ಕಿರಿದು ತುಂಬಿದ್ದು, ಯಶಸ್ವಿಯಾಯಿತು. ಅರ್ಜುನ್ ಜನ್ಯ, ಅಖಿಲ ಪಜಮಣ್ಣು ಅವರ ಗಾಯನಕ್ಕೆ ಜನ ಮನಸೋತರು, ಇಡೀ ಕಾರ್ಯಕ್ರಮದುದ್ದಕ್ಕೂ ಹರ್ಷೋದ್ಗಾರ ಮುಗಿಲು ಮುಟ್ಟಿದ್ದು, ನಿರೂಪಕಿ ಅನುಶ್ರೀ ಅವರ ನಿರೂಪಣೆಗೆ ಕರತಾಡನ ಮುಗಿಲು ಮುಟ್ಟಿತ್ತು. ಕಾರ್ಯಕ್ರಮ ಆಯೋಜಿಸಿದ್ದ ಡಿಎಂಆರ್ ಫೌಂಡೇಷನ್‌ನ ನೇತೃತ್ವ ವಹಿಸಿರುವ ಹಿರಿಯ ಐಎಎಸ್ ಅಧಿಕಾರಿ ಡಿಐಜಿಪಿ ದೇವರಾಜ್, ಮುಖ್ಯಮಂತ್ರಿಗಳ ಮಾಧ್ಯಮ ಕಾರ್ಯದರ್ಶಿ ಕೆ.ವಿ.ಪ್ರಭಾಕರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಡಿಐಜಿಪಿ ದೇವರಾಜ್ ಅವರು ಕೋಲಾರದ ಜನತೆಗೆ ಬೇವು-ಬೆಲ್ಲದ ಜತೆಗೆ ಸಂಗೀತದ ಸಿಹಿಯನ್ನು ನೀಡಿದ್ದು, ಈ ಕಾರ್ಯಕ್ರಮ ನಿರಂತರವಾಗಿ ನಡೆಯಲಿ, ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಡಾ.ಶಂಕರ್, ಅಪರ ಜಿಲ್ಲಾಧಿಕಾರಿ ಮಂಗಳಾ,ವಸತಿ ಸಚಿವರ ಮಾಧ್ಯಮ ಸಲಹೆಗಾರ ಲಕ್ಷ್ಮೀನಾರಾಯಣ, ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್, ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸದಸ್ಯ ವಿ.ಮುನಿರಾಜು, ಪತ್ರಕರ್ತ ಗೋಪಿನಾಥ್, ಜಿಲ್ಲಾ ಹಿರಿಯ ವಕೀಲರಾದ ಕೆ.ವಿ.ಶಂಕರಪ್ಪ,ಬಿಸಪ್ಪಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಕಿರುಸುದ್ದಿ

ರೈಲ್ವೆ ಬ್ಯಾರಿಕೇಡ್‌ಗಳ ನಡುವೆ ಸಿಲುಕಿದ ಕಾಡಾನೆ

ಮೈಸೂರು: ಆಹಾರ ಮತ್ತು ನೀರು ಅರಸಿ ನಾಡಿಗೆ ಬಂದಿದ್ದ ಒಂಟಿ ಸಲಗವೊಂದು ವಾಪಸ್ ಕಾಡಿಗೆ ಹೋಗುವ ಸಂದರ್ಭದಲ್ಲಿ ರೈಲ್ವೆ ಬ್ಯಾರಿಕೇಡ್‌ಗಳ ನಡುವೆ ಸಿಲುಕಿ ಹಾಕಿಕೊಂಡು ಮರಣಯಾತನೆ ಅನುಭವಿಸಿದ ಘಟನೆ ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಉಡುವೆಪುರ ಗ್ರಾಮದ ಬಳಿ ನಡೆದಿದೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದ ಹೊರಬಂದಿದ್ದ ಈ



ಒಂಟಿ ಸಲಗ, ಹಸಿವಿನಿಂದಾಗಿ ಹುಣಸೂರು ತಾಲೂಕಿನ ಉಡುವೆಪುರ ಗ್ರಾಮದ ರೈತರ ಜಮೀನುಗಳಿಗೆ ನುಗ್ಗಿತ್ತು. ಜಮೀನಿನಲ್ಲಿ ಆನೆಯನ್ನು ಕಂಡ ರೈತರು ಭಯದಿಂದ ಜೋರಾಗಿ ಕೂಗಾಡಿದ್ದಾರೆ. ಜನರ ಚೀರಾಟ ಮತ್ತು ವಾಹನಗಳ ಹಾರ್ನ್ ಸದ್ದಿನಿಂದ ಬೆದರಿದ ಆನೆ, ಗಾಬರಿಯಿಂದ ಕಾಡಿನತ್ತ ಓಡಲಾರಂಭಿಸಿದೆ. ಕಾಡಿನೊಳಗೆ ಪ್ರವೇಶಿಸುವ ಭರದಲ್ಲಿ ಆನೆಯು ರೈಲ್ವೆ ಹಳಿಗಳಿಂದ ನಿರ್ಮಿಸಲಾಗಿದ್ದ ತಡೆಗೋಡೆಯ ಕೆಳಗಡೆಯಿಂದ ನುಸುಳಲು ಪ್ರಯತ್ನಿಸಿದೆ. ಈ ವೇಳೆ ಆನೆಯ ದೇಹವು ಕಂಬಗಳ ನಡುವೆ ಸಿಲುಕಿಕೊಂಡಿದೆ. ಸುಮಾರು ಹೊತ್ತು ಆನೆಯು ಹೊರಬರಲಾರದೆ ಒದ್ದಾಡಿದ್ದು, ಅದರ ಸ್ಥಿತಿಯನ್ನು ಕಂಡು ಸ್ಥಳೀಯರು ಮರುಗಿದ್ದಾರೆ. ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿದೆ. ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಆನೆಗೆ ಯಾವುದೇ ಗಾಯವಾಗದಂತೆ ಜಾಣ್ಮೆಯಿಂದ ರೈಲ್ವೆ ಹಳಿ ಕಂಬಿಯಿಂದ ಅದನ್ನು ಬಿಡಿಸುವಲ್ಲಿ ಯಶಸ್ವಿಯಾದರು. ಹೊರಬರುತ್ತಿದ್ದಂತೆ ಕಾಡಿನೊಳಗೆ ಬದುಕಿದೆಯಾ ಬಡ ಜೀವವೇ ಎಂಬಂತೆ ಆನೆ ಓಡಿ ಹೋಯಿತು.

ಗರಿಷ್ಠ ಬೇಡಿಕೆ ಸುಮಾರು 19,000 ಮೆಗಾವ್ಯಾಟ್ ಗೆ ತಲುಪುವ ನಿರೀಕ್ಷೆ

ವಿದ್ಯುತ್ ಪೂರೈಕೆಗೆ ಕ್ರಮ

ಮಂಡ್ಯ: ರಾಜ್ಯದಲ್ಲಿ ಪ್ರಸ್ತುತ ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ದಿನವಹಿ ಏಳು ಗಂಟೆಗಳ ಮೂರು ಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ಇದನ್ನು ಬೇಸಿಗೆ ಅವಧಿಯಲ್ಲೂ ಮುಂದುವರೆಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.



ಬೇಸಿಗೆ ಅವಧಿಯಲ್ಲಿ ವಿದ್ಯುತ್ ಬಳಕೆ ಪ್ರಮಾಣವು ಗಣನೀಯವಾಗಿ ಏರಿಕೆ ಆಗುವುದರಿಂದ ರೈತರ ಕೃಷಿ ಪಂಪ್ ಸೆಟ್ ಗಳಿಗೆ ಹಗಲಿನ ವೇಳೆಯಲ್ಲಿ 7 ಗಂಟೆಗಳ ವಿದ್ಯುತ್ ಪೂರೈಸುವ ಕುರಿತು ಶಾಸಕ ಮಧು ಜಿ.ಮಾದೇಗೌಡ ಅವರು ವಿಧಾನ ಪರಿಷತ್ತಿನಲ್ಲಿ ಕೇಳಿದ ಪ್ರಶ್ನೆಗೆ ಸಚಿವರು ಈ ಮಾಹಿತಿ ನೀಡಿದ್ದಾರೆ. ತಾಂತ್ರಿಕ ಸಾಧ್ಯತೆಯಿರುವ ಉಪ ಕೇಂದ್ರಗಳಿಂದ ಹೊರಹೊಮ್ಮುತ್ತಿರುವ ಕೃಷಿ ವಿದ್ಯುತ್ ಮಾರ್ಗಗಳಲ್ಲಿ ರುವ ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಹಗಲಿನ ವೇಳೆಯಲ್ಲಿ 7 ಗಂಟೆಗಳಂತೆ ಹಾಗೂ ತಾಂತ್ರಿಕ ಕಾರ್ಯಸಾಧ್ಯವಿಲ್ಲದ ಕೃಷಿ ವಿದ್ಯುತ್ ಮಾರ್ಗಗಳಲ್ಲಿ ರುವ ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಬ್ಯಾಚ್‌ಗಳಲ್ಲಿ ಒಟ್ಟು 7 ಗಂಟೆಗಳ ಕಾಲ 3 ಫೇಸ್



ವಿದ್ಯುತ್ ಪೂರೈಸಲಾಗುವುದು ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಸುಮಾರು 35.96 ಲಕ್ಷ ಕೃಷಿ ನೀರಾವರಿ ಪಂಪ್ ಸೆಟ್ ಗಳಿವೆ. ರಾಜ್ಯದಲ್ಲಿ ಉತ್ಪಾದನೆಯಾಗುವ ಒಟ್ಟು ವಿದ್ಯುತ್ 97,334 ಮಿಲಿಯನ್ ಯುನಿಟ್ (ಅಂದಾಜು)ಗಳಲ್ಲಿ ಐ.ಸಿ.ಸೆಟ್ಟು ಸ್ಥಾವರಗಳಿಗೆ 25,760 ಮಿಲಿಯನ್ ಯುನಿಟ್ (ಅಂದಾಜು) (ಶೇ 26.47) ಬಳಕೆಯಾಗುತ್ತಿದೆ ಎಂದಿದ್ದಾರೆ.

ಶೇ 5ರಷ್ಟು ಹೆಚ್ಚಳ ಸಾಧ್ಯತೆ: ರಾಜ್ಯದಲ್ಲಿ ಪ್ರಸಕ್ತ ವರ್ಷದ ಮಾರ್ಚ್ ನಿಂದ ಮೇ ತಿಂಗಳಾಂತ್ಯದವರೆಗೆ ಅಂದಾಜಿಸಲಾದ ಬೇಡಿಕೆ ಪ್ರಮಾಣವು 27,631 ಮಿ.ಯುನಿಟ್ ಇದ್ದು ಈ ಅವಽಯಲ್ಲಿ ಅಂದಾಜಿಸಲಾದ ದೈನಂದಿನದ ವಿದ್ಯುತ್ ಬೇಡಿಕೆ ಪ್ರಮಾಣ 300.34 ಮಿ.ಯುನಿಟ್ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಬೇಡಿಕೆ ಪ್ರಮಾಣ ಒಟ್ಟು 26,468 ಮಿ.ಯುನಿಟ್ ಇದ್ದು ಈ ಅವಽಯಲ್ಲಿ ದೈನಂದಿನದ ವಿದ್ಯುತ್ ಬೇಡಿಕೆ ಪ್ರಮಾಣ 287.70 ಮಿ.ಯುನಿಟ್ ಇತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಬೇಡಿಕೆಯಲ್ಲಿ ಶೇ4 ರಿಂದ ಶೇ 5ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ. ಕಳೆದ ವರ್ಷ ಮಾರ್ಚ್ ನಿಂದ ಮೇ ವರೆಗಿನ ಅವಽಯಲ್ಲಿ ರಾಜ್ಯವು ಮಾರ್ಚ್ 07ರಂದು 18,395 ಮೆಗಾವ್ಯಾಟ್ ಗರಿಷ್ಠ ಬೇಡಿಕೆಯನ್ನು ಪೂರೈಸಿತ್ತು. ಈ ವರ್ಷವು ಗರಿಷ್ಠ ಬೇಡಿಕೆ ಸುಮಾರು 19,000 ಮೆಗಾ ವ್ಯಾಟ್‌ಗೆ ತಲುಪುವ ನಿರೀಕ್ಷೆ ಇದೆ ಎಂದು ವಿವರಿಸಿದ್ದಾರೆ.

ಉತ್ಪಾದನೆ ಶಕ್ತಿ ಕಡಿಮೆಯಾದಲ್ಲಿ ಖರೀದಿ ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲಾಗುತ್ತಿದೆ. ರಾಜ್ಯದ ಉತ್ಪಾದನಾ ಘಟಕಗಳಿಂದ ಉತ್ಪಾದನೆಯಾಗುವ ನಿಗದಿತ ಶಕ್ತಿಯು ಕಡಿಮೆಯಾದಲ್ಲಿ ಬ್ಯಾಂಕಿಂಗ್ ಸಿಸ್ಟಂ ನಲ್ಲಿ ಅಥವಾ ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್ ಅನ್ನು ಪಡೆದು ಬೇಡಿಕೆ ಪೂರೈಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಚೆಲುವನಾರಾಯಣಸ್ವಾಮಿ ಪ್ರಥಮ ತೆಪ್ಪೋತ್ಸವ

ಮೇಲುಕೋಟೆ: ಚೆಲುವನಾರಾಯಣಸ್ವಾಮಿಯವರ ಪ್ರಥಮ ತೆಪ್ಪೋತ್ಸವ ಕಲ್ಯಾಣಿಯಲ್ಲಿ ಮಾ. 21 ರ ಶನಿವಾರ ರಾತ್ರಿ ವಿಜೃಂಭಣೆಯಿಂದ ನೆರವೇರಲಿದೆ. ಶ್ರೀದೇವಿ-ಭೂದೇವಿಯೊಂದಿಗೆ ಮುತ್ತುಮುಡಿಯ ಅಲಂಕೃತನಾದ ಚೆಲುವನಾರಾಯಣಸ್ವಾಮಿಗೆ ರಾಮಾನುಜಾಚಾರ್ಯರೊಂದಿಗೆ ತೆಪ್ಪೋತ್ಸ ವ ನೆರವೇರಲಿದೆ. ತೆಪ್ಪೋತ್ಸವದ ವೇಳೆ



ಪಾಂಡವಪುರ ಖಜಾನೆಯಿಂದ ತಂದಿರುವ ಅಮೂಲ್ಯ ಮುತ್ತಗಳ ಆಭರಣಗಳಿಂದ ಸ್ವಾಮಿ ಯನ್ನು ಅಲಂಕಾರ ಮಾಡಲಾಗುತ್ತದೆ. ಕಲ್ಯಾಣಿಯಲ್ಲಿ ತೆಪ್ಪೋತ್ಸ ವ ಮೂರು ಪ್ರದಕ್ಷಿಣೆ ನಡೆಸಲಿದ್ದು ತೆಪ್ಪ ಮಂಟಪ ಸಿದ್ಧವಾಗಿದೆ. ಎರಡನೇ ತೆಪ್ಪೋತ್ಸ ವವೈರಮುಡಿ ಜಾತ್ರಾಮಹೋತ್ಸ ವದ 7ನೇ ದಿನವಾದ ಏಪ್ರಿಲ್ 1 ರಂದು ರಾತ್ರಿ ನಡೆಯಲಿದೆ.

ಸಹಸ್ರದೀಪೋತ್ಸವ : ಹಲವು ವರ್ಷಗಳ ನಂತರ ಪ್ರಥಮ ತೆಪ್ಪೋತ್ಸ ವದ ವೇಳೆ ಕಲ್ಯಾಣಿಯ ಸೋಪಾನಗಳಲ್ಲಿ ದೀಪೋತ್ಸ ವ ನಡೆಯಲಿದೆ ಮೇಲುಕೋಟೆ ದೇವಾಲಯದ ಕೈಂಕರ್ಯಪರರು ಮತ್ತು ನಾಗರೀಕರು ಸೇರಿ ಸಹಸ್ರ ದೀಪೋತ್ಸ ವವನ್ನು ಹಮ್ಮಿಕೊಂಡಿದ್ದು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಅನುಮತಿ ನೀಡಿದ್ದಾರೆ. ವೈರಮುಡಿ ಬ್ರಹ್ಮೋತ್ಸ ವಕ್ಕೂ ಮುನ್ನ ತೆಪ್ಪೋತ್ಸ ವದ ವೇಳೆ ಸಹಸ್ರಾರು ದೀಪಗಳು ಪ್ರಜ್ವಲಿಸಲಿದ್ದು ಚೆಲುವನಾರಾಯಣಸ್ವಾಮಿಗೆ ದೀಪಾರಾಧನೆಯಾಗಲಿದೆ.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ
ಕ್ರಸಂ: ಕೆಎಮ್‌ಸಿಆರ್‌ಐ/ಪೂವಿ(4)/45/2025-26 ದಿನಾಂಕ: 12.03.2026

ಇ-ಟೆಂಡರ ಪ್ರಕಟಣೆ

ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ IT Accessories ಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಇ-ಟೆಂಡರ ಕರೆಯಲಾಗಿದೆ. ಈ ಬಗ್ಗೆ ನಿಗಧಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು www.kppp.karnataka.gov.in ವೆಬ್ ಸೈಟಿನಲ್ಲಿ ಪಡೆಯಬಹುದು.

ನಿರ್ದೇಶಕರು
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಕಣಿವೆ ಬಳಿ ಬೀದಿ ದೀಪ ಅಳವಡಿಸಬೇಕೆಂದು ಒತ್ತಾಯ

ಉರುಳು ಸೇವೆ ಮೂಲಕ ಪ್ರತಿಭಟನೆ

ಮೇಲುಕೋಟೆ: ಕಣಿವೆ ಬಳಿ ಬೀದಿ ದೀಪ ಅಳವಡಿಸಬೇಕು, ವೈರಮುಡಿ ಉತ್ಸ ವ ನಡೆಯುವ ಉತ್ಸ ವ ಬೀದಿಗಳಲ್ಲಿರುವ ತೆರದ ಚರಂಡಿಗಳನ್ನು ಮುಚ್ಚಿಸಿ ಗ್ರಾಮದಲ್ಲಿ ಸ್ವಚ್ಚತೆ ಕಾಪಾಡಾಬೇಕೆಂದು ಆಗ್ರಹಿಸಿ ರೈತ ಹಾಗೂ ಕಾರ್ಮಿಕ ರಕ್ಷಣಾವೇದಿಕೆ ರಾಜ್ಯಾದ್ಯಕ್ಷ ಮೇಲು ಕೋಟೆ ಬೆಟ್ಟಸ್ವಾಮಿಗೌಡ ಬುಧವಾರ ಕಣಿವೆಯಲ್ಲಿ ಉರುಳು ಸೇವೆ ನಡೆಸಿ ಪ್ರತಿಭಟಿಸಿದರು. ಸಾಂಕೇತಿಕ ಉರುಳುಸೇವೆಯ ಪ್ರತಿಭಟಣೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿ ಬೆಟ್ಟಸ್ವಾಮಿಗೌಡ ಕಣಿವೆಯ ಎಲ್ಲಾ ರಸ್ತೆ ತಿರುವುಗಳ ಬಳಿ ಬೀದಿದೀಪಗಳಿಲ್ಲದ ಕಾರಣ ವಾಹನ ಸವಾರರಿಗೆ ಅದರಲ್ಲೂ ದ್ವಿಚಕ್ರ ವಾಹನ ಸವಾರರಿಗೆ ತೊಂದರೆಯಾಗಿದೆ ಕಳ್ಳಕಾರರ ಮತ್ತು ಕಾಡುಪ್ರಾಣಿಗಳ ಭಯವಿದೆ ಈ ಕಾರಣದಿಂದ ಕಣಿವೆಯ ರಸ್ತೆಗಳಲ್ಲಿ ಬೀದಿ ದೀಪ ಅಳವಡಿಸಬೇಕೆಂದು ಗ್ರಾಮ ಪಂಚಾಯಿತಿ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಮಾಡಿದ್ದರೂ ಪ್ರಯೋಜನ ವಾಗಿಲ್ಲ, ಇದರ ಜೊತೆಗೆ ವೈರಮುಡಿ ಉತ್ಸ ವದಂದು ನಾಲ್ಕೂ ಬೀದಿಗಳಲ್ಲಿರುವ ತೆರೆದ ಚರಂಡಿಗಳಿಗೆ ಭಕ್ತರು ಬಿದ್ದು ಗಾಯಗೊಳ್ಳುತ್ತಿದ್ದಾರೆ. ತಾತ್ಕಾಲಿಕವಾಗಿ ತೆರೆದ ಚರಂಡಿಗಳನ್ನು ಮುಚ್ಚಬೇಕೆಂದು ಮನವಿ ಮಾಡಿದ್ದರೂ ಮೇಲುಕೋಟೆ ಗ್ರಾಮ ಪಂಚಾಯಿತಿ ಗಮನ ಹರಿಸಿಲ್ಲ ಎಂದೂ ಆರೋಪಿಸಿದರು. ಜಕ್ಕನಹಳ್ಳಿಯಿಂದ ಮೇಲು ಕೋಟೆ ಯವರೆಗಿನ ರಸ್ತೆಗಳು ಗುಂಡಿಬಿದ್ದಿವೆ ವೈರಮುಡಿ ಜಾತ್ರಾಮಹೋತ್ಸವ ಆರಂಭಕ್ಕೂ ಮುನ್ನ ರಸ್ತೆ ಗುಂಡಿಗಳನ್ನು ಮುಚ್ಚಿಸುವ ಕಾರ್ಯಮಾಡಬೇಕು ಎಂದೂ ಅವರು ಒತ್ತಾಯಿಸಿದ್ದಾರೆ.



ನಗರಸಭೆ ಕಾರ್ಯಾಲಯ
ಚಿಕ್ಕಬಳ್ಳಾಪುರ
ವೆಬ್‌ಸೈಟ್:www.chikkaballapurcity.gov.in, ಇ-ಮೇಲ್: itstaff_ulb_chickballapur@yahoo.co.in, ದೂರವಾಣಿ: 08156-275557, ಫ್ಯಾಕ್ಸ್: 08156-274742
ಸಂಖ್ಯೆ: ನ.ಸ.ಚಿ/ತಾ.ಶಾ/ಸಿ.ಆರ್/ಟೆಂ-32/2025-26 ದಿನಾಂಕ : 10.03.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ 2025-26ನೇ ಸಾಲಿನ ನಗರಸಭಾ ನಿಧಿಯಲ್ಲಿ, 2025-26ನೇ ಸಾಲಿನ 15ನೇ ಹಣಕಾಸು ಮತ್ತು ಡಲ್ಪ್ ಯೋಜನೆಗಳ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ/ಸರಬರಾಜುದಾರರಿಂದ ಟೆಂಡರ್‌ನ್ನು (ಇ-ಪ್ರೊಕ್ಯೂರ್‌ಮೆಂಟ್-2.0) ಆಹ್ವಾನಿಸಲಾಗಿದೆ. ವೆಬ್‌ಸೈಟ್ https:kppp.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಟೆಂಡರ್ ಸ್ವೀಕೃತಿ ಮತ್ತು ತೆರೆಯುವ ದಿನಾಂಕಗಳ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಂತೆ ಇರುತ್ತದೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವತ್ರಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನಗಳನ್ನು ಪರಿಗಣಿಸಲಾಗುವುದು.ಇಂಡೆಂಟ್ ಸಂಖ್ಯೆ ವಿವರ **(1)** DMA/2025-26/IND5138/CALL-2 **(2)** DMA/2025-26/IND5139/CALL-2 **(3)** DMA/2025-26/IND5140/CALL-2 **(4)** DMA/2025-26/IND5980/CALL-2 **(5)** DMA/2025-26/IND5983/CALL-2 **(6)** DMA/2025-26/ IND5981/CALL-2 **(7)** DMA/2025-26/IND5708/CALL-2 **(8)** DMA/2024-25/OW/WORK_INDENT36014/CALL-3

ಸಹಿ/- ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:502/ಕೆಎಸ್‌ಎಂಸಿಎ/2025-26

PUBLIC NOTICE

Notice is hereby given to the general public that our clients Smt. Barathi Kannan w/o Senthil Kumar Ramanathan and Sri. Senthil Kumar Ramanathan S/o G Ramanathan, is intending to purchase the schedule property from the present owners, namely Smt. A B Shoba w/o Late. Kumar and her children Sushmitha, Alamelu and Ravikumar, If any person or persons have any right, title, interest, claim, charge, lien, or encumbrance of whatsoever nature over the schedule property, they are hereby called upon to submit their objections or claims, along with supporting documentary evidence, within Two (02) days from the date of publication of this notice, to the undersigned.

In the event no claim or objection is received within the stipulated period, it shall be conclusively presumed that there are no claims or objections in respect of the schedule property, and my client shall proceed to complete the proposed transaction with the owners without any further reference.

Any claim or objection received after the expiry of the aforesaid period shall not be entertained under any circumstances.

SCHEDULE

The agricultural land bearing Sy. No. 67/1, measuring 1 Acre, situated at Chinnayaknahalli Village, K. Shettihalli Hobli, Srirangapatna Taluk, Mandya District, and Bounded on: East by: Lakshmi Krishna Murthy and Nanjappa land (Sy no 27/1), West by : Barathi Kannan's Land (Sy no 67/2, 67/3 and 67/4), North by : Road, South by: Barathi Kannan's land. (Sy no 67/5 and 65/3).

(Santhosh)
SSS LAW ASSOCIATES
Advocates & Legal Consultants
Siddu Complex, 1st Floor,
Main Road, Srirangapatna.
Mob: 9845380422.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ
ಆಸ್ತಿ ಅಧಿಕಾರಿಗಳ ಕಛೇರಿ ವಿ. ಸಿ. ಫಾರಂ, ಮಂಡ್ಯ-571405
ಇ ಮೇಲ್: eouasmandya@mail.com
ಸಂಖ್ಯೆ:ಕೃ.ವಿ.ವಿ.ಮ/ಅ.ಅ.ಟೆಂಡರ್/171/2025.26 ದಿನಾಂಕ: 18.03.2026

ಟೆಂಡರ್ ಪ್ರಕಟಣೆ
(ಸಂಖ್ಯೆ: NO.EO/TN/Architect -Call-2/2025-26 dt.18.03.2026)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯದ ಅಧೀನದಲ್ಲಿ ಬರುವ ಕೇಂದ್ರಗಳಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ವಾಸ್ತುಶಿಲ್ಪಿ **(Architect)** ರನ್ನು ನೇಮಕ ಮಾಡಿಕೊಳ್ಳಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು **https://kppp.karnataka.gov.in** ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ.
ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡತಿವೆ.

1	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	30.03.2026	ಸಂಜೆ 4.00 ಗಂಟೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	01.04.2026	ಬೆಳಿಗ್ಗೆ 10.30 ಗಂಟೆಗೆ
3	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	02.04.2026	ಬೆಳಿಗ್ಗೆ 10.30 ಗಂಟೆಗೆ

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿವಸಗಳಲ್ಲಿ ಮತ್ತು ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ, ವಿ.ಸಿ.ಫಾರಂ,ಮಂಡ್ಯ-571405 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9448196321.

ಸಹಿ/-
ಆಸ್ತಿ ಅಧಿಕಾರಿಗಳು
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ
ವಾಸಾಸಂಇ/ಮಂಡ್ಯ/904/ಶಿರಡಿ ಸಾಯಿ/2025-26

IN THE COURT OF THE Asst. DEPUTY COMMISSIONER COURT BANGALORE RURAL DIST. AT DEVANAHALLY
Revision Petition. No. 60/2025
BETWEEN : SRI. KEMPABYRAIAH ...**APPELIANT**
AND : SRI. Asst. Commissioner AND OTHERS ...**RESPONDENTS**

SUMMONS TO RESPONDENT NO-3

R.3 SRI. ANJINA MURTHY S/o Late Hanu maiah Aged about 71 years R/at. Appakarana hally Village, Doddabelavangala Hobali, Dodda ballapura Taluk, Bangalore Rural District.

WHEREAS, The Appellant above named as instituted a suit against you for specific performance and for other consiquential relief. You are here by summoned to appear in the court in person or through an advocate duly instructed and able to answer all material quotations on **17/04/2026 @ 3 P.M.** in the forenoon and answer the client. Take notice that in default of your appearance on the day mentioned here in above the appeal will be heard and determined in your absence, playing you exparte.

Given under my hand and the seal of this Court, this date 18/03/2026.

BY ORDER OF THE COURT
Sd/- Deputy Commissioner
Bangalore Rural District. Devanahally

ADVOCATE FOR APPELIANT
JAYARAJU H. K, Advocate,
1st Floor, Ananda Complex, Opp, Netaji park & Town Police Station, Nelamangala Town.
B'lore Rural Cist.

THE HON'BLE SPECIAL DISTRICT JUDGE OF THANJAVUR (SDJ), TAMILNADU
M.C.O.P. No. 767 OF 2025

J.Mansoora Begam, represented By her Daughter Gurdian Haseena Begam, Both are residing at No. 31, SNM Raguman Nagar, Keelavasal, Thanjavur -613001. ... **Petitioner --Vs—**

Mrs. R. Dhanalaksmi, W/o, Rasappan residing at No.10, SSS Building A.V.Road Samrajpet , Bangalore, Karnataka - 560018 - **-3rd Respondents**

NOTICE

The above named claimants had filed the above claim for the injuries of one Mansoora Begam who was meet in a motor vehicle accident that happened on 27.12.2024 by the car and lorry bearing Reg. No. TN-49- CL-0994 and Reg. No. KA-01- AF-6411, belonging to the above mentioned Respondent. The above case is posted on 06.04.2026 for your appearance either in person or through an Advocate at 10.00 AM failing which you will be set exparty on 06.04.2026. /By Court order/ Counsel for the petitioner

S.SEBESTIAN, ADVOCATE,
Thanjavur - 613005, Tamilnadu

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಸರ್ ಸಿವಿ ರಾಮನ್ ಜನರಲ್ ಹಾಸ್ಪಿಟಲ್ ಇಂದಿರಾನಗರ. ಬೆಂಗಳೂರು-560038

ಶ್ರೀ ಸಿ.ವಿ.ರಾಮನಗರ ಜನರಲ್ ಆಸ್ಪತ್ರೆಯಿಂದ ಅಗತ್ಯ ವಸ್ತುಗಳ ಪೂರೈಕೆಗಾಗಿ ಅಲ್ಪಾವಧಿಯ ಟೆಂಡರ್ ಆಹ್ವಾನ

ವೈದ್ಯಕೀಯ ಅಧೀಕ್ಷಕರು, ಸರ್ ಸಿ ವಿ ರಾಮನ್ ಜನರಲ್ ಆಸ್ಪತ್ರೆ, ಬೆಂಗಳೂರು, ಇವರು ಸರ್ ಸಿ ವಿ ರಾಮನ್ ಜನರಲ್ ಆಸ್ಪತ್ರೆಗೆ ಬೇಕಾಗಿರುವ ಅತಿ ಅವಶ್ಯಕ ವಸ್ತುಗಳನ್ನು, ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ ಹಾಗು ನಿಯಮ 2000 ರನ್ವಯ ಕರ್ನಾಟಕ ಸರಕಾರದ ಸಾರ್ವಜನಿಕ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ (https://kppp.karnataka.gov.in) ಮುಖಾಂತರ ದ್ವಿಲಕೋಟೆ ಪದ್ಧತಿಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಪೂರೈಕೆದಾರರು ಮೇಲೆ ತಿಳಿಸಿದ ಪೋರ್ಟಲ್‌ನಲ್ಲಿ ಅಗತ್ಯವಾಗಿ ನೋಂದಾಯಿಸಿಕೊಳ್ಳಬೇಕು.

1	ಟೆಂಡರ್ ಉಲ್ಲೇಖ ಸಂಖ್ಯೆ:	DHFWS/2025-26/IND2369
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಿಂದ ಟೆಂಡರ್ ಡಾಕ್ಯುಮೆಂಟ್ ಡೌನ್ ಲೋಡ್ ಮಾಡುವ ಪ್ರಾರಂಭದ ದಿನಾಂಕ	19.03.2026 ರಿಂದ
3	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ :	23.03.2026 ಸಂಜೆ 5 ಗಂಟೆ ವರೆಗೆ
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಇ-ಟೆಂಡರ್ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ	27.03.2026 ಸಂಜೆ 5 ಗಂಟೆ ವರೆಗೆ.
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಆನ್ ಲೈನ್ ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	28.03.2026, ಸಂಜೆ 5.10 ಗಂಟೆಗೆ.
6	ಮಾದರಿಗಳನ್ನು ಸಲ್ಲಿಸುವ ದಿನಾಂಕ	26.03.2026 ಸಂಜೆ 5.00 ಗಂಟೆವರೆಗೆ.

ಸಂಪರ್ಕಿಸುವ ವಿಳಾಸ : ವೈದ್ಯಕೀಯ ಅಧೀಕ್ಷಕರ ಕಚೇರಿ, ಸರ್ ಸಿ ವಿ ರಾಮನ್ ಜನರಲ್ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು - 560038
ದೂರವಾಣಿ ಸಂಖ್ಯೆ : 080-25281245, ಇ ಮೇಲ್ : ghibengaluru@gmail.com
DIPR/CP/6377/Zen/2025-26 ಸಹಿ/- ವೈದ್ಯಕೀಯ ಅಧೀಕ್ಷಕರು, ಬೆಂಗಳೂರು.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
KARNATAKA RURAL INFRASTUCTURE DEVELOPMENT LTD.
(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040
ಸಂ: ಕಾಪಾಅ-4/ಕೆಆರ್‌ಐಡಿಎಲ್/ಟೆಂಡರ್/2025-26/1274 ದಿನಾಂಕ: 20.03.2026

ಇ-ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಕಾರ್ಯಪಾಲಕ ಇಂಜಿನಿಯರ್, BBMP ವಿಭಾಗ-4 ಅವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಎರಡು ಕವರ್ ಪದ್ಧತಿಯ ಇ-ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (**KRIDL/2025-26/RD/WORK_INDENT34, 35, 36 and 37**) ಅಡಿಯಲ್ಲಿ ಪ್ರತಿ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.13.50 ಲಕ್ಷಗಳು ಆಗಿರುತ್ತದೆ. ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು KPPP ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ ಟೆಂಡರ್ ವಿವರಗಳನ್ನು ವೀಕ್ಷಿಸಿ, ಡೌನ್‌ಲೋಡ್ ಮಾಡಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	20.03.2026
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	27.03.2026, 17:30
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	02.04.2026, 11:30
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	09.04.2026, 15:00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	13.04.2026, 15:30
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	21.04.2026, 15:30

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in.** ವೆಬ್‌ಸೈಟ್‌ಗೆ ಭೇಟಿ ನೀಡಿ
ಸಹಿ/- ಕಾರ್ಯಪಾಲಕ ಅಭಿಯಂತರರು-4,
ಕೆ.ಆರ್.ಐ.ಡಿ.ಎಲ್, ಬೆಂಗಳೂರು
ಡಿಐಪಿಆರ್/ಸಿಪಿ/6350/ಸಿಸಿಎಲ್/2025-26

ಕರ್ನಾಟಕ ಸರ್ಕಾರ
ಜಿಲ್ಲೆ : ರಾಯಚೂರು ರಾಜ್ಯ : ಕರ್ನಾಟಕ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಿಂಗಸಗೂರು.
Agricultural Produce Market Committee, LINGASAGUR-PIN: 584 122
E-Mail: apmclingasugur@gmail.com ph.No (08537) 257382
ಸಂ:ಕೃಮಾಇ/ಕೃಉಮಾಸ/ಲಿಂ/ಅಭಿಕೆವಿ/1424/2025-26 ದಿನಾಂಕ : 16-03-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸುಗೂರು ವತಿಯಿಂದ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ತತ್ಸಂಬಂಧವಾಗಿ ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳನ್ವಯ Standard Tender Documents ರಂತೆ ಅರ್ಹರಿರುವ ಕರ್ನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಯಮಾನುಸಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ನ್ನು ಈ ಕೆಳಗಿನ ಕಾಮಗಾರಿ ನಿರ್ವಹಿಸಲು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
1	APMC/2025-26/BD/WORK_INDENT 836)	18.64	46,600.00	3ನೇ ದರ್ಜೆ ಹಾಗೂ ಮೇಲ್ಪಟ್ಟು ಸಿವಿಲ್ ಗುತ್ತಿಗೆದಾರರು As per KW-1 Eligible Contractor
2	(APMC/2025-26/OW /WORK_ INDENT 842)	60.57	1,21,500.00	As per KW-3 Eligible Contractor
3	(APMC/2025-26/BD/ WORK_ INDENT 893)	104.44	2,00,000.00	As per KW-4 Eligible Contractor
4	(APMC/2025-26/RD/ WORK_ INDENT 843)	59.03	1,18,500.00	As per KW-3 Eligible Contractor

-::ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ::- 1) ಇ-ಪ್ರಕ್ಯೂರಮೆಂಟ್‌ನಲ್ಲಿ ಶೆಡ್ಯೂಲ್‌ಗಳನ್ನು ಬಿಡುವ ದಿನಾಂಕ : 20-03-2026. 2) ಪ್ರಿಬಿಡ್ ಮಿಟಿಂಗ್ ದಿ:23-03-2026 ಬೆಳ್ಳಿಗೆ 11:30ಕ್ಕೆ ಆಡಳಿತ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸುಗೂರು. 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 02-04-2026, 04:30 ಸಾಯಂಕಾಲ ವರೆಗೆ 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06-04-2026, 04:30 ಸಾಯಂಕಾಲ ಒಳಗಡೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ:16-04-2026, 04:30 ಸಾಯಂಕಾಲ ಒಳಗಡೆ (ಸಾಧ್ಯಾವದಲ್ಲಿ)ಅಥವಾ ತಾಂತ್ರಿಕ ಬಿಡ್-ಗಳಿಗೆ ಅನುಮೋದನೆ ದೊರಕಿದ ನಂತರ ತೆರೆಯಲಾಗುತ್ತದೆ.

ಇ.ಎಂ.ಡಿ. ಹಾಗೂ ಇ-ಟೆಂಡರ್ ಪ್ರೊಸೆಸಿಂಗ್ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಎಕ್ಸಿಸ್ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರಕಾರ ಸೆಂಟ್ರಲ್ ಪೂಲಿಂಗ್ ಅಕೌಂಟಿನ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಸಮಿತಿ ಕಛೇರಿ ವೇಳೆಯಲ್ಲಿ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22485867 ಮತ್ತು ಕಾರ್ಯದರ್ಶಿ, ಕೃ.ಉ.ಮಾ.ಸ, ಲಿಂಗಸುಗೂರು ಸಹಾಯವಾಣಿ 08537-257382 ರವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ ಕೃಉಮಾಸ ಲಿಂಗಸಗೂರು
DIP/RCR/776/KSMC&A/779/2025-26
ಸಹಿ/- ಅಧ್ಯಕ್ಷರು ಕೃಉಮಾಸ ಲಿಂಗಸಗೂರು

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ-1/ಇ-ಟೆಂಡರ್ ಪ್ರಕಟಣೆ/2025-26/ 3558, ದಿನಾಂಕ:20.03.2026

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2 ಮತ್ತು 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025-26ನೇ ಸಾಲಿನ 3054 ರಾಹೆ, ಜಿಮುರ ನಿರ್ವಹಣೆ ಅಡಿಯಲ್ಲಿ ಸುರಪೂರ ತಾಲೂಕಿನ (1)34541, (2)34042, (3)34040 & (4)34764 ಮತ್ತು 4059 ಸಿಎಂಐಡಿಪಿ (ಯೋಜನೆ) (1)34047 ಹಾಗೂ 5054 ಜಿಮುರ ಸೇತುವೆ (ಯೋಜನೆ) (1)27570/2ನೇ ಕರೆ ಒಟ್ಟಾರೆ 6 (ಅರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:200.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಪ್ರೀ ಬಿಡ್ ಮೀಟಿಂಗ್ ದಿನಾಂಕ:** 25.03.2026 (11.30 ಗಂಟೆ ನಂತರ) 6) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 27.03.2026 (17.30 ಗಂಟೆವರೆಗೆ) 7) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 31.03.2026 (16.00 ಗಂಟೆವರೆಗೆ) 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 01.04.2026 (16.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 04.04.2026 (11.30 ಗಂಟೆ ನಂತರ) 10) **ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ
ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/606/ಕೆ.ಎಸ್.ಎಂ.ಸಿ.&ಎ/2025-26

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ-580 005
ಸಂಖ್ಯೆ:ಆ.ಅ/ಕೃವಿವಿ/2025-26 ದಿನಾಂಕ: 20.03.2026

ಆಸಕ್ತಿ ಅಭಿವ್ಯಕ್ತ ಪಡಿಸುವುದು (ತೃತೀಯ ಕರೆ)

ನಿಖರ ಠೇವಣಿಗಾಗಿ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಕೆ.ಸಿ-1 ರಂತೆ ಇ-ಟೆಂಡರ್ ಮೂಲಕ ವಿಜಯಪೂರ ನಗರ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರಬಹುದಾದ ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಕೋರಲಾಗಿದೆ. ಫಾರ್ಮ ಮಷಿನರಿ ಪರೀಕ್ಷಣೆ ಸಂಸ್ಥೆ, ವಿಜಯಪೂರ ಇದರ ಆವರ್ತ ನಿಧಿಯ ಹೆಚ್ಚುವರಿ ಹಣ ಸುಮಾರು ರೂ.1.5 ಕೋಟಿಗಳು ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್ ಸೈಟ್ https://kppp.karnataka.gov.in. ನ್ನು ನೋಡುವುದು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	27.03.2026 ಸಾಯಂಕಾಲ 04.00 ಘಂಟೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	28.03.2026 ಸಾಯಂಕಾಲ 04.15 ಘಂಟೆ

ಆಸಕ್ತ ಬ್ಯಾಂಕುಗಳು ಇ-ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ **ಸಂಖ್ಯೆ: 080-23010900** ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರ್‌ಗೆ ತಿದ್ದುಪಡಿ/ಜೋಡಣೆ ಅಥವಾ ಇನ್ನೇನಾದರು ತಿಳಿದುಕೊಳ್ಳಲು ಸದಾ ವೆಬ್ ಸೈಟ್ https://kppp.karnataka.gov.in. ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದುಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ಸಹಿ/-
ಆಸ್ತಿ ಅಧಿಕಾರಿಗಳು
ವಾ.ಸಾ.ಇ./ಧಾರವಾಡ/1376/2025-26/ದೇಶಪಾಂಡೆಪಬ್ಲಿಸಿಟಿ

IN THE COURT OF THE XV ADDL. CITY CIVIL JUDGE AT BENGALURU (CCH-03)
O.S. No. 7859/2024

Between:
Sri. Kumar. M @ Shivakumar, Son of late Mariyappa, Aged about 56 years, Residing at Somashettihalli village, Yeshwanthapura hobli, Bengaluru North Taluk, Bengaluru.
AND ALSO AT
No. 517, Leela Nivas, 2nd Main Road, HMT Layout, Nagasandra Post, Bengaluru-560073. ...Plaintiff
And
Sri. Shankar. N And Others ...Defendants
Dependant NO. 5
Sri. Basavaraj, Son of late Bettaiah, Major in age, Residing at No.479, 19th Cross, BHEL Mini Colony, Mallasandra, Bengaluru-560050.
WHEREAS, the plaintiff has filed above suit for the relief to declare the sale deed and gift deed as null and void and permanent injunction against the defendants in respect of suit schedule properties.
The plaintiff has caused the suit summons through Hon'ble court XV Addl. City Civil Judge at Bengaluru (CCH-03) court has ordered for the substitute service of summon/Notice. Therefore this Notice is caused for the above named defendant no.5 to show cause/ appearance in personally or by pleader duly instructed to answer all the question relating to the suit on 18/06/2026 at 11:00 am to answer the claim, failing which you will be placed Ex-parte and the Hon'ble court would be pleased to be deem the notice is served upon you and shall proceed in accordance with law.
Given under my hand and seal of the court this the 11th day of March-2026

SCHEDULE
Item No.1 : All that piece and parcel of the property bearing Khaneshumari Old No.52 and 53, New No.397 and 938, formed in assessment No.60, situated at Komagondahalli village, Yeshwantapura hobli, measuring east to west 76 feet and north to south 30 feet in all measuring 2280 square feet and the same is bounded on the
East by : Main road, West by: Site No.51, North by : Site No.54, 55 and AK Colony, South by Road,
Item No.2 : All that piece and parcel of the property bearing Site No.1, DC Conersion order no.ALN/SR 16/37-38, in Sy. No.71/1, BBMP Ward. No.17, situated at Mathikere village, Corparation Division No.1, measuring east to west 50 feet and north to south 30 feet in all measuring 1500 square feet, and the same is bounded on the
East by : HMT Main road, West by: Road, North by : Site No.2, South by : 30 feet road.

By the Order of the Court
Assistant Register
Prl. City Civili Judge at Bengaluru
ADVOCATE FOR PLAINTIFFS : NAGESH. V.R, Advocate, No. 8/1, 1st Floor, 1st Cross, 5th Main, Chamrajpet, Bengaluru-560018.

IN THE COURT OF THE HON'BLE DISTRICT AND SESSIONS JUDGE AT TUMAKURU
P & SC. No. 11/2026

Petitionr : Kiran Kumar.H S/o Late Huliramaiah, Aged about 38 years, R/at 40 Ft. Road, Balajinagara, Oorukere Post, Kasaba Hobli, Tumakuru Taluk. **-V/s- Respondent:** Nil

DRAFT PUBLICATION

The petitioner has filed an petition to obtain the Probate for registered will dated 04-12-2025 Huliramaiah S/o. Late Dasappa. If any persons are having any objections with regard to issue of probate with respect to un-registered will for the below mentioned property executed in favour of petitioner may appear and file their objections personally or through an Advocate on the day fixed for hearing i.e., 29/04/2026 at 11.00 A.M. in the absence of any objection the case will be proceed in accordance with law.
Give under my hand and the seal of the court on this 17th day of March at Tumakuru.
ಪೊಲೀಸ್ ಎಚ್ಚರಿಕೆಗೂ ಬಗ್ಗದ ಆರೋಪಿ: ಮಹಿಳೆ ತನ್ನನ್ನು ದೂರ ಮಾಡುತ್ತಿದ್ದಾಳೆ ಎಂಬ ಸಿಟ್ಟಿನಿಂದ ಫೆ.28ರಂದು ಹಫೀಜ್ ಗಲಾಟೆ ಮಾಡಿದ್ದ. ಈ ಸಂಬಂಧ ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ದೂರು ಸಹ ನೀಡಲಾಗಿತ್ತು. ಆಗ ಪೊಲೀಸರು ಹಫೀಜ್‌ನನ್ನು ಠಾಣೆಗೆ ಕರೆಸಿ ಬುದ್ಧಿವಾದ ಹೇಳಿ, ಮುಚ್ಚಳಿಕೆ ಬರೆಸಿಕೊಂಡು ಕಳುಹಿಸಿದ್ದರು. ಎರಡೂ ಕುಟುಂಬದವರು ರಾಜಿ ಮಾಡಿಕೊಂಡಿದ್ದರಿಂದ ಪ್ರಕರಣ ಅಲ್ಲಿಗೆ ಮುಗಿಯಿತು ಎಂದು ಭಾವಿಸಲಾಗಿತ್ತು. ಆದರೆ, ಹಫೀಜ್ ಮನಸ್ಸಿನಲ್ಲಿ ಕೊಲೆ ಸಂಚು ರೂಪಿಸಿದ್ದ ಎನ್ನಲಾಗಿದೆ.

ಆರೋಪಿ ಪೊಲೀಸರ ವಶಕ್ಕೆ

ಗುರುವಾರ ಸಂಜೆ ಫಿರ್ದೋಸ್ ಬಾನು ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದಾಗ ಹಿಂಬಾಲಿಸಿದ ಹಫೀಜ್, ಡ್ರ್ಯಾಗರ್‌ನಿಂದ ಆಕೆಯ ಎದೆ ಹಾಗೂ ಹೊಟ್ಟೆಯ ಭಾಗಕ್ಕೆ ಆರೇಳು ಬಾರಿ ಇರಿದಿದ್ದಾನೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಆಕೆಯನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಸದ್ಯ ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿರುವುದಾಗಿ ಪಶ್ಚಿಮ ವಲಯ ಡಿಸಿಪಿ ಯತೀಶ್ ಮಾಹಿತಿ ನೀಡಿದ್ದಾರೆ.


ಇಂದು ನಗರದಲ್ಲಿ...

- ರಾಮಾನಂದಾಚಾರ್ಯ ನರೇಂದ್ರಾಚಾರ್ಯಜಿ ಅವರಿಂದ ಸಮಸ್ಯೆ ಮಾರ್ಗದರ್ಶನ ಹಾಗೂ ದರ್ಶನ ಕಾರ್ಯಕ್ರಮ, ಸ್ಥಳ: ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪ, ಪಂಪ ಮಹಾಕವಿ ರಸ್ತೆ, ಶಂಕರಪುರಂ, ಬೆಳಗ್ಗೆ 9
- ಕೃತಕ ಬುದ್ಧಿಮತ್ತೆ - ವಿವಾದಗಳ ತಡೆಗಟ್ಟುವಿಕೆ ಮತ್ತು ಪರಿಹಾರ ಕುರಿತು ಒಂದು ದಿನದ ವಿಚಾರ ಸಂಕಿರಣ, ಸ್ಥಳ: ಸಭಾಂಗಣ, ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಕ್ರೆಸೆಂಟ್ ರಸ್ತೆ, ಬೆಳಗ್ಗೆ 9.
- ಕಾಕೋಳು ವೇಣುಗೋಪಾಲ ಸ್ವಾಮಿ ದೇವಸ್ಥಾನ ಟ್ರಸ್ಟ್: ಬ್ರಹ್ಮರಥೋತ್ಸವ 93 ವರ್ಷಗಳ ವಸಂತದ ಸಂಭ್ರಮಾಚರಣೆ, ಸ್ಥಳ: ವೇಣುಗೋಪಾಲಸ್ವಾಮಿ ದೇವಸ್ಥಾನ, ಕಾಕೋಳು ಕ್ಷೇತ್ರ, ಯಲಹಂಕ, ಬೆಳಗ್ಗೆ 9.30

ಕಿರುಸುದ್ದಿ

ಒಲಿಂಪಿಕ್ಸ್ ವಿಜೇತೆ ಮಣಿಸಿದ 13 ಹರೆಯದ ಯು-ಝಿದಿ

◆ **ಹೊಸದಿಲ್ಲಿ:** ವಿಶ್ವವೇ ನಿಬ್ಬೆರಗಾಗಿ ರೋಮಾಂಚನಗೊಳ್ಳುವಂತೆ ಚೀನಾದ 13 ವರ್ಷದ ಈಜುಗಾರ್ತಿ ಯು-ಝಿದಿ ಅವಳಿ ಒಲಿಂಪಿಕ್ಸ್ ಪದಕ ವಿಜೇತೆ ರೇಗಾನ್ ಸ್ಮಿತ್ ಅವರನ್ನು ಸೋಲಿಸಿದರು. ಶೆನ್ಝೆನ್‌ನಲ್ಲಿ ನಡೆದ ಮಹಿಳೆಯರ 200 ಮೀ. ಬಟರ್‌ಫ್ಲೈ ಕೂಟದಲ್ಲಿ ವೈಯಕ್ತಿಕ ಅತ್ಯುತ್ತಮ ದಾಖಲೆಯೊಂದಿಗೆ ಈ ದಾಖಲೆ ಮಾಡಿದರು. ಕಳೆದ ಬೇಸಿಗೆಯಲ್ಲಿ ಬಾಲಕಿ ಯು 12 ನೇ ವಯಸ್ಸಿನಲ್ಲಿ ಈಜು ವಿಶ್ವ ಚಾಂಪಿಯನ್‌ಶಿಪ್ ಇತಿಹಾಸದಲ್ಲಿ ಅತ್ಯಂತ ಕಿರಿಯ ಪದಕ ವಿಜೇತೆ ಎಂಬ ಹೆಗ್ಗಳಿಕೆಗೆ ಪಾತ್ರಳಾಗುವ ಮೂಲಕ ಜಾಗತಿಕ ಸುದ್ದಿಯಾಗಿದ್ದರು.



ಗುರುವಾರ ನಡೆದ ಚೀನಾ ಓಪನ್‌ನಲ್ಲಿ, 200 ಮೀಟರ್ ಫ್ಲೈನಲ್ಲಿ 2 ನಿಮಿಷ 05.71 ಸೆಕೆಂಡುಗಳಲ್ಲಿ ಗುರಿ ತಲುಪಿ, ಅಮೆರಿಕದ ಸ್ಮಿತ್ ಅವರನ್ನು ಮತ್ತೊಂದು ಗಮನಾರ್ಹ ಪ್ರದರ್ಶನದಲ್ಲಿ ಎರಡನೇ ಸ್ಥಾನಕ್ಕೆ ತಳ್ಳಿದಳು. ಅವರ ಸಮಯವು ಯು ಅವರನ್ನು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ವೇದಿಕೆಯ ಮೇಲೆ ಇರಿಸುತ್ತಿತ್ತು. ಪ್ಯಾರಿಸ್ 2024 ರ ಒಲಿಂಪಿಕ್ಸ್‌ನಲ್ಲಿ ಕೆನಡಾದ ಸಮ್ಮರ್ ಮೆಕಿಂತೋಷ್ ಅವರ ಹಿಂದೆ ಸ್ಮಿತ್ ಬೆಳ್ಳಿ ಪದಕ ಗೆದ್ದರು 24 ವರ್ಷದ ಸ್ಮಿತ್ ಒಟ್ಟು ಎಂಟು ಒಲಿಂಪಿಕ್ ಪದಕಗಳನ್ನು ಗೆದ್ದಿದ್ದಾರೆ, ಅವುಗಳಲ್ಲಿ ಎರಡು ಚಿನ್ನ. ದಕ್ಷಿಣ ನಗರವಾದ ಶೆನ್ಝೆನ್‌ನಲ್ಲಿ ನಡೆಯುವ ಚೀನಾ ಓಪನ್ ಚೀನಾ ಮತ್ತು ಅಂತರರಾಷ್ಟ್ರೀಯ ತಾರೆಗಳ ಪ್ರಬಲ ಕ್ಷೇತ್ರವನ್ನು ಆಕರ್ಷಿಸಿದೆ. ಯು ಐದು ಸ್ಪರ್ಧೆಗಳಲ್ಲಿ ಸ್ಪರ್ಧಿಸಲಿದ್ದಾರೆ.

ಭಾರತದಲ್ಲಿ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

◆ **ಹೊಸದಿಲ್ಲಿ:** ವಿಶ್ವ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕ್ರೀಡಾಕೂಟವು ಭಾರತದಲ್ಲೇ ನಡೆಯುವುದು ಖಚಿತವಾಗಿದೆ. ಭುವನೇಶ್ವರದಲ್ಲಿ ಈ ಕೂಟ ನಡೆಸುವುದಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ರಾಷ್ಟ್ರೀಯ ಅಥ್ಲೆಟಿಕ್ಸ್ ಸಂಸ್ಥೆ ಗುರುವಾರ ತಿಳಿಸಿದೆ. ಪೋಲ್ಯಾಂಡಿನ ತೋರನ್‌ನಲ್ಲಿ ನಡೆದಿದ್ದ ಬಿಡ್ಡಿಂಗ್ ಕಾರ್ಯಕ್ರಮದಲ್ಲಿ ಭಾರತ ಹೋಸ್ಟಿಂಗ್ ರೈಟ್ಸ್ ಗೆದ್ದುಕೊಂಡಿದೆ. 2032ರ ಒಲಿಂಪಿಕ್ಸ್ ಆಯೋಜನೆಯಲ್ಲಿ ಆತಿಥ್ಯ ಪ್ರಮುಖವಾಗಿರಲಿದೆ. ಈ ಹಿಂದೆಯೇ ಅಥ್ಲೆಟಿಕ್ಸ್ ಸಂಸ್ಥೆ ಬಿಡ್ ಸಲ್ಲಿಸಿರುವ ಬಗ್ಗೆ ಹೇಳಿತ್ತು. ಭುವನೇಶ್ವರದ ಕಾಳಿಂಗ ಕ್ರೀಡಾಂಗಣವನ್ನು ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯ ಅಧಿಕಾರಿಗಳು ಪರಿಶೀಲನೆ ನಡೆಸಿರುವ ನಂತರ ಈ ಬಗ್ಗೆ ಘೋಷಣೆಯಾಗಿದೆ. ಇದೇ ಮೊದಲ ಬಾರಿಗೆ ಭಾರತ ದೊಡ್ಡ ಆತಿಥ್ಯ ವಹಿಸುತ್ತಿದೆ. ಇದರೊಂದಿಗೆ ಭಾರತ ಈ ಕೂಟವನ್ನು ಆಯೋಜಿಸಲಿರುವ ಏಷ್ಯಾದ ನಾಲ್ಕನೇ ರಾಷ್ಟ್ರವಾಗಲಿದೆ. ಜಪಾನ್ ಈ ಕೂಟವನ್ನು ಆಯೋಜಿಸಿದ್ದ ಮೊದಲ ಏಷ್ಯನ್ ರಾಷ್ಟ್ರವಾಗಿತ್ತು.

ಯುದ್ಧದ ಬಿಸಿ: ಪ್ಯಾಲೆಸ್ತೀನ್ ಫುಟ್‌ಬಾಲ್ ಪಂದ್ಯ ರದ್ದು

◆ **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಪ್ಯಾಲೆಸ್ತೀನ್ ರಾಷ್ಟ್ರೀಯ ಫುಟ್‌ಬಾಲ್ ತಂಡದ ಸ್ನೇಹಪೂರ್ಣ ಪಂದ್ಯಗಳು ರದ್ದುಗೊಂಡಿವೆ. ಪ್ಯಾಲೆಸ್ತೀನ್ ತಂಡವು ಈ ತಿಂಗಳ ಕೊನೆಯಲ್ಲಿ ಮೊರೊಕ್ಕೊದಲ್ಲಿ ಮೌರಿಟಾನಿಯಾ ಮತ್ತು ಬೆನಿನ್ ವಿರುದ್ಧ ಪಂದ್ಯಗಳನ್ನು ಆಡಬೇಕಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಗಳಿಂದಾಗಿ ಈ ಪಂದ್ಯಗಳನ್ನು ರದ್ದುಪಡಿಸಲಾಗಿದೆ ಎಂದು ಪ್ಯಾಲೆಸ್ತೀನ್ ಫುಟ್‌ಬಾಲ್ ಸಂಘ ತಿಳಿಸಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಇರಾನ್ ಮೇಲಿನ ದಾಳಿಗಳ ನಂತರ, ಪ್ರದೇಶದಲ್ಲಿ ವ್ಯಾಪಕ ಪ್ರಯಾಣ ವ್ಯತ್ಯಯ ಉಂಟಾಗಿದೆ. ಹಲವಾರು ಪ್ರಮುಖ ಗಲ್ಫ್ ಟ್ರಾನ್ಸಿಟ್ ಕೇಂದ್ರಗಳಲ್ಲಿ ವಿಮಾನ ಸಂಚಾರಕ್ಕೆ ತೊಂದರೆ ಉಂಟಾಗಿದ್ದು, ಭದ್ರತಾ ಕಾರಣಗಳಿಂದ ಕೆಲವು ವಿಮಾನ ನಿಲ್ದಾಣಗಳನ್ನು ಮುಚ್ಚಲಾಗಿದೆ.ಕೋಚ್ ಇಹಾಬ್ ಅಬು ಜಜಾರ್ ನೇತೃತ್ವದ ತಂಡ ಮಾರ್ಚ್ 27ರಂದು ಬೆನಿನ್ ವಿರುದ್ಧ ಮತ್ತು ನಾಲ್ಕು ದಿನಗಳ ಬಳಿಕ ಮೌರಿಟಾನಿಯಾ ವಿರುದ್ಧ ಆಡಬೇಕಾಗಿತ್ತು. ಈ ಪಂದ್ಯಗಳು 2027ರ ಏಷ್ಯನ್ ಕಪ್‌ಗೆ ಸಿದ್ಧತೆಯ ಭಾಗವಾಗಿದ್ದವು. ಈ ಟೂರ್ನಿಯನ್ನು ಸೌದಿ ಅರೇಬಿಯಾದಲ್ಲಿ ಆಯೋಜಿಸಲಾಗುತ್ತಿದೆ. ಮೊರೊಕ್ಕೊದಲ್ಲಿ ಆಯೋಜಿಸಲಾದ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ ಎಂದು ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನಸ್ವಾಮಿಯಲ್ಲಿ ಕ್ರಿಕೆಟ್ | ಹೊಸ ನಿಯಮ | ಮೆಟ್ರೋ ಉಚಿತ, ಪ್ರವೇಶ-ನಿರ್ಗಮನ ದ್ವಾರಗಳ ನವೀಕರಣ

ಅಭಿಮಾನಿಗಳಿಗೆ ಹೊಸ ಮಾರ್ಗಸೂಚಿ

◆ **ಬೆಂಗಳೂರು:** ಮುಂದಿನ ವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯಕ್ಕೆ ಬೆಂಗಳೂರು ಸಜ್ಜುಗೊಳ್ಳುತ್ತಿದೆ. ಸುಮಾರು 8 ತಿಂಗಳ ಮಟ್ಟಿಗೆ ನಿಂತಿದ್ದ ಕ್ರಿಕೆಟ್ ಮತ್ತೊಮ್ಮೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊಳಗಲು ಅಣಿಯಾಗಿದೆ.

ಪಂದ್ಯಕ್ಕೆ ಒಂದು ವಾರ ಉಳಿದಿರುವಂತೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಶುಕ್ರವಾರದಂದು ಅಭಿಮಾನಿಗಳಿಗೆ ಪಂದ್ಯದ ಟಿಕೆಟ್, ಪಾರ್ಕಿಂಗ್ ಮತ್ತು ನೂತನ ಪ್ರವೇಶ-ನಿರ್ಗಮಿಸುವ ಗೇಟುಗಳ ಮಾರ್ಗಸೂಚಿಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಕಟಿಸಿದೆ. ಮೆಟ್ರೋ ಜತೆಗೆ ಬೆಂಗಳೂರು ತಂಡ ಟೈ-ಅಪ್ ಮಾಡಿಕೊಂಡಿದ್ದು ಪಂದ್ಯದ ಟಿಕೆಟ್ ಇರುವವರಿಗೆ ಉಚಿತ ಮೆಟ್ರೋ ಸೇವೆ ಕೂಡ ಲಭ್ಯವಿದೆ ಎಂದು ಆರ್‌ಸಿಬಿ ಅಧಿಕೃತ ಘೋಷಣೆ ಮಾಡಿದೆ.

ವಾಹನ ದಟ್ಟಣೆ ನಿಯಂತ್ರಣ: ಪಂದ್ಯಗಳು ನಡೆಯುವ ಹಂತದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಹತ್ತಿರ ವಾಹನ ದಟ್ಟಣೆ ಆಗದಂತೆನೋಡಿಕೊಳ್ಳುವನಿಟ್ಟಿನಲ್ಲಿಹೊಸಮಾರ್ಗಸೂಚಿಯನ್ನು ನೀಡಲಾಗಿದೆ. ಮುಖ್ಯವಾಗಿ ಅಭಿಮಾನಿಗಳಿಗೆ ಮೆಟ್ರೋ ಅಥವಾ ಸಾರ್ವಜನೀಕ ವಾಹನಗಳನ್ನು ಬಳಸಿಕೊಳ್ಳಲು ಸಲಹೆ ನೀಡಿರುವ ಕೆಎಸ್‌ಸಿಎ, ಬೆಂಗಳೂರು ಪೊಲೀಸ್ ಮತ್ತು ಬೆಂಗಳೂರು ಫ್ರಾಂಚೈಸಿ ವಾಹನ ದಟ್ಟಣೆಗೆ ವಿವಿಧ ಕ್ರಮಗಳನ್ನೂ ಕೂಡ ಜರುಗಿಸಿದೆ. ಇದೇ ವಿಭಾಗದಲ್ಲಿ ಮೆಟ್ರೋದೊಂದಿಗೆ ಟೈ-ಅಪ್ ಮಾಡಿಕೊಂಡಿದ್ದು, ಪಂದ್ಯದ ವೇಳೆ ಟಿಕೆಟ್ ಪಡೆದವರಿಗೆ ಕ್ರೀಡಾಂಗಣದವರೆಗೂ ಉಚಿತ ಮೆಟ್ರೋ ಸೇವೆ ಒದಗಿಸುವ ಬಗ್ಗೆ ಘೋಷಣೆಯಾಗಿದೆ.

ಕಾರ್ಯನಿರ್ವಹಿಸುವುದುಹೇಗೆ?: ಚಿನ್ನಸ್ವಾಮಿಕ್ರೀಡಾಂಗಣಕ್ಕೆ ಹೋಗಲು ಎರಡು ಪ್ರಮುಖ ಮೆಟ್ರೋ ನಿಲ್ದಾಣಗಳಿವೆ. ಎಮ್‌ಜಿ ರೋಡ್ ಮತ್ತು ಕಬ್ಬನ್ ಪಾರ್ಕ್. ಪ್ರತಿಷ್ಠಿತ ಪಂದ್ಯದ ಟಿಕೆಟ್ ಖರೀದಿಸುವ ಅಭಿಮಾನಿಗಳಿಗೆ ಪಂದ್ಯದ ವೇಳೆ ಈ ಎರಡೂ ನಿಲ್ದಾಣಕ್ಕೆ ಉಚಿತ ಪ್ರಯಾಣ ಒದಗಿಸಲಾಗುವುದು. ವೆಬ್‌ಸೈಟ್‌ನಲ್ಲಿ ಖರೀಸಿರುವ ಟಿಕೆಟಿನಲ್ಲಿ ಎರಡು ಬಾರ್‌ಕೋಡ್‌ಗಳಿರುತ್ತವೆ. ಪಂದ್ಯದ ಟಿಕೆಟ್ ಎಂಬ ಆಯ್ಕೆಯ ಪಕ್ಕದಲ್ಲೇ ಮೆಟ್ರೋ ಟಿಕೆಟ್ ಅನ್ನುವ ಆಯ್ಕೆಯನ್ನೂ ನೀಡಲಾಗಿದೆ. ಇದರ ಮೇಲೆ ಕ್ಲಿಕ್ ಮಾಡಿಕೊಂಡರೆ, ಅಭಿಮಾನಿಗಳು ಉಚಿತ ಮೆಟ್ರೋ ಟಿಕೆಟ್ ಪಡೆದುಕೊಳ್ಳಲಿದ್ದಾರೆ.



ಪಾರ್ಕಿಂಗ್ ವ್ಯವಸ್ಥೆ

- ಗರುಡ ಮಾಲ್
- ಸೆಂಟ್ ಜೋಸೆಫ್ ಇಂಡಿಯನ್ ಶಾಲೆ
- ಸೆಂಟ್ ಜೋಸೆಫ್ ಪುರಷರ ಪ್ರೌಢ ಶಾಲೆ
- ಫ್ರೀಡಂ ಪಾರ್ಕ್

ಕ್ವೀನ್ಸ್ ರೋಡ್ ಮೂಲಕ ಪ್ರವೇಶ ಬಂದ್: ಕಬ್ಬನ್ ಪಾರ್ಕ್ ರೋಡ್ ಹಾಗೂ ಲಿಂಗ್ ರೋಡ್‌ನಿಂದ ಮಾತ್ರ ಪ್ರವೇಶ ಪಡೆಯಬಹುದು. ಇನ್ನುಮುಂದೆ ಕ್ವೀನ್ಸ್ ರೋಡ್ ಮೂಲಕ ಪ್ರವೇಶ ಪಡೆಯುವ ಹಾಗಿಲ್ಲ ಎಂಬುದು ಖಚಿತವಾಗಿದೆ. ಒಟ್ಟು 18 ಗೇಟುಗಳ ಮೂಲಕ ಮೈದಾನದೊಳಗೆ ಹೋಗಬಹುದು. ಆದರೆ ಕ್ವೀನ್ಸ್ ರೋಡ್ ಮೂಲಕ ಪ್ರವೇಶ ರದ್ದುಗೊಳಿಸಲಾಗಿದೆ. ಸ್ಟಾಂಡ್‌ಗಳಿಗೆ ಹೋಗಲು ಹೆಚ್ಚಿನ ಒಳಗೇಟ್‌ಗಳನ್ನು ಅಳವಡಿಸಲಾಗಿದೆ.

ವೆಬ್‌ಸೈಟ್‌ನಲ್ಲಿ ಮಾತ್ರ ಟಿಕೆಟ್ ಲಭ್ಯ: ಪ್ರಮುಖ ವಿಚಾರದಲ್ಲಿ ಆರ್‌ಸಿಬಿ ಕೇವಲ ಫ್ರಾಂಚೈಸಿ ವೆಬ್‌ಸೈಟ್‌ನಲ್ಲಿ ಮಾತ್ರ ಟಿಕೆಟ್ ಸಿಗಲಿದ್ದು, ಯಾವುದೇ ಕಾರಣಕ್ಕೂ ವಂಚನೆಗೆ ಒಳಗಾಗದಿರಿ ಎಂಬ ಕಿವಿಮಾತು ಹೇಳಿದೆ. ಅಧಿಕೃತ ವೆಬ್‌ಸೈಟ್ SHOP.ROYALCHALLENGER.COM ನಲ್ಲಿ ಮಾತ್ರ ಅಸಲು ಟಿಕೆಟ್‌ಗಳು ಸಿಗಲಿವೆ. ಆ ಟಿಕೆಟ್‌ಗಳು ಮೆಟ್ರೋದೊಂದಿಗೆ ಲಿಂಕ್ ಹೊಂದಿದ್ದು, ಮೆಟ್ರೋ ಟಿಕೆಟ್ ಕೂಡ ಅದರಲ್ಲಿ ಲಭ್ಯ ಎಂದು ಆರ್‌ಸಿಬಿ ತಿಳಿಸಿದೆ.

ಪರಿಶೀಲನೆ ಮುಕ್ತಾಯ: ಚಿನ್ನಸ್ವಾಮಿ ಕ್ರೀಡಾಂಗಣವು ಪಂದ್ಯದ ಸಂಭ್ರಮಕ್ಕೆ ಸಜ್ಜಾಗುತ್ತಿರುವ ಬೆನ್ನಲ್ಲೇ, ನಗರ ಪೊಲೀಸರು ಹಾಗೂ ಕೆಎಸ್‌ಸಿಎ ಜಂಟಿಯಾಗಿ ಭದ್ರತಾ ವ್ಯವಸ್ಥೆಯನ್ನು ರೂಪಿಸಿವೆ. ಪಂದ್ಯದ ವೇಳೆ ಯಾವುದೇ ಸಣ್ಣ ಲೋಪಕ್ಕೂ ಅವಕಾಶ ನೀಡಬಾರದೆಂಬ ಉದ್ದೇಶದಿಂದ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಪ್ರಮುಖ ಭಾಗೀದಾರರು ಕ್ರೀಡಾಂಗಣದಲ್ಲಿ ಖುದ್ದಾಗಿ ಭೇಟಿ ನೀಡಿ ಸಕಲ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದ್ದಾರೆ. ಭದ್ರತಾ ಸಿಬ್ಬಂದಿಯ ನಿಯೋಜನೆ, ಹೈಟೆಕ್ ಕಣ್ಗಾವಲು ಮತ್ತು ತುರ್ತು ಪರಿಸ್ಥಿತಿಗಳನ್ನು ಎದುರಿಸುವ ತಂತ್ರಗಳ ಬಗ್ಗೆ ಹಿರಿಯ ಅಧಿಕಾರಿಗಳು ಚರ್ಚಿನಡೆಸಿದ್ದಾರೆ. ಕ್ರೀಡಾಂಗಣದ ಸುತ್ತಮುತ್ತಲಿನ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ವಿಶೇಷ ಸಂಚಾರ ವ್ಯತ್ಯಯ ಯೋಜನೆಗಳನ್ನು ರೂಪಿಸಲಾಗಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ತಾಂತ್ರಿಕ ತಂಡಗಳು ಸಿಸಿಟಿವಿ ಕ್ಯಾಮೆರಾಗಳ ಮೂಲಕ ಪ್ರತಿ ಚಲನವಲನದ ಮೇಲೆ ಹದ್ದಿನ ಕಣ್ಣಿಡಲು ಸನ್ನದ್ಧವಾಗಿವೆ.

ವಿಶೇಷ ಪಾರ್ಕಿಂಗ್ ವ್ಯವಸ್ಥೆ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಪಾರ್ಕಿಂಗ್ ಸಮಸ್ಯೆ ಮೊದಲಿನಿಂದಲೂ ಎದುರಿಸುತ್ತಲೇ ಬಂದಿತ್ತು. ಪಂದ್ಯ ಶುರುವಾಗುವ ಮೊದಲು ಮತ್ತು ಮುಗಿದ ನಂತರ ಕ್ರೀಡಾಂಗಣದ ಸುತ್ತಲೂ ಭಾರೀ ವಾಹನ ದಟ್ಟಣೆಯಾಗುತ್ತಿತ್ತು. ಈ ಸಮಸ್ಯೆಯ ಪರಿಹಾರವಾಗಿ ಹೊಸ ಪಾರ್ಕಿಂಗ್ ವ್ಯವಸ್ಥೆ ಬಗ್ಗೆಯೂ ಆರ್‌ಸಿಬಿ ಅಭಿಮಾನಿಗಳಿಗೆ ನೀಡಿದೆ. ಕ್ರೀಡಾಂಗಣದ ಸಮಿಪ ನಾಲ್ಕು ಕಡೆ ಪಾರ್ಕಿಂಗ್ ಮಾಡಬಹುದಾಗಿ ತಿಳಿಸಿದೆ. ಪಾರ್ಕಿಂಗ್‌ಗಾಗಿ ಪ್ರೀ ಬುಕ್ಕಿಂಗ್ ಕೂಡ ಆನ್‌ಲೈನ್‌ನಲ್ಲಿ ಇರಿಸುವುದಾಗಿ ಆರ್‌ಸಿಬಿ ತಿಳಿಸಿದೆ. ಪಾರ್ಕಿಂಗ್ ಮಾಡುವ ಅಭಿಮಾನಿಗಳಿಗೆ ಕ್ರೀಡಾಂಗಣದವರೆಗೂ ಬಸ್ ವ್ಯವಸ್ಥೆ ಕೂಡ ಇರಲಿದೆ.

ತುರ್ತು ವಾಹನಕ್ಕೆ ಬೇರೆ ಗೇಟ್

ಕೆಲವು ಗೇಟ್‌ಗಳನ್ನು ಆಂಬ್ಯುಲೆನ್ಸ್, ಅಗ್ನಿಶಾಮಕ ವಾಹನ ಸೇರಿದಂತೆ ತುರ್ತು ವಾಹನಗಳಿಗೆ ಮಾತ್ರ ಪ್ರವೇಶಕ್ಕಾಗಿ ವಿಶೇಷ ಗೇಟ್‌ಗಳನ್ನು ಸ್ಥಾಪಿಸಲಾಗಿದೆ. ಇವುಗಳಿಗಾಗಿ ಕ್ರೀಡಾಂಗಣದ ಒಳಗೆ ಪ್ರತ್ಯೇಕ ಗೇಟ್‌ಗಳನ್ನು ಮೀಸಲಿಡಲಾಗಿದೆ.

ಅನ್‌ಬಾಕ್ಸಿಂಗ್ ರದ್ದು?

ಪ್ರತಿ ವರ್ಷ ನಡೆಯುವ ಆರ್‌ಸಿಬಿ ಜೆರ್ಸಿ ಅನಾವರಣ ಕಾರ್ಯಕ್ರಮ ಈ ಬಾರಿ ರದ್ದಾಗುವ ಸಾಧ್ಯತೆಯಿದೆ. ಪಂದ್ಯಾವಳಿಗೆ ಕೆಲವೇ ದಿನಗಳು ಉಳಿದರೂ ಈ ಬಗ್ಗೆ ಘೋಷಣೆಯಾಗಿಲ್ಲ. ಕನಿಷ್ಠ ಪಕ್ಷ ದಿನಾಂಕವೂ ನಿಗದಿಯಾಗಿಲ್ಲ. ಉದ್ಘಾಟನಾ ಸಮಾರಂಭ ಬೆಂಗಳೂರಲ್ಲೇ ನಡೆಯಬೇಕಿದೆ. ಇದಕ್ಕೂ ಮುನ್ನ ಅಂತಹ ದೊಡ್ಡ ಕಾರ್ಯಕ್ರಮ ನಡೆಯುವುದು ಅನುಮಾನ ಎಂದು ವರದಿಯಾಗಿವೆ.

ಮುಂದಿನ ವರ್ಷ ಟೇಬಲ್ ಟೆನಿಸ್ ಡಬಲ್ಸ್ ವಿಶ್ವಕಪ್

◆ **ಹೊಸದಿಲ್ಲಿ:** ಹೊಚ್ಚಹೊಸ ಟೇಬಲ್ ಟೆನಿಸ್ ಡಬಲ್ಸ್ ವಿಶ್ವಕಪ್ ಪಂದ್ಯಾವಳಿ ಯನ್ನು ಮುಂದಿನ ವರ್ಷ ಪರಿಚಯಿಸಲು ಅಂತಾ ರಾಷ್ಟ್ರೀಯ ಟೇಬಲ್ ಟೆನಿಸ್ ಸಂಸ್ಥೆ ಮುಂದಾಗಿದೆ. ಶುಕ್ರವಾರ ಈ ಬಗ್ಗೆ ಘೋಷಣೆ ಯಾಗಿದ್ದು ಮೊದಲ ಆವೃತ್ತಿ 2027ರಲ್ಲಿ ನಡೆಯಲಿದೆ. ಡಬಲ್ಸ್‌ಗಳಿಗಾಗಿಯೇ ಮಾಡ ಲಾಗುವ ಈ ಕೂಟದಲ್ಲಿ ಮಹಿಳೆಯರ ಮತ್ತು ಪುರುಷರ ವಿಭಾಗ ಇರಲಿವೆ. ಸಿಂಗಲ್ಸ್ ಪಂದ್ಯಗಳು ನಡೆಯುವುದಿಲ್ಲ.

2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೂ ಮುನ್ನ ವಿಶ್ವಕಪ್ ನಡೆಯುತ್ತಿರುವುದು ಜೋಡಿ ಟಿಟಿ ಆಟಗಾರರಿಗೆ ಭರವಸೆ ಮೂಡಿಸಿದೆ. ಸದ್ಯ ಜಾರಿಯಲ್ಲಿರುವ ಐಟಿಟಿಎಫ್ ವಿಶ್ವಕಪ್ ಕೇವಲ ಸಿಂಗಲ್ಸ್‌ಗೆ ಮಾತ್ರ ಸೀಮಿತವಾಗಿತ್ತು. ಡಬಲ್ಸ್ ಹಾಗೂ ಮಿಶ್ರ ವಿಶ್ವಕಪ್ ಈ ರಚನೆಯನ್ನು ಪೂರ್ಣಗೊಳಿಸುತ್ತದೆ. 2004ರ ಅಥೇನ್ಸ್ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ಪಂದ್ಯಗಳು ಮರಳಿವೆ. ಟಿಟಿ ವಿಭಾಗದಲ್ಲಿ ಸಿಂಗಲ್ಸ್ ಪಂದ್ಯಗಳು ಮಾತ್ರ ನಡೆಯುತ್ತಿದ್ದವು. 2020ರ ಟೋಕಿಯೊ ಒಲಿಂಪಿಕ್ ಸಮಯ ದಲ್ಲಿ ಮಿಶ್ರ ಡಬಲ್ಸ್ ವಿಭಾಗವನ್ನು ಸೇರಿಸ ಲಾಯಿತು. ಇದೀಗ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ನಲ್ಲಿ ಮಹಿಳೆಯರ ಹಾಗೂ ಪುರುಷರ ಡಬಲ್ಸ್ ವಿಭಾಗವನ್ನು ಮೊದಲ ಬಾರಿಗೆ ಸೇರಿಸಲಾಗಿದೆ. ಈ ಬಗ್ಗೆ ಘೋಷಣೆ ಮಾಡುತ್ತಾ, ಅಂತಾ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷೆ ಪೆಟ್ರಾ ಸೋರ್ಲಿಂಗ್ ಅವರು ಮಾತನಾಡುತ್ತಾ, ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ವಿಭಾಗವನ್ನು ಈ ಬಾರಿ ಮತ್ತೆ ಸೇರಿಸಲಾಗುತ್ತಿರುವುದು ಖುಷಿಯ ವಿಚಾರ. ಈ ತಯಾರಿ ಮತ್ತು ಸಂಭ್ರಮಾಚರಣೆ ಯನ್ನು ಐಟಿಟಿಎಫ್ ವಿಶ್ವಕಪ್ ಮೂಲಕ ಶುರು ಮಾಡುತ್ತೇವೆ ಎಂದರು. 100 ವರ್ಷದ ಟೇಬಲ್ ಟೆನಿಸ್ ಸಂಭ್ರಮಾಚರಣೆ ಮಾಡುವುದಲ್ಲದೆ ನಾವು ಮುಂದಿನ 100 ವರ್ಷಕ್ಕೆ ಸಿದ್ಧತೆಗಳನ್ನು ನಡೆಸಿದ್ದೇವೆ ಎಂದಿದ್ದಾರೆ.



ಆರಂಭಿಕ ಪಂದ್ಯಗಳಿಗೆ ಸ್ಟಾರ್ಕ್ ಕೂಡ ಅಲಭ್ಯ

◆ **ಮುಂಬೈ:** ವೇಗಿ ಮಿಚೆಲ್ ಸ್ಟಾರ್ಕ್, ಲೋಕಿ ಫರ್ಗುಸನ್, ಸ್ಯಾಮ್ ಕರ್ರನ್ ಸೇರಿದಂತೆ ಪ್ರಮುಖ ಆಟಗಾರರು ಐಪಿಎಲ್‌ಗೆ ಅಲಭ್ಯರಾಗಿದ್ದಾರೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯು ಮಾರ್ಚ್ 28ರಿಂದ ಶುರುವಾಗಲಿದೆ. ಆಸ್ಟ್ರೇಲಿಯಾ ವೇಗಿ ಜೋಶ್ ಹ್ಯಾಜೆಲ್ವುಡ್, ಪ್ಯಾಟ್ ಕಮ್ಮಿನ್ಸ್ ಅಲಭ್ಯರಿರುವುದು ಈ ಹಿಂದೆ ಖಚಿತವಾಗಿತ್ತು. ಇದೀಗ ಮಿಚೆಲ್ ಸ್ಟಾರ್ಕ್ ಕೂಡ ಒಂದಿಷ್ಟು ಪಂದ್ಯಗಳಿಗೆ ಲಭ್ಯರಿಲ್ಲ ಎಂಬ ಮಾಹಿತಿ ಹೊರಬಿದ್ದಿದೆ. ವರ್ಕ್ ಲೋಡ್ ಹೆಚ್ಚಳ ಬೆನ್ನಲ್ಲೇ ಒಂದಿಷ್ಟು ಪಂದ್ಯಗಳಿಗೆ ಸ್ಟಾರ್ಕ್ ಲಭ್ಯರಿಲ್ಲ. ಪಂಜಾಬ್ ವೇಗಿ ವೈಯಕ್ತಿಕ ಕಾರಣಗಳಿಂದ ಅಲಭ್ಯರಾಗಿದ್ದಾರೆ. ರಾಜಸ್ಥಾನಕ್ಕೆ ಟ್ರೇಡ್ ಆಗಿರುವ ಸ್ಯಾಮ್ ಕರ್ರನ್ ಗಾಯದಿಂದಾಗಿ ಹಿನ್ನಡೆ ಅನುಭವಿಸಿದ್ದಾರೆ. ಮುಂಬೈನ ಅಥರ್ವಾ ಅಂಕೋಲಾ, ಲಖನೌ ತಂಡದ ಜೋಶ್ ಇಂಗ್ಲಿಸ್, ಚೆನ್ನೈ ತಂಡದ ನಾಥನ್ ಎಲ್ಲಿಸ್ ಕೂಡ ಅಲಭ್ಯರಿದ್ದಾರೆಂದು ಹೇಳಲಾಗುತ್ತಿದೆ. ಎರಡನೇ ಹಂತದ ವೇಳಾ ಪಟ್ಟಿ ಪ್ರಕಟವಾದ ನಂತರ ಮುಂದಿನ ಪಂದ್ಯಗಳಿಗೆ ಲಭ್ಯತೆ ಬಗ್ಗೆ ಮಾಹಿತಿ ಹೊರಬರಲಿದೆ.

ಅ.29ರಿಂದ ಯೂಥ್ ಕಾಮನ್‌ವೆಲ್ತ್


◆ **ಹೊಸದಿಲ್ಲಿ:** ಕಾಮನ್‌ವೆಲ್ತ್ ಯುವ ಕ್ರೀಡಾ ಕೂಟದ ಎಂಟನೇ ಆವೃತ್ತಿ ಮುಂದಿನ ವರ್ಷ ಅಕ್ಟೋಬರ್ 29ರಿಂದ ನವೆಂಬರ್ 4ರವರೆಗೆ ಮಾಲ್ಟಾ ಮತ್ತು ಗೊಜೊದಲ್ಲಿ ನಡೆಯಲಿದೆ. ಅಕ್ಟೋಬರ್ 29ರಂದು ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅಕ್ಟೋಬರ್ 30ರಿಂದ ನವೆಂಬರ್ 4ರವರೆಗೆ ಆರು ದಿನಗಳ ಕ್ರೀಡಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಘೋಷಣೆಯಾಗಿದೆ.

ಈ ಕ್ರೀಡಾಕೂಟದಲ್ಲಿ ಈಜು ಮತ್ತು ಪ್ಯಾರಾ ಈಜು, ಅಥ್ಲೆಟಿಕ್ಸ್ ಮತ್ತು ಪ್ಯಾರಾ ಅಥ್ಲೆಟಿಕ್ಸ್, ನೆಟ್ಬಾಲ್, ಸೇಲಿಂಗ್, ಸ್ಕ್ವಾಷ್, ಟ್ರೈಥ್ಲಾನ್, ವಾಟರ್ ಪೋಲೊ ಮತ್ತು ವೇಟ್‌ಲಿಫ್ಟಿಂಗ್ ಸೇರಿ ಒಟ್ಟು ಎಂಟು ಕ್ರೀಡೆಗಳು ಇರಲಿವೆ. ಕಾಮನ್‌ವೆಲ್ತ್ ಸ್ಪೋರ್ಟ್ ಮುಖ್ಯ ಕಾರ್ಯನಿರ್ವಾಹಕ ಕೇಟಿ ಸಾಡ್ಲೈರ್ ಅವರು ಪ್ರಕಟಣೆಯಲ್ಲಿ, ಮಾಲ್ಟಾ 2027 ಯುವ ಕ್ರೀಡಾಕೂಟವು ಉತ್ಸಾಹಭರಿತ ಮತ್ತು ಸ್ಪರ್ಧಾತ್ಮಕ ವಾತಾವರಣವನ್ನು ಒದಗಿಸಲಿದೆ. ವಿಶ್ವಮಟ್ಟದ ಸೌಲಭ್ಯಗಳು ಯುವ ಆಟಗಾರರಿಗೆ ಹೊಸ ಅನುಭವವನ್ನು ನೀಡಲಿವೆ ಮತ್ತು ಭವಿಷ್ಯದ ತಾರೆಗಳನ್ನು ಬೆಳೆಸಲು ಸಹಾಯ ಮಾಡಲಿವೆ ಎಂದು ತಿಳಿಸಿದ್ದಾರೆ. ಈ ಬಾರಿ ಕ್ರೀಡಾಕೂಟದಲ್ಲಿ ಇತಿಹಾಸದಲ್ಲೇ ಅತಿ ದೊಡ್ಡ ಪ್ಯಾರಾ ಕ್ರೀಡಾ ಕಾರ್ಯಕ್ರಮ ಇರಲಿದೆ. 2023ರಲ್ಲಿ ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪ್ಯಾರಾ ಅಥ್ಲೆಟಿಕ್ಸ್ ಸೇರಿಸಿದ ಬಳಿಕ ಇದನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಇದೇ ವೇಳೆ, ಈ ಬಾರಿ ಸೇಲಿಂಗ್ ಮತ್ತು ವಾಟರ್ ಪೋಲೊ ಮೊದಲ ಬಾರಿಗೆ ಕಾಮನ್‌ವೆಲ್ತ್ ಯುವಕ್ರೀಡಾಕೂಟದಲ್ಲಿಪರಿಚಯವಾಗುತ್ತಿವೆ. ಸುಮಾರು 14ರಿಂದ 18 ವರ್ಷದ ವಯಸ್ಸಿನ 1200ಕ್ಕೂ ಹೆಚ್ಚು ಆಟಗಾರರು ಕಾಮನ್‌ವೆಲ್ತ್‌ನ 74 ರಾಷ್ಟ್ರಗಳು ಮತ್ತು ಪ್ರದೇಶಗಳಿಂದ ಭಾಗವಹಿಸುವ ನಿರೀಕ್ಷೆಯಿದೆ.

ಕ್ರೀಡಾಕೂಟದ ಪ್ರಮುಖ ಸ್ಥಳಗಳು: ಕಾಟೋನೆರಾ ಇಂಡೋರ್ ಪೂಲ್, ತಲ್-ಕ್ರೋಕ್ ರಾಷ್ಟ್ರೀಯ ಪೂಲ್, ಮಾರ್ಸಾ ಅಥ್ಲೆಟಿಕ್ಸ್ ಸ್ಟೇಡಿಯಂ, ಮಾರ್ಸಾ ಸ್ಪೋರ್ಟ್ಸ್ ಸೆಂಟರ್, ಮೆಲ್ಲಿಹಾ ಬೇ, ಗೊಜೊ ಇಂಡೋರ್ ಸ್ಪೋರ್ಟ್ಸ್ ಪೆವಿಲಿಯನ್, ಮಾರ್ಸಲ್‌ಫೋರ್ನ್ ಬೇ.

ಪದಬಂಧ 5929

▸ ರಾಜಾ ಸಂಗಮೇಶ ಹಿರೇಮಠ



5928 ಉತ್ತರ

ಎಡದಿಂದ ಬಲಕ್ಕೆ:
1.ಭವಪಾಶ 3.ಭದ್ರಗಜ
5.ರಜಕ 7.ತಹನಾಮೆ
9.ನರಕುಲ 11.ಬಾಕಿದಾರ
14.ಹರಿಹರ 16.ಸಕಲ
17.ಬೇರುಬಿಡು
18.ಒಳಸುಳಿ

ಮೇಲಿನಿಂದ ಕೆಳಕ್ಕೆ :
2.ವನರುಹ 4.ಗಡಿಯಾರ
5.ರಮೆ 6.ಕಲ 8.ನಾರದಾ
10.ಕುತ್ತರಿ 12.ಕಿಡಿಕಾರು
13.ರಸ 14.ಹಲ
15.ಹವಣಿಸು

ಎಡದಿಂದ ಬಲಕ್ಕೆ
1.ಹಿಂದೂಗಳ ಪ್ರಸಿದ್ಧ ಧರ್ಮಗ್ರಂಥ (5)
3.ಕುಕ್ಕು-ತಿವಿಯುವಿಕೆ (3)
5.ಈತ ಹಣದೊಡತಿಯ ಪತಿ (3)
6.ನನ್ನ ಕುಲ ಕೇಳಿದ ಪಾಂಡವ (3)
8.ಈತ ಆಕೃತಿಗಳನ್ನು ಬರೆಯುವವನು (3)
9.ಅಕ್ಷರ ವಿದ್ಯೆ ಗೊತ್ತಿರುವವನು (3)
13.ಕಣ ಕಡೆಯಲ್ಲಿ ತಿರುಗಿ ಪ್ರಾಯದ ಹೋರಿಯಾಯ್ತು (3)
15.ತಳದ ನಡುವೆ ಹೊಂಗೆಯ ಮರವಿದೆ (3)
16.ನಮ್ಮವನು ನನಗೆ ಮಾಡಿದ ವಂದನೆ (3)
17.ನೈದಿಲೆಗಳಿಂದ ಕೂಡಿದ ಸರೋವರ (5)

ಮೇಲಿನಿಂದ ಕೆಳಕ್ಕೆ
1.ಕುಂಭವನ್ನವನು ಇಟ್ಟದ್ದು ದೊಡ್ಡ ಕಟ್ಟಡದಲ್ಲಿ (3)
2.ಅಲ್ಲಿಗೆ ಹೋಗು ಎಂಬರ್ಥದ ಶಬ್ದ (3)
3.ಕುನು ಲಲಿತೆಗೆ ಕೇಳಿದ ಕ್ಷೇಮ ಸಮಾಚಾರ (3)
4.ಕಾರ-ಚಾಕು ಇರುವ ಹೀನವಾದ ನಡತೆ (5)
7.ಕೆಟ್ಟ ಹಂಚಿಕೆ-ಕುಟಿಲೋಪಾಯವಿದು (3)
8.ಯಾವಾಗಲೂ ಹೊಸದರಂತಿರುವುದು (5)
10.ಕ್ಷಣದ ನಡುವೆ ಇರುವ ಬೌದ್ಧಭಿಕ್ಷು (3)
11.ವೇಗದಿಂದ ಬಂದ ತನಯ ಪಡೆದ ಸಂಬಳ (3)
12.ಸೂರ್ಯ-ದೀಪಗಳ ಪ್ರಕಾಶವಿದು (3)
14.ವಿಠೋಬನ ಕರದಲ್ಲಿರುವ ಕಠಿಣವಾದುದು (3)

ಜಲ ಸುರಕ್ಷತೆ: ನೀರಿಗಾಗಿ ಜನಾಂದೋಲ ರೂಪಿಸೋಣ

▸ ಸಿ. ಆರ್. ಪಾಟೀಲ್, ಕೇಂದ್ರ ಜಲಶಕ್ತಿ ಸಚಿವ



ಮಾ. 22ರಂದು ನಾವು 'ವಿಶ್ವ ಜಲ ದಿನ'ವನ್ನು ಆಚರಿಸುತ್ತೇವೆ. ದೇಶದ ಸಮಸ್ತ ನಾಗರಿಕರಿಗೂ ಇದರ ಶುಭಾಶಯಗಳು. ನೀರು ಬದುಕಿನಲ್ಲಿ ಎಷ್ಟು ಮುಖ್ಯ ಮತ್ತು ಭವಿಷ್ಯದ ಪೀಳಿಗೆಗಾಗಿ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂಬ ಸಂಗತಿಯನ್ನು ಈ ದಿನ ನಮಗೆ ನೆನಪಿಸುತ್ತದೆ.

ನಮ್ಮ ಜೀವ ಸಂಕುಲ, ಪರಿಸರ ಮತ್ತು ದೇಶದ ಆರ್ಥಿಕತೆಗೆ ನೀರೇ ಆಧಾರ. ಆದರೆ, ಈ ಅಮೂಲ್ಯ ಸಂಪನ್ಮೂಲದ ಮೇಲೆ ಒತ್ತಡ ಹೆಚ್ಚುತ್ತಿದೆ. ಜಗತ್ತಿನ ಒಟ್ಟು ಜನಸಂಖ್ಯೆ ಮತ್ತು ಜಾನುವಾರುಗಳಲ್ಲಿ ಶೇ. 18ರಷ್ಟು ಭಾರತದಲ್ಲಿದ್ದರೂ, ನಮ್ಮಲ್ಲಿರುವ ಸಿಹಿನೀರಿನ ಪ್ರಮಾಣ ಕೇವಲ ಶೇ. 4ರಷ್ಟು ಮಾತ್ರ. ವೇಗವಾಗಿ ಬೆಳೆಯುತ್ತಿರುವ ನಗರಗಳು, ಹೆಚ್ಚುತ್ತಿರುವ ನೀರಿನ ಬೇಡಿಕೆ ಮತ್ತು ಹವಾಮಾನ ಬದಲಾವಣೆಯ ಸವಾಲುಗಳ ನಡುವೆ, ನೀರಿನ ಸಮರ್ಥ ನಿರ್ವಹಣೆ ಮಾಡುವುದು ನಮ್ಮ ರಾಷ್ಟ್ರೀಯ ಆದ್ಯತೆಯಾಗಿದೆ.

ಈ ಸವಾಲನ್ನು ಸಮರ್ಥವಾಗಿ ಎದುರಿಸಲು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ನೀರಿಗಾಗಿ ಒಂದು ಸಮಗ್ರ ಆಡಳಿತ ನೀತಿ ಅಳವಡಿಸಿಕೊಂಡಿದೆ. ಇದಕ್ಕಾಗಿಯೇ 'ಜಲಶಕ್ತಿ ಸಚಿವಾಲಯ'ವನ್ನು ಸ್ಥಾಪಿಸಿ, ನೀರಿನ ನಿರ್ವಹಣೆಗೆ ಸಂಬಂಧಿಸಿದ ವಿವಿಧ ವಿಭಾಗಗಳನ್ನು ಒಂದೇ ಸೂರಿನಡಿ ತರಲಾಗಿದೆ. ಇದು ನೀರಿನ ಯೋಜನೆಗಳನ್ನು ರೂಪಿಸುವಲ್ಲಿ ಒಂದು ದೊಡ್ಡ ಬದಲಾವಣೆಯನ್ನು ತಂದಿದ್ದು, ಸಮಗ್ರವಾದ ಯೋಜನೆಯತ್ತ ನಾವೀಗ ಸಾಗುತ್ತಿದ್ದೇವೆ.

ಈ ವಿಧಾನವು ನೀರಿನ ಸಂಪೂರ್ಣ ಚಕ್ರದ ಮೇಲೆ ಗಮನ ಹರಿಸುತ್ತದೆ. ಅಂದರೆ, ನೀರಿನ ಸಂರಕ್ಷಣೆ ಮತ್ತು ಅಂತರ್ಜಲ ಮರುಪೂರಣ ಮಾಡುವುದು; ಅಣೆಕಟ್ಟು ಹಾಗೂ ಜಲಾಶಯಗಳ ಮೂಲಕ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದು; ನದಿ ಜೋಡಣೆಯ ಮೂಲಕ ಎಲ್ಲ ಪ್ರದೇಶಗಳಿಗೂ ಸಮಾನವಾಗಿ ನೀರನ್ನು ಹಂಚುವುದು; 'ಜಲ ಜೀವನ್ ಮಿಷನ್' ಮತ್ತು ಆಧುನಿಕ ನೀರಾವರಿ ಯೋಜನೆಗಳ ಮೂಲಕ ಎಲ್ಲರಿಗೂ ನೀರು ತಲುಪಿಸುವುದು. 'ನಮಾಮಿ ಗಂಗೆ'ಯಂತಹ ಕಾರ್ಯಕ್ರಮಗಳ ಮೂಲಕ ನೀರಿನ ಶುದ್ಧತೆ ಕಾಪಾಡುವುದು, ಮತ್ತು ಸಂಶೋಧನೆ ಹಾಗೂ ಹೊಸ ಆಲೋಚನೆಗಳ ಮೂಲಕ ಜಲ ಭದ್ರತೆಯನ್ನು ಗಟ್ಟಿಗೊಳಿಸುವುದು. ಇವೆಲ್ಲವೂ ದೀರ್ಘಕಾಲದ ಜಲ ಭದ್ರತೆಯ ದೂರದೃಷ್ಟಿಯನ್ನು ಉಲ್ಲೇಖಿಸುತ್ತದೆ.

ಯೋಜನೆಯ ಕೇಂದ್ರಬಿಂದುವೇನೆಂದರೆ, ನೀರಿನ ನಿರ್ವಹಣೆಯು ಎಲ್ಲಾ ಹಂತಗಳಲ್ಲೂ ಒಂದು 'ಜನ ಚಳವಳಿ' ಅಥವಾ ಜನಾಂದೋಲನವಾಗಬೇಕು ಎನ್ನುವುದು. ಸರ್ಕಾರದ ಯೋಜನೆಗಳು ಕೇವಲ ದಾರಿ ತೋರಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬಹುದು. ಆದರೆ, ನಿಜವಾದ ಬದಲಾವಣೆಗಾಗಿ ಪ್ರತಿಯೊಬ್ಬನಾಗರಿಕನೂ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ನನ್ನ ಹೊಣೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು.

ಜಲ ಜೀವನ್ ಮಿಷನ್ ಪ್ರತಿಯೊಂದು ಗ್ರಾಮೀಣ ಮನೆಗೂ ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರನ್ನು ಒದಗಿಸುವ ವಿಶ್ವದ ಅತಿದೊಡ್ಡ ಕಾರ್ಯಕ್ರಮವಾಗಿ ಜಾರಿಯಾಗುತ್ತಿದೆ. ಈಗಾಗಲೇ 15.8 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದ್ದು, ಜನರ ಜೀವನಮಟ್ಟ ಸುಧಾರಿಸಿದೆ. ಲಕ್ಷಾಂತರ ಮಹಿಳೆಯರಿಗೆ ಮೈಲುಗಟ್ಟಲೆ ನಡೆದು ನೀರು ಹೊರುವ ಸಂಕಷ್ಟ ತಪ್ಪಿದೆ. ಇದು ಅವರ ಆರೋಗ್ಯವನ್ನು ಸುಧಾರಿಸಿದ್ದಲ್ಲದೆ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಯೋಜನೆ ಕೇವಲ ಪೈಪ್‌ಲೈನ್‌ಗಳನ್ನು ಅಳವಡಿಸುವುದಕ್ಕಷ್ಟೇ ಸೀಮಿತವಾಗಿಲ್ಲ; ಬದಲಿಗೆ ಗ್ರಾಮ ಪಂಚಾಯತಿಗಳು ಮತ್ತು 'ಗ್ರಾಮ ನೀರು ಹಾಗೂ ನೈರ್ಮಲ್ಯ ಸಮಿತಿ'ಗಳ ಮೂಲಕ ಜನರನ್ನೇ ಈ ಯೋಜನೆಯ ಮಾಲೀಕರನ್ನಾಗಿ ಮಾಡುತ್ತಿದೆ. ಅದರಲ್ಲೂ ವಿಶೇಷವಾಗಿ, ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಮಹಿಳೆಯರಿಗೆ ತರಬೇತಿ ನೀಡಿ ಸ್ಥಳೀಯ ಮಟ್ಟದಲ್ಲಿ ಹೊಣೆಗಾರಿಕೆಯನ್ನು ಗಟ್ಟಿಗೊಳಿಸಲಾಗುತ್ತಿದೆ. 'ನಮಾಮಿ ಗಂಗೆ' ಯೋಜನೆಯು ಗಂಗಾ ನದಿ ಮತ್ತು ಅದರ ಉಪನದಿಗಳ ನೀರಿನ ಗುಣಮಟ್ಟವನ್ನು ಸುಧಾರಿಸಿದ್ದಲ್ಲದೆ, ಅಲ್ಲಿನ ನೈಸರ್ಗಿಕ ಪರಿಸರವನ್ನು ಮರುಸ್ಥಾಪಿಸುವಲ್ಲಿ ಯಶಸ್ಸು ಕಂಡಿದೆ.



ಪರಿಣಾಮ, ಗಂಗಾ ನದಿಯ ಡಾಲ್ಫಿನ್‌ಗಳಂತಹ ಪ್ರಮುಖ ಜಲಚರಗಳ ಆವಾಸಸ್ಥಾನಗಳು ಸುಧಾರಿಸಿದ್ದು, ಅವುಗಳ ಸಂಖ್ಯೆ ಹೆಚ್ಚಿದೆ. ಗಂಗೆಯನ್ನು 'ನಿರ್ಮಲ' (ಶುದ್ಧ) ಮತ್ತು 'ಅವಿರಲ' (ನಿರಂತರ ಹರಿವು) ಮಾಡುವುದರ ಜೊತೆಗೆ, ಈ ಯೋಜನೆಯು 'ಅರ್ಥ ಗಂಗೆ' ಮತ್ತು 'ಜನಗಂಗೆ' ಎಂಬ ಹೊಸ ಆಲೋಚನೆಗಳನ್ನು ತಂದಿದೆ. ಇದು ನದಿಯನ್ನು ಕೇವಲ ಸ್ವಚ್ಛಗೊಳಿಸುವುದಷ್ಟೇ ಅಲ್ಲ, ಜನರ ಜೀವನೋಪಾಯ, ಜಾಗೃತಿ ಮತ್ತು ಸ್ಥಳೀಯರ ಸಕ್ರಿಯ ಸಹಭಾಗಿತ್ವವನ್ನು ನದಿ ಸಂರಕ್ಷಣೆಯೊಂದಿಗೆ ಜೋಡಿಸಿದೆ. ಈ ಮೂಲಕ ನದಿ ಪುನಶ್ಚೇತನದ ಕಾರ್ಯದಲ್ಲಿ ಸಮುದಾಯವನ್ನೇ ಕೇಂದ್ರಬಿಂದುವನ್ನಾಗಿ ಮಾಡಲಾಗಿದೆ.

ಜಲಶಕ್ತಿ ಅಭಿಯಾನ ಇಂದು ನೀರಿನ ಸಂರಕ್ಷಣೆಯನ್ನು ಒಂದು ದೊಡ್ಡ ಜನಾಂದೋಲನವನ್ನಾಗಿ ಮಾಡಿದೆ. ಪ್ರಧಾನಮಂತ್ರಿಯವರ ಕ್ಯಾಚ್ ದಿ ರೈನ್ (ಮಳೆ ನೀರನ್ನು ಹಿಡಿದಿಡಿ - ಎಲ್ಲಿ ಬೀಳುತ್ತದೋ ಅಲ್ಲಿ, ಯಾವಾಗ ಬೀಳುತ್ತದೋ ಆಗ) ಎನ್ನುವ ಘೋಷಣೆ ದೇಶಾದ್ಯಂತ ಸಂಚಲನ ಮೂಡಿಸಿದೆ. 'ಜಲ ಸಂಚಯ ಜನ ಭಾಗೀದಾರಿ' ಉಪಕ್ರಮದ ಅಡಿಯಲ್ಲಿ ಜನರು ಮತ್ತು ಸಮುದಾಯಗಳು ಒಟ್ಟಾಗಿ ಮಳೆನೀರು ಕೊಯ್ಲು, ಹಳೆಯ ಕೆರೆ-ಕುಂಟೆಗಳ ಪುನಶ್ಚೇತನ, ಜಲಾನಯನ ಅಭಿವೃದ್ಧಿ ಮತ್ತು ಗಿಡಗಳನ್ನು ನೆಡುವ ಕೆಲಸಗಳನ್ನು ಕೈಗೆತ್ತಿಕೊಂಡಿದ್ದಾರೆ. ಸೆಪ್ಟೆಂಬರ್ 2024ರಿಂದೀಚೆಗೆ, ಇಂತಹ ಸಂಘಟಿತ ಪ್ರಯತ್ನಗಳಿಂದಾಗಿ ದೇಶಾದ್ಯಂತ 45 ಲಕ್ಷಕ್ಕೂ ಹೆಚ್ಚು ಜಲ ಸಂರಕ್ಷಣಾ ರಚನೆಗಳು ನಿರ್ಮಾಣವಾಗಿವೆ. ಸರ್ಕಾರದ ಬೆಂಬಲದೊಂದಿಗೆ ಜನಸಾಮಾನ್ಯರು ಮನಸ್ಸು ಮಾಡಿದರೆ ಎಷ್ಟು ದೊಡ್ಡ ಬದಲಾವಣೆ ತರಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಇಂತಹ ಸಕ್ರಿಯ ಜನಭಾಗೀದಾರಿಕೆಯ ಉದಾಹರಣೆಗಳು ಭಾರತದ ಉದ್ದಗಲಕ್ಕೂ ಕಾಣಸಿಗುತ್ತವೆ. ಗುಜರಾತಿನ ಬನಸ್ಕಾಂತ ಜಿಲ್ಲೆಯಲ್ಲಿ, ಹೈನುಗಾರಿಕೆ ಸಹಕಾರ ಸಂಘಗಳು ಮತ್ತು ರೈತರು ಕೈಜೋಡಿಸಿ ಕಡಿಮೆ ವೆಚ್ಚದಲ್ಲಿ ಅಂತರ್ಜಲ ಮರುಪೂರಣ ಘಟಕಗಳನ್ನು ನಿರ್ಮಿಸಿದ್ದಾರೆ. ಇತ್ತ ಛತ್ತೀಸಗಢದ ಕೊರೆಯಾ ಜಿಲ್ಲೆಯಲ್ಲಿ, ರೈತರು ತಮ್ಮ ಜಮೀನಿನ ಒಂದು ಭಾಗವನ್ನೇ ಅಂತರ್ಜಲ ಹೆಚ್ಚಿಸುವ ಕೆಲಸಕ್ಕಾಗಿ ಮೀಸಲಿಟ್ಟಿದ್ದಾರೆ. ನಗರ ಪ್ರದೇಶಗಳಲ್ಲೂ ಬದಲಾವಣೆ ಗಾಳಿ ಬೀಸುತ್ತಿದ್ದು, ಅನೇಕ ವಸತಿ ಸಂಘಗಳು ಮಳೆನೀರು ಕೊಯ್ಲು ಮತ್ತು ನೀರಿನ ಮರುಬಳಕೆ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿವೆ. 'ಕರ್ಮಭೂಮಿಯಿಂದ ಮಾತೃಭೂಮಿಗೆ' ಎಂಬಂತಹ ಅಭಿಯಾನಗಳು ಜನರ ಹೊಣೆಗಾರಿಕೆಯನ್ನು ಹೆಚ್ಚಿಸಿವೆ. ತಾವು ಕೆಲಸ ಮಾಡುವ ಊರಿನಲ್ಲಿದ್ದುಕೊಂಡೇ, ತಮ್ಮ ಹುಟ್ಟಿದ ಊರಿನ ಜಲಮೂಲಗಳನ್ನು ರಕ್ಷಿಸಲು ಜನರು ಸ್ವಯಂಪ್ರೇರಿತರಾಗಿ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ.

ಜಲ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಕೈಗಾರಿಕೆ ಮತ್ತು ಕೃಷಿ ವಲಯಗಳ ಪಾತ್ರ ಬಹಳ ದೊಡ್ಡದಿದೆ. ಇಂದು ಅನೇಕ ಕೈಗಾರಿಕೆಗಳು ಸ್ವಯಂಪ್ರೇರಿತವಾಗಿ ನೀರಿನ ಉಳಿತಾಯದ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿವೆ. ನೀರಿನ ಲೆಕ್ಕಪರಿಶೋಧನೆ, ಬಳಸಿದ ನೀರಿನ ಮರುಬಳಕೆ, 'ಜೀರೋ ಲಿಕ್ವಿಡ್ ಡಿಸ್ಚಾರ್ಜ್' ಮತ್ತು ಮಳೆನೀರು ಕೊಯ್ಲಿನಂತಹ ಕ್ರಮಗಳನ್ನು ಜಾರಿಗೆ ತರುತ್ತಿವೆ. ಇವುಗಳಿಗೆ ನೀರಿನ ತಂತ್ರಜ್ಞಾನದಲ್ಲಿನ ಹೊಸ ಆವಿಷ್ಕಾರಗಳು ಗಣನೀಯವಾಗಿ ಬೆಂಬಲ ನೀಡುತ್ತಿವೆ.

ಕೃಷಿ ಕ್ಷೇತ್ರದಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿಯಂತಹ ಸೂಕ್ಷ್ಮ ನೀರಾವರಿ ಪದ್ಧತಿಗಳು ಜನಪ್ರಿಯವಾಗುತ್ತಿವೆ. ಜಮೀನಿನಲ್ಲಿ ಲಭ್ಯವಿರುವ ನೀರನ್ನು ಪೋಲು ಮಾಡದೆ ಸಮರ್ಪಕವಾಗಿ ನಿರ್ವಹಿಸುವ ಮತ್ತು ಮಿತವಾಗಿ ಬಳಸುವ ವಿಧಾನಗಳನ್ನು ದೇಶಾದ್ಯಂತ ಅಳವಡಿಸಿಕೊಳ್ಳಲಾಗುತ್ತಿದೆ. 'ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಯ ಆಧುನೀಕರಣ'ದಂತಹ ಸರ್ಕಾರಿ ಯೋಜನೆಗಳು ಇದಕ್ಕೆ ದೊಡ್ಡ ಮಟ್ಟದ ಬೆಂಬಲ ನೀಡುತ್ತಿವೆ. ಈ ಪ್ರಯತ್ನಗಳು ಕೇವಲ ನೀರಿನ ಉಳಿತಾಯಕ್ಕೆ ಮಾತ್ರವಲ್ಲದೆ, ರೈತರ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತಿವೆ. ನಗರ ಪ್ರದೇಶಗಳಲ್ಲಿ ವಾಸಿಸುವವರು ಕೂಡ ಮಳೆನೀರು ಕೊಯ್ಲು, ಬಳಸಿದ ನೀರಿನ ಮರುಬಳಕೆ ಮತ್ತು ದೂರದೃಷ್ಟಿಯ ಸುಸ್ಥಿರ ಯೋಜನೆಗಳ ಮೂಲಕ ಜಲ ಸಂರಕ್ಷಣೆಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು. ನೀರಿನ ಜವಾಬ್ದಾರಿಯುತ ಬಳಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರತಿಯೊಂದು ಮನೆ, ಶಾಲಾ-ಕಾಲೇಜುಗಳಂತಹ ಸಂಸ್ಥೆಗಳು ಪ್ರಮುಖ ಪಾತ್ರವನ್ನು ಹೊಂದಿವೆ.

ಭಾರತವನ್ನು 'ವಿಕಸಿತ ಭಾರತ'ವನ್ನಾಗಿ ನಿರ್ಮಿಸುವ ಕನಸು ನನಸಾಗಬೇಕಾದರೆ, ಜಲ ಸುರಕ್ಷತೆಯನ್ನು ಸಾಧಿಸುವುದು ನಮ್ಮೆಲ್ಲರ ಸಾಮೂಹಿಕ ರಾಷ್ಟ್ರೀಯ ಪ್ರಯತ್ನವಾಗಬೇಕು. ಜಲ ಭದ್ರತೆ ಎನ್ನುವುದು ಕೇವಲ ದೊಡ್ಡ ದೊಡ್ಡ ಕಟ್ಟಡಗಳು, ಪೈಪ್‌ಲೈನ್‌ಗಳು ಅಥವಾ ಸರ್ಕಾರದ ನೀತಿಗಳಿಂದ ಮಾತ್ರ ಸಾಧ್ಯವಿಲ್ಲ; ಬದಲಿಗೆ ಅದು ನಮ್ಮೆಲ್ಲರ ದೈನಂದಿನ ನಡವಳಿಕೆಯಲ್ಲಿ ಬರುವ ಬದಲಾವಣೆಯ ಮೇಲೆ ಅಂತಿಮವಾಗಿ ಅವಲಂಬಿತವಾಗಿದೆ.

ಈ ವಿಶ್ವ ಜಲ ದಿನದಂದು, ನಾವು ಮಾತಿನಿಂದ ಕೃತಿಯತ್ತ ಸಾಗೋಣ. ನಮ್ಮ ದೇಶದ ಪ್ರತಿಯೊಬ್ಬ ನಾಗರಿಕನೂ ದಿನಕ್ಕೆ ಕೇವಲ ಒಂದು ಲೀಟರ್ ನೀರನ್ನು ಉಳಿಸಿದರೆ, ನಾವು ದಿನವೊಂದಕ್ಕೆ 140 ಕೋಟಿ ಲೀಟರ್‌ಗಳಿಗಿಂತ ಹೆಚ್ಚು ನೀರನ್ನು ಸಂರಕ್ಷಿಸಬಹುದು! ಇದೊಂದು ಸಣ್ಣ ಕೆಲಸ ಎಂದು ಅನಿಸಬಹುದು, ಆದರೆ ದೇಶದ ಮೇಲೆ ಇದು ಬೀರುವ ಪ್ರಭಾವ ಅಸಾಧಾರಣ. ನೀರನ್ನು ಉಳಿಸುವುದು ಕೇವಲ ಒಂದು ದಿನದ ಆಚರಣೆಯಾಗದೆ ನಮ್ಮ ದೈನಂದಿನ ಅಭ್ಯಾಸವಾಗಲಿ. ಎಲ್ಲಿ ಪ್ರತಿಯೊಂದು ಹನಿ ನೀರಿಗೂ ಮೌಲ್ಯವಿರುತ್ತದೆಯೋ, ಪ್ರತಿಯೊಂದು ಜಲಮೂಲವೂ ಸುಸ್ಥಿರವಾಗಿರುತ್ತದೆಯೋ ಮತ್ತು ಪ್ರತಿಯೊಬ್ಬ ನಾಗರಿಕನೂ ಈ ಅಮೂಲ್ಯ ಸಂಪನ್ಮೂಲದ ರಕ್ಷಕನಾಗುತ್ತಾನೋ, ಅಂತಹ ಭಾರತವೇ ನಿಜವಾದ ಸುಭಿಕ್ಷ ಭಾರತ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಮಾರ್ನಿಂಗ್ ಶೋ

ಶನಿವಾರ 21 ಮಾರ್ಚ್ 2026, ಬೆಂಗಳೂರು

ಅಧ್ಯಾಯ ಎರಡು ಇಲ್ಲಿಂದ ಶುರು

ಹಬ್ಬಕ್ಕೆ ರಿಶಭ್ ಕೊಟ್ಟ ಚಮಕ್!

ಕಾಂತಾರ ಚಾಪ್ಟರ್-1 ಚಿತ್ರ ಮುಗಿಯುತ್ತಿದ್ದಂತೆಯೇ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರ ಮುಂದಿನ ನಡೆ ಏನೆಂಬುದು ಸ್ಪಷ್ಟವಾಗಿತ್ತು. ತೆಲುಗು ನಿರ್ಮಾಣ ಸಂಸ್ಥೆಯೊಂದಿಗೆ ಸೇರಿ ಅವರು ಹನುಮಾನ್ ಚಿತ್ರದ ಕೆಲಸದಲ್ಲಿ ತೊಡಗಿಕೊಂಡಿದ್ದರು, ಇತ್ತೀಚೆಗೆ ಆ ಚಿತ್ರದ ಮುಹೂರ್ತ ಕೂಡ ಕರ್ನಾಟಕದ ಹನುಮನ ಜನ್ಮಸ್ಥಳದಲ್ಲೇ ಅದ್ದೂರಿಯಾಗಿ ನಡೆದಿತ್ತು. ಇತ್ತ ಹನುಮಾನ್ ಚಿತ್ರ ಶುರುವಾಗುತ್ತಿದ್ದಂತೆಯೇ ರಿಶಭ್ ಶೆಟ್ಟಿ ಅವರು, ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಮತ್ತೊಂದು ಚಿತ್ರವನ್ನು ಕೈಗೆತ್ತಿಕೊಂಡಿರುವುದಾಗಿ ಪೋಸ್ಟ್ ಮಾಡಿದ್ದಾರೆ. ಆ ಚಿತ್ರವನ್ನು ಅವರದ್ದೇ ನಿರ್ಮಾಣ ಸಂಸ್ಥೆಯಾದ ರಿಷಬ್ ಶೆಟ್ಟಿ ಫಿಲಂಸ್ ನಿರ್ಮಾಣ ಮಾಡಲಿದೆ. ಆದರೆ ಆ ಚಿತ್ರ ಯಾವುದರ ಮತ್ತೊಂದು ಭಾಗ ಎನ್ನುವುದೇ ಈಗ ಯಕ್ಷಪ್ರಶ್ನೆಯಾಗಿದೆ,



ಕಾಂತಾರ ಖ್ಯಾತಿಯ ರಿಷಬ್ ಶೆಟ್ಟಿ ಯುಗಾದಿ ಹಬ್ಬದ ಶುಭಾಶಯ ಕೋರುತ್ತಾ ಅಧ್ಯಾಯ ಎರಡು ಇಲ್ಲಿಂದ ಶುರು ಎಂದು ಬರೆದು ಪೋಸ್ಟ್ ಮಾಡಿದ್ದಾರೆ. ಈ ಪೋಸ್ಟ್ ಸಿನಿಪ್ರಿಯರಿಗೆ ಗೊಂದಲವನ್ನಂತೂ ಸೃಷ್ಟಿಸಿದೆ. ಅದಕ್ಕೆ ಕಳೆದ ಕೆಲವು ದಿನಗಳಿಂದ ಆದ ಬೆಳವಣಿಗೆ ಕೂಡ ಕಾರಣ.

ರಿಷಬ್ ಈ ಪೋಸ್ಟ್ ಮಾಡುತ್ತಿದ್ದಂತೆ ಗಾಂಧಿನಗರದಲ್ಲಿ ನೂರೆಂಟು ಬಗೆಯ ಚರ್ಚೆಗಳು ಶುರುವಾಗಿವೆ. ರಿಷಬ್ ಶೆಟ್ಟಿ ಸದ್ಯ ಜೈ ಹನುಮಾನ್ ಸಿನಿಮಾದ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಕಾಂತಾರ ಚಾಪ್ಟರ್ 1 ವೆಯಶಸ್ವಿಯಾದ ಬಳಿಕ ತೆಲುಗು ನಿರ್ದೇಶಕನ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಆ ಚಿತ್ರದ ಶೂಟಿಂಗ್ ಇನ್ನೇನು ಶುರುವಾಗಿದೆ ಎನ್ನುವಾಗಲೇ ರಿಷಬ್ ಶೆಟ್ಟಿ ಮತ್ತೊಂದು ಚಿತ್ರದ ಕೆಲಸವನ್ನು ಆರಂಭ ಮಾಡಿದ್ದಾರೆ. ಯುಗಾದಿ ಹಬ್ಬದಂದು ಮಾಡಿದ ಈ ಪೋಸ್ಟ್ ಕೊಟ್ಟ ಸೂಚನೆ ಅದೇ ಆದರೂ, ಅದರ ಹಿಂದೆ ನೂರೆಂಟು ಲೆಕ್ಕಾಚಾರಗಳ ಚರ್ಚೆಯಾಗುತ್ತಿದೆ.

ಕಾಂತಾರ ಚಾಪ್ಟರ್-1 ಮುಗಿಯುತ್ತಿದ್ದಂತೆ ರಿಷಬ್ ಶೆಟ್ಟಿ ಅವರ ಮುಂದಿನ ನಡೆ ಏನೆಂಬುದು ಸ್ಪಷ್ಟವಾಗಿತ್ತು. ತೆಲುಗು ನಿರ್ಮಾಣ ಸಂಸ್ಥೆಯೊಂದಿಗೆ ಸೇರಿ ಹನುಮಾನ್ ಚಿತ್ರದಲ್ಲಿ ತೊಡಗಿಕೊಂಡಿದ್ದರು, ಇತ್ತೀಚೆಗೆ ಆ ಚಿತ್ರದ ಮುಹೂರ್ತ ಕೂಡ ಕರ್ನಾಟಕದ ಹನುಮನ ಜನ್ಮಸ್ಥಳದಲ್ಲೇ ಅದ್ದೂರಿಯಾಗಿ ನಡೆದಿತ್ತು. ಇತ್ತ ಹನುಮಾನ್ ಚಿತ್ರ ಶುರುವಾಗುತ್ತಿದ್ದಂತೆಯೇ ರಿಶಭ್ ಶೆಟ್ಟಿ ಅವರು ಮತ್ತೊಂದು ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಆ ಚಿತ್ರವನ್ನು ಅವರದ್ದೇ ನಿರ್ಮಾಣ ಸಂಸ್ಥೆಯಾದ ರಿಷಬ್ ಶೆಟ್ಟಿ ಫಿಲಂಸ್ ನಿರ್ಮಾಣ ಮಾಡಲಿದೆ. ಇನ್ನು ಗೊಂದಲಕ್ಕೆ ಯಾಕೆ ಅನ್ನೋದಕ್ಕೆ ಎರಡು ಕಾರಣವಿದೆ.

ರಿಷಬ್ ಶೆಟ್ಟಿ ಅಧ್ಯಾಯ ಎರಡು ಅನ್ನೋದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಅದು ಕಾಂತಾರ ಚಾಪ್ಟರ್ 2 ಇರಬಹುದಾ? ಇಲ್ಲ ಬೇರೆ ಯಾವುದಾದರೂ ಸಿನಿಮಾದ ಎರಡನೇ ಭಾಗವಾ ಅನ್ನೋ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ರಿಶಭ್ ಶೆಟ್ಟಿ ಅವರ ಅಭಿಮಾನಿಗಳು ಈ ಪೋಸ್ಟ್ ನೋಡುತ್ತಿದ್ದಂತೆಯೇ ಚಾಪ್ಟರ್ 2 ಯಾವುದು ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಆದರೆ ಬಹುತೇಕರ ನಿರೀಕ್ಷೆ ಇರುವುದು ಕಾಂತಾರಾ ಚಿತ್ರದ ಎರಡನೇ ಭಾಗದ ಮೇಲೇ. ಆದರೆ ಅದಕ್ಕೆ ಸದ್ಯ ಉತ್ತರ ಸಿಗೋದಿಲ್ಲ.

ಇತ್ತೀಚೆಗೆ ರಿಷಬ್ ಶೆಟ್ಟಿ ಅವರು ಹೊಂಬಾಳೆ ಸಂಸ್ಥೆಯನ್ನು ಅನ್ಫಾಲೋ ಮಾಡಿದ್ದಾರೆಂಬ ಸುದ್ದಿ ಹರಿದಾಡಿತ್ತು. ಇದು ಬೆಳಕಿಗೆ ಬರುತ್ತಿದ್ದಂತೆ ಇಬ್ಬರ ನಡುವೆ ವೈಮನಸ್ಸು ಮೂಡಿದೆ ಎಂಬ ಬಗ್ಗೆ ಚರ್ಚೆಯೂ ಆಗಿತ್ತು. ಅಷ್ಟರಲ್ಲೇ ಈಗ ರಿಶಭ್ ಶೆಟ್ಟಿ ಫಿಲಂಸ್ ಅಡಿ ಅಧ್ಯಾಯ ಎರಡು ಇಲ್ಲಿಂದ ಶುರು ಎಂದು ಪೋಸ್ಟ್ ಮಾಡಿರುವುದು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

ಮೇಲ್ನೋಟಕ್ಕೆ ಗಾಂಧಿನಗರದ ಮಂದಿಗೂ ಹಾಗೇ ಕಾಣಿಸುತ್ತಿದೆ. ಹೊಂಬಾಳೆ ಸಂಸ್ಥೆಯಿಂದ, ಸದ್ಯ ರಿಷಬ್ ಶೆಟ್ಟಿ ವರು ಹೊರಬಂದಿದ್ದು, ತಮ್ಮದೇ ಬ್ಯಾನರ್ ಮೂಲಕ ಕಾಂತಾರ ಚಾಪ್ಟರ್ 2 ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂಬ ವದಂತಿಯೂ ಹಬ್ಬಿದೆ. ಈ ಮಧ್ಯೆ ಅಭಿಮಾನಿಗಳು ಸರ್ಕಾರಿ ಚಾಪ್ಟರ್ 2 ಇರಬಹುದೇ? 'ಬೆಲ್ ಬಾಟಂ ಚಾಪ್ಟರ್ 2 ಇರಬಹುದೇ? ಎಂದೂ ಚರ್ಚೆ ಮಾಡುತ್ತಿದ್ದಾರೆ. ಆದರೆ, ರಿಷಬ್ ಶೆಟ್ಟಿ ಅವರು ತಮ್ಮ ಪೋಸ್ಟ್‌ನಲ್ಲಿ ಸು ಫ್ರಮ್ ಸೋ ಖ್ಯಾತಿಯ ನಟ ಶಾನೀಲ್ ಗೌತಮ್, ಛಾಯಾಗ್ರಾಹಕ ಅರವಿಂದ್ ಕಶ್ಯಪ್, ಅನಿರುದ್ದ ಮಹೇಶ್ ಅವರಿಗೆ ಟ್ಯಾಗ್ ಮಾಡಿದ್ದು, ಇದು 'ಕಾಂತಾರ ಚಾಪ್ಟರ್ 2' ಚಿತ್ರವೇ ಇರಬಹುದು ಎಂಬ ಗುಮಾನಿ ಎಲ್ಲರಿಗೂ ಮೂಡಿದೆ. ಅಲ್ಲದೆ ಈಗ ಸ್ಕ್ರಿಪ್ಟ್ ಕೆಲಸ ಶುರುವಾಗಿರಬಹುದಷ್ಟೇ ಎಂದೂ ಅಂದಾಜು ಮಾಡಲಾಗುತ್ತಿದೆ. ಏನೇ ಇದ್ದರೂ ರಿಷಬ್ ಶೆಟ್ಟಿ ಅವರ ಕಡೆಯಿಂದ ಅಧಿಕೃತ ಹೇಳಿಕೆ ಸಿಗುವವರೆಗೂ ಅವರ ಅಭಿಮಾನಿಗಳು ಕಾಯಲೇಬೇಕಿದೆ,

ಲವ್ ಮಾಕ್ಟೇಲ್-3

ತಂದೆ ಮಗಳ ಎಮೋಷನಲ್ ಜರ್ನಿ

ಚಿತ್ರ ವಿಮರ್ಶೆ

▸ ಸತ್ಯಮೂರ್ತಿ

ಕೋವಿಡ್ ಸಮಯದಲ್ಲಿ ಡಾರ್ಲಿಂಗ್ ಕೃಷ್ಣ ಹೃದಯತಟ್ಟುವ ಪ್ರೇಮಕಥೆಯೊಂದನ್ನು ಇಟ್ಟುಕೊಂಡು ಲವ್‌ಮಾಕ್ಟೇಲ್ ಚಿತ್ರ ನಿರ್ದೇಶಿಸಿ ಯಶಸ್ವಿಯಾಗಿದ್ದರು. ಅದರ ಬೆನ್ನಲ್ಲೇ ಲವ್ ಮಾಕ್ಟೇಲ್ 2 ಮಾಡಿ ಸೈಎನಿಸಿಕೊಂಡಿದ್ದರು, ಆ ಎರಡೂ ಚಿತ್ರಗಳಿಗೆ ಸಿಕ್ಕ ಅದ್ಬುತ ರೆಸ್ಪಾನ್ಸ್‌ನಿಂದ ಪ್ರೇರಿತರಾದ ಕೃಷ್ಣ ಇದೀಗ ತಂದೆ ಮಗಳ ಬಾಂಧವ್ಯದ ಬೆಸುಗೆ ಎಂದರೆ ಹೇಗಿರುತ್ತೆ ಎಂಬುದನ್ನು ಲವ್ ಮಾಕ್ಟೇಲ್ 3 ಮೂಲಕ ಹೇಳಲು ಪ್ರಯತ್ನಿಸಿದ್ದಾರೆ, ಸಾಮಾನ್ಯವಾಗಿ 2 ಭಾಗಗಳ ನಂತರವೂ ಕಥೆ ಹೆಣೆಯೋದು ಕಷ್ಟ. ಆದರೆ ಡಾರ್ಲಿಂಗ್ ಕೃಷ್ಣ, ಇಲ್ಲಿ ಲವ್ ಟ್ರ್ಯಾಕ್ ಬಿಟ್ಟು ಬಾಂಧವ್ಯದ ಕಥೆಯ ಮೂಲಕ ಪ್ರೇಕ್ಷಕರನ್ನು ಮನ ಗೆದ್ದಿದ್ದಾರೆ,

ಚಿತ್ರದಲ್ಲಿ ಹೆಚ್ಚು ಆಡಂಬರ, ಓವರ್ ಡ್ರಾಮಾ, ಅನವಶ್ಯಕ ಬಿಲ್ಡಪ್ ಇದಾವುದೂ ಇಲ್ಲದೆ, ತುಂಬಾ ಸಹಜವಾಗಿ ಕಥೆ ಹೇಳಿಕೊಂಡು ಹೋಗಿದ್ದಾರೆ, ಚಿತ್ರದಲ್ಲಿ ಸರಳ, ಸುಂದರ



ಕಥೆ, ಹೆಚ್ಚಾಗಿ ತಂದೆ ಮಗಳ ಬಾಂಧವ್ಯ ಪ್ರೇಕ್ಷಕರನ್ನ ಹಿಡಿದು ಕೂರಿಸುತ್ತದೆ. ಎಮೋಷನಲ್ ಆಗಿಸಿ ಕಣ್ಣುಗಳನ್ನ ಒದ್ದೆ ಮಾಡುತ್ತದೆ.

ನಿಧಿಮಾಳ ನೆನಪಲ್ಲೇ ಡಿಪ್ರೆಶನ್‌ಗೆ ಜಾರಿದ್ದ ಆದಿತ್ಯ ಅನಾಥಾಶ್ರಮವೊಂದರಲ್ಲಿ ಹೆಣ್ಣು ಮಗುವನ್ನ ದತ್ತು ಪಡೆಯುತ್ತಾನೆ ಎಂಬಲ್ಲಿಗೆ ಲವ್ ಮಾಕ್ಟೇಲ್ 2 ಎಂಡ್ ಆಗಿರುತ್ತದೆ. ಅಲ್ಲಿಂದಲೇ ಲವ್ ಮಾಕ್ಟೇಲ್ 3 ಕಥೆ ಶುರುವಾಗುತ್ತದೆ, ಆದಿಯ ಜೀವನದಲ್ಲಿ ಹೊಸದಾಗಿ ಬಂದ ಮಗುವಿಗೆ ಆದಿ, ನಿಧಿ ಎಂದೇ ಕರೆಯುತ್ತಾನೆ, ಆ ಪುಟ್ಟ ಮಗು ಆದಿಯ ಲೈಫಿಗೆ ಎಂಟ್ರಿಕೊಟ್ಟ 5 ವರ್ಷಗಳ ನಂತರ ಈ ಕಥೆ ತೆರೆದುಕೊಳ್ಳುತ್ತದೆ, ಆ ಪುಟಾಣಿಯ ಹಿನ್ನಲೆ, ಅದರ ನಿಜವಾದ ತಂದೆ ತಾಯಿ ಯಾರು ? ನಿಧಿಯ ನಿಜವಾದ ಅಮ್ಮ ಪ್ರತ್ಯಕ್ಷವಾದ ನಂತರ ಏನೇನೆಲ್ಲಾ ನಡೆದುಹೋಗುತ್ತದೆ ಎಂಬುದೇ ಲವ್ ಮಾಕ್ಟೇಲ್ 3 ಚಿತ್ರದ ಮುಖ್ಯ ಕಥೆ.

ನಾಯಕ ಡಾರ್ಲಿಂಗ್ ಕೃಷ್ಣ ಹೆಚ್ಚಾಗಿ ಕಣ್ಣಲ್ಲೇ ಮಾತಾಡುತ್ತಾರೆ. ಪತ್ನಿಯ ನೆನಪಲ್ಲೇ ಜೀವನ ಸಾಗಿಸುವ, ಹೆಣ್ಣು ಮಗುವಿನ ಜವಾಬ್ದಾರಿಯುತ ತಂದೆಯಾಗಿ ಅವರು ಪ್ರಬುದ್ಧ ಅಭಿನಯ ನೀಡಿದ್ದಾರೆ. ಅದರಲ್ಲೂ ಕೋರ್ಟ್ ಸನ್ನಿವೇಶದಲ್ಲಿ ಅವರಾಡುವ ಮಾತುಗಳನ್ನು ಕೇಳಿದಾಗ ಪ್ರೇಕ್ಷಕರ ಕಣ್ಣಾಲಿಗಳು ತೇವವಾಗುತ್ತವೆ. ಅದಕ್ಕೆ ಕಾರಣ ಅವರ ನೈಜ ಅಭಿನಯ. ಈ ಚಿತ್ರದ ಹೈಲೈಟ್ ಅಂದ್ರೆ ಪುಟಾಣಿ ಸಂವೃತಳ ಮುಗ್ಧ ಅಭಿನಯ. ಶಾಲೆಯಲ್ಲಿ ಮಾಡುವ ತುಂಟಾಟಗಳಿಂದಾಗಿ ಪ್ರತಿಬಾರಿ ಪ್ರಿನ್ಸಿಪಾಲ್ ಕಡೆಯಿಂದ ಕಂಪ್ಲೇಂಟ್ ತಂದು ಆದಿಯನ್ನು ಇಕ್ಕಟ್ಟಿಗೆ ಸಿಕ್ಕಿಸುವ ಮಗಳಾಗಿ ಸಂವೃತ ಮುದ್ದಾಗಿ ನಟಿಸಿದ್ದಾಳೆ. ಇಡೀ ಚಿತ್ರದಲ್ಲಿ ಕಾಣಿಸಿಕೊಂಡಿರುವ ಆಕೆ ತೆರೆಮೇಲೆ ಲವಲವಿಕೆಯಿಂದಲೇ ಅಭಿನಯಿಸಿದ್ದಾಳೆ.

ವಿಜು ಆಗಿ ಅಭಿಲಾಶ್, ಜಗ್ಗ ಆಗಿ ಜಗದೀಶ್ ಅವರ ನಟನೆ ಇಷ್ಟವಾಗುತ್ತದೆ. ಅವರ ಕಾಮಿಡಿ ಟೈಮಿಂಗ್ ಸಹ ವರ್ಕೌಟ್ ಆಗಿದೆ. ವಕೀಲ ಸಂಜಯ್ ಆಗಿ ದಿಲೀಪ್‌ರಾಜ್ ಹಾಗೂ ಲಾಯರ್ ಲೀಲಾ ಪಾತ್ರದಲ್ಲಿ ಶ್ವೇತಾ ಪ್ರಸಾದ್ ಗಮನ ಸೆಳೆಯುತ್ತಾರೆ. ಜಡ್ಜ್ ಪಾತ್ರಕ್ಕೆ ಬಿಎಂ.ಗಿರಿರಾಜ್ ನ್ಯಾಯ ಒದಗಿಸಿದ್ದಾರೆ. ತಂದೆ ಮಗಳನ್ನ ಬೇರೆ ಮಾಡಲು ಬರುವ ಮಗುವಿನ ಅಜ್ಜಿ ಡಾ.ಶಾಂತಾ ಪಾತ್ರದಲ್ಲಿ ರೇಖಾ ಕುಡ್ಲಿಗಿ, ಟೀಚರ್ ಆಗಿ ರಜನಿ ಭಾರದ್ವಾಜ್ ಸಿಕ್ಕ ಅವಕಾಶದಲ್ಲೇ ಅಚ್ಚುಕಟ್ಟಾಗಿ ಅಭಿನಯಿಸಿದ್ದಾರೆ. ಒಂದೆರಡು ಸೀನ್‌ಗಳಲ್ಲಷ್ಟೇ ಕಾಣಿಸಿಕೊಳ್ಳುವ ಮಿಲನಾ ನಾಗರಾಜ್ ಎಂದಿನಂತೆ ಆದಿಗೆ ಸ್ಪೂರ್ತಿ ತುಂಬುತ್ತಾರೆ.

ಲವ್ ಮಾಕ್ಟೇಲ್ 3 ಚಿತ್ರದ ಕಥೆ ಸಿಂಪಲ್ ಆಗಿದ್ದರೂ ಪ್ರಾರಂಭದಿಂದ ಕೊನೆಯವರೆಗೂ ಎಲ್ಲೂ ಬೋರ್ ಎನಿಸುವುದಿಲ್ಲ. ಆರಂಭದಿಂದ ಸರಾಗವಾಗಿ ಸಾಗುವ ಕಥೆಗೆ ಇಂಟರ್‌ವೆಲ್ ಬ್ಲಾಕ್‌ನಲ್ಲಿ ದೊಡ್ಡಟ್ವಿಸ್ಟ್ ಮೂಲಕ ಕೃಷ್ಣ ಮುಂದೇನಾಗುತ್ತೋ ಎಂಬ ಕುತೂಹಲ ಹುಟ್ಟುಹಾಕುತ್ತಾರೆ. ನಂತರ ಅದೇ ಕ್ಯೂರಿಯಾಸಿಟಿಯನ್ನು ಕೊನೇ ಸೀನ್‌ವರೆಗೂ ಕಾಯ್ದುಕೊಂಡು ಹೋಗುವ ಮೂಲಕ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿದ್ದಾರೆ. ಚಿತ್ರದ ಸ್ಕ್ರೀನ್‌ಪ್ಲೇ ಮತ್ತು ಸಂಕಲನ ತುಂಬಾ ಚೆನ್ನಾಗಿದೆ, ಅದಕ್ಕೆ ತಕ್ಕ ಹಾಗೆ ನಕುಲ್ ಅಭಯಂಕರ್ ಅವರ ಸಂಗೀತ ಹಾಗೂ ಹಿನ್ನಲೆ ಸಂಗೀತ ಮೂಡಿಬಂದಿದೆ. ಫಾರಿನ್ ಲೊಕೇಷನ್‌ಗಳನ್ನು ಅದ್ಭುತವಾಗಿ ಸೆರೆಹಿಡಿಯುವಲ್ಲಿ ಡಿಓಪಿ ಶ್ರೀ ತುಂಬಾ ಗ್ರೌಂಡ್‌ವರ್ಕ್ ಮಾಡಿದ್ದಾರೆ.

ತಿಕ್ಲು ರಾಮ ಪರಿಸರ ಕಾಳಜಿ ಮೂಡಿಸೋ ಚಿತ್ರ





ತನ್ನ ಹೆಸರಲ್ಲೇ ಸಾಕಷ್ಟು ವಿಶೇಷತೆ ಹೊಂದಿರುವ ಚಿತ್ರ ತಿಕ್ಲುರಾಮ. ಈ ಹಿಂದೆ ಮಾರಕಾಸ್ತ್ರ ಎಂಬ ಚಿತ್ರವನ್ನು ನಿರ್ಮಾಣ ಮಾಡಿದ್ದ ರಾಜವೀರ್ ಅವರು ಕಥೆ ಬರೆದಿರುವ ಈ ಚಿತ್ರಕ್ಕೆ ಮಂಜುಕವಿ ಅವರು ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ, ಕರಿಶ್ಮಾ ಕಂಬೈನ್ಸ್ ಮತ್ತು ಶ್ರ್ಯಾವ್ಯ ಕಂಬೈನ್ಸ್ ಅಡಿಯಲ್ಲಿ ಶೃತಿ.ಜಿ.ಬಿ. ಹಾಗೂ ಕೋಮಲ ನಟರಾಜು ಅವರುಗಳು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. 'ಇದೇ ಕಾಡಿನಲ್ಲಿ ನಾನು ನಿನ್ನ ಉಸಿರು ನಿಲ್ಲಸದೆ ಹೋದರೆ ನನ್ನ ಹೆಸರು ಅಂತ ಘರ್ಜಿಸುತ್ತಾ ನಗುವ ಸುಚೇಂದ್ರಪ್ರಸಾದ್ ಅವರ ಹಿನ್ನಲೆ ಧ್ವನಿಯಲ್ಲಿ ಮೂಡಿಬಂದಿರುವ ಒಂದು ನಿಮಿಷದ ಟೈಟಲ್ ಟೀಸರ್ ಗೆ ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದ್ದು ಚಿತ್ರ ಯಾವಾಗ ಬರುತ್ತೆ ಎಂದು ಕಾಯುವಂತೆ ಮಾಡಿದೆ,

ಈ ಚಿತ್ರದಲ್ಲಿ ತಿಕ್ಲುರಾಮನಾಗಿ ರಾಜ್‌ವೀರ್ ಅವರೇ ಕಾಣಿಸಿಕೊಂಡಿದ್ದಾರೆ.

ಚಿತ್ರದ ಕುರಿತಂತೆ ನಿರ್ದೇಶಕ ಮಂಜುಕವಿ ಮಾತನಾಡುತ್ತ ತಿಕ್ಲು ರಾಮ ಚಿತ್ರದ ಮೊದಲರ್ಧದ ಕಥೆಯಲ್ಲಿ ಹಳ್ಳಿಯ ಸೊಗಡು ಇರಲಿದ್ದು, ದ್ವಿತೀಯಾರ್ಧದ ಚಿತ್ರವು ನೋಡುಗರನ್ನು ಬೇರೆಯದೇ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಎಲ್ಲೆಲ್ಲಿ ಪ್ರಾಣಿಗಳ ಅವಶ್ಯಕತೆ ಇದೆಯೋ, ಅಲ್ಲೆಲ್ಲ ಉತ್ತಮವಾದ ಎಐ ತಂತ್ರಜ್ಞಾನವನ್ನು ಬಳಸಿಕೊಂಡು, ನಿಜವಾದ ಪ್ರಾಣಿಗಳನ್ನೇ ನೋಡಿದಂತೆ ಭಾಸವಾಗುವಂತೆ ಚಿತ್ರದ ದೃಶ್ಯಗಳನ್ನು ಕಟ್ಟಿಕೊಡಲಾಗುತ್ತದೆ. ಚಿತ್ರದಲ್ಲಿ ನಾಯಕನ ಹೆಸರು ತಿಕ್ಲು ರಾಮ ಅಂತಿದ್ದರೂ ಆತ ಹೃದಯದಲ್ಲಿ ಶ್ರೀರಾಮ. ಮುಂದೆ ಆತ ತಿಕ್ಲುರಾಮ ಆಗುವುದಕ್ಕೆ ಕಾರಣವೇನು ಎಂಬುದಕ್ಕೆ ಉತ್ತರ ಚಿತ್ರದಲ್ಲಿರುತ್ತದೆ. ಹಾಸನ ಸುತ್ತಮುತ್ತಲಿನ ಫಲವತ್ತಾದ ಹಸಿರು ಪರಿಸರ ಇರುವ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ. ಇತಿಹಾಸದಲ್ಲೇ ಮೊದಲಬಾರಿಗೆ ತಿಕ್ಲುರಾಮ ಚಿತ್ರದ ಮೂಲಕ ಪ್ರಾಣಿಗಳ ಜತೆ ಮನುಷ್ಯನಿಗಿರುವ ಒಡನಾಟವನ್ನು ತೋರಿಸಲಾಗುತ್ತಿದೆ. ಮಕ್ಕಳಿಂದ ವೃದ್ದರವರೆಗೂ ನೋಡುವಂಥ ಕೌಟಂಬಿಕ ಕಥಾಹಂದರ ಒಳಗೊಂಡ ಚಿತ್ರ ಇದಾಗಲಿದೆ ಎಂದರು.



ಬಾಲ್ಯದಲ್ಲಿ ಬುದ್ದನನ್ನು ಹುಚ್ಚ ಅಂತಲೂ, ಸ್ವಾಮಿ ವಿವೇಕಾನಂದರನ್ನು ಪಾಗಲ್ ಬಿಲ್ಲೆ ಎಂದೂ ಕರೆಯುತ್ತಿದ್ದರು. ಮುಂದೆ ಅವರು ಇಡೀ ದೇಶಕ್ಕೇ ಮಾದರಿಯಾದರು. ಇವರ ಸ್ಪೂರ್ತಿಯಿಂದಲೇ ನಮ್ಮ ಚಿತ್ರಕ್ಕೆ ಈ ಹೆಸರನ್ನಿಡಲಾಗಿದೆ. ಚಿತ್ರದಲ್ಲಿ ಪರಿಸರ, ಸಾಮಾಜಿಕ ಕಳಕಳಿ, ಸಂಸಾರ ನಡೆಸುವ ಹೆಣ್ಣುಮಕ್ಕಳಿಗೆ ಒಂದಾಗಿ ಬಾಳುವಂತ ಸನ್ನಿವೇಶಗಳಿವೆ. ಸೈಲೆಂಟ್ ಆಗಿದ್ದರೆ ರಾಮ, ಕೊಡಲಿ ಹಿಡಿದರೆ ತಿಕ್ಲುರಾಮ. ಹಾಗಂತ ನಮ್ಮ ಚಿತ್ರದಲ್ಲಿ ರಕ್ತಪಾತವನ್ನು ವೈಭವಿಕರಿಸುವುದಿಲ್ಲ. ಪ್ರಸಕ್ತ ಎಷ್ಟೋ ಜನ ವಿದ್ಯಾವಂತರಾಗಿದ್ದರೂ, ಅವಿದ್ಯಾವಂತರಂತೆ ವರ್ತಿಸುತ್ತಿದ್ದಾರೆ. ಇಂತಹ ವಿಷಯಗಳನ್ನು ಅರ್ಥಪೂರ್ಣ ದೃಶ್ಯಗಳೊಂದಿಗೆ ನಮ್ಮ ಚಿತ್ರದ ಮೂಲಕ ತೋರಿಸುವ ಪ್ರಯತ್ನ ಮಾಡಲಾಗುತ್ತಿದೆ. ನಾನು ಕೇಳಿದಂಥ, ನೋಡಿದಂಥ ಘಟನೆಗಳನ್ನು ಈ ಚಿತ್ರದ ಕಥೆಯಲ್ಲಿ ದಾಖಲಿಸಿದ್ದೇನೆ ಎಂದು ತಿಕ್ಲುರಾಮ ಚಿತ್ರದ ನಾಯಕ ಡಾ.ರಾಜ್ ವೀರ್ ಹೇಳಿದರು.

ತಿಕ್ಲುರಾಮ ಚಿತ್ರದಲ್ಲಿ ಡಾ.ರಾಜ್ ವೀರ್, ಸಂಗೀತಾ, ಮಿತ್ರ, ಭಾಗ್ಯಶ್ರೀ, ಶೃತಿ.ಬಿ, ಗೋವಿಂದೇಗೌಡ, ವಿನೋದ್ ಗೊಬ್ಬರಗಾಲ, ಸುಚೇಂದ್ರಪ್ರಸಾದ್, ಮಂಡ್ಯ ಸಿದ್ದು, ಪವಿತ್ರ ಸೇರಿದಂತೆ ಅನೇಕ ಕಲಾವಿದರು ನಟಿಸುತ್ತಿದ್ದಾರೆ. ವಿನು ಮನಸು ಅವರ ಹಿನ್ನಲೆ ಸಂಗೀತ, ರಾಜ್ ಕಡೂರು-ನಾಗರಾಜಮೂರ್ತಿ ಅವರ ಛಾಯಾಗ್ರಹಣ, ವೆಂಕಿ.ಯುಡಿವಿ ಅವರ ಸಂಕಲನ, ಅಲ್ಟಿಮೇಟ್ ಶಿವು ಅವರ ಸಾಹಸ, ಜಗ್ಗು ನೃತ್ಯನಿರ್ದೇಶನ ತಿಕ್ಲುರಾಮ ಚಿತ್ರಕ್ಕಿದೆ.

ಮಾರ್ಚ್ 27ಕ್ಕೆ ಆಕ್ಷನ್ ಥ್ರಿಲ್ಲರ್ ಆಯುಧ



ರಸ್ತೆಯಲ್ಲಿ ಮಗುವೊಂದಕ್ಕೆ ಸಿಕ್ಕ ಒಂದು ಫೋನ್ ನಿಂದಾಗಿ, ಆ ಮಗುವಿನ ಕುಟುಂಬ ಏನೇನೆಲ್ಲ ತೊಂದರೆ ಅನುಭವಿಸಬೇಕಾಯಿತು, ನಂತರ ನಾಯಕ ಆ ಫ್ಯಾಮಿಲಿಯನ್ನು ಹೇಗೆ ಕಾಪಾಡಿಕೊಂಡ ಎಂಬ ಕುತೂಹಲಕರ ಕಥಾಹಂದರ ಇಟ್ಟುಕೊಂಡು ಡೇಂಜರ್ ಜೋನ್ ಖ್ಯಾತಿಯ ದೇವರಾಜ್‌ಕುಮಾರ್ ಅವರು ಆಯುಧ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ, ಜತೆಗೆ ಚಿತ್ರದ ನಾಯಕನಾಗೂ ಸಹ ನಟಿಸಿದ್ದಾರೆ, ಅಲ್ಲದೆ ಚಿತ್ರ ನಿರ್ಮಾಣ ಸಹ ಮಾಡಿದ್ದಾರೆ. ಮೆಜೆಸ್ಟಿಕ್ -2 ಖ್ಯಾತಿಯ ನಟಿ ಸಂಹಿತಾ ವಿನ್ಯಾ ಹಾಗೂ ಅಮೃತಾ ಅವರುಗಳ ಈ ಚಿತ್ರದ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ.



ಈಗಾಗಲೇ ತನ್ನೆಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಬಿಡುಗಡೆಗೆ ಸಿದ್ದವಾಗಿರುವ ಆಯುಧ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು, ಸಿರಿ ಮ್ಯೂಸಿಕ್ ಚಾನಲ್‌ನಲ್ಲಿ ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ, ಇದೇ ಮಾರ್ಚ್ 27 ರಂದು ಈ ಚಿತ್ರವು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ವೇದಿಕೆಯಲ್ಲಿ ಚಿತ್ರದ ನಾಯಕ, ನಿರ್ಮಾಪಕ ಹಾಗೂ ನಿರ್ದೇಶಕ ದೇವರಾಜ್‌ಕುಮಾರ್ ಮಾತನಾಡುತ್ತ ಕಳೆದ ಎರಡು ದಶಕಗಳಿಂದ ಬಹುತೇಕ ಕಲಾವಿದರಿಗೆ ಮೇಕಪ್ ಕಲಾವಿದನಾಗಿ ಕೆಲಸ ಮಾಡುವ ಮೂಲಕ ಕನ್ನಡ ಚಿತ್ರರಂಗದೊಂದಿಗೆ ನಂಟು ಹೊಂದಿದ್ದೇನೆ, ನಂತರ ಡೇಂಜರ್ ಜೋನ್ ಎಂಬ ಚಿತ್ರದ ಮೂಲಕ ನಿರ್ದೇಶಕನಾಗಿ ಚಿತ್ರರಂಗದಲ್ಲಿ ಹೊಸ ಹೆಜ್ಜೆ ಇಟ್ಟೆ, ಮೂರು ವರ್ಷಗಳ ಹಿಂದೆ ತಾಜ್ ಮಹಲ್ 2 ಎಂಬ ಚಿತ್ರದಲ್ಲಿ ನಾನೇ ನಾಯಕನಾಗಿ ನಟಿಸಿ, ಚಿತ್ರದ ನಿರ್ದೇಶನ ಕೂಡ ಮಾಡಿದೆ. ಆದರೆ ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸು ತಂದುಕೊಡಲಿಲ್ಲ. ನಂತರ ನಾನು ಡಿಪ್ರೆಶನ್‌ಗೆ ಹೋಗಿದ್ದೆ, ಒಂದು ಸಾಂಗ್‌ನಿಂದ ನಾನೀಗ ಬದುಕುಳಿದಿದ್ದೇನೆ, ಇನ್ಮುಂದೆ ಸಿನಿಮಾ ಮಾಡುವುದೇ ಬೇಡ ಅಂದುಕೊಂಡಿದ್ದೆ. ಆದರೆ ಸಿನಿಮಾ ಅನ್ನೋದು ಒಂದು ಕಲೆ, ಅದರ ಸೆಳೆತ ಹಾಗೇ ಇತ್ತು. ಎರಡು ವರ್ಷಗಳ ಹಿಂದೆ ಆಯುಧ ಎಂಬ ಈ ಚಿತ್ರವನ್ನು ಆರಂಭ ಮಾಡಿದೆ. ಮೇಕಪ್ ಮಾಡಿ ಬಂದ ಹಣದಿಂದ ಈ ಚಿತ್ರಕ್ಕೆ ಬಂಡವಾಳ ಹಾಕಿ ನಿರ್ಮಾಣ ಮಾಡಿದ್ದೇನೆ. ನಾನೇ ನಿರ್ದೇಶನ ಮಾಡುವುದರ ಜೊತೆಗೆ ಚಿತ್ರದಲ್ಲಿ ನಾಯಕನಾಗಿಯೂ ಸಹ ಅಭಿನಯಿಸಿದ್ದೇನೆ.

ಈ ಚಿತ್ರದಲ್ಲಿ ನಾಯಕ ಇಬ್ಬ ಬ್ಯಾಟ್‌ಮಿಂಟನ್ ಕೋಚರ್, ಇದೊಂದು ಕಾಲ್ಪನಿಕ ಕಥೆ, ರಸ್ತೆಯಲ್ಲಿ ಸಿಕ್ಕ ಒಂದು ಮೊಬೈಲ್ ಏನೇನೆಲ್ಲ ಅನಾಹುತ ಮಾಡಿತು ಎಂಬುದನ್ನು ಈ ಚಿತ್ರದ ಮೂಲಕ ಹೇಳಿದ್ದೇನೆ, ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು, ಮನ್ವರ್ಷಿ ನವಲಗುಂದ ಅವರು ಹಾಡುಗಳನ್ನು ಬರೆದಿದ್ದಾರೆ. ಸ್ಟೀವನ್ ಸತೀಶ್, ಮನದೀಪ್ ಹಾಗೂ ಮಂಜು ಎಂಬ ಮೂವರು ಸಂಗೀತ ನಿರ್ದೇಶಕರು ಹಾಡುಗಳನ್ನು ಸಂಯೋಜನೆ ಮಾಡಿದ್ದಾರೆ. ವೀನಸ್ ಮೂರ್ತಿ ಅವರು ನಮ್ಮ ಚಿತ್ರದ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸಿದ್ದಾರೆ. ಮಾರ್ಚ್ 27ರಂದು ನಮ್ಮ ಚಿತ್ರವು ಲಿಖಿತ್ ಫಿಲಂಸ್ ಮೂಲಕ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ ಎಂದು ಹೇಳಿದರು.

ಕ್ಯಾಲೆಂಡರ್ ಚಿತ್ರದಲ್ಲಿ ಮಹಿಳಾ ಪ್ರಧಾನ ಕಥೆ



ಈ ಹಿಂದೆ ಸ್ವಾರ್ಥರತ್ನ ಸೇರಿದಂತೆ ಎರಡು ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದ ನಟ ಆದರ್ಶ ಗುಂಡುರಾಜ್ ಇದೀಗ ಮತ್ತೊಂದು ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ಆ ಚಿತ್ರದ ಹೆಸರು ಕ್ಯಾಲೆಂಡರ್. ನವೀನ್ ಶಕ್ತಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವೀಗ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡು ಬಿಡುಗಡೆಗೆ ಸಿದ್ದವಾಗಿದೆ, ಈ ಚಿತ್ರದ ಟ್ರೈಲರ್ ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಬಿಡುಗಡೆಯಾಗಿದೆ. ಏಪ್ರಿಲ್ 3ರಂದು ಬಿಡುಗಡೆಯಾಗಲಿರುವ ಕ್ಯಾಲೆಂಡರ್ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಶ್ರೀ ರೇಣುಕಾಂಬ ಥಿಯೇಟರಿನಲ್ಲಿ ನೆರವೇರಿತು.

ವೇದಿಕೆಯಲ್ಲಿ ಮಾತನಾಡಿದ ಚಿತ್ರದ ನಿರ್ಮಾಪಕ ಹಾಗೂ ನಾಯಕ ನಟ ಆದರ್ಶ ಗುಂಡುರಾಜ್ ಕ್ಯಾಲೆಂಡರ್ ನಾನು ನಾಯಕನಾಗಿ ನಟಿಸಿರುವ ಮೂರನೇ ಚಿತ್ರ. ವರ್ಷಗಳು ಕಳೆಯುತ್ತಿರುತ್ತದೆ. ಆದರೆ ದಿನವನ್ನು ಗುರುತಿಸಲು ನಮಗೆ ಕ್ಯಾಲೆಂಡರ್ ಬಹಳ ಸಹಾಯಕಾರಿ. ನಮ್ಮ ಚಿತ್ರದ ಶೀರ್ಷಿಕೆಗೂ ಹಾಗೂ ಕಥೆಗೂ ಒಂದು ಸಂಬಂಧವಿದೆ. ಅದೇನೆಂದು ಚಿತ್ರಮಂದಿರದಲ್ಲೇ ನೋಡಬೇಕು, ನಾನೇ ಈ ಚಿತ್ರಕ್ಕೆ ಕಥೆ ಬರೆದು ನಿರ್ಮಾಣ ಸಹ ಮಾಡಿದ್ದೇನೆ. ಯುಗಾದಿ ಹಬ್ಬದ ಸಂದರ್ಭದಲ್ಲಿ ನಮ್ಮ ಚಿತ್ರದ ಟ್ರೈಲರ್ ಬಿಡುಗಡೆಯಾಗುತ್ತಿರುವುದು ವಿಶೇಷ. ಕ್ಯಾಲೆಂಡರ್ ಒಂದು ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ ಚಿತ್ರ. ಹೆಣ್ಣುಮಕ್ಕಳಿಗಂತೂ ಈ ಕಥೆ ತುಂಬಾ ಹತ್ತಿರವಾಗುತ್ತದೆ. ಕುಟುಂಬ ಸಮೇತ ನೋಡಲೇಬೇಕಾದ ಚಿತ್ರವೂ ಹೌದು. ಈ ಚಿತ್ರದಲ್ಲಿ ನಾನೊಬ್ಬ ವೈದ್ಯನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕನಸಿನ ರಾಣಿ, ಹಿರಿಯ ನಟಿ ಮಾಲಾಶ್ರೀ ಅವರು ನಮ್ಮ ಚಿತ್ರದ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ಕಥೆಯನ್ನು ನಾನೇ ಬರೆದಿದ್ದು, ನವೀನ್ ಶಕ್ತಿ ಅವರು ಚಿತ್ರಕಥೆ ರಚಿಸಿ ನಿರ್ದೇಶನ ಮಾಡಿದ್ದಾರೆ. ಏಪ್ರಿಲ್ ಮೂರರಂದು ನಮ್ಮ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ವಿ.ಕೆ.ಫಿಲಂಸ್ ಚಿತ್ರವನ್ನು ವಿತರಣೆ ಮಾಡುತ್ತಿದೆ. ಹಿಂದಿ ಭಾಷೆಯಲ್ಲೂ ನಮ್ಮ ಚಿತ್ರ ರಿಲೀಸಾಗುತ್ತಿದೆ. ಇತ್ತೀಚೆಗೆ ಮುಂಬೈನಲ್ಲೂ ಸಹ ಪತ್ರಿಕಾಗೋಷ್ಠಿಯನ್ನು ಆಯೋಜಿಸಲಾಗಿತ್ತು ಎಂದು ಹೇಳಿದರು. ಕ್ಯಾಲೆಂಡರ್ ಚಿತ್ರದ ಇಬ್ಬರು ನಾಯಕಿಯರಾಗಿ ನಿವಿಷ್ಕ ಪಾಟೀಲ್ ಹಾಗೂ ಸುಶ್ಮಿತ ಅವರುಗಳು ಕಾಣಿಸಿಕೊಂಡಿದ್ದಾರೆ.

ನಂತರ ಚಿತ್ರದ ನಿರ್ದೇಶಕ ನವೀನ್ ಶಕ್ತಿ ಮಾತನಾಡುತ್ತ ನಾನು ಮೂಲತಃ ರಂಗಭೂಮಿಯವವನು. 5000ಕ್ಕೂ ಅಧಿಕ ಬೀದಿ ನಾಟಕಗಳನ್ನು ಮಾಡಿದ್ದೇನೆ. ನಿರ್ದೇಶಕನಾಗಿ ಇದು ನನ್ನ ಮೊದಲ ಚಿತ್ರ. ಕ್ಯಾಲೆಂಡರ್ ಚಿತ್ರದಲ್ಲಿ ಎಲ್ಲರ ಮನಸ್ಸಿಗೂ ಹತ್ತಿರವಾಗುವ ಕಥಾಹಂದರವಿದೆ. ಚಿತ್ರತಂಡದ ಸಹಕಾರದಿಂದ ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದರು. ನಂತರ ನಾಯಕಿಯರಾದ ಸುಶ್ಮಿತ ಹಾಗೂ ಸಹ ನಿರ್ಮಾಪಕ ಮತ್ತು ನಟ ಶಿವಪ್ರದೀಪ್ ಅವರರೂ ಸಹ ಕ್ಯಾಲೆಂಡರ್ ಚಿತ್ರದ ಕುರಿತಂತೆ ಮಾತನಾಡಿದರು.



ನಟ ರಮೇಶ್ ಇಂದಿರಾ, ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡು, ಸುಚೇಂದ್ರ ಪ್ರಸಾದ್, ಚಂದ್ರಪ್ರಭ ಸೇರಿದಂತೆ ಸಾಕಷ್ಟು ಪ್ರತಿಭಾವಂತ ಕಲಾವಿದರು ಕ್ಯಾಲೆಂಡರ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಸುನಾದ್ ಗೌತಮ್ ಅವರ ಸಂಗೀತ ಸಂಯೋಜನೆ, ರಮೇಶ್ ಕೊಯಿರಾ ಅವರ ಛಾಯಾಗ್ರಹಣ, ಕೆ.ಜಿ.ಎಫ್. ಖ್ಯಾತಿಯ ವಿಕ್ರಂ ಮೋರ್ ಅವರ ಸಾಹಸ ನಿರ್ದೇಶನ, ಭಜರಂಗಿ ಮೋಹನ್ ಅವರ ನೃತ್ಯನಿರ್ದೇಶನ, ಸುರೇಶ್ ಆರ್ಮುಗಂ ಅವರ ಸಂಕಲನ ಹಾಗೂ ಮಹಾಂತೇಶ್ ಆರ್. ಅವರ ಸಹನಿರ್ದೇಶನ ಕ್ಯಾಲೆಂಡರ್ ಚಿತ್ರಕ್ಕಿದೆ,

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಹೊಸ ದಿಗಂತ
ಮೈಸೂರು
ಶನಿವಾರ 21 ಮಾರ್ಚ್ 2026
ಗರಿಷ್ಠ 34° ಕನಿಷ್ಠ 22°

ಸನ್ಮಾನ....



ಮೈಸೂರಿನಲ್ಲಿ ನಡೆದ ಸಂಗೀತಕಲಾವಿದೆಯೊಬ್ಬರ ಜೀವನ ಮತ್ತು ಕಾಲಘಟ್ಟ ಕುರಿತಾದ 'ನನ್ನ ಹೆಸರು ಗೌಹರ್ ಜಾನ್' ಕೃತಿಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಖ್ಯಾತ ಇತಿಹಾಸಕಾರ, ಲೇಖಕ ಡಾ.ವಿಕ್ರಂ ಸಂಪತ್ ಅವರನ್ನು ರೋಟರಿ ಐವರಿ ಸಿಟಿ ಮೈಸೂರು ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಯುಗಾದಿ ಪ್ರಯುಕ್ತ ಭಗವಾಧ್ವಜಾರೋಹಣ | ೨
ರೈತರ ಬದುಕು ಹಸನಾಗಲಿ | ೩
ಪ್ರಭಾವಿಗಳ ಹೆಸರು ಇಲ್ಲ: ದೂರು | ೪

ಕಿರುಸುದ್ದಿ

ನಾಳೆ ನಾನೂ ಕಾಫಿರ ಪುಸ್ತಕ ಲೋಕಾರ್ಪಣೆ ಸಮಾರಂಭ

ಮೈಸೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸಹಿತಂ ಪ್ರಕಾರ ಮತ್ತು ಸ್ವರಾಷ್ಟ್ರಪ್ರಕಾಶನ ಸಹಯೋಗದಲ್ಲಿ ನಾನು ಕಾಫಿರ (ಬಾಬಾ ಸಾಹೇಬರ ಹಿಂದುತ್ವ ಕಥನ) ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಮಾ.22 ರಂದು ಮೈಸೂರಿನಲ್ಲಿ ನಡೆಯಲಿದೆ. ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಇನ್ಫೋಸಿಸ್ ಪಕ್ಕದಲ್ಲಿರುವ ಹೆಲ್ತ್‌ಕೇರ್ ಯೂನಿಟ್‌ನ ಸ್ಕ್ಯಾನ್ರೆ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮನಾಥಸ್ವಾಮೀಜಿ ವಹಿಸಲಿದ್ದು, ಪುಸ್ತಕವನ್ನು ಚಿಂತಕರು ಹಾಗೂ ಹೆಸರಾಂತ ಕಾದಂಬರಿಕಾರರಾದ ಸಹನಾ ವಿಜಯ್ ಕುಮಾರ್ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ನಿಕಟ ಪೂರ್ವ ಸಂಘ ಚಾಲಕರಾದ ಮಾ.ವೆಂಕಟರಾಮ್ ಆಗಮಿಸುವರು. ಸಂವಿಧಾನ ತಜ್ಞರಾದ ಲೇಖಕ ಡಾ.ಸುಧಾಕರ ಹೊಸಳ್ಳಿ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಂಗೋಲಿ ಸ್ಪರ್ಧೆ

ಮೈಸೂರು: ಭಾರತ ದೇಶದ ಸಂಸ್ಕೃತಿಯನ್ನು ಅರ್ಥಪೂರ್ಣವಾಗಿ ಎತ್ತಿ ತೋರಿಸುವ ದೊಡ್ಡ ಸಂಪ್ರದಾಯಗಳಲ್ಲಿ ಪ್ರಮುಖವಾದದ್ದು ರಂಗೋಲಿ ಕಲೆಯಾಗಿದೆ ಎಂದು ಮಾಜಿ ಶಾಸಕ ಬಾಲರಾಜು ಹೇಳಿದರು. ಮೈಸೂರಿನ ಒಂಟಿಕೊಪ್ಪಲ್ ಗ್ರಾಮದೇವತೆ ಹಬ್ಬದ ಪ್ರಯುಕ್ತ ಶ್ರೀಮತಿ ಸರಸ್ವತಿ ಶಿವಣ್ಣ ಸ್ಮಾರಕ ಮಹಿಳೆಯರಿಗಾಗಿ ಬಿ.ಜೆ.ಪಿ. ಮುಖಂಡರಾದ ಎಸ್. ಜಯಪ್ರಕಾಶ್ (ಜೆಪಿ) ರವರ ಮಾರ್ಗದರ್ಶನದಲ್ಲಿ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನೆಮುಂದೆ, ದೇವಸ್ಥಾನಗಳ ಮುಂದೆ ಮತ್ತು ಶುಭ-ಕಾರ್ಯಕ್ರಮಗಳಲ್ಲಿ ರಂಗೋಲಿ ಬಿಡಿಸುವುದು ಸಂಪ್ರದಾಯವಾಗಿದೆ. ರಂಗೋಲಿ ಕಲೆಯನ್ನು ಎಲ್ಲರೂ ಉಳಿಸಿ, ಬೆಳೆಸಿಕೊಂಡು ಹೋಗಬೇಕು ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ನಿರ್ಮಾಪಕ ಚೇತನ್ ರಮೇಶ್, ಒಂಟಿಕೊಪ್ಪಲ್ ಪ್ರಸನ್ನ ಆಂಜನೇಯ ದೇವಸ್ಥಾನದ ಟ್ರಸ್ಟ್‌ನ ಕಾರ್ಯದರ್ಶಿ ರವಿಕುಮಾರ್ ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು. ರಂಗೋಲಿ ಸ್ಪರ್ಧೆಯ ತೀರ್ಪುಗಾರರಾಗಿ ಬಾಲಿವುಡ್ ಛಾಯಾಗ್ರಾಹಕ ಮಹೇಶ್ ತಲ್‌ಕಾಡ್, ಸಮಾಜ ಸೇವಕರಾದ ಮಂಜುಳಾ ಇದ್ದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶಿಕ್ಷಕರ ಶಿಬಿರ

ಮೈಸೂರು: ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 4ರಿಂದ 6ರವರೆಗೆ ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಕರಿಗಾಗಿ ಶಿಬಿರವನ್ನು ಏರ್ಪಡಿಸಲಾಗಿದೆ. ಈ ಶಿಬಿರದಲ್ಲಿ ರಾಜ್ಯದ ಎಲ್ಲ ಶಿಕ್ಷಕರಿಗಳಿಗೂ ಭಾಗವಹಿಸಲು ಅವಕಾಶ ಕಲ್ಪಿಸಿದೆ. ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ-ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಶಿಬಿರದಲ್ಲಿ ಭಾಗವಹಿಸಲು ಇಚ್ಚೆಯುಳ್ಳವರು ಶಿಬಿರದ ಸಂಚಾಲಕರುಗಳಾದ ಎಚ್.ಎಸ್. ನಾಗರಾಜು (9591577957) ರವರುಗಳನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಶಿಬಿರದ ಸಂಚಾಲಕ ಎಚ್.ಎಸ್.ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷಾ ಶುಲ್ಕವನ್ನು ಪಾವತಿಸಲು ಅಧಿಸೂಚನೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2001-2002ನೇ ಶೈಕ್ಷಣಿಕ ಸಾಲಿನಿಂದ 2014-15ನೇ ಶೈಕ್ಷಣಿಕ ಸಾಲಿನವರೆಗೆ ಪ್ರವೇಶಾತಿ ಪಡೆದು ಅನುತ್ತೀರ್ಣ, ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಕೊನೆಯ ಅವಕಾಶವಾಗಿ ಮತ್ತು 2018-19ನೇ ಶೈಕ್ಷಣಿಕ ಸಾಲಿನಿಂದ 2025-26 (ಜುಲೈ ಆವೃತ್ತಿ) ಶೈಕ್ಷಣಿಕ ಸಾಲಿನ ವರೆಗೆ ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಸಿಬಿಸಿಎಸ್/ನಾನ್-ಸಿಬಿಸಿಎಸ್ ಪಠ್ಯಕ್ರಮದ ಪುನರಾವರ್ತಿತ ಹಾಗೂ ಹೊಸ ವಿದ್ಯಾರ್ಥಿಗಳ ವಾರ್ಷಿಕ/ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು ಅಧಿಸೂಚನೆ ಹೊರಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್ ಸೈಟ್ www.ksoumysuru.ac.in ಅನ್ನು ವೀಕ್ಷಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಸಚಿವ ಡಾ.ಸಿ.ಎಸ್. ಆನಂದ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೈವಿಕ ಶಕ್ತಿಯನ್ನು ಮುನ್ನಡೆಸಿಕೊಂಡು ಹೋಗಬೇಕು: ಟಿಎಸ್ ಶ್ರೀವತ್ಸ

ಯುಗಾದಿ ಸಂಗೀತೋತ್ಸವ

ಮೈಸೂರು: ದುಷ್ಟ ಶಕ್ತಿಗಳನ್ನು ಸೋಲಿಸಿ, ಜೀವನದಲ್ಲಿ ದೈವಿಕ ಶಕ್ತಿಯನ್ನು ಪಡೆದು ಮುನ್ನಡೆಸಿಕೊಂಡು ಹೋಗಬೇಕು ಎಂದು ಕೃಷ್ಣರಾಜ ಕ್ಷೇತ್ರದ ವಿಧಾನ ಸಭೆ ಶಾಸಕ ಟಿ.ಎಸ್ ಶ್ರೀವತ್ಸ ತಿಳಿಸಿದರು.

ಮೈಸೂರು ಅರಮನೆ ಮಂಡಳಿ ವತಿಯಿಂದ ಅಂಬಾವಿಲಾಸ ಅರಮನೆ ಆವರಣದಲ್ಲಿ ಆಯೋಜಿಸಲಾಗಿದ್ದ ಯುಗಾದಿ ಸಂಗೀತೋತ್ಸವ ಶ್ರೀ ಪರಾಭವ ಸಂವತ್ಸರಕಾರ್ಯಕ್ರಮದಅಧ್ಯಕ್ಷತೆವಹಿಸಿಮಾತನಾಡಿ, ಹಿಂದುಗಳ ವರ್ಷದ ಮೊದಲನೆಯ ಹಬ್ಬವೇ ಯುಗಾದಿ. ನಾವೆಲ್ಲರೂ ಬದುಕನ್ನು ಶಕ್ತಿಯುತವಾಗಿ ಮುನ್ನಡೆಸಿಕೊಂಡು ಜೀವನದಲ್ಲಿ ಕಷ್ಟ-ಸುಖಗಳನ್ನು ಸಮದೂಗಿಸಿಕೊಂಡು ಮುನ್ನಡೆಸುವುದೆ ಯುಗಾದಿ ಹಬ್ಬ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಡಾ. ಡಿ ತಿಮ್ಮಯ್ಯ ಮಾತನಾಡಿ, ಯುಗಾದಿ ಹಬ್ಬವನ್ನು ರೈತ ಭಾಂದವರು ತಮ್ಮ ಜೀವನದಲ್ಲಿ ಅದ್ದೂರಿಯಾಗಿ ಆಚರಣೆ ಮಾಡುತ್ತಾರೆ ಎಂದರು. ಬೇವು- ಬೆಲ್ಲ ಜೀವನದಲ್ಲಿ ಕಷ್ಟ ಸುಖವನ್ನು ಸಮನಾಗಿ ಸ್ವೀಕರಿಸಿದರೆ, ಜೀವನದಲ್ಲಿ ಯುಗಾದಿ ಹಬ್ಬ ಒಂದು ಪರಿಪೂರ್ಣ ಅರ್ಥ ನೀಡುತ್ತೆ. ಮನುಷ್ಯನ ಜೀವನದಲ್ಲಿ ಒಳ್ಳೆಯ ದಿನಗಳು ಕೆಟ್ಟ ದಿನಗಳೆರೆಡು ಬರುತ್ತವೆ. ಬದುಕಲ್ಲಿ ಅನೇಕ ಸಂದರ್ಭಗಳಲ್ಲಿ ಅನಿರೀಕ್ಷಿತ ಘಟನೆಗಳು ಬರುತ್ತವೆ. ಆದರೆ ಆ ಕಷ್ಟಗಳೆಲ್ಲವನ್ನು ಎದುರಿಸಿ, ನಿವಾರಿಸಿಕೊಂಡು ಹೋದರೆ ಮುಂದೆ ಸುಖ ಬಂದೆ ಬರುತ್ತದೆ ಎಂದರು. ವಿದ್ಯಾರ್ಥಿಗಳ ಜೀವನದಲ್ಲೂ ಕಷ್ಟಪಟ್ಟು ಅಭ್ಯಾಸ ಮಾಡಿದರೆ, ಪರಿಶ್ರಮ ಪಟ್ಟರೆ, ಮುಂದಿನ ಭವಿಷ್ಯ ಸಿಹಿಯಾಗಿರುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ, ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎಸ್. ಸುಬ್ರಮಣ್ಯ ಉಪಸ್ಥಿತರಿದ್ದರು.



ಪಂಚಮುಖಿ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ

ಮೈಸೂರು: ಯುಗಾದಿ ಹಬ್ಬದ ಪ್ರಯುಕ್ತ ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಪಂಚಾಂಗ ಶ್ರಾವಣ ನಡೆಯಿತು. ದೇವಸ್ಥಾನದಲ್ಲಿ ಲೋಕಕಲ್ಯಾಣಕ್ಕಾಗಿ ತೈಲಾಭಿಷೇಕ, ವಿಶೇಷ ಧ್ರುವಗಳಿಂದ ಹಾಗೂ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಪಂಚಾಂಗ ಶ್ರಾವಣ ಪಠಿಸುವ ಮೂಲಕ ದೇವಸ್ಥಾನದಲ್ಲಿ ಹಬ್ಬವನ್ನು ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಕೃಷ್ಣಮೂರ್ತಿ ನೇತೃತ್ವದಲ್ಲಿ ವಿಶೇಷವಾಗಿ ಆಚರಿಸಿದರು. ನಂತರ ಭಕ್ತಾದಿಗಳಿಗೆ ಬೇವು-ಬೆಲ್ಲ ಹಾಗೂ ಪ್ರಸಾದ ವಿತರಿಸಿದರು.

ಬೇವು ಬೆಲ್ಲ ವಿತರಣೆ

ಮೈಸೂರು: ನಂಜುಮಳಿಗೆ ವೃತ್ತದಲ್ಲಿ ಕೃಷ್ಣರಾಜ ಯುವ ಬಳಗದ ವತಿಯಿಂದ ಯುಗಾದಿ ಹಬ್ಬ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಹಿಂದುಗಳು ಮುಸಲ್ಮಾನರಿಗೆ ಬೇವು ಬೆಲ್ಲ ನೀಡಿದರು. ಎರಡು ಸಮುದಾಯದವರು ಹಬ್ಬದ ಶುಭಾಶಯಗಳು ವಿನಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಪೊಲೀಸ್ ಬಾಂಧವರಿಗೂ ಬೇವು ಬೆಲ್ಲ ನೀಡಿ ಶುಭಾಶಯ ಕೋರಿದರು. ಕೆ ಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜ್, ಜಿ ರಾಘವೇಂದ್ರ, ತೀರ್ಥ ಕುಮಾರ್, ಎಸ್.ಎನ್ ರಾಜೇಶ್, ನಾಸಿರ್ ಪಾಶ, ಮೋಹಿಬೆ ಶರೀಫ್, ಮುನಾವರ್ ಪಾಷಾ, ಅನ್ಸರ್ ಪಾಷಾ, ಸನಾವುಲಾ, ನವೀನ್ ಕೆಂಪಿ, ರವಿ ನಂದನ್, ಬಾಲರಾಜು, ಅನಂತರಾಜು ಇದ್ದರು.

ಕಾಯ್ದಿರಿಸದ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರ

ಮೈಸೂರು: ಪ್ರಯಾಣಿಕರ ಸೌಲಭ್ಯಕ್ಕಾಗಿ ಹಾಗೂ ನಂಜನಗೂಡಿನ ದೊಡ್ಡ ಜಾತ್ರೆ, ಪಂಚ ಮಹಾರಥೋತ್ಸವದ ಸಲುವಾಗಿ ಹೆಚ್ಚುವರಿ ಜನ ದಟ್ಟಣೆಯನ್ನು ನಿವಾರಿಸಲು, ನೈರುತ್ಯ ರೈಲ್ವೆ ಮೈಸೂರು ಮತ್ತು ನಂಜನಗೂಡು ಟೌನ್ ನಡುವೆ ಮಾರ್ಚ್ 30 ರಿಂದ ಏಪ್ರಿಲ್ 3ರ ವರೆಗೆ, ಪ್ರತಿ ದಿಕ್ಕಿನಲ್ಲಿ 05 ಟ್ರಿಪ್ ಗಳ ವಿಶೇಷ ಕಾಯ್ದಿರಿಸದ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲಿದೆ.

ರೈಲುಗಳ ವಿವರ ಇಂತಿವೆ: ರೈಲು ಸಂಖ್ಯೆ 06225 ಮೈಸೂರು- ನಂಜನಗೂಡು ಟೌನ್ ಕಾಯ್ದಿರಿಸದ ಎಕ್ಸ್ ಪ್ರೆಸ್ ವಿಶೇಷ ಮೈಸೂರಿನಿಂದ 13 ಗಂಟೆಗೆ ಹೊರಟು, ನಂಜನಗೂಡು ಟೌನ್ ಗೆ 14 ಗಂಟೆಗೆ ತಲುಪಲಿದೆ, ಮಧ್ಯಂತರ ನಿಲ್ದಾಣಗಳಲ್ಲಿ ಆಗಮನ / ನಿರ್ಗಮನ ಸಮಯಗಳು ಚಾಮರಾಜಪುರಂ 13:07/13:08 ಗಂಟೆ, ಅಶೋಕಪುರಂ 13:15., 13:16 ಗಂಟೆ, ಕಡಕೊಳ 13:29/13:30 ಗಂಟೆ, ತಾಂಡವಪುರ 13:35/13:36 ಗಂಟೆ, ಸುಜಾತಪುರಂ 13:41, 13:42 ಗಂಟೆಗೆ ಬರಲಿದೆ. ರೈಲು ಸಂಖ್ಯೆ 06226 ನಂಜನಗೂಡು ಟೌನ್ ಮೈಸೂರು ಕಾಯ್ದಿರಿಸದ ಎಕ್ಸ್ ಪ್ರೆಸ್ ವಿಶೇಷ ನಂಜನಗೂಡು ಟೌನ್ ನಿಂದ 15:10 ಗಂಟೆಗೆ ಹೊರಟು, ಮೈಸೂರಿಗೆ 16:10 ಗಂಟೆಗೆ ತಲುಪಲಿದೆ, ಮಧ್ಯಂತರ ನಿಲ್ದಾಣಗಳಲ್ಲಿ ಆಗಮನ / ನಿರ್ಗಮನ ಸಮಯಗಳು, ಸುಜಾತಪುರಂ 15:15/15:16 ಗಂಟೆ, ತಾಂಡವಪುರ 15:21/15:22 ಗಂಟೆ, ಕಡಕೊಳ 15:27/15:28 ಗಂಟೆ, ಅಶೋಕಪುರಂ 15:48/15:50 ಗಂಟೆ, ಚಾಮರಾಜಪುರಂ 15:55/15:56 ಗಂಟೆಗೆ ಬರಲಿದೆ ಎಂದು ಮೈಸೂರು ರೈಲ್ವೆ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೋಚ್ ವಿನ್ಯಾಸ, ಈ ರೈಲಿನಲ್ಲಿ ಒಟ್ಟು 21 ಕೋಚ್‌ಗಳು ಇರುತ್ತವೆ: 2 ಎಸಿ ಟು-ಟಯರ್, 6 ಎಸಿ ತ್ರೀ-ಟಯರ್, 7 ಸ್ಲೀಪರ್ ಕ್ಲಾಸ್, 4 ಸಾಮಾನ್ಯ ದ್ವಿತೀಯ ದರ್ಜೆ, 1 ಲಗೇಜ್/ಬ್ರೇಕ್ ವ್ಯಾನ್, 1 ಎಸ್‌ಎಲ್‌ಆರ್‌ಡಿ ಕೋಚ್ ಇರಲಿವೆ ಎಂದು ಮಾಹಿತಿ ನೀಡಿದ್ದಾರೆ.

ಗುಬ್ಬಚ್ಚಿ ಸಂತತಿ ಉಳಿಸಿ



ಮೈಸೂರು: ಇತ್ತೀಚಿನ ದಿನಗಳಲ್ಲಿ ಗುಬ್ಬಚ್ಚಿ ಅಳಿವಿನಂಚಿನಲ್ಲಿದೆ. ಗುಬ್ಬಚ್ಚಿ ಉಳಿದರೆ ಉತ್ತಮ ಪರಿಸರ ನೋಡಲು ಸಾಧ್ಯ. ಆದ್ದರಿಂದ ಮುಂದಿನ ಪೀಳಿಗೆಗೂ ಗುಬ್ಬಿ ಸಂತತಿ ಉಳಿಸಬೇಕು ಎಂದು ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹೇಳಿದರು.

ನಗರದ ಮಹಾರಾಜ ಮೈದಾನದ ಮುಂಭಾಗ ಕೆಎಂಪಿಕೆ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ವಿಶ್ವ ಗುಬ್ಬಚ್ಚಿ ದಿನಾಚರಣೆ ಕಾರ್ಯಕ್ರಮಕ್ಕೆ ಪಕ್ಷಿಗಳಿಗೆ ನೀರಿನ ಬೌಲು ಅಳವಡಿಸಿ,ನೀರುಹಾಗೂಆಹಾರಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ನಾವು ಗುಬ್ಬಚ್ಚಿಗಳೊಂದಿಗೆ ಬೆಳೆದವರು, ಪರಿಸರ ಸಮತೋಲನ ಬಹಳ ಮುಖ್ಯ, ಗುಬ್ಬಚ್ಚಿ ಮಾತ್ರವಲ್ಲ ಎಲ್ಲ ಪಕ್ಷಿ ಗಳು ಕೂಡ ಅಳಿವಿನಂಚಿನಲ್ಲಿದೆ. ಇಂದು ಕೃಷಿಗೆ ಕ್ರಿಮಿನಾಶಕಗಳನ್ನು ಬಳಸಲಾಗುತ್ತಿದೆ. ಇದು ವಿಷಕಾರಿಯಾಗಿದ್ದು, ಗುಬ್ಬಿಗಳು ಸಾವನಪ್ಪುತ್ತಿದೆ.

ಗುಬ್ಬಚ್ಚಿ ಉಳಿಸಿದರೆ ಪರಿಸರದ ಉಳಿವು. ಮನುಷ್ಯರು ನಾವು ಮಾತ್ರ ಬದುಕದೆ, ಎಲ್ಲಾ ಜೀವಿಗಳು ಬದುಕಲು ಅವಕಾಶ ಮಾಡಿಕೊಡಬೇಕೆಂದು ಹೇಳಿದರು. ಸುಮಾರು 25ಕ್ಕೂ ಅಧಿಕ ಗುಬ್ಬಿಗಳ ಪ್ರಬೇಧವಿದೆ. ಅವುಗಳೆಲ್ಲಾ ಅಳಿವಿನಂಚಿನಲ್ಲಿದೆ. ಮನುಷ್ಯನಿಂದ ಗುಬ್ಬಿಗೆ ಕಂಟಕ ಎದುರಾಗಿದೆ ಎಂದರು. ವಾಸಿಸಲು ಪೂರಕ ವಾತಾವರಣ ಇಲ್ಲದಿರುವುದು ಗುಬ್ಬಿ ಸಂತತಿ ಇಳಿಮುಖವಾಗಲು ಪ್ರಮುಖ ಕಾರಣ. ಗುಬ್ಬಿಯ ಸಂಕುಲವನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು

ಗುಬ್ಬಿ ಕಾಣಲು ಸಿಗುತ್ತಿಲ್ಲ, ಆದರೆ ನಮ್ಮ ಬಾಲ್ಯವನ್ನು ನೆನಪಿಡಿಸಿಕೊಂಡರೆ ಗುಬ್ಬಚ್ಚಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಆದರೆ ಇಂದು ಗುಬ್ಬಚ್ಚಿ ಸೇರಿದಂತೆ ಹಲವು ಪಕ್ಷಿ ಸಂಕುಲ ಅವಸಾನದಂಚಿನಲ್ಲಿದೆ. ಗುಬ್ಬಚ್ಚಿ ದಿನ ಮಾತ್ರ ಪಕ್ಷಿಗಳಿಗೆ ನೀರು ಆಹಾರ ನೀಡುವುದು ಮುಖ್ಯವಲ್ಲ, ಪ್ರತಿದಿನವೂ ಸಹ ಪಕ್ಷಿ ಸಂಕುಲನವನ್ನು ಉಳಿಸಲು ತಮ್ಮ ತಮ್ಮ ಮನೆಯ ಮೇಲೆ ಪ್ರಾಣಿ ಪಕ್ಷಿಗಳಿಗೆ ನೀರಿನ ಬಟ್ಟಲು ಅಳವಡಿಸುವ ಕೆಲಸವಾಗಬೇಕು ಎಂದು ಹೇಳಿದರು.

ಜನಸಂಖ್ಯೆಗಿಂತ ವಾಹನಸಂದ್ರತೆ ನಿಯಂತ್ರಣವಾಗದೇ ಹೆಚ್ಚಾಗಿರುವ್ಯದರಿಂದ, ಪರಿಸರ ವಿಕೋಪಕ್ಕೆ ತೆರಳಿ, ಸಣ್ಣಪುಟ್ಟ ಪ್ರಾಣಿಪಕ್ಷಿಗಳ ಸಂಕುಲ ನಾಶವಾಗುತ್ತಿದೆ. ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರೀಕನ ಹೊಣೆ, ಹವಮಾನ ಮಾಸಗಳ ಬದಲಾವಣೆ ಮುನ್ಸೂಚನೆ ಕೊಡುವುದು ಪ್ರಾಣಿಪಕ್ಷಿಗಳೇ ಮೊದಲು. ಹಾಗಾಗಿ ನಾಗರೀಕತೆಯೊಂದಿಗೆ ಉತ್ತಮ ಒಡನಾಟದಲ್ಲೆ ಜೀವಿಸುವ ಪ್ರಾಣಿಪಕ್ಷಿಗಳಿಗೆ ಇಂತಹ ರಣಬಿಸಿಲಿನಲ್ಲಿ ಒಂದಷ್ಟು ನೀರು ಆಹಾರ ನೀಡುವ ಕಾರ್ಯಕ್ಕೆ ಸಾರ್ವಜನಿಕರು ಮುಂದಾಗಬೇಕಿದೆ ಎಂದರು. ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ನಗರ ಪಾಲಿಕೆಯ ಮಾಜಿ ಸದಸ್ಯರಾದ ಜಗದೀಶ್, ನಿರೂಪಕ ಅಜಯ್ ಶಾಸ್ತ್ರಿ,ಎಸ್ ಎನ್ ರಾಜೇಶ್, ಬೈರತಿ ಲಿಂಗರಾಜು, ಚಕ್ರಪಾಣಿ, ಸುಚಿಂದ್ರ ಹಾಗೂ ಇನ್ನಿತರರು ಹಾಜರಿದ್ದರು.

ಬಿಸಿಲಿನ ತಾಪದಿಂದ ಪ್ರಾಣಿ ಪಕ್ಷಿ ರಕ್ಷಿಸೋಣ

ಪ್ರಕೃತಿ ಸಮತೋಲನಕ್ಕಾಗಿ ಗುಬ್ಬಚ್ಚಿಗಳನ್ನು ಉಳಿಸೋಣ, ಬೇಸಿಗೆಯ ಬಿಸಿಲಿನ ತಾಪದಿಂದ ಪ್ರಾಣಿ ಪಕ್ಷಿಗಳನ್ನು ರಕ್ಷಿಸೋಣ, ಅಳಿದು ಹೋಗುತ್ತಿರುವ ಗುಬ್ಬಚ್ಚಿ ಸಂಕುಲಗಳ ಉಳಿವಿಗಾಗಿ ಜನಜಾಗೃತಿ ಮೂಡಿಸೋಣ, ನಶಿಸಿ ಹೋಗುತ್ತಿರುವ ಗುಬ್ಬಚ್ಚಿ ಸಂಕುಲವನ್ನು ಸಂರಕ್ಷಿಸೋಣ ಎಂಬ ಘೋಷವಾಕ್ಯ ನಾಮಫಲಕದ ಮೂಲಕ ಪಕ್ಷಿಗಳ ಸಂರಕ್ಷಣೆಯ ಸಂದೇಶ ಸಾರಿದರು.

ಸೌರಶಕ್ತಿ ಘಟಕ ಉದ್ಘಾಟನೆ



ಮೈಸೂರು: ಜೆ.ಪಿ.ನಗರದಲ್ಲಿರುವ ಪೇಜಾವರ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಸೌರಶಕ್ತಿ ಘಟಕವನ್ನು ಉದ್ಘಾಟಿಸಲಾಯಿತು. ಇದು ಪರಿಸರ ಸಂರಕ್ಷಣೆ ಮತ್ತು ಸ್ಥಿರ ಅಭಿವೃದ್ಧಿಯ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಈ ಘಟಕವನ್ನು ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಪ್ರಾದೇಶಿಕ ಕಚೇರಿ ಮೈಸೂರಿನ ಸಹಾಯಕ ಮಹಾಪ್ರಬಂಧಕ ಡಾ. ಅರುಣ್ ಟಿ. ಆರ್. ಉದ್ಘಾಟಿಸಿದರು. ಬಳಿಕ ಮಾತನಾಡಿ, ಕರ್ನಾಟಕ ಮತ್ತು ಮೇಘಾಲಯದಜನಜಾತಿ ಪ್ರದೇಶಗಳ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ವಸತಿ ವ್ಯವಸ್ಥೆಒದಗಿಸುತ್ತಿರುವ ಪೇಜಾವರ ಮಠದ ಸೇವೆಯನ್ನು ಪ್ರಶಂಸಿಸಿದರು. ಸೌರಶಕ್ತಿ ಸ್ವಚ್ಛ ಮತ್ತು ಸ್ಥಿರ ಶಕ್ತಿಯ ಮೂಲವಾಗಿದ್ದು, ವಿದ್ಯುತ್ ವೆಚ್ಚವನ್ನುಕಡಿಮೆ ಮಾಡುವುದರ ಜತೆಗೆ ಪರಿಸರಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂದು ಹೇಳಿದರು.

ಈ ಯೋಜನೆಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ ಸಿಎಸ್ ಆರ್ ಯೋಜನೆಯಡಿ 10.50 ಲಕ್ಷ ರೂ ಅನುದಾನದಿಂದಜಾರಿಗೆ ಬಂದಿದ್ದು, ವಿದ್ಯಾರ್ಥಿಗಳ ಕಲ್ಯಾಣ ಹಾಗೂ ನವೀಕರಿಸಬಹುದಾದ ಶಕ್ತಿಯ ಬಳಕೆಯನ್ನು ಉತ್ತೇಜಿಸುವಉದ್ದೇಶ ಹೊಂದಿದೆ ಎಂದು ತಿಳಿಸಿದರು.

ವಿಜಯ ವಿಠ್ಠಲ ಶಾಲೆಯ ಆರ್. ವಾಸು ದೇವ ಭಟ್ ಮಾತನಾಡಿ, ಈ ಯೋಜನೆ ವಿದ್ಯಾರ್ಥಿನಿಲಯಕ್ಕೆ ನಿರಂತರ ಹಾಗೂ ಕಡಿಮೆ ವೆಚ್ಚದ ವಿದ್ಯುತ್ ಪೂರೈಕೆಯನ್ನು ಒದಗಿಸಿ, ಉಳಿ ಯುವ ಸಂಪನ್ಮೂಲಗಳನ್ನು ವಿದ್ಯಾರ್ಥಿಗಳ ಶಿಕ್ಷಣ ಮತ್ತು ಅಭಿವೃದ್ಧಿಗೆ ಬಳಸಲು ಸಹಕಾರಿಯಾಗಲಿದೆ ಎಂದು ಹೇಳಿದರು. ಇದೇ ವೇಳೆ, ಇಂತಹ ಯೋಜನೆಗಳು ಇತರ ಸಂಸ್ಥೆಗಳಿಗೂ ಮಾದರಿಯಾಗಲಿವೆ ಎಂದರು. ಈ ಸಂದರ್ಭದಲ್ಲಿ ಉಪ ಪ್ರಾದೇಶಿಕ ಮುಖ್ಯಸ್ಥ ಬದ್ರಿ ಪ್ರಸಾದ್, ಸರಸ್ವತಿಪುರಂ ಶಾಖಾ ವ್ಯವಸ್ಥಾಪಕ ಪ್ರಶಾಂತ್‌ಎಸ್. ಎಳದಗಿ, ಟ್ರಸ್ಟಿ ಲೋಕೇಶ್ವರಯ್ಯ, ಕಾರ್ಯದರ್ಶಿ ರಾಜೇಶ್ ಶಾ ಹಾಗೂ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶೇ.7ರಷ್ಟು ಮೀಸಲಾತಿ ನೀಡಲು ಒತ್ತಾಯ

ಮೈಸೂರು: ರಾಜ್ಯದಲ್ಲಿ ಸುಮಾರು 101 ಜಾತಿಗಳು ಪರಿಶಿಷ್ಟ ಜಾತಿಗಳ ಪಟ್ಟಿಯಲಿದ್ದು, ಈ ಎಲ್ಲ ಜಾತಿಗಳು ಸಮನಾಗಿ ಪ್ರಾತಿನಿಧ್ಯವನ್ನು ಪಡೆಯದ ಕಾರಣ, ಒಳಮೀಸಲಾತಿ ಅವಶ್ಯಕತೆ ಇದೆ ಎಂದು ಭಾರತೀಯ ವಿದ್ಯಾರ್ಥಿ ಸಂಘದ ರಾಜ್ಯ ಸಂಚಾಲಕ ಡಾ. ಶ್ರೀನಿವಾಸ್ ಹೇಳಿದರು.

ಶುಕ್ರವಾರ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿವಿಲ್ ನೇಮಕಾತಿಗಾಗಿ ಹಿಂದಿನ ಸರಕಾರವು ಘೋಷಿಸಿದ್ದಂತೆ, ಪರಿಶಿಷ್ಟ ಜಾತಿಗೆ ಒಟ್ಟಾರೆ ಶೇ.17 ಹಾಗೂ ಪರಿಶಿಷ್ಟಟ ವರ್ಗಗಳಿಗೆ ಶೇ. 7ರಷ್ಟು ಮೀಸಲಾತಿಯನ್ನು ನೀಡಬೇಕು ಒತ್ತಾಯಿಸಿದರು. ಚುನಾವಣಾ ಪೂರ್ವದಲ್ಲಿ ಒಳಮೀಸಲಾತಿ ಜಾತಿಗೆ ತರುವುದಾಗಿ ಹೇಳಿಕೊಂಡು ಅಧಿಕಾರಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರಕಾರ ನ್ಯಾ. ನಾಗಮೋಹನ್ ದಾಸ್ ಅವರಿಂದ ಪ್ರತ್ಯೇಕ ಸರ್ವೆ ಮಾಡಿಸಿ, ಎಲ್ಲ ಗೊಂದಲಕ್ಕೆ ಕಾರಣವಾಗಿದೆ. ದಲಿತ ಮುಖ್ಯಮಂತ್ರಿ ಮುನ್ನಲೆಗೆ ಬರುತ್ತಿದ್ದಂತೆಯೇ ಎಡ-ಬಲ ಸಮುದಾಯಗಳನ್ನು ಬಡಿದಾಟಕ್ಕೆ ಬಿಟ್ಟಿದೆ. ತಕ್ಷಣ ಒಳಮೀಸಲಾತಿ ಜಾರಿ ಆಗಬೇಕು ಹಾಗೂ ರೋಸ್ಟರ್ ಬಿಂದು ಪರಿಷ್ಕರಿಸಿ, ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ. 1ರಷ್ಟು ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.



ಮುಖಂಡ ಡಾ. ಹರಿರಾಮ್ ಮಾತನಾಡಿ, ಸಿವಿಲ್ ನೇಮಕಾತಿಗಾಗಿ ಪ್ರಕಟಿಸಿರುವ ರೋಸ್ಟರ್ ಬಿಂದುಗಳನ್ನು ಪರಿಷ್ಕರಿಸಿ, ಸಮಾನವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿಯ ಎ, ಬಿ ಮತ್ತು ಸಿ ಪ್ರವರ್ಗಗಳಿಗೆ ಕ್ರಮವಾಗಿ 1, 2 ಮತ್ತು 3ನೇ ರೋಸ್ಟರ್ ಬಿಂದುಗಳನ್ನು ನಿಗದಿ ಮಾಡಿ, ಈ ಕೂಡಲೇ ಆದೇಶಿಸಬೇಕು. ಯಾವುದೇ ಸಮುದಾಯಗಳಿಗೂ ಅನ್ಯಾಯವಾಗದಂತೆಗೊಂದಲಕ್ಕೆತೆರೆಎಳೆಯಬೇಕೆಂದುಒತ್ತಾಯಿಸಿದರು. ಅತಿ ಹೆಚ್ಚು ಹಿಂದುಳಿದ ಅಲೆಮಾರಿ ಸಮುದಾಯಗಳನ್ನು ಕಡಿಮೆ ಹಿಂದುಳಿದ ಸಮುದಾಯಗಳೊಂದಿಗೆ ಜೋಡಿಸಿರುವ ಸರಕಾರದ ನಡೆ ತಪ್ಪು. ಅರೆ ಅಲೆಮಾರಿ ಸಮುದಾಯಗಳನ್ನು ಈ ಗುಂಪಿನಿಂದ ಪ್ರತ್ಯೇಕಿಸಿ ಶೇ 1 ಪ್ರತ್ಯೇಕ ಮೀಸಲಾತಿ ಜಾರಿ ಮಾಡಬೇಕೆಂದು ಹಾಗೂ ಖಾಸಗೀಕರಣದಲ್ಲೂ ಮೀಸಲಾತಿ ಜಾರಿಗೆ ಬರಬೇಕೆಂದು ಆಗ್ರಹಿಸಿದರು.

ಹಿರಿಯ ಸಾಹಿತಿ ಚಂಪಾ ಶಿವಣ್ಣ ನಿಧನ



ಮೈಸೂರು: ಮೈಸೂರಿನ ಕವಯಿತ್ರಿ, ಸಾಹಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ ಪುರಸ್ಕೃತರಾದ ಚಂಪಾ ಶಿವಣ್ಣ (71) ಅನಾರೋಗ್ಯದ ಕಾರಣದಿಂದ ಇಂದು ಬೆಳಗ್ಗೆ ನಿಧನ ಹೊಂದಿದ್ದಾರೆ ಅವರು ಪುತ್ರಿ, ಕವಯಿತ್ರಿ ಶಿವರಂಜಿನಿ, ಅಳಿಯ ಪ್ರಹ್ಲಾದ ರಾವ್, ಮೊಮ್ಮಗ ಪ್ರಥಮ್, ಅಪಾರ ಬಂಧು, ಬಳಗ ಹಾಗೂ ಸಾಹಿತ್ಯಾಭಿಮಾನಿಗಳನ್ನು ಅಗಲಿದ್ದಾರೆ. ಮೃತರ ಅಂತಿಮ ದರ್ಶನವನ್ನು ಶನಿವಾರ ಮಧ್ಯಾಹ್ನ 12 ಗಂಟೆಯವರೆಗೆ ಅವರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಪತ್ರಿಕೆಗಳ ಸಂಪಾದಕರಾಗಿದ್ದ ಆಗಿದ್ದ ದಿವಂಗತ ಎಂ.ಆರ್. ಶಿವಣ್ಣನವರ ಧರ್ಮಪತ್ನಿಯವರಾದ ಚಂಪಾರವರ ನಿಧನ ಕನ್ನಡ ಕಾವ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ.ನಿಂಗರಾಜೇಗೌಡ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಜ್ಯಮಟ್ಟದ ವರ್ಧಿನಿ ಲಾಂಛನ ಅನಾವರಣ ಕಾರ್ಯಕ್ರಮ

ಸ್ಪರ್ಧಾ ಮನೋಭಾವದಿಂದ ಗುರಿ ಸಾಧ್ಯ

ಮೈಸೂರು: ಸ್ಪರ್ಧಾ ಮನೋಭಾವದಿಂದ ಗುರಿ ಸಾಧಿಸಲು ಸಾಧ್ಯ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಹೇಳಿದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕಲಾ ವಿಭಾಗದ ವತಿಯಿಂದ ರಾಜ್ಯ ಮಟ್ಟದ ವರ್ಧಿನಿ 2026 ಲಾಂಛನ ಅನಾವರಣ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಕಾಲೇಜಿನ ಇಂತಹ ವೇದಿಕೆಗಳಲ್ಲಿ ಭಾಗವಹಿಸುವಂಥವರು ಭವಿಷ್ಯದಲ್ಲಿ ಬೆಳವಣಿಗೆ ಸಾಧಿಸುತ್ತಾರೆ. ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳು ಬಹಳ ಮುಖ್ಯವಾಗಿದೆ. ವರ್ಧಿನಿಯಲ್ಲಿನ ಎಲ್ಲಾ ಸ್ಪರ್ಧೆಗಳ ಕಾರ್ಯಕ್ರಮಗಳು ಯಶಸ್ವಿಯಾಗಲಿ ಎಂದು ತಿಳಿಸಿದರು. ವಿದ್ಯಾರ್ಥಿಗಳು ಸತತ ಅಧ್ಯಯನದಲ್ಲಿ ತೊಡಗಿಸಿಕೊಂಡು ಉತ್ತಮ ದಾರಿಯಲ್ಲಿ ಸಾಗಿ ಜೀವನದಲ್ಲಿ ಗುರಿಯನ್ನು ಸಾಧಿಸಿರಿ ಎಂದರು.

ಲಾಂಛನ ಅನಾವರಣಗೊಳಿಸಿದ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕಲಾವಿದ ಮಿಮಿಕ್ರಿ ಗೋಪಾಲ್ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾ ಸರಸ್ವತಿ, ಕಲಾ ಸರಸ್ವತಿಯನ್ನು ಆರಾಧಿಸ ಬೇಕು. ಸಮಾಜದ ವಿವಿಧ ರಂಗಗಳಲ್ಲಿ ಹೆಣ್ಣು ಮಕ್ಕಳು ಸಕ್ರಿಯವಾಗಿ ತೊಡಗಿಸಿಕೊಂಡು ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು. ಸದೃಢ ಆರೋಗ್ಯ ಹೊಂದಲು ಯೋಗ ಮತ್ತು ವ್ಯಾಯಾಮಗಳು ಅವಶ್ಯಕ ಎಂದು ತಿಳಿಸಿಕೊಟ್ಟರು.



ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿನ್ನೆಲೆ ಗಾಯಕಿ ಕು. ಲಹರಿ ಮಹೇಶ್ ಮಾತನಾಡಿ, ತಾನು ಮೈಸೂರು ಹುಡುಗಿ ಎನ್ನಲು ಹೆಮ್ಮೆಯಾಗುತ್ತದೆ ಎಂದರು. ನಾನು ನಿಮ್ಮ ಕಾಲೇಜಿಗೆ ಅತಿಥಿಯಾಗಿ ಬಂದಿರುವುದು ಹೆಚ್ಚಿನ ಸಂತೋಷ ನೀಡಿದೆ. ಎಲ್ಲರಿಗೂವಿಶ್ವಮಹಿಳಾದಿನಾಚರಣೆಯಶುಭಾಶಯಗಳನ್ನು ತಿಳಿಸಿ, ಸಿನಿಮಾದ ಹಾಡುಗಳನ್ನು ಹಾಡಿ ರಂಜಿಸಿದರು. ಇದೇ ವೇಳೆ ಫೆಸ್ಟ್‌ನ ವಿವಿಧ ಸ್ಪರ್ಧಾ ಕಾರ್ಯಕ್ರಮಗಳ ಲಾಂಛನಗಳನ್ನೂ ಅನಾವರಣಗೊಳಿಸಲಾಯಿತು. ಭಾವ ನವೀನ, ರಾಗ ನಿನಾದ, ವರ್ಣಚಿತ್ತಾರ, ರಸಪಾಕ, ವಾಗ್ವಿಲಾಸ, ಮತ್ತು ಹೆಜ್ಜೆ ಗೆಜ್ಜೆ ಅನಾವರಣಗೊಳಿಸಿದರು. ವೇದಿಕೆಯಲ್ಲಿ ಪ್ರಾಂಶು ಪಾಲ ಡಾ. ರೇಚಣ್ಣ, ಸಂಚಾಲಕರಾದ ಹೊನ್ನಶೆಟ್ಟಿ ಉಪಸ್ಥಿತರಿದ್ದರು. ಕಾಲೇಜಿನ ಸಿಬ್ಬಂದಿ ವರ್ಗದ ಸದಸ್ಯರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ. ಪ್ರಸನ್ನ ಹುಟ್ಟುಹಬ್ಬ ಆಚರಣೆ

ಜನರ ಪ್ರೀತಿಗೆ ಆಭಾರಿಯಾಗಿರುತ್ತೇನೆ: ಪ್ರಸನ್ನ

ಪಿರಿಯಾಪಟ್ಟಣ: ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ಕೆ. ಮಹದೇವ್ ರವರ ಪುತ್ರ ಪಿ.ಎಂ. ಪ್ರಸನ್ನ ರವರ ಹುಟ್ಟುಹಬ್ಬವನ್ನು ವಿವಿಧ ಸಾಮಾಜಿಕ ಕಾರ್ಯಗಳ ಮೂಲಕ ಪಿ.ಎಂ.ಪ್ರಸನ್ನ ಅಭಿಮಾನಿ ಬಳಗ, ಜೆಡಿಎಸ್ ಪಕ್ಷದ ಕಾರ್ಯಕರ್ತರು ಆಚರಿಸಿದರು.

ಪಟ್ಟಣದ ಶ್ರೀ ಮಸಣಿಕಮ್ಮ ದೇವಸ್ಥಾನದಲ್ಲಿ ಹುಟ್ಟು ಹಬ್ಬದ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿದ ಕಾರ್ಯಕರ್ತರು ನಂತರ ಮಹಾಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಪಿ.ಎಂ ಪ್ರಸನ್ನರಿಂದ ಕೇಕ್ ಕತ್ತರಿಸಿ ಸನ್ಮಾನಿಸಿ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಪಿಎಂ ಪ್ರಸನ್ನ ಮಾತನಾಡಿ, ನಾನು ಮೈಮುಲ್ ಅಧ್ಯಕ್ಷನಾಗಿ ತಾಲೂಕಿನ ಜನತೆಯ ಸೇವೆಯನ್ನು ಮಾಡಿದ್ದೇನೆ ಅದರಂತೆಯೇ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಂಘದ ಮೂಲಕ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸುವಲ್ಲಿ ಶ್ರಮಿಸಿದ್ದೇನೆ. ತಾಲೂಕಿನ ಜನತೆ ನನ್ನ ಮೇಲೆ ಸಾಕಷ್ಟು ಅಭಿಮಾನವನ್ನು ಹೊಂದಿರುವುದಕ್ಕೆ ನಾನು ಅಭಾರಿಯಾಗಿದ್ದೇನೆ ಎಂದರು.



ತಂಬಾಕು ಕಾಫ್ ಕಮಿಟಿ ಮಾಜಿ ಅಧ್ಯಕ್ಷ ಹುಣಸೆಕುಪ್ಪೆ ಚಂದ್ರೇಗೌಡ ಮಾತನಾಡಿ ಪಿ ಎಂ ಪ್ರಸನ್ನಣ್ಣರವರು ಮೈಮುಲ್ ಅಧ್ಯಕ್ಷರಾಗಿ ಪಿರಿಯಾಪಟ್ಟಣ ಹಾಗೂ ಮೈಸೂರು ಜಿಲ್ಲೆಯಲ್ಲಿ ಹಲವಾರು ಜನಪರ ಸೇವೆಯನ್ನು ಮಾಡಿದ್ದಾರೆ ಹಾಗೂ ತಾಲೂಕಿನಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದಾರೆ ಅವರ ಅಭಿಮಾನಿಗಳು ಇಂದು ಅವರ ಹುಟ್ಟುಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಣೆ ಮಾಡುತ್ತಿದ್ದಾರೆ ಪಿಎಂ ಪ್ರಸನ್ನನವರರವರಿಗೆ ಪಿರಿಯಾಪಟ್ಟಣದ ಗ್ರಾಮದೇವತೆಗಳಾದ ಮಸಭಣಿಕಮ್ಮ, ಕನ್ನಂಬಾಡಿಯಮ್ಮ ಹಾಗೂ ತಾಯಿ ಚಾಮುಂಡೇಶ್ವರಿ ಆಶೀರ್ವಾದ ಅವರ ಮೇಲೆ ಸದಾ ಇರಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ ಎಂದು ಹೇಳಿದರು

ಈ ಸಂದರ್ಭದಲ್ಲಿ ಪ್ರಸನ್ನ ರವರ ಪತ್ನಿ ಅನಿತಾ ಸಂಬಂಧಿಕರಾದ ಕೆ. ಸುರೇಶ್, ಶಿವಣ್ಣ, ಸೀನಪ್ಪ, ಎಂ ಡಿ ಸಿ ಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಸಿ.ಎನ್. ರವಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಣ್ಣ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಐಲಾಪುರ ರಾಮು, ಎ.ಟಿ. ರಂಗಸ್ವಾಮಿ, ಮುಖಂಡರಾದ ಅಪೂರ್ವ ಮೋಹನ್, ಪೆಪ್ಸಿ ಕುಮಾರ್, ಕುಮಾರ್ ಕಂಪಲಾಪುರ, ತಿರುಮಲಪುರ ರಾಜೇಗೌಡ ಹುಣಸೆಕುಪ್ಪೆ ಚಂದ್ರೇಗೌಡ, ತಂಬಾಕು ಕಾಫ್ ಕಮಿಟಿ ಸದಸ್ಯ ಮಲ್ಲಿನಾಥಪುರ ಗಣೇಶ್, ವಕೀಲ ಕೆ ಡಿ ಸಂದೀಪ್, ಜಗದೀಶ್, ಬಸಲಾಪುರ ಪುಟ್ಟೇಗೌಡ ಇತರರಿದ್ದರು.

ಕಿರುಸುದ್ದಿ

ಹಿರಿಯ ಪತ್ರಕರ್ತರಿಗೆ ನುಡಿ ನಮನ ಕಾರ್ಯಕ್ರಮ ಇಂದು

ಮೈಸೂರು: ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಇತ್ತೀಚೆಗಷ್ಟೇ ನಿಧನರಾದ ಹಿರಿಯ ಪತ್ರಕರ್ತರಾದ ಶ್ರೀ ಕೆ.ಜೆ. ಕುಮಾರ್ ಮತ್ತು ಶ್ರೀ ಕೆ.ವಿ.ಶ್ರೀನಿವಾಸನ್ ಅವರಿಗೆ ಮಾ. 21 ರಂದು ಬೆಳಗ್ಗೆ 10.30ಕ್ಕೆ ಪತ್ರಕರ್ತರ ಭವನದಲ್ಲಿ ನುಡು ನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಫೆ. 06 ರಂದು ನಿಧನರಾದ ಪತ್ರಕರ್ತರ ವಲಯದಲ್ಲಿ ಬ್ರದರ್ ಎಂದೆ ಪರಿಚಿತರಾಗಿದ್ದ ದಿ. ಕೆ.ವಿ. ಶ್ರೀನಿವಾಸನ್ ಅವರಿಗೆ 81 ವರ್ಷ ವಯಸ್ಸಾಗಿತ್ತು. ಸುದೀರ್ಘಕಾಲ ಪತ್ರಿಕೋದ್ಯಮದ ಸೇವೆಯ ನಂತರ ವಿಶ್ರಾಂತ ಜೀವನ ನಡೆಸುತ್ತಿದ್ದ ಶ್ರೀನಿವಾಸನ್, ಹುಣಸೂರು ತಾಲೂಕಿನ ಕಲ್ಕುಣಿಕೆಯ ಸ್ವಗೃಹದಲ್ಲಿ ವಯೋಸಹಜ ಕಾಯಿಲೆಯಿಂದ ನಮ್ಮನ್ನು ಅಗಲಿದ್ದಾರೆ. ಮಾ.11 ರಂದು ತೀವ್ರ ಹೃದಯಾಘಾತದಿಂದ ನಿಧನರಾದ ದಿ.ಕೆ.ಜೆ. ಕುಮಾರ್ ಅವರು ನಾಲ್ಕು ದಶಕಗಳಿಗೂ ಮಿಗಿಲಾಗಿ ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಸುಧಾ, ರೂಪತಾರ, ವಿಜಯ ಚಿತ್ರ ಮತ್ತು ಹೊಸ ದಿಗಂತ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ವಿಜಯ ದಿನಪತ್ರಿಕೆಯನ್ನು ಕೆಲ ಕಾಲ ಮುನ್ನಡೆಸಿದ್ದರು. ಕನ್ನಡ ಚಿತ್ರರಂಗದ ಮೇರು ನಟರಾದ ಡಾ. ರಾಜ್‌ಕುಮಾರ್, ಡಾ. ವಿಷ್ಣುವರ್ಧನ್, ರೆಬಲ್ ಸ್ಟಾರ್ ಅಂಬರೀಷ್ ಹಾಗೂ ಸೂಪರ್ ಸ್ಟಾರ್ ರಜನಿಕಾಂತ್ ಅಂತಹ ದಿಗ್ಗಜರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದ ಕೆ.ಜೆ. ಕುಮಾರ್ ಸಿನಿ ಬರಹಗಳಿಗೆ ಹೆಸರುವಾಸಿಯಾಗಿದ್ದರು. ಅಲ್ಲದೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯರಾಗಿದ್ದರು. ಈ ಇಬ್ಬರು ಮಹನಿಯರಿಗೆ ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಮೈಸೂರು: ಸಾತಗಳ್ಳಿಯ ನಿವಾಸಿ ಮೊಹಮ್ಮದ್ ಜಾಕೀರ್ (25 ವರ್ಷ) ಎಂಬುವವರು ಕುಟುಂಬ ಕಲಹದ ಹಿನ್ನೆಲೆಯಲ್ಲಿ ಮಾರ್ಚ್ 15 ರಂದು ನಾಪತ್ತೆಯಾಗಿದ್ದಾರೆ. ಈ ಬಗ್ಗೆ ಮೈಸೂರು ದಕ್ಷಿಣ ವಲಯದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5.4 ಅಡಿ ಎತ್ತರ, ಸಾಧಾರಣ ಮೈ ಕಟ್ಟು, ಗೋಧಿ ಮೈಬಣ್ಣ. ಕನ್ನಡ ಮತ್ತು ಹಿಂದಿ ಉರ್ದು ಮಾತಾನಾಡುವ ಮೊಹಮ್ಮದ್ ಜಾಕೀರ್, ಮನೆಯಿಂದ ಹೋಗಬೇಕಾದರೆ ಬ್ಲೂ ಬಣ್ಣದ ಪ್ಯಾಂಟ್. ಕ್ರಿಮ್ ಬಣ್ಣದ ಟೀ ಶರ್ಟ್ ಅನ್ನು ಧರಿಸಿರುತ್ತಾನೆ. ಕಾಣೆಯಾಗಿರುವ ವ್ಯಕ್ತಿಯ ಬಗ್ಗೆ ವಿವರ ಅಥವಾ ಮಾಹಿತಿ ತಿಳಿದು ಬಂದಲ್ಲಿ ಮೈಸೂರು ಸೌತ್ ಪೊಲೀಸ್ ಠಾಣೆಯ ದೂ ಸಂ: (0821) 2444955, 9480805045 ನ್ನು ಸಂಪರ್ಕಿಸಬಹುದಾಗಿದೆ ಎಂದು ದಕ್ಷಿಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 220/66/11 ಕೆ.ವಿ ಹೂಟಗಳ್ಳಿ ಸ್ವೀಕರಣಾ ಕೇಂದ್ರ 66/11 ಕೆ.ವಿ ಹೆಬ್ಬಾಳ್, 66/11 ಕೆ.ವಿ ಮೇಟಗಳ್ಳಿ ಮತ್ತು 66/11 ಕೆ.ವಿ ಉದ್ಬೂರು ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಕೈಗೊಳ್ಳಲಾಗಿದ್ದು, ಇದರಿಂದ ನಿಮಿತ್ತ ಮಾರ್ಚ್ 21 ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಆಟೋಮೋಟಿವ್ ಆಕ್ಸಿಲ್ ಸುತ್ತಮುತ್ತ, ರಾಣೆ ಮದ್ರಾಸ್ ಪಕ್ಕದ ರಸ್ತೆ, ಹೆಚ್.ಟಿ. ರೆಕೆಟ್ ಬೆನ್‌ಸರ್, ಕೂರ್ಗಳ್ಳಿ ಕೈಗಾರಿಕ ಪ್ರದೇಶ, ಹೂಟಗಳ್ಳಿ ಕೈಗಾರಿಕ ಪ್ರದೇಶ, ಹಳೇ ಲೂನಾರ್ಸ್, ತಿಯೋರೆಮ್ಸ್, ಸ್ಟೆಕ್ಕಾ ಪೈಪ್ಸ್, ವರ್ಷ ಕೇಬಲ್, ಎಲ್ ಟಿ, ವಿಪ್ರೋ ಲೈಟ್ಸ್, ಶ್ರೀರಾಮ್ ಇಂಜಿನಿಯರ್ಸ್, ರಜತ್ ಬ್ಯಾಟರಿ, ಆರ್.ಪಿ.ಜಿ ಕೇಬಲ್, ಜಿಮ್‌ಕೋ, ಸೈ, ಎಂಪ್ರೋ ಕಾಂಕ್ರಿಟ್, ಡ್ಯಾಮ್‌ಡನ್ ಆಪಾರ್ಟ್‌ಮೆಂಟ್, ಹಿನಕಲ್ ಆಶ್ರಯ ಯೋಜನೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಹೆಬ್ಬಾಳ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಕುಂಬಾರ್‌ಕೊಪ್ಪಲು, ಟೋಲ್ ಗೇಟ್, ವಾಣಿವಿಲಾಸ ಲೇಔಟ್, ಮಹದೇಶ್ವರ ಬಡಾವಣೆ, ಸುಭಾಷ್ ನಗರ, ಸೂರ್ಯ ಬೇಕರಿ, ವಿಜಯನಗರ, ರೈಲ್ವೆ ಲೇಔಟ್, ಅಭಿಷೇಕ್ ವೃತ್ತ, ಮಾದೇಗೌಡ ವೃತ್ತ, ಎಂ.ಜಿ.ಕೊಪ್ಪಲು, ಹೊರ ವರ್ತುಲ ರಸ್ತೆ, ಹಂಪಿ ವೃತ್ತ, ಸಂಗಮ್ ವೃತ್ತ, ಅಜ್ಜಿಬ್ಬಿಟಜಢ ಸುತ್ತ ಮುತ್ತ, ಕೆ.ಐ.ಎ.ಡಿ.ಬಿ ಕೈಗಾರಿಕಾ ಹೌಸಿಂಗ್ ಲೇಔಟ್, ಎಲ್‌ಟಿ ಪ್ಯಾಕ್ಟರಿ ಸುತ್ತ ಮುತ್ತಲಿನ ಪ್ರದೇಶ, ರಾಣೆ ಮದ್ರಾಸ್ ಸುತ್ತ ಮುತ್ತಲಿನ ಪ್ರದೇಶಗಳು ಹಾಗೂ ಜೆ.ಕೆ ಟೈರ್ಸ್, ಮೈಸೂರು ಸ್ಟೀಲ್ ಇ.ಹೆಚ್.ಟಿ ಬಳಕೆದಾರರಿಗೆ. ಮೇಟಗಳ್ಳಿ ವ್ಯಾಪ್ತಿಯ ಹೆಬ್ಬಾಳ್ ಕೈಗಾರಿಕ ಪ್ರದೇಶ, ಮೇಟಗಳ್ಳಿ, ಬೃಂದಾವನ ಬಡಾವಣೆ, ಲೋಕನಾಯಕ ನಗರ, ಜಯದೇವ ನಗರ, ಬಿ.ಎಂ.ಶ್ರೀನಗರ, ಹೆಬ್ಬಾಳ್ ಹೊರ ವರ್ತುಲ ರಸ್ತೆ, ಊಅಐಊಂ ಪ್ಲಾಂಟ್ ಸುತ್ತಮುತ್ತ, ಹೆಬ್ಬಾಳ್ 1ನೇ, 2ನೇ ಹಾಗೂ 3ನೇ ಹಂತ, ಸುಬ್ರಹ್ಮಣ್ಯನಗರ, ಬಸವನಗುಡಿ, ಎಸ್.ಬಿ.ಎಂ ಬ್ಯಾಂಕ್ ಸುತ್ತ ಮುತ್ತ, ಹೆಬ್ಬಾಳ್ ಕಾಲೋನಿ, ಹೆಬ್ಬಾಳ್ ಮುಖ್ಯರಸ್ತೆ, ಲಕ್ಷ್ಮಿಕಾಂತ ನಗರ, ಸಂಕ್ರಾಂತಿ ವೃತ್ತ, ಗೋಲ್ಡನ್ ಬೇಕರಿ, ಕೆಐಎಡಿಬಿ ಲೇಔಟ್, ಮಯೂರ ವೃತ್ತ, ಕಾವೇರಿ ವೃತ್ತ, ಮಿಲಿಟರಿ ಕ್ವಾಟ್ರಸ್, ಆರ್.ಬಿ.ಐ, ವಿಕ್ರಾಂತ್ ಮೇನ್ ಪ್ಲಾಂಟ್ ಪ್ರದೇಶಗಳಲ್ಲಿ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೊಳ್ಳೇಗಾಲದ ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿಮಾನಿ ಬಳಗ ವತಿಯಿಂದ ರಂಜಾನ್ ಹಬ್ಬದ ಪ್ರಯುಕ್ತ ಆಹಾರ ಕಿಟ್ ವಿತರಣೆ ಮಾಡಲಾಯಿತು.

ಲಿಂಗ ಸಮನ್ವಯತಾ ಮೇಳ

ಚಾಮರಾಜನಗರ: ತಾಲೂಕಿನ ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಲಿಂಗಸಮನ್ವಯತಾ ಮೇಳ ಗಮನ ಸೆಳೆಯಿತು.

ಕಾಲೇಜಿನಲ್ಲಿ ಕಾಲೇಜು ಮತ್ತು ಸಾವಿತ್ರಿಬಾಯಿಫುಲೆ ತಂಡದವರ ನೇತೃತ್ವದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಆಯೋಜಿಸಿದ ಲಿಂಗಸಮನ್ವಯತಾ ಮೇಳದಲ್ಲಿ ಲಿಂಗತಾರತಮ್ಯ ಕುರಿತು ವಿಡಿಯೋ ಚಿತ್ರೀಕರಣ, ಪೋಸ್ಟರ್ ಪ್ರದರ್ಶನ ಮೂಲಕ ಅರಿವು ಮೂಡಿಸಲಾಯಿತು. ಅಜೀಂಪ್ರೇಮ್ ಜಿ ಪ್ರತಿಷ್ಠಾನ ಜಿಲ್ಲಾ ಸಂಯೋಜಕಿ ಎನ್. ಸೌಮ್ಯ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬರೂ ಹೆಣ್ಣು ಮತ್ತು ಗಂಡು ಮಗುವನ್ನು ಸಮಾನವಾಗಿ ಕಂಡಲ್ಲಿ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಯಳಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಉಪನ್ಯಾಸ ಶ್ರೇತ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೇವರಾಜು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪಿಡಿಒ ಮಾನಸ, ಉಪನ್ಯಾಸಕರಾದ ನಂಜುಂಡಯ್ಯ, ಡಾ.ರಮೇಶ್ ಬಾಬು, ರಂಗಸ್ವಾಮಿ, ಯಶೋಧದೇವಿ, ಭಾಗ್ಯ, ನೇತ್ರಾವತಿ, ಪೂರ್ಣಿಕ, ಕುಸುಮ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಚಾಮರಾಜನಗರ ತಾಲೂಕಿನ ಕಾಲೇಜಿನಲ್ಲಿ ಕಾಲೇಜು, ಸಾವಿತ್ರಿಬಾಯಿಫುಲೆ ತಂಡದ ನೇತೃತ್ವದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಲಿಂಗಸಮನ್ವಯತಾ ಮೇಳ ನಡೆಯಿತು.

ಚಾಮರಾಜನಗರದಲ್ಲಿ ಯುಗಾದಿ ಪ್ರಯುಕ್ತ ಭಗವಾಧ್ವಜಾರೋಹಣ

ಸನಾತನ ಧರ್ಮದ ಸಂಕೇತ



ಚಾಮರಾಜನಗರ: ಯುಗಾದಿ ಹಿಂದುಗಳ ಹೊಸ ವರ್ಷಾರಂಭವಾಗಿದ್ದು, ಯುಗಾದಿ ಅಂದರೆ ಚೈತ್ರ ಶುಕ್ಲ ಪ್ರತಿಪದೆ ಅಂದರೆ ಹಿಂದೂಗಳ ಹೊಸ ವರ್ಷಾರಂಭದ ದಿನವಾಗಿದೆ. ಪ್ರತಿವರ್ಷದಂತೆ ಈ ಬಾರಿಯೂ ಶ್ರೀಮಾರಿಗುಡಿ ಸೇವಾ ಸಮಿತಿ ವತಿಯಿಂದ ಭಗವಾಧ್ವಜಾರೋಹಣವನ್ನು ಮಾಡುತ್ತಿರುವುದು ಒಳ್ಳೆಯ ಕೆಲಸವಾಗಿದೆ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ಚೈತ್ರ ಮಾಸದ ಶುಕ್ಲ ಪಕ್ಷದ ಮೊದಲ ದಿನವಾದ ಯುಗಾದಿ ಹಬ್ಬದ ಪ್ರಯುಕ್ತ ಶ್ರೀಮಾರಿಗುಡಿ ಸೇವಾ ಸಮಿತಿ ವತಿಯಿಂದ ಭಗವಾಧ್ವಜಾರೋಹಣ ಮಾಡಲಾಯಿತು. ನಗರದ ಮಾರಿಗುಡಿ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತಮಾತೆ, ಶ್ರೀ ಮಹರ್ಷಿ ವಾಲ್ಮೀಕಿ, ಶೀರಾಮ, ಫೋಟೋ ಇಟ್ಟು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು ನಂತರ ಭಗವಾಧ್ವಜಾರೋಹಣ ನೆರವೇರಿಸಲಾಯಿತು. ತದ ನಂತರ ಅನ್ನಸಂತರ್ಪಣೆ ಮಾಡಲಾಯಿತು.

ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ಕೇಂದ್ರ ಪರಿಹಾರಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಭಗವಾ ಅಥವಾ ಕೇಸರಿ ಧ್ವಜವು ಸನಾತನ ಧರ್ಮದ ಪವಿತ್ರ ಸಂಕೇತವಾಗಿದ್ದು, ಶಕ್ತಿ, ಜ್ಞಾನ ಮತ್ತು ತ್ಯಾಗವನ್ನು ಪ್ರತಿನಿಧಿಸುತ್ತದೆ. ಇದು ಹಿಂದು ಸಂಪ್ರದಾಯದಲ್ಲಿ ಭಕ್ತಿ ಮತ್ತು ಗೌರವದ ಸಂಕೇತವಾಗಿದೆ ಎಂದರು.

ಶ್ರೀಮಾರಿಗುಡಿ ಸೇವಾ ಸಮಿತಿಯ ಶಿವುವಿರಾಟ್ ಮಾತನಾಡಿ, ಯುಗಾದಿಯು ಹಿಂದು ಪಂಚಾಂಗದ ಪ್ರಕಾರ ಹೊಸ ವರ್ಷದ ಆರಂಭವಾಗಿದ್ದು, ಚೈತ್ರ ಮಾಸದ ಶುಕ್ಲ ಪಕ್ಷದ ಮೊದಲ ದಿನದಂದು ಆಚರಿಸಲಾಗುತ್ತದೆ. ಇದು ಬ್ರಹ್ಮನು ಸೃಷ್ಟಿಯನ್ನು ಆರಂಭಿಸಿದ ದಿನವೆಂದು ನಂಬಲಾಗಿದೆ ಬೇವು-ಬೆಲ್ಲ ಸವಿಯುವ ಮೂಲಕ ಜೀವನದ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಪಾಠ, ಹೊಸ ಆಶೆ, ಸಮೃದ್ಧಿ ಮತ್ತು ವಸಂತ ಋತುವಿನ ಆಗಮನವನ್ನು ಈ ಹಬ್ಬವು ಸಂಕೇತಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶನಾಯಕ, ಬಿಜೆಪಿ ಎಸ್ ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್, ಆರ್.ಸುಂದರ್, ಎಪಿಎಂಸಿ ನಿರ್ದೇಶಕ ವೆಂಕಟರಾವ್ ಸಾಠೆ, ರಾಮಸಮುದ್ರ ಶಿವು ಮಾತನಾಡಿದರು. ಮಾರ್ಕೆಟ್ ಕುಮಾರ್, ಚಂದ್ರಶೇಖರ್, ಕಿರಣ್, ವೆಂಕಟೇಶ್ ನಾಯಕ, ಆನಂದ್ ಭಗೀರಥ್, ಭಜರಂಗದಳ ಮುಖಂಡ ರಮೇಶ್, ಸತೀಶ್, ಮಾಜಿ ಶಿವಣ್ಣ, ಬಸವಣ್ಣ, ಕೃಷ್ಣ, ಬಂಗಾರನಾಯಕ, ರಾಹುಲ್ ಪಾಷಿ, ರಮೇಶ್, ರಾಮಣ್ಣ, ಪುಟ್ಟಸ್ವಾಮಿ ನಾಯಕ, ನಾಗೇಂದ್ರ, ಹರೀಶ್, ಎಲ್. ಪೃಥ್ವಿ, ಮಣಿ, ಮಹೇಶ್, ನಾಗೇಂದ್ರ, ಬಂಗಾರನಾಯಕ, ಶಿವಣ್ಣ, ಪ್ರವೀಣ್, ಪ್ರಸನ್ನ, ಮಹೇಶ್, ಶ್ರೀಕಂಠ, ಅರ್ಜುನ, ಕೃಷ್ಣ, ಅಶ್ವಿನ್ ಇತರರು ಹಾಜರಿದ್ದರು.

ಶಕ್ತಿದೇವತೆ ಚಿಕ್ಕದೇವಮ್ಮ ಜಾತ್ರಾ ಮಹೋತ್ಸವ

ಸರಗೂರು: ತಾಲೂಕಿನ ಶಕ್ತಿದೇವತೆ ಶ್ರೀ ಚಿಕ್ಕದೇವಮ್ಮನ ಬೆಟ್ಟದಲ್ಲಿ ಯುಗಾದಿ ಅಂಗವಾಗಿ ಗುರುವಾರ ನಡೆದ ಚಿಕ್ಕದೇವಮ್ಮನ ಜಾತ್ರಾ ಮಹೋತ್ಸವ, ಕಪಿಲ ನದಿ ದಡದ ಹಾಲುಗಡ, ಇಟ್ನ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜುರುಗಿತು. ಸಹಸ್ರಾರು ಭಕ್ತರು ಸಾಕ್ಷಿಯಾದರು.

ಚಂದ್ರಮಾನ ಯುಗಾದಿ ಹಬ್ಬದ ದಿನದಂದು ಬೆಳಗ್ಗೆಯೇ ದೇವತೆಗೆ ವಿಶೇಷ ಪೂಜೆ ಸಲ್ಲಿಸಿ, ಶ್ರೀ ಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರ ಉತ್ಸವ ಮೂರ್ತಿಯನ್ನು ಕರೆತಂದು ನದಿ ಬಳಿಯ ಹಾಲುಗಡುವಿನ ಜಪದಕಟ್ಟೆಯಲ್ಲಿ ಕೂರಿಸಿ, ವಿಶೇಷ ಪೂಜೆಸಲ್ಲಿಸಲಾಯಿತು. ಜಪದಕಟ್ಟೆಯಲ್ಲಿ ಕೂರಿಸಿದ ಬಳಿಕ ದೇವರಿಗೆ ಹೋಮ-ಹವನಗಳು ನಡೆದವು. ನಂತರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನಪಡೆದರು. ವಾದ್ಯಗೋಷ್ಠಿಗಳು ಮೊಳಗಿದವು. ಸುಮಾರು 10ಕ್ಕೂ ಹೆಚ್ಚು ಸತ್ತಿಗೆಗಳು ಮೆರವಣಿಗೆ ನಡೆಸಲಾ ಯಿತು. ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಮಾಡಲಾದ ಹರಕೆಯನ್ನು ತೀರಿಸಿದರು. ಸರಗೂರಿನ ಪೊಲೀಸ್ ಬೀಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಭದ್ರತೆಗಾಗಿ ಸುಮಾರು 80ಕ್ಕೂ ಹೆಚ್ಚು ಪೊಲೀಸರನ್ನು ನೇಮಿಸಲಾಗಿತ್ತು. ಜಾತ್ರಾ ಸಮಿತಿಯಿಂದ ಜಾತ್ರಾವರಣದಲ್ಲಿ ಯಾವುದೇ ಪ್ರಾಣಿಬಲಿ ಮಾಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಜಾಗೃತಿ ಮೂಡಿಸಿದ್ದು, ದಯಾನಂದ ಸ್ವಾಮೀಜಿ ನೇತೃತ್ವದಲ್ಲಿ ಪ್ರಾಣಿಬಲಿ ಆಗದಂತೆ ತಡೆಹಿಡಿಯುವಲ್ಲಿ ಯಶಸ್ವಿಯಾದರು. ಮುಜರಾಯಿ ಇಲಾಖೆಯ ಇಒ ರಘು, ಪಾರುಪತ್ತೆದಾರ ಶಾಂತಿಮರ ಮಹದೇವಸ್ವಾಮಿ, ಬೆಟ್ಟದ ಅರ್ಚಕರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಹರಕೆ ಹೊತ್ತ ಭಕ್ತರು ತಲೆ ಮುಡಿ ಮಾಡಿಸಿದರು. ಅಂಗಡಿ ಮುಗ್ಗಟ್ಟುಗಳು ಇದ್ದವು. ಜಾತ್ರಾ ಮಹೋತ್ಸವಕ್ಕೆ ಸಾವಿರಾರು ಭಕ್ತರು ಆಗಮಿಸಿ ದೇವತೆ ದರ್ಶನ ಪಡೆದು ಮನೀತರಾದರು. ಜಾತ್ರಾ ಕಮಿಟಿ ಅಧ್ಯಕ್ಷ ದೊಡ್ಡವೀರನಾಯಕ, ಮಾಜಿ ಸದಸ್ಯ ಎನ್. ಬಸವನಾಯಕ, ವಿ.ಸಿದ್ದರಾಜು, ಬಿ.ಬಸವರಾಜು, ಜಯರಾಮ್, ಕಾಳಿಂಗನಾಯಕ, ಯಜಮಾನರಾದ ಲಿಂಗರಾಜ್, ಬಿ.ಬೆಟ್ಟನಾಯಕ, ಚಿನ್ನನಾಯಕ, ಐಬಿ ರವಿಕುಮಾರ್, ಬಿ.ರಾಮನಾಯಕ, ನಾಗೇಂದ್ರ, ಡೈರಿ ಬೆಟ್ಟನಾಯಕ, ಸಿದ್ದರಾಜು, ಚಾಮನಾಯಕ, ಟ್ರಸ್ಟ್ ಕಾರ್ಯದರ್ಶಿ ಸಣ್ಣಸ್ವಾಮಿನಾಯಕ, ಚಿಕ್ಕಣ್ಣ, ಸೋಮಣ್ಣ ಸೇರಿದಂತೆ ಇನ್ನಿತರರು ಪೂಜಾ ವಿಧಿವಿಧಾನ ಕಾರ್ಯಗಳಲ್ಲಿ ಭಾಗಿಯಾಗಿದ್ದರು. ಹಾಲುಗಡ ಜಾತ್ರಾ ಕಮಿಟಿ ಪದಾಧಿಕಾರಿಗಳು, ಬೆಟ್ಟದ ಸುತ್ತ-ಮುತ್ತಲಿನ ಗ್ರಾಮಸ್ಥರು ಸೇರಿದಂತೆ ರಾಜ್ಯದ ವಿವಿಧಡೆಯಿಂದ ಭಕ್ತರು ಭಾಗಿಯಾಗಿದ್ದರು.



ಏ.3ರಿಂದ ಜೆಎಸ್‌ಎಸ್ ಚಿತ್ರಕಲಾ ಶಿಬಿರ

ಮೈಸೂರು: ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಶಿಬಿರವನ್ನು ಏಪ್ರಿಲ್ 3 ರಿಂದ 25ರವರೆಗೆ ಮೈಸೂರಿನ ಜೆಎಸ್‌ಎಸ್ ಬಾಲಜಗತ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ಶಿಬಿರದ ಸಂಚಾಲಕ ಎಸ್.ಎಂ. ಜಂಬುಕೇಶ್ವರ ತಿಳಿಸಿದ್ದಾರೆ. 6ರಿಂದ 9 ವರ್ಷ, 10ರಿಂದ 13 ವರ್ಷ ಮತ್ತು 14ರಿಂದ 17 ವರ್ಷ ವಯಸ್ಸಿನ ಮಕ್ಕಳನ್ನು ಮೂರು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗದಲ್ಲೂ 30 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಶಿಬಿರದಲ್ಲಿ ನುರಿತ ಕಲಾವಿದರಿಂದ ಪ್ರಾತ್ಯಕ್ಷಿಕೆಯನ್ನು ಹಾಗೂ ನಿಸರ್ಗ ಚಿತ್ರ ರಚಿಸಲು ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಗುವುದು. ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಡ್ರಾಯಿಂಗ್ ಪೇಪರ್ ನೀಡಲಾಗುವುದು. ಪ್ರತಿದಿನ ಬೆಳಗ್ಗೆ 9.00ರಿಂದ ಮಧ್ಯಾಹ್ನ 1 ಗಂಟೆಯವರೆಗೆ ತರಗತಿಗಳು ನಡೆಯಲಿದ್ದು, 11.00 ರಿಂದ 11.30ರವರೆಗೆ ಬಿಡುವು ಕೊಡಲಾಗುವುದು. ಏಪ್ರೀಲ್ 25 ರಂದು ಮಕ್ಕಳು ರಚಿಸಿದ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗುವುದು.

ಮಳೆಗೆ ಮನೆಗೆ ಹಾನಿ: ಶಾಸಕ ಭೇಟಿ



ಚಾಮರಾಜನಗರ: ತಾಲೂಕಿನ ಕಟ್ನವಾಡಿ ಗ್ರಾಮದಲ್ಲಿ ಮರ, ವಿದ್ಯುತ್ ಕಂಬ ಬಿದ್ದು ಎರಡು ಮನೆಗಳು ತೀವ್ರ ಹಾನಿಯಾಗಿದ್ದು, ಸ್ಥಳಕ್ಕೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಕುಟುಂಬದವರಿಗೆ ಸ್ವಾಂತನ ಹೇಳಿ ವೈಯಕ್ತಿಕ ಪರಿಹಾರ ನೀಡಿ, ಸರ್ಕಾರದಿಂದ ಆಶ್ರಯ ಮನೆ ನಿರ್ಮಿಸಿಕೊಡುವ ಭರವಸೆ ನೀಡಿದರು. ಗ್ರಾಮದ ಚೆಲುವರಾಜು ಮನೆಗೆ ಮರಮೊಂದು ಬುಡಸಮೇತ ಬಿದ್ದು ಪರಿಣಾಮ ಮನೆ ಸಂಪೂರ್ಣವಾಗಿ ಹಾನಿ ಮಾಡಿದ್ದು. ಪಕ್ಕದಲ್ಲೇ ಅಂಬಿಕಾ ಅವರ ಮಳೆಗೆ ವಿದ್ಯುತ್ ಕಂಬ ಮುರಿದು ಬಿದ್ದು ಹಾನಿಯಾಗಿದೆ. ಮನೆಯಲ್ಲಿದ್ದವರಿಗೆ ಯಾವುದೇ ರೀತಿ ತೊಂದರೆಯಾಗಿಲ್ಲ. ಶಾಸಕ ಭೇಟಿ: ವಿಷಯ ತಿಳಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಗ್ರಾಮಕ್ಕೆ ಭೇಟಿ ಪರಿಶೀಲಿಸಿ, ಮನೆ ಹಾನಿಗೊಳಗಾದ ಚೆಲುವರಾಜು ಅವರಿಗೆ 10 ಸಾವಿರ, ಅಂಬಿಕಾ ಅವರಿಗೆ 5 ಸಾವಿರ ರೂ. ವೈಯುಕ್ತಿಕ ಪರಿಹಾರ ನೀಡಿದರು. ಅಧಿಕಾರಿಗಳೊಂದಿಗೆ ಮಾತನಾಡಿ, ಸರ್ಕಾರದಿಂದ ಸಿಗುವ ಸವಲತ್ತುಗಳು, ಕೊಡಿಸುವ ಜೊತೆಯ ಅಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರು ಮಾಡಿಕೊಡಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಉಡಿಗಾಲ ನಂಜಪ್ಪ, ಗ್ರಾ.ಪಂ.ಮಾಜಿ ಅಧ್ಯಕ್ಷ ಕೆಕೆ ಹುಂಡಿ ಕುಮಾರ್, ಗ್ರಾ.ಪಂ.ಮಾಜಿ ಸದಸ್ಯ ದೊರೆಸ್ವಾಮಿ, ಗುರುಸ್ವಾಮಿ, ಪ್ರಭುಸ್ವಾಮಿ, ವಿಷ್ಣುಪ್ರಸಾದ್ ಇತರರು ಹಾಜರಿದ್ದರು.

ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ. ಮಹದೇವಯ್ಯ ಆಗ್ರಹ

ನ್ಯಾ.ನಾಗಮೋಹನ್ ವರದಿ ರದ್ದತಿಗೆ ಒತ್ತಾಯ

ಚಾಮರಾಜನಗರ: ಅವೈಜ್ಞಾನಿಕ, ಅಸಂವಿಧಾನಿಕವಾಗಿರುವ ನ್ಯಾ.ನಾಗಮೋಹನ್ ವರದಿಯನ್ನು ರದ್ದುಪಡಿಸಬೇಕು ಎಂದು ಡಾ.ಎಚ್.ಸಿ. ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ಸರ್ಕಾರವನ್ನು ಒತ್ತಾಯಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಒಳಮೀಸಲಾತಿ ವಿಚಾರದಲ್ಲಿ ಸಮಾಜ ಇಲಾಖೆ ಕಲ್ಯಾಣ ಸಚಿವ ಚ್.ಸಿ.ಮಹದೇವಪ್ಪ ಅವರನ್ನು ಗುರಿಯಾಗಿಸುವುದು, ನಿಂದಿಸುವುದು ಸರಿಯಲ್ಲ. ಇತ್ತೀಚಿಗೆ ಕೊಳ್ಳೇಗಾಲದಲ್ಲಿ ನಡೆದ ಒಳ ಮೀಸಲಾತಿ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಮಹದೇವಪ್ಪ ಸೇರಿದಂತೆ ಸಮುದಾಯ ಸಚಿವರು, ಸ್ವಾಮೀಜಿ ಅವರ ಭಾವಚಿತ್ರಕ್ಕೆ ಚಪ್ಪಲಿ ಸೇವೆ ಮಾಡಿರುವುದಕ್ಕೆ ನಮ್ಮ ಸಂಘಟನೆಯಿಂದ ಕ್ಷಮೆಯಾಚಿಸುತ್ತೇವೆ. ಆ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದರು. ಒಳ ಮೀಸಲಾತಿ ಎಂಬುದು ಮೀಸಲಾತಿ ಪಡೆಯುತ್ತಿರುವ ಎಸ್.ಸಿ ಪಟ್ಟಿಯಲ್ಲಿರುವ ಎಲ್ಲಾ ಅಸ್ಪೃಶ್ಯ ಜಾತಿ ಸಮುದಾಯಗಳಿಗೂ ಸಂಬಂಧಿಸಿದ್ದು. ಅದರಲ್ಲಿ ಪ್ರಸ್ತುತ ಎಡಗೈ ಸಂಬಂಧಿತ ಮತ್ತು ಬಲಗೈ ಸಂಬಂಧಿತ ಎಂಬ ಎರಡು ಗುಂಪುಗಳಾಗಿದೆ. 17% ಮೀಸಲಾತಿಯನ್ನು ಎಡಗೈ ಬಲಗೈ ಸಮುದಾಯಗಳು ಹಂಚಿಕೊಳ್ಳುವುದರಲ್ಲಿ ದೊಡ್ಡ ಬಿಕ್ಕಟ್ಟು ಉಂಟಾಗಿದೆ. ಶಿಕ್ಷಣ, ಉದ್ಯೋಗ ರಾಜಕಾರಣ ಮತ್ತು ಇತರೆ ಕ್ಷೇತ್ರಗಳಲ್ಲಿ ಒಳಮೀಸಲಾತಿ ಅನುಷ್ಠಾನಗೊಳಿಸುವಾಗ ಯಾರಿಗೂ ತೊಂದರೆಗಯಾಗಬಾರದು. ರೋಸ್ಟರ್ ಬಿಂದು ಎಸ್.ಸಿ ಪಟ್ಟಿಯಲ್ಲಿರುವ ಎಡಗೈ ಬಲಗೈ ಸಂಬಂಧಿತ ಎರಡು ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಸಿಗುವಂತೆ ಸೂತ್ರವನ್ನು ರೂಪಿಸಿಬೇಕು. ಈ ಸಮಸ್ಯೆ ಪರಿಹರಿಸುವ ಜವಾಬ್ದಾರಿ ಸದ್ಯಕ್ಕೆ ಸರ್ಕಾರದ ಮೇಲಿದೆ. ಮುಖ್ಯಮಂತ್ರಿಗಳು, ಎಡಗೈ ಬಲಗೈ ಸಚಿವರು ಮತ್ತು ಶಾಸಕರುಗಳು ಇದನ್ನು ಒಮ್ಮತದಿಂದ ಸಹನೆ ತಾಳ್ಮೆಯಿಂದ ಬಗೆಹರಿಸಬೇಕು. ಆದರೆ ಸದ್ಯದ ಪರಿಸ್ಥಿತಿ ದಿಕ್ಕು ತಪ್ಪಿ ಬೇರೆ ಬೇರೆ ಬೆಳವಣಿಗಳು ಆಗುತ್ತಿವೆ ಇದನ್ನ ತಾಳ್ಮೆಯಿಂದ ಎಲ್ಲರು ಬಗೆಹರಿಸುವ ಕಡೆ ಗಮನ ಕೊಡಬೇಕು ಎಂದು ಒತ್ತಾಯಿಸಿದರು.

ಒಳಮೀಸಲಾತಿ ವಿರೋಧಿಸಿ ಬಲಗೈ ಸಮುದಾಯದ ಒಕ್ಕೂಟವು ಮಾ.25 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನ ದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ.ಮಾಜಿ ಸದಸ್ಯ ನಾಗರಾಜು ಕಮಲ್, ಪಿ. ಸಂಘಟನಾ ಭಾಗ್ಯ ಉಮ್ಮತ್ತೂರು, ರಾಜೇಂದ್ರ ಹೊನ್ನೂರು, ಮರಿಸ್ವಾಮಿ ಚಾಟೀಪುರ, ಲಿಂಗಣ್ಣ ಉತ್ತಂಬಳ್ಳಿ ಇದ್ದರು.

ಕಿರುಸುದ್ದಿ

ನಾಗರಹಾವು ಸೆರೆ



◆ **ಪಾಂಡವಪುರ:** ಪಟ್ಟಣದ ಕೃಷ್ಣನಗರದ ಮನೆಯೊಂದರ ಕಾಂಪೌಂಡ್ ಬಳಿ ಕಾಣಿಸಿಕೊಂಡ ನಾಗರಹಾವನ್ನು ಸೆರೆ ಹಿಡಿಯುವಲ್ಲಿ ಉರಗಪ್ರೇಮಿ ಅರಳಕುಪ್ಪೆ ವಿವೇಕ್ ಯಶಸ್ವಿಯಾಗಿದ್ದಾರೆ. ತಾಲೂಕು ಗೃಹ ನಿರ್ಮಾಣ ಸಹಕಾರ ಸಂಘದ ಮಾಜಿ ನಿರ್ದೇಶಕ, ಪತ್ರಕರ್ತ ಬಿ.ಎಸ್.ಜಯರಾಂ ಅವರ ಮನೆಯ ಕಾಂಪೌಂಡ್ ಬಳಿ ಬುಧವಾರ ಮಧ್ಯಾಹ್ನ ನಾಗರಹಾವು ಕಾಣಿಸಿಕೊಂಡಿದೆ. ಹಾವನ್ನು ನೋಡಿದ ಜಯರಾಂ ಕುಟುಂಬದವರು ಭಯಗೊಂಡಿದ್ದಾರೆ. ಮನೆ ಕಾಂಪೌಂಡ್ ಬಳಿಗೆ ಹಾವು ಬಂದಿರುವ ವಿಷಯವನ್ನು ಉರಗ ಪ್ರೇಮಿ ಅರಳಕುಪ್ಪೆ ವಿವೇಕ್ ಅವರಿಗೆ ಮೊಬೈಲ್ ಮೂಲಕ ಜಯರಾಂ ತಿಳಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಸ್ನೇಕ್ ವಿವೇಕ್ ನಾಗರಹಾವನ್ನು ಹಿಡಿದು ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಜೂಜು ಅಡ್ಡೆ ಮೇಲೆ ಪೊಲೀಸರ ದಾಳಿ

◆ **ಮಳವಳ್ಳಿ:** ತಾಲ್ಲೂಕಿನ ಐದು ಕಡೆ ಪ್ರತ್ಯೇಕವಾಗಿ ಜೂಜು ಅಡ್ಡೆಗಳ ದಾಳಿ ನಡೆಸಿದ ಗ್ರಾಮಾಂತರ ಪೊಲೀಸರು ಲಕ್ಷಾಂತರ ರೂ.ವಶಪಡಿಸಿಕೊಂಡಿದ್ದಾರೆ.

ತಾಲ್ಲೂಕಿನ ಶೆಟ್ಟಹಳ್ಳಿ ಗ್ರಾಮದ ಹೊರವಲಯದ ಸುಲ್ತಾನ್ ರಸ್ತೆಯ ಸಾರ್ವಜನಿಕ ಸ್ಥಳದಲ್ಲಿ ಜೂಜಿನಲ್ಲಿ ತೊಡಗಿದ ಗುಂಪಿನ ಮೇಲೆ ಬುಧವಾರ ಮಧ್ಯರಾತ್ರಿ ಸಿಪಿಐ ಬಸವರಾಜು ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು 8 ಮಂದಿಯನ್ನು ಬಂಧಿಸಿ, 86 ಸಾವಿರ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಪಿಎಸ್ಐ ಶಿವಶಂಕರ್ ನೇತೃತ್ವದಲ್ಲಿ ದಾಳಿ ನಡೆಸಿದ ಗ್ರಾಮಾಂತರ ಪೊಲೀಸರು ತಾಲ್ಲೂಕಿನ ನಿಡಘಟ್ಟ ಗ್ರಾಮದ ಗೇಟ್ ಬಳಿಯ ನಿಸರ್ಗ ಬಾರ್ ರೆಸ್ಟೋರೆಂಟ್ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಜೂಜಾಟದಲ್ಲಿ ನಡೆಸುತ್ತಿದ್ದ ಐದು ಮಂದಿಯನ್ನು ಬಂಧಿಸಿ 39300 ರೂ.ವಶಕ್ಕೆ ಪಡೆದುಕೊಂಡಿದ್ದಾರೆ. ತಳಗವಾದಿ ಗ್ರಾಮದ ಹೋಟೆಲ್ ಬಳಿಯ ಹಿಂಭಾಗದ ನಡೆಯುತ್ತಿದ್ದ ಜೂಜಾಟದಲ್ಲಿ ತೊಡಗಿಸಿಕೊಂಡಿದ್ದ 6 ಮಂದಿಯನ್ನು ಬಂಧಿಸಿ 8400 ರೂ.ಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮತ್ತೊಂದೆಡೆ ತಾಲ್ಲೂಕಿನ ಕ್ಯಾತೇಗೌಡನದೊಡ್ಡಿ ಗ್ರಾಮದ ಮಾಸ್ತಮ್ಮ ದೇವಸ್ಥಾನ ಹಿಂಭಾಗದ ಸಾರ್ವಜನಿಕ ಸ್ಥಳದಲ್ಲಿ ಜೂಜಾಡುತ್ತಿದ್ದ ಗುಂಪಿನ ಮೇಲೆ ದಾಳಿ ನಡೆಸಿ ಆರು ಮಂದಿಯನ್ನು ಬಂಧಿಸಿ 35200 ರೂ.ಗಳನ್ನು ಹಾಗೂ ನೆಲ್ಲೂರು ಗ್ರಾಮದಲ್ಲೂ ದಾಳಿ ನಡೆಸಿದ ಪೊಲೀಸರು ನಾಲ್ವರನ್ನು ಬಂಧಿಸಿ 27400 ರೂ.ಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಾಗಿದೆ.

ಶಿವನಂಜೇಗೌಡ ನಿಧನ

◆ **ಮಂಡ್ಯ:** ತಾಲೂಕಿನ ಸಿದ್ದಯ್ಯನಕೊಪ್ಪಲು ಗ್ರಾಮದ ಯಜಮಾನ್ ನಂಜಯ್ಯನ ಮಗ ಶಿವನಂಜೇಗೌಡ (79) ಅವರು ವಯೋಸಹಜ ಅನಾರೋಗ್ಯದಿಂದ ನಗರದ ಮಿಮ್ಸ್ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.



ಕಳೆದ ಕೆಲ ದಿನಗಳಿಂದ ಅನಾರೋಗ್ಯಕ್ಕೊಳಗಾಗಿದ್ದ ಅವರನ್ನು ಮಿಮ್ಸ್ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗ್ಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಗ್ರಾಮದ ಅವರ ಜಮೀನಿನಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು.

ಲೋಕ ಅದಾಲತ್‌ನಲ್ಲಿ 326 ಪ್ರಕರಣ ಇತ್ಯರ್ಥ

◆ **ಪಾಂಡವಪುರ:** ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಬಗೆಹರಿದ 326 ಪ್ರಕರಣಗಳು ಇತ್ಯರ್ಥಗೊಂಡವು. ಪಾಂಡವಪುರ ತಾಲೂಕಿನ ನ್ಯಾಯಾಲಯಗಳಲ್ಲಿ ಆಯೋಜಿಸಿದ್ದ ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಹಿರಿಯ ಪ್ರಧಾನ ಸಿವಿಲ್ ನ್ಯಾಯಾಧೀಶ ಆರ್.ಮಹೇಶ್ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶ ಬಿ.ಪಾರ್ವತಮ್ಮ ಅವರ ನೇತೃತ್ವದಲ್ಲಿ ಹಲವಾರು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿದರು. ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಒಟ್ಟು 6506 ಬಾಕಿ ಪ್ರಕರಣಗಳಲ್ಲಿ 678 ಪ್ರಕರಣಗಳನ್ನು ರಾಜಿ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ಅದರಲ್ಲಿ ಒಟ್ಟು 326 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಯಿತು. ಈ ಸಂದರ್ಭದಲ್ಲಿ ರಾಜಿ ಸಂಧಾನ ಕುರಿತಂತೆ ಹಿರಿಯ ವಕೀಲ ಅಮರ್ ನಾಥ್ ಹಾಗೂ ವಕೀಲ ಪುರುಷೋತ್ತಮ್ ಮಾತನಾಡಿದರು.



ಪಾಂಡವಪುರ ತಾಲೂಕಿನ ಹಾಗನಹಳ್ಳಿ ಗ್ರಾಮದಲ್ಲಿರುವ ಉಚಿತ ವೃದ್ಧಾಶ್ರಮ ಅಮ್ಮನ ಆಸರೆ ಚಾರಿಟಬಲ್ ಸೇವಾ ಟ್ರಸ್ಟ್ ಆಶ್ರಯದಲ್ಲಿ ನಡೆದ ನಾಮಕರಣ ಮಹೋತ್ಸವದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನಿಸಲಾಯಿತು.

ಚಿರತೆ ಮರಿಗಳ ವಶಕ್ಕೆ ಪಡೆದ ಅರಣ್ಯಾಧಿಕಾರಿ

◆ **ಮಂಡ್ಯ:** ತಾಲೂಕಿನ ಭೂತನಹೊಸೂರು ಗ್ರಾಮದಲ್ಲಿ ತಾಯಿ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯಾಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಭೂತನಹೊಸೂರು ಗ್ರಾಮದ ಕಬ್ಬಿನ ಗದ್ದೆಯಲ್ಲಿ ಕಳೆದ ಎರಡು ದಿನಗಳ ಹಿಂದೆ ಚಿರತೆ ಮರಿಗಳು ಪತ್ತೆಯಾಗಿದ್ದು, ಗ್ರಾಮಸ್ಥರ ಮಾಹಿತಿ ಮೇರೆಗೆ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮರಿಗಳನ್ನು ವಶಕ್ಕೆ ಪಡೆದಿದ್ದರು. ಆದರೆ ತಾಯಿ ಚಿರತೆ ಪತ್ತೆಯಾಗದ ಕಾರಣ ಗ್ರಾಮಸ್ಥರು, ರೈತರು ಆತಂಕಕ್ಕೆ ಒಳಗಾಗಿದ್ದರು. ಚಿರತೆ ಓಡಾಡುವ ಸ್ಥಳದಲ್ಲಿ ಬೋನು ಇಟ್ಟು ಅದನ್ನು ಸೆರೆಹಿಡಿಯುವಂತೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ಚಿರತೆ ಹೆಜ್ಜೆಯ ಗುರುತುಗಳನ್ನು ಕಂಡುಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ಚಿರತೆ ಹೆಜ್ಜೆಗಳನ್ನು ಪತ್ತೆ ಹಚ್ಚಿದ ಅಧಿಕಾರಿಗಳು ಚಿರತೆ ಓಡಾಡುತ್ತಿದ್ದ ಸ್ಥಳದಲ್ಲಿ ಬೋನನ್ನು ಇಟ್ಟಿದ್ದರು. ಇಂದು ಬೋನಿನೊಳಗೆ ಚಿರತೆ ಸೆರೆಯಾಗಿತ್ತು. ಗ್ರಾಮಸ್ಥರು ಚಿರತೆಯನ್ನು ಕಂಡು ಅರಣ್ಯಾಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ್ದರು. ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಬೋನಿನಲ್ಲಿ ಸೆರೆಯಾಗಿದ್ದ ಚಿರತೆಯನ್ನು ವಶಕ್ಕೆ ಪಡೆದು ಅರಣ್ಯ ಇಲಾಖೆ ವಾಹನದಲ್ಲಿ ಕೊಂಡೊಯ್ದು ಕಳೆದ ಎರಡು ದಿನಗಳ ಹಿಂದೆಯಷ್ಟೆ ಪತ್ತೆಯಾಗಿದ್ದ ಚಿರತೆ ಮರಿಗಳನ್ನು ತಾಯಿ ಚಿರತೆಯೊಂದಿಗೆ ಸೇರಿಸಿ ಅರಣ್ಯಕ್ಕೆ ಬಿಡುವಲ್ಲಿ ಯಶಸ್ವಿಯಾಗಿದ್ದಾರೆ. ಅರಣ್ಯಾಧಿಕಾರಿಗಳು ಚಿರತೆ ಮರಿ ಮತ್ತು ತಾಯಿ ಚಿರತೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದನ್ನು ಕಂಡು ಗ್ರಾಮಸ್ಥರು ನಿಟ್ಟುಸಿರು ಬಿಟ್ಟರು.



ನಾಗಮಂಗಲದ ಶ್ರೀ ಸೌಮ್ಯಕೇಶವಸ್ವಾಮಿ ದೇವಾಲಯದಲ್ಲಿ ಹೊಸ ವರ್ಷ ಯುಗಾದಿಯ ಪ್ರಯುಕ್ತ ಪರಾಭವ ಸಂವತ್ಸರದ 2026ರ ಹೊಸ ಪಂಚಾಂಗವನ್ನು ಪಠಿಸಲಾಯಿತು.

ಯುಗಾದಿ ಸಂವತ್ಸರದಲ್ಲಿ ಹೊನ್ನೇರು ಪೂಜಾ ಕಾರ್ಯಕ್ರಮ

ರೈತರ ಬದುಕು ಹಸನಾಗಲಿ

◆ **ಮಳವಳ್ಳಿ:** ತಾಲೂಕಿನ ಹಂಗ್ರಾಪುರ ಗ್ರಾಮದ ಶ್ರೀ ಮಠದಲ್ಲಿ ಸಂಪ್ರದಾಯ ಬದ್ಧ ಆಚರಣೆಯಂತೆ ಹೊಸ ವರ್ಷದ ಯುಗಾದಿ ಸಂವತ್ಸರದಲ್ಲಿ ಹೊನ್ನೇರು ಪೂಜಾ ಕಾರ್ಯಕ್ರಮ ಗ್ರಾಮದ ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದಿಂದ ಜರುಗಿತು.

ಪ್ರತಿವರ್ಷದಂತೆ ಈ ವರ್ಷ ಹಂಗ್ರಾಪುರ ಮಠದ ಶ್ರೀ ಬಸವಲಿಂಗ ದೇಶಿಕೇಂದ್ರ, ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಆಯೋಜಿಸಿದ್ದ ಯುಗಾದಿ ಸಂವತ್ಸರದ ಹೊನ್ನೇರು ಪೂಜಾ ಕಾರ್ಯಕ್ರಮದಲ್ಲಿ ಜೋಡಿ ಹೊನ್ನೇರುಗಳಿಗೆ ವಿಶೇಷ ಪೂಜೆ ಸಲ್ಲಿಸಿ ಮಹಾಮಂಗಳಾರತಿ ಮಾಡಲಾಯಿತು.

ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ್ದ ಶ್ರೀ ಬಸವದೇಶಿಕೇಂದ್ರ, ಮಹಾಸ್ವಾಮಿಗಳು ಮಾತನಾಡಿ ಪವಿತ್ರ ಹಾಗೂ ಶುಭದಾಯಕವಾದ ಯುಗಾದಿ ಹಬ್ಬವೂ ಸರ್ವರಿಗೂ ಹರ್ಷದಾಯಕವಾಗಿರಲಿ ಎಂದ ಅವರು ನಮ್ಮ ಸುತ್ತಲೂ ಸುಂದರ ವಸಂತವು ಹರ್ಷೋಲ್ಲಾಸವನ್ನು ಪಸರಿಸುವ ಕಾಲವಿದು. ಹೊಸದಾಗಿ ಅರಳುತ್ತಿರುವ ಸುಮಗಳ ಸೌರಭ ಮತ್ತು ಋತುಮಾನದ ಹಣ್ಣುಗಳ ಆಗಮನವು ನಮ್ಮಲ್ಲಿ ಹೊಸ ಚೈತನ್ಯ ಹಾಗೂ ವಿಪುಲ ಸಾಧ್ಯತೆಗಳ ಸ್ಫೂರ್ತಿಯನ್ನು ತುಂಬುತ್ತವೆ. ಅಂತೆಯೇ, ನಮ್ಮ ಶ್ರಮಜೀವಿ ರೈತಬಾಂಧವರು ಸಹ ಮಹತ್ತರವಾದ ಆಶಾವಾದದೊಂದಿಗೆ ಮುಂದಿನ ಕೃಷಿ ಋತುವಿಗೆ ಸಜ್ಜಾಗುವ ಸಂಭ್ರಮದ ಸಮಯವಿದು, ಈ ಯುಗಾದಿ ಹಬ್ಬವು ರೈತರ ಬದುಕನ್ನು ಹಸನಾಗಿಸಲಿ ಎಂದರು.



ಸಾಂಪ್ರದಾಯಿಕ ಸಡಗರದ ಯುಗಾದಿಯು ಜೀವನದ ಎಲ್ಲಾ ರಸಭಾವಗಳನ್ನು ಸಮಾನವಾಗಿ ಸ್ವೀಕರಿಸುವುದನ್ನು ನಮಗೆ ನೆನಪಿಸುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ವಿವಿಧ ಹಬ್ಬದ ಅಡುಗೆಗಳ ಜೊತೆಗೆ, ಈ ದಿನದಂದು ಸಿಹಿ-ಕಹಿ ಸಮ್ಮಿಶ್ರಿತ ತಿನಿಸನ್ನು (ಬೇವು-ಬೆಲ್ಲ) ಸವಿಯುವ ವಿಶಿಷ್ಟ ಸಂಪ್ರದಾಯವಿದೆ.

ಇದು ಬದುಕಿನ ಆಳವಾದ ಅರ್ಥವನ್ನು ನಮಗೆ ತಿಳಿಸಿಕೊಡುತ್ತದೆ. ಅಡೆತಡೆಗಳನ್ನು ಧೈರ್ಯದಿಂದ ಎದುರಿಸಲು ಮತ್ತು ಯಶಸ್ಸನ್ನು ವಿನಯಪೂರ್ವಕ ಕೃತಜ್ಞತೆಯಿಂದ ಸ್ವಾಗತಿಸಲು ಇದು ನಮಗೆ ಪ್ರೇರಣೆ ನೀಡಲಿದ್ದು, ಈ ಹೊಸ ವರ್ಷವು ಜನರ ಬದುಕಿನಲ್ಲಿ ಸುಖ, ಶಾಂತಿ ಮತ್ತು ಉತ್ತಮ ಆರೋಗ್ಯವನ್ನು ತಂದುಕೊಡಲಿ. ನಿಮ್ಮ ಎಲ್ಲಾ ಸತ್ಕಾರ್ಯಗಳಲ್ಲಿ ಯಶಸ್ಸು ಲಭಿಸಲಿ ಹಾಗೂ ಶಾಂತಿ ಮತ್ತು ಸಕಾರಾತ್ಮಕತೆ ಸದಾ ನೆಲೆಸಲಿ ಎಂದರು.

ಹೊನ್ನೇರುಗಳನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು ಈ ಸಂದರ್ಭದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿ ಮಹಾಮಂಗಳಾರತಿ ನೀಡಿದರು.

ನಂತರ ಆಗಮಿಸಿದ ಜನರಿಗೆ ಶ್ರೀಮಠದಲ್ಲಿ ಪ್ರಸಾದ ವಿತರಣೆ ಮಾಡಲಾಯಿತು.

ಸಂವತ್ಸರದ ಮೊದಲ ಉಳುಮೆಗೆ ಚಾಲನೆ

◆ **ನಾಗಮಂಗಲ:** ಯಾಂತ್ರೀಕೃತ ಬೇಸಾಯ ಆರಂಭವಾದಾಗಿನಿಂದ ಗ್ರಾಮೀಣ ಪ್ರದೇಶದಲ್ಲಿ ಹೊನ್ನಾ ರು ಕಟ್ಟುವ ಸಂಪ್ರದಾಯ ಕಳೆಗುಂದು ತ್ತಿದೆ. ಆದರೂ ಕೂಡ ಹಿರಿಯರು ಆಚರಿಸಿಕೊಂಡು ಬರುತ್ತಿದ್ದ ಸಂಪ್ರದಾಯವನ್ನು ಉಳಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಸಲುವಾಗಿ ತಾಲೂಕಿನ ಹಲವು ಹಳ್ಳಿಗಳಲ್ಲಿ ರೈತರು ಗುರುವಾರ ಹೊನ್ನಾರು ಕಟ್ಟುವ ಮೂಲಕ ಹೊಸ ಸಂವತ್ಸರದ ಮೊದಲ ಉಳುಮೆ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ.

ಯುಗಾದಿ ಹಬ್ಬದ ದಿನ ಹೊನ್ನಾರು ಕಟ್ಟಿದರೆ ಸಮೃದ್ಧಿಯಾಗಿ ಮಳೆ ಬಂದು ಕೃಷಿ ಭೂಮಿಯಲ್ಲಿ ಉತ್ತಮ ಬೆಳೆ ಬರುತ್ತದೆ ಎಂಬ ನಂಬಿಕೆಯಿಂದ ಪೂರ್ವಜರ ಕಾಲದಿಂದಲೂ ಈ ಸಂಪ್ರದಾಯ ನಡೆದುಕೊಂಡು ಬಂದಿದೆ. ಹಾಗಾಗಿ ರೈತರು ತಮ್ಮ ಹೊಲದಲ್ಲಿ ನೇಗಿಲನ್ನು ಹಿಡಿದು ಉಳುಮೆ ಮಾಡುವ ಮುನ್ನ ಗ್ರಾಮದ ಹಿರಿಯರ ಸಮ್ಮುಖದಲ್ಲಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಹೊನ್ನಾರು ಕಟ್ಟುತ್ತಾರೆ.

ಹೊಸ ವರ್ಷ ಇದ ಸಂವತ್ಸರದಲ್ಲಿ ರೈತರು ತಮ್ಮ ಎತ್ತುಗಳನ್ನು ಸಿಂಗಾರ ಮಾಡಿ ಭೂಮಿ ತಾಯಿಗೆ ಪೂಜೆ ಸಲ್ಲಿಸಿ ಹೊನ್ನಾರು ಹೂಡುವುದು ವಾಡಿಕೆ. ತ್ರೇತ್ರಾಯುಗದಲ್ಲಿ ಜನಕಮಹಾರಾಜ ಹೊನ್ನಾರು ಕಟ್ಟುವುದನ್ನು ಪ್ರಾರಂಭಿಸಿದರು ಎನ್ನಲಾಗಿದೆ. ಯುಗಾದಿ ಹಬ್ಬದ ದಿನದಂದು ಗ್ರಾಮದ ಮುಖ್ಯಸ್ಥರು ಎಣ್ಣೆ ಸ್ನಾನ ಮಾಡಿ, ದೇವಾಲಯಕ್ಕೆ ಬಂದು ಹೊಸಪಂಚಾಂಗ ಓದಿಸಿ ಯಾರ ಹೆಸರಿಗೆ ಹೊನ್ನಾರು ಕಟ್ಟುವುದು ಎಂದು ಹೇಳಲಾಗುತ್ತದೆಯೋ ಆ ಹೆಸರಿನವರಿಂದ ಹೊನ್ನಾರು ಹೂಡಿಸುತ್ತಾರೆ. ರೈತರು ಅಲಂಕರಿಸಿದ ತಮ್ಮ ಎತ್ತುಗಳಿಗೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ನೈವೇದ್ಯ ಕೊಟ್ಟು ನೇಗಿಲು ಹೂಡಿ ವರ್ಷದ ಮೊದಲ ಉಳುಮೆ ಮಾಡುತ್ತಾರೆ ಎಂದರು.



ಉಗಾದಿ ಉತ್ಸವ ಆರಂಭ

◆ **ಶ್ರೀರಂಗಪಟ್ಟಣ:** ತಾಲೂಕಿನ ಆಲಗೂಡು ಮತ್ತು ಆಸುಪಾಸಿನ ಗ್ರಾಮಗಳಲ್ಲಿ ನಾಲ್ಕು ದಿನಗಳ ಕಾಲ ನಡೆಯುವ ಉಗಾದಿ ಉತ್ಸವ ಮಂಡ್ಯಕೊಪ್ಪಲು ಬಳಿಯ ಕಾವೇರಿ ಬೋರೇದೇವರ ದೇವಾಲಯ ಬಳಿ ಗುರುವಾರ ರಾತ್ರಿ ಆರಂಭವಾಯಿತು.

ಕಾವೇರಿ ನದಿ ತೀರದಲ್ಲಿ ದೇವರಿಗೆ ಹೂ ಹೊಂಬಾಳೆ ಮುಡಿಸಿ ಅಗ್ರ ಪೂಜೆ ಸಲ್ಲಿಸಿದ ಬಳಿಕ ಉತ್ಸವಕ್ಕೆ ಚಾಲನೆ ದೊರೆಯಿತು. ಬೋರೇದೇವರ ದೇವಾಲಯದ ಆವರಣದಲ್ಲಿ ಶನಿವಾರ ರಾತ್ರಿ ಮೆರವಣಿಗೆ ನಡೆಯಿತು. ಶುಕ್ರವಾರ ಬೆಳಿಗ್ಗೆ ಮಂಡ್ಯಕೊಪ್ಪಲು, ಚಿಂದೇಗೌಡನಕೊಪ್ಪಲು ಮತ್ತು ಗೊಬ್ಬರಗಾಲ ಗ್ರಾಮಗಳಲ್ಲಿ ದೇವರ ಕೂಟಗಳ ಉತ್ಸವ ಜರುಗಿತು. ದಾರಿಯುದ್ದಕ್ಕೂ ಪೂಜೆ, ಪುನಸ್ಕಾರಗಳು ನಡೆದವು. ದೂಪ, ಕರ್ಪೂರ, ಈಡುಗಾಯಿಸೇವೆಗಳು ಜರುಗಿದವು. ಮಧ್ಯಾಹ್ನದ ವೇಳೆಗೆ ದೇವರ ಕೂಟಗಳು ಹುಂಜನಕೆರೆ ಗ್ರಾಮಕ್ಕೆ ಆಗಮಿಸಿದವು.

ತಾಲ್ಲೂಕಿನ ಚಿಂದೇಗೌಡಕೊಪ್ಪಲು ಗ್ರಾಮದಲ್ಲಿ ಶುಕ್ರವಾರ ನಡೆದ ಒಂಭತ್ತು ದೇವರ ಕೂಟಗಳ ಉತ್ಸವದಲ್ಲಿ ಶಾಸಕ ರಮೇಶ ಬಂಡಿಸಿದ್ದೇಗೌಡ ಪಾಲ್ಗೊಂಡಿದ್ದರು. ಬೀರೇಶ್ವರ ದೇವರ ಉತ್ಸವವನ್ನು ಹೆಗಲ ಮೇಲೆ ಹೊತ್ತು ಕೆಲ ದೂರ ಸಾಗಿದರು. ತಮಟೆಯ ಸದ್ದಿಗೆ ವೀರ ಮಕ್ಕಳ ಜತೆ ಲಯಬದ್ಧವಾಗಿ ಹೆಜ್ಜೆ ಹಾಕಿದರು.

ಹುಂಜನಕೆರೆ ಗ್ರಾಮದಲ್ಲಿ ಮೈಸೂರು ತಾಲ್ಲೂಕಿನ ಕಾಳಿಸಿದ್ದನಹುಂಡಿ ಗ್ರಾಮದ ಬೀರೇಶ್ವರ, ಮಂಡ್ಯ ತಾಲ್ಲೂಕು ಉರಮಾರ ಕಸಲಗೆರೆ ಗ್ರಾಮದ ಉರಮಾರಮ್ಮ ಮತ್ತು ಬೀರೇಶ್ವರ, ಶ್ರೀರಂಗಪಟ್ಟಣ ತಾಲ್ಲೂಕು ಹೆಬ್ಬಾಡಿಹುಂಡಿ ಗ್ರಾಮದ ಬೀರೇಶ್ವರ, ಆಲಗೂಡು ಗ್ರಾಮದ ಸಿದ್ದೇಶ್ವರ ಮತ್ತು ಬೀರೇಶ್ವರ, ಹುಂಜನಕೆರೆ ಗ್ರಾಮದ ಚನ್ನೇಶ್ವರ, ಬಳ್ಳೇಕೆರೆಯ ಹುಚ್ಚೂರಾಯ ಮತ್ತು ಬಸವ ದೇವರ ಕೂಟಗಳು ಮೇಳೈಸಿವೆ.

ಹುಂಜನಕೆರೆಯಲ್ಲಿ ಈ ಹಿಂದೆ ನಡೆದ ಅಹಿತಕರ ಘಟನೆ ಹಿನ್ನೆಲೆಯಲ್ಲಿ ತಹಸೀಲ್ದಾರ್ ಚೇತನಾ ಯಾದವ್ ಶುಕ್ರವಾರ ಗ್ರಾಮಕ್ಕೆ ಭೇಟಿ ನೀಡಿದ್ದರು. ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಶನಿವಾರ ಮುಂಜಾನೆ ವರೆಗೆ ಗ್ರಾಮದಲ್ಲಿ ಉತ್ಸವ ನಡೆಯಲಿದೆ ಆಲಗೂಡು ಗ್ರಾಮದಲ್ಲಿ ಶನಿವಾರ ಸಂಜೆ ಉತ್ಸವ ಆರಂಭವಾಗಲಿದೆ. ಇಡೀ ರಾತ್ರಿ ಮೆರವಣಿಗೆ ನಡೆಯಲಿದ್ದು, ಉತ್ಸವ ಮತ್ತಷ್ಟು ಕಳೆಗಟ್ಟಲಿದೆ. ಒಂಭತ್ತು ದೇವರ ಕೂಟಗಳ ಮನೆತನದ ಭಕ್ತರು ತಮ್ಮ ತಮ್ಮ ದೇವರ ಉತ್ಸವದ ಜತೆ ಹೆಜ್ಜೆ ಹಾಕುತ್ತಿದ್ದಾರೆ. ಭಾನುವಾರ ಮುಂಜಾನೆ ಆಲಗೂಡು ಗ್ರಾಮದಲ್ಲಿ ದೊಡ್ಡ ಪರ ನಡೆಯಲಿದೆ.



ರಂಗ ಕುಣಿತಕ್ಕೆ ಪುಟಾಣಿ ಮಕ್ಕಳಿಂದ ಹೆಜ್ಜೆ

◆ **ಕಿಕ್ಕೇರಿ:** ಪಟ್ಟಣದ ಪುಟಾಣಿ ಮಕ್ಕಳು ರಂಗದ ಕುಣಿತಕ್ಕೆ ಗೆಜ್ಜೆ ಕಟ್ಟಿಕುಣಿಯುವ ಮೂಲಕ ರಂಗೇರಿಸಿದರು.

ಹೋಬಳಿಯಲ್ಲಿಯೇ ವಿಶೇಷವಾಗಿ ನಡೆಯುವರಂಗದ ಹಬ್ಬಕ್ಕಾಗಿ ತಿಂಗಳುಗಟ್ಟಲೆ ಯುವಕರು ಹಿರಿಯರ ಜೊತೆಗೂಡಿ ಉಪ್ಪರಿಗೆ ಬಸವಣ್ಣನ ಸನ್ನಿಧಿಯಲ್ಲಿ ರಂಗತಾಲೀಮನ್ನು ನಿತ್ಯ ಹಮ್ಮಿಕೊಂಡಿದ್ದರು. ರಂಗಾಸಕ್ತರು ನಿತ್ಯವೂ ರಂಗಕುಣಿತಧಾರಿಗಳಿಗಾಗಿ ಅನ್ನ ಪ್ರಸಾದ ಏರ್ಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪ್ರೇರೇಪಿಸಿದ್ದರು.

ಯುಗಾದಿ ಸಂಭ್ರಮವನ್ನು ಸವಿದು ಮರುದಿನವಾದ ಶುಕ್ರವಾರ ಉಪ್ಪರಿಗೆ ಬಸವಣ್ಣಗುಡಿಯ ಮುಂದೆ ರಂಗ ಕುಣಿತಕ್ಕೆ ಚಾಲನೆ ನೀಡಲಾಯಿತು. ಹಿರಿಯ ರಂಗ ಕುಣಿತ ಕಲಾವಿದ ಕೆ.ಎನ್.



ನಾಗೇಗೌಡ(ನಾಗಣ್ಣ) ಮಾರ್ಗದರ್ಶನದಲ್ಲಿ ಯುವಕರೊಂದಿಗೆ ಪುಟಾಣಿ ಮಕ್ಕಳು ಕಾಲಿಗೆ ಗೆಜ್ಜೆ, ಹಣೆಗೆ ತಿಲಕವಿಟ್ಟುಕೊಂಡು ಕೈಯಲ್ಲಿ ಕೇಸರಿ ಟವಲ್ ಹಿಡಿದು ಕುಣಿಯಲು ತುದಿಗಾಲಲ್ಲಿ ನಿಂತಿದ್ದರು.

ಹುಡುಗರು ಹಿರಿಯರೊಂದಿಗೆ ವಿವಿಧ ಮಟ್ಟಿನ ವಿವಿಧ ಹೆಜ್ಜೆಯ ತಿರುಣಿ ಕುಣಿತಕ್ಕೆ ಗೆಜ್ಜೆ ಕಟ್ಟಿಕುಣಿಯುವ ಮೂಲಕ ವಿಶೇಷ ಮೆರಗು ನೀಡಿದರು. ಪಟ್ಟಣವಲ್ಲದೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಾರ್ವಜನಿಕರು ರಂಗ ಕುಣಿತವನ್ನು ವೀಕ್ಷಿಸಲು ಅರಳಿಕಟ್ಟೆ ಬಳಿ ಜಮಾಯಿಸಿದ್ದರು.

ನಂತರ ಕಿಕ್ಕೇರಮ್ಮ ದೇವರಗುಡಿ ಮುಂದೆ ಸಾಗಿ ದೇವರ ಪ್ರವೇಶದ್ವಾರದ ಗರುಢಗಂಭದ ಮುಂದೆ ದೇವಿಗೆ ರಂಗದ ಗೆಜ್ಜೆಯನ್ನು ಒಪ್ಪಿಸಿ ರಂಗನ ಕುಣಿತವನ್ನು ಸಮರ್ಪಿಸಿದರು. ತೆಂಗಿನಘಟ್ಟದ ತಮಟೆ ವಾದ್ಯಗಾರರು ರಂಗಕುಣಿತಕ್ಕೆ ಸಾಥ್ ನೀಡಿದರು.

ಅಂತಿಮವಾಗಿ ದೇವಿ ಗುಡಿಗೆ ತೆರಳಿ ಪ್ರದಕ್ಷಿಣೆ ಹಾಕಿ ದೇವರ ದರ್ಶನ ಪಡೆದರು. ದೇವರ ಪ್ರಸಾದ ಸ್ವೀಕರಿಸಿ ರೈತರ ಬದುಕು ಹಸನಾಗಲು, ಸಕಾಲದಲ್ಲಿ ಮಳೆ ಬೀಳಲಿ. ಭೂಮಿ ಹಸನಾಗಿ ಸಮೃದ್ಧ ಬೆಳೆ ಸಿಗಲಿ. ಗ್ರಾಮಾಭಿವೃದ್ಧಿಯಾಗಲಿ ಎಂದು ಪ್ರಾರ್ಥಿಸಿದರು.

ನೆಮ್ಮದಿ ಜೀವನ ನಡೆಸುವುದು ಯುಗಾದಿ ಹಬ್ಬದ ಸಂದೇಶ

◆ **ಮಳವಳ್ಳಿ:** ಕಷ್ಟ ಸುಖಗಳನ್ನು ಸಮಾನಾಗಿ ಸ್ವೀಕರಿಸಿ ನೆಮ್ಮದಿ ಜೀವನ ನಡೆಸಬೇಕೆಂಬುವುದು ಯುಗಾದಿ ಹಬ್ಬದ ಸಂದೇಶವಾಗಿದೆ ಎಂದು ಕರ್ನಾಟಕ ಜಾನಪದ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಎಂ.ಬಸಪ್ಪ ನೆಲಮಾಕನಹಳ್ಳಿ ತಿಳಿಸಿದರು.

ತಾಲ್ಲೂಕಿನ ರಾಗಿಬೊಮ್ಮನಹಳ್ಳಿ ಗ್ರಾಮದಲ್ಲಿ ಪೂರಿಗಾಲಿಯ ಜೈ ಭೀಮ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ನಡೆದ ಯುಗಾದಿ ಸಂಭ್ರಮ ಹಾಗೂ ಜನಪದ ಉತ್ಸವವನ್ನು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಯುಗಾದಿ ಹಬ್ಬಕ್ಕೆ ತನ್ನದೇ ಆಗ ಮಹತ್ವವಿದ್ದು, ಜೀವನದ ಎಲ್ಲ ಕಹಿ ಘಟನೆಗಳನ್ನು ಮರೆತು ಸುಖ ಸಂತೋಷ ಹಾಗೂ ನೆಮ್ಮದಿಯಿಂದ ಬಾಳ್ವೆ ನಡೆಸುವ ಸಂದೇಶ ಸಾರುವ ಆಚರಣೆಯಾಗಿದೆ ಎಂದರು.

ಧರ್ಮ, ಜಾತಿಯ ನಡುವೆ ಕೋಮು ಸಂಘರ್ಷಗಳು ನಡೆಯುತ್ತಿದ್ದು, ಇಂತಹ ಸನ್ನಿವೇಶಗಳು ಇಲ್ಲಿಗೆ ಕೊನೆಯಾಗಿ ಮುಂದಿನ ದಿನಗಳಲ್ಲಿ ಸುಖ, ಶಾಂತಿ, ನೆಮ್ಮದಿಯೊಂದಿಗೆ ಹರ್ಷದಿಂದ ಬಾಳುವಂತಾಗಲಿ ಎಂದು ಹಾರೈಸಿದರು.

ಜೈ ಭೀಮ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಎಂ.ಎನ್.ಜಯರಾಜ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಮಳವಳ್ಳಿ ತಾಲ್ಲೂಕು ಪವಾಡ ಪುರುಷರಾದ ಮಲೆ ಮಹದೇಶ್ವರರು, ಸಿದ್ದಪ್ಪಾಜಿ, ಮಂಟೇಸ್ವಾಮಿ ಸೇರಿದಂತೆ ಅನೇಕರು ಜನಪದ ಜಂಗಮರು, ಸಾಹಿತಿಗಳು, ಬುದ್ಧಿಜೀವಿಗಳು ನಡೆದಾಡಿರುವಂತಹ ಹಾಗೂ ಜನಪದ ಪ್ರಕಾರಗಳಾದ ತಂಬೂರಿ, ಸೋಬಾನೆ ಪದಗಳು, ಕೋಲಾಟ, ತಮಟೆ ಸೇರಿದಂತೆ 64 ಜನಪದ ಪ್ರಕಾರಗಳನ್ನು ಮತ್ತು ಕಲಾವಿದರನ್ನು ಹೊಂದಿರುವ ಪವಿತ್ರಸ್ಥಳವಾಗಿದೆ ಎಂದು ಮಾಹಿತಿ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಎಲ್.ಚೇತನ್ ಕುಮಾರ್ ಮಾತನಾಡಿ, ಇಂಥ ಜಾನಪದ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಸರ್ಕಾರ ಹಲವು ಸಂಘ ಸಂಸ್ಥೆಗಳನ್ನು ಗುರುತಿಸಿ ಹೆಚ್ಚಿನ ಪ್ರಮಾಣದಲ್ಲಿ ಧನ ಸಹಾಯವನ್ನು ನೀಡುವುದರ ಜೊತೆಗೆ ಕಲಾವಿದರರಿಗೆ ಹೆಚ್ಚಿನ ಮಾಶಾಸನ, ಆರೋಗ್ಯ ವಿಮೆ, ಮನೆಗಳನ್ನು ಸರ್ಕಾರವೇ ನಿರ್ಮಿಸಿ ಕೊಡುವುದರ ಮುಖಾಂತರ ಪ್ರೋತ್ಸಾ ಹಿಸು ಪ್ರಸ್ತುತ ಅಳಿವಿನಂಚಿನಲ್ಲಿರುವ ಇಂಥ ಕಲೆಗಳನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ವಿಸ್ಮಯ ಕಲಾ ಬಳಗದ ಅಧ್ಯಕ್ಷ ಆರ್.ಎಂ.ಮಹದೇವಸ್ವಾಮಿ, ಎಂ.ಜಗದೀಶ್, ಮಲ್ಲೇಶ್, ದೇವಪ್ರಸಾದ್, ಶಾಂತಿ ಶ್ರೀನಿವಾಸ್, ನಾಗರಾಜಮೂರ್ತಿ, ಗಾಯಕಿ ನಾಗರತ್ನ ಇದ್ದರು.

ಕ್ಯಾನ್ಸರ್ ಜಾಗೃತಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ

ಆರೋಗ್ಯಕರ ಆಹಾರ ಪದಾರ್ಥ ಸೇವನೆ ಮಾಡಿ

◆ **ನಾಗಮಂಗಲ:** ಆರೋಗ್ಯಕರ ಆಹಾರ ಪದಾರ್ಥ ಸೇವನೆ, ಯೋಗಾಭ್ಯಾಸ ಮತ್ತು ನಿಯಮಿತ ತಪಾಸಣೆಯಿಂದ ಕ್ಯಾನ್ಸರ್ ರೋಗವನ್ನು ತಡೆಗಟ್ಟಬಹುದಾಗಿದೆ ಎಂದು ಪಟ್ಟಣದ ಹೊರವಲಯ ದೇವಲಾಪುರ ಹ್ಯಾಂಡ್‌ಪೋಸ್ಟ್‌ನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲೆ ಆರ್.ಆಶಾ ಅಭಿಪ್ರಾಯಪಟ್ಟರು.

ತಾಲೂಕಿನ ಎಂ.ಹೊಸೂರು ಗೇಟ್ ಬಳಿಯಿರುವ ಕೇಂದ್ರಿಯ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಅನುಸಂಧಾನ ಸಂಸ್ಥೆಯಲ್ಲಿ ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಕ್ಯಾನ್ಸರ್ ಜಾಗೃತಿ ಮತ್ತು ಅಪಾಯದ ಅಂಶಗಳ ಕುರಿತು ಮಂಗಳವಾರ ಆಯೋಜಿಸಿದ್ದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಆಧುನಿಕ ಜೀವನಶೈಲಿಗೆ ಹೊಂದಿಕೊಳ್ಳುತ್ತಿರುವ ನಾವು ರಾಸಾಯನಿಕ ವಸ್ತು ಮಿಶ್ರಿತ ಬಣ್ಣ ಬಣ್ಣದ ತಿಂಡಿ ತಿನಿಸುಗಳನ್ನು ಸೇವನೆ ಮಾಡುವುದರಿಂದ ಕ್ಯಾನ್ಸ ರ್ ಬರುತ್ತದೆಂದು ಗೊತ್ತಿದ್ದರೂ ಕೂಡ ಇವೆಲ್ಲವನ್ನೂ ಉಪಯೋಗಿಸುತ್ತಿದ್ದೇವೆ. ಈ ಮಾರಕ ರೋಗವನ್ನು ತಡೆಗಟ್ಟುವ ಸಲುವಾಗಿ ಸರ್ಕಾರ ಜಾಗೃತಿ



ಮೂಡಿಸುತ್ತಿದರೂ ಸಹ ವಿದ್ಯಾಂತರು ಬುದ್ದಿವಂತರಾದ ನಾವು ಜೀವನ ಶೈಲಿಯನ್ನು ಬದಲಿಸಿಕೊಳ್ಳದಿರುವುದು ದುರಾದೃಷ್ಟಕರ ಎಂದರು.

ತಂಬಾಕು, ಮದ್ಯಪಾನ, ಧೂಮಪಾನ ಸೇರಿದಂತೆ ಕಡಿಮೆ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥ ಸೇವನೆಯಿಂದ ಕ್ಯಾನ್ಸ ರ್ ಬರುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗಾಗಿ ದುಶ್ಚಟಗಳಿಂದ ದೂರವಿದ್ದು ನಮ್ಮ ಪೂರ್ವಿಕರ ಆಹಾರಪದ್ಧತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಜೊತೆಗೆ ನಿತ್ಯ ಯೋಗಾಭ್ಯಾಸ ಮಾಡುವುದರಿಂದ ಕ್ಯಾನ್ಸ ರ್ ಸೇರಿದಂತೆ ಇನ್ನಿತರೆ ಖಾಯಿಲೆಗಳನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಅನುಸಂಧಾನ ಸಂಸ್ಥೆಯ ಸಹಾಯಕ ನಿರ್ದೇಶಕ ಹಾಗೂ ನೋಡಲ್ ಅಧಿಕಾರಿ ಡಾ.ಎಚ್.ಎಸ್. ವಾದಿರಾಜ್ ಪ್ರಾಸ್ತಾವಿಕ ನುಡಿಯೊಂದಿಗೆ ಸ್ವಾಗತಿಸಿದರು.

ಚಾಮರಾಜನಗರ ಮೆಡಿಕಲ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಎನ್.ನವ್ಯಶ್ರೀ, ಕೋಲಾರದ ದೇವರಾಜ ಅರಸು ಮೆಡಿಕಲ್ ಕಾಲೇಜಿನ ವಿಕಿರಣ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಮಂಜುನಾಥ್, ಮೈಸೂರಿನ ಧಾರಣಾ ವೆಲ್‌ನೆಸ್‌ನ ಡಾ.ಅಕ್ಷತಾ, ಹಿರಿಯ ಸಂಶೋಧಕಿ ಡಾ.ಎಸ್.ದೀಪಶ್ರೀ ಅವರು ಕ್ಯಾನ್ಸ ರ್ ತಡೆಗಟ್ಟುವ ಹಲವು ವಿಷಯಗಳ ಕುರಿತು ಉಪನ್ಯಾಸ ನೀಡಿದರು.

ಕೆ.ಎಂ.ದೊಡ್ಡಿಯ ಜಿ.ಮಾದೇಗೌಡ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮಹಾವಿದ್ಯಾಲಯ, ಸೋಲೂರಿನ ಎಂಆರ್‌ಆರ್, ಬೆಂಗಳೂರಿನ ಎಂವಿಎಂ ಮತ್ತು ಮೈಸೂರಿನ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮಹಾವಿದ್ಯಾಲಯದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ರೋಟರಿ ಜಿಲ್ಲಾ ಪಾಲಕ ಪ್ರೊ. ಎಲಿಜಬತ್ ಚೆರಿಯನ್ ಸಲಹೆ

ವಿದ್ಯಾರ್ಥಿಗಳೇ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

◆ **ಮದ್ದೂರು:** ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ರೋಟರಿ ಸಂಸ್ಥೆ ಹಲವಾರು ಅನುಕೂಲಗಳನ್ನು ಕಲ್ಪಿಸುತ್ತಿದ್ದು, ಇದರ ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ರೋಟರಿ ಜಿಲ್ಲಾ ಪಾಲಕರಾದ ಪ್ರೊ. ಎಲಿಜಬತ್ ಚೆರಿಯನ್ ತಿಳಿಸಿದರು.

ತಾಲೂಕಿನ ವಳಗೆರೆಹಳ್ಳಿ ಗ್ರಾಮದ ಪ್ರಮೀಳಾ ವೀರಪ್ಪ ಪ್ರೌಢಶಾಲೆಗೆ ಇತ್ತೀಚೆಗೆ ರೋಟರಿ ವತಿಯಿಂದ ಎಲ್ಇಡಿ ಬೋರ್ಡ್ ಮತ್ತು ಸ್ಟೂಡೆಂಟ್ ಡೆಸ್ಕ್ ವಿತರಿಸಿ ಮಾತನಾಡಿದರು.

ವಿದ್ಯೆ ಯಾರು ಕದಿಯಲಾಗದ್ದು, ವಿದ್ಯೆಗಿರುವ ಮಹತ್ವ ಮತ್ತು ಶಕ್ತಿ ಬೇರೆ ಯಾವುದಕ್ಕೂ ಇಲ್ಲ, ಉತ್ತಮ ಶಿಕ್ಷಣ ಪಡೆದುಕೊಂಡರೆ ನಿಮ್ಮ ಭವಿಷ್ಯ ಉಜ್ವಲಗೊಳ್ಳುತ್ತದೆ. ಇದನ್ನರಿತು ಕಠಿಣ ಪರಿಶ್ರಮಪಟ್ಟು ವ್ಯಾಸಂಗ ಮಾಡಿ ಉತ್ತಮ ಬದುಕು ಕಟ್ಟಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ರೋಟರಿ ಅಧ್ಯಕ್ಷ ಎಸ್.ಪಿ.ಶ್ರೀನಿವಾಸ್ ಮಾತನಾಡಿ, ರೋಟರಿ ಸಂಸ್ಥೆಯು ಹಲವಾರು ಸಮಾಜ ಮುಖಿ ಕಾರ್ಯಕ್ರಗಳನ್ನು ಹಮ್ಮಿಕೊಂಡು



ನೊಂದವರಿಗೆ ಬಾಳಿಗೆ ಆಸರೆಯಾಗಿದೆ. ರೋಟರಿ ವತಿಯಿಂದ ಮುಂದೆಯೂ ಇನ್ನು ಹಲವಾರು ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಿದ್ದು, ಎಲ್ಲಾ ವರ್ಗದ ಜನರಿಗೂ ಅನುಕೂಲ ಕಲ್ಪಿಸಲಾಗುವುದು ಎಂದರು.

ನಾನು ವ್ಯಾಸಂಗ ಮಾಡಿದ ಪ್ರಮೀಳ ವೀರಪ್ಪ ಶಾಲೆಯ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಕ್ಲಾಸ್‌ಗೆ ಅನುಕೂಲವಾಗಿದೆ ಎಂಬ ಉದ್ದೇಶದಿಂದ ಎಲ್ಇಡಿ ಬೋರ್ಡ್, ಸ್ಟೂಡೆಂಟ್ ಡೆಸ್ಕ್ ಸೇರಿದಂತೆ ಇನ್ನಿತರ ಪರಿಕರಗಳನ್ನು ರೋಟರಿ ವತಿಯಿಂದ ನೀಡುತ್ತಿರುವುದು ಸಂತೋಷ ತಂದಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಶಾಲಾ ಆವರಣದಲ್ಲಿ ವಿವಿಧ ರೀತಿಯ ಸಸಿಗಳನ್ನು ನೆಟ್ಟು ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗ ಅರಿವು ಮೂಡಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಮತ್ತು ಕಾನ್ಫರೆನ್ಸ್ ಚೇರ್ ನವೀನ್ ಕಾರಿಯಪ್ಪ, ಜಿಲ್ಲಾ ಕಾರ್ಯದರ್ಶಿಗಳು ಬಿ.ಡಿ.ಹೊನ್ನೇಗೌಡ, ಜಿಲ್ಲಾ ರಾಯಭಾರಿ ತಿಪ್ಪೂರು ಟಿ.ಎಸ್.ರಾಜೇಶ್, ಪದಾಧಿಕಾರಿಗಳಾದ ಅನುಪಮ, ಅಕ್ಷರಂ ವೆಂಕಟೇಶ್, ವಿ.ಕೆ.ರಾಧಾ, ಬಿ.ಸಿ.ಯೋಗೇಶ್, ಜಿ.ಸಿ.ಶಶಿಕುಮಾರ್, ಪ್ರಮೀಳಾ ವೀರಪ್ಪ ಇದ್ದರು.

ಕಿರುಸುದ್ದಿ

ಯುವಕರ ಗುಂಪುಗಳ ನಡುವೆ ಜಗಳ

ಹಾಸನ: ಹೊರ ರಾಜ್ಯದ ಯುವಕರು ಹಾಗೂ ಸ್ಥಳೀಯ ಅಪ್ರಾಪ್ತ ಯುವಕರ ನಡುವೆ ಕ್ಷುಲ್ಲಕ ಕಾರಣಕ್ಕೆ ತಾಲ್ಲೂಕಿನ ಹನುಮಂತ ಪುರದಲ್ಲಿ ಮಾರಾಮಾರಿ ನಡೆದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಮಾ.13 ರಂದು ರಾತ್ರಿ 10.30 ರ ಸುಮಾರಿಗೆ ಈ ಘಟನೆ ನಡೆದಿದ್ದು, ದೊಡ್ಡ ದೊಡ್ಡ ರಿಪೀಸ್ ಪಟ್ಟಿಗಳಿಂದ ವಯಸ್ಕರು ಹಾಗೂ ಅಪ್ರಾಪ್ತರ ಗುಂಪು ಪರಸ್ಪರ ಹೊಡೆದಾಡಿಕೊಂರುವ ಭಯಾನಕ ದೃಶ್ಯಾವಳಿ ಸಿಸಿ ಟಿವಿಯಲ್ಲಿ ಸೆರೆ ಆಗಿದೆ. ಈ ಸಂಬಂಧ ಸೌರವ್ ಘೋಷ್ ಹಾಗೂ ಕಿರಣ್ ಘೋಷ್ ಎಂಬುವರು ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರು ನೀಡಿರುವವರು ಪಶ್ಚಿಮ ಬಂಗಾಳದವರು ಎನ್ನಲಾಗಿದೆ. ಸೌರವ್ ಘೋಷ್ ಹಾಗೂ ಕಿರಣ್ ಘೋಷ್ ಕೈಗಾರಿಕಾ ಪ್ರದೇಶದಲ್ಲಿರುವ ಹಿಮತ್ ಸಿಂಗ್ ಕ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು, ಗೊರೂರು ರಸ್ತೆಯ ಪೆರುಮೇನಹಳ್ಳಿ ಗ್ರಾಮದಲ್ಲಿ ಬಾಡಿಗೆ ರೂಂನಲ್ಲಿ ವಾಸವಾಗಿದ್ದಾರೆ. ಮಾ.13 ರ ರಾತ್ರಿ ರೂಂಗೆ ಬೇಕಾದ ಸರರು-ಸರಂಜಾಮು ತೆಗೆದುಕೊಂಡು ಹೋಗುವಾಗ ನಡೆದಿರುವ ಈ ಗಲಾಟೆ ನಡೆದಿದೆ. ಸೌರವ್ ಘೋಷ್ ಹಾಗೂ ಕಿರಣ್ ಘೋಷ್ ನಡೆದು ಕೊಂಡು ಹೋಗುವಾಗ ಅಪ್ರಾಪ್ತರ ಜೊತೆ ಬಡಿದಾಟ ನಡೆದಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎರಡೂ ಕಡೆಯವರನ್ನು ಕರೆಸಿ ಪೊಲೀಸರು ಎಚ್ಚರಿಕೆ ನೀಡಿ ಕಳಿಸಿದ್ದಾರೆ.

ಎವಿಕೆ ಪಪೂ ಕಾಲೇಜಿಗೆ ನೂತನ ಪ್ರಾಂಶುಪಾಲರ ನೇಮಕ



ಹಾಸನ: ನಗರದ ಪ್ರತಿಷ್ಠಿತ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧೀನಕ್ಕೊಳಪಟ್ಟಿರುವ ಎ.ವಿ.ಕೆ ಪದವಿ ಪೂರ್ವ ಕಾಲೇಜಿಗೆ ನೂತನ ಪ್ರಾಂಶುಪಾಲರಾಗಿ ಕಾರ್ಮೆಲ್ ಶ್ರೀನಾ ಅವರನ್ನು ನೇಮಕ ಮಾಡಲಾಗಿದೆ. ಈ ಕುರಿತು ಕಾಲೇಜಿನ ಆಡಳಿತ ಮಂಡಳಿಯು ಅಧಿಕೃತ ಮಾಹಿತಿ ನೀಡಿದ್ದು, ಪ್ರಸ್ತುತ ಕಾರ್ಮೆಲ್ ಶ್ರೀನಾ ಅವರೇ ಕಾಲೇಜಿನ ಪೂರ್ಣ ಪ್ರಮಾಣದ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದೆ. ಪಿಯುಸಿ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅವರು ಮಾತ್ರವೇ ಅಧಿಕೃತ ಮತ್ತು ಕಾನೂನಾತ್ಮಕ ಅಧಿಕಾರ ಹೊಂದಿದವರಾಗಿದ್ದು, ಸಾರ್ವಜನಿಕರು ಹಾಗೂ ಪೋಷಕರು ಈ ಬದಲಾವಣೆ ಗಮನಿಸಿ ಎಂದಿನಂತೆ ಸಹಕರಿಸಬೇಕೆಂದು ಮಂಡಳಿ ಮನವಿ ಮಾಡಿದೆ. ಇದೇ ಸಂದರ್ಭದಲ್ಲಿ ಕಾಲೇಜಿನ 2026ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರವೇಶಾತಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಮಕ್ಕಳು, ಪೋಷಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದೆ.

ಹಣಕಾಸು ವಿಚಾರಕ್ಕೆ ಯುವಕನ ಹತ್ಯೆ

ಅರಸೀಕೆರೆ: ಹಣಕಾಸು ವಿಚಾರಕ್ಕೆ ಯುವಕನನ್ನು ಕರೆದೊಯ್ದು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಾಲೂಕಿನ ಚಿನ್ನೇನಹಳ್ಳಿ ಗಡಿಯಲ್ಲಿ ನಡೆದಿದೆ.



ವರುಣ್.ಕೆ.ಎಂ. (22) ಕೊಲೆಯಾದ ಯುವಕ ಕೊಲೆ ಮಾಡಿದ ನಂತರ ಗುರುತು ಸಿಗದಂತೆ ಸಾಕ್ಷ್ಯ ನಾಶಪಡಿಸಲು ಯುವಕನ ಶವವನ್ನು ಹಂತಕರು ಸುಟ್ಟು ಹಾಕಿ ನಂತರ ಪರಾರಿಯಾಗಿದ್ದಾರೆ. ತಾಲ್ಲೂಕಿನ, ಶ್ರೀ ಜೇನುಕಲ್ಲು ಸಿದ್ದೇಶ್ವರಸ್ವಾಮಿ ಬೆಟ್ಟದ ಹಿಂಭಾಗ ವರುಣ್. ಕೆ.ಎಂ.ಶವವನ್ನು ಸುಟ್ಟು ಹಾಕಿರುವುದು ಬಯಲಿಗೆ ಬಂದಿದೆ. ವರುಣ್ ಮೃತದೇಹದ ಒಂದು ಮೂಳೆಯೂ ಸಿಗದಂತೆ ಸುಟ್ಟು ಹಾಕಲಾಗಿದ್ದು, ಕೊಲೆಗಡುಗಕರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಮಾ.15 ರಂದು ಗಂಡಸಿ ಪೊಲೀಸ್ ಠಾಣೆಯಲ್ಲಿ ವರುಣ್ ಕಡೆಯವರು ನಾಪತ್ತೆ ಕೇಸು ದಾಖಲು ಮಾಡಿದರು. ಅದಾದ ಬಳಿಕ ಕೊಲೆ ನಂತರ ಮೃತದೇಹ ಸುಟ್ಟಿರುವುದು ಗೊತ್ತಾಗಿದ್ದು, ಆರೋಪಿಗಳ ಬಂಧನಕ್ಕೆ ಖಾಕಿ ಪಡೆ ಬಲೆ ಬೀಸಿದೆ. ಆರೋಪಿಗಳ ಬಂಧನ ನಂತರ ಕೊಲೆ ರಹಸ್ಯ ತಿಳಿಯಲಿದೆ.

ಅಪಘಾತ: ಯುವಕ ಸಾವು

ಹೊಳೆನರಸೀಪುರ: ರಸ್ತೆ ವಿಭಜಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಓರ್ವ ಯುವಕ ಸ್ಥಳದಲ್ಲೇ ಮೃತಪಟ್ಟು, ಮತ್ತೋರ್ವ ಯುವಕ ಗಂಭೀರ ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ. ಯುಗಾದಿ ಹಬ್ಬದ ದಿನವಾದ ಗುರುವಾರ ರಾತ್ರಿ ಸುಮಾರು 11.10 ಗಂಟೆಯ ಸುಮಾರಿಗೆ ಇಬ್ಬರು ಯುವಕರು ಬೈಕ್‌ನಲ್ಲಿ ಊರಿಗೆ ತೆರಳುತ್ತಿದ್ದರು. ಮೈಸೂರು ರಸ್ತೆಯಲ್ಲಿರುವ ಫಾರೆಸ್ಟ್ ಆಫೀಸ್ ಎದುರು ನಿಯಂತ್ರಣ ತಪ್ಪಿ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಪೂಜೆ ಕೊಪ್ಪಲು ಗ್ರಾಮದ ಸಂದೀಪ್ (23) ಎಂಬ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಘಟನೆ ಸಂಬಂಧ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಸಕಲೇಶಪುರ ತಾಲೂಕಿನ ಹಲವು ಭಾಗಗಳಲ್ಲಿ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು, ಅಂತಹ ರಸ್ತೆಗಳ ನಿರ್ಮಾಣಕ್ಕೆ ಶಾಸಕ ಸಿಮೆಂಟ್ ಗುದ್ದಲಿಪೂಜೆ ನೆರವೇರಿಸಿದರು.

ರಸ್ತೆ ನಿರ್ಮಾಣಕ್ಕೆ ಭೂಮಿಪೂಜೆ

ಸಕಲೇಶಪುರ: ತಾಲೂಕಿನ ಹಲವು ಭಾಗಗಳಲ್ಲಿ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು. ಅಂತಹ ರಸ್ತೆಗಳ ನಿರ್ಮಾಣಕ್ಕೆ ಶಾಸಕ ಸಿಮೆಂಟ್ ಮುಂದಿನ ಗುದ್ದಲಿ ಪೂಜೆ ನೆರವೇರಿಸಿದರು.

ಹೆತ್ತೂರು ಗ್ರಾಮ ಪಂಚಾಯಿತಿ ವಿದ್ಯಾನಗರದಿಂದ ಕರ್ನಾಟಕ ಪಬ್ಲಿಕ್ ಶಾಲೆಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಸುಮಾರು 32.5ಲಕ್ಷ ರೂ ವೆಚ್ಚದಲ್ಲಿ ರಸ್ತೆ ನಿರ್ಮಾಣವಾಗಲಿದೆ. ಹೆತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆತ್ತೂರು ಬಿ ಬ್ಲಾಕ್ ನಿಂದ ಬಸವನಗುಡಿ ವರೆಗೆ 15 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ. ಬ್ಯಾಕರವಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಕೆರೆ ಮುಖ್ಯರಸ್ತೆಯಿಂದ ಬ್ಯಾಗದೀಣೆ ಗ್ರಾಮದ ವರೆಗೆ 25 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿ.

ಕ್ಯಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಹುದಶಕಗಳ ಬೇಡಿಕೆಯಾಗಿದ್ದ ಆಲುವಳ್ಳಿ, ಕಡಗರವಳ್ಳಿ, ನೋದರಹಳ್ಳಿ ಹೊಸಗದ್ದೆ ಗ್ರಾಮಗಳಿಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಈ ರಸ್ತೆಯ 3 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಹಾಸನ ನಗರದ ಬೆಸ್ಟ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಸಿ.ಎ ವಿಭಾಗದ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಮ್ಮಿಕೊಳ್ಳಲಾಯಿತು.

ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ರಾಜಕೀಯ ಪಿತೂರಿ: ಸ್ವರೂಪ್

ಪ್ರಭಾವಿ ಹೆಸರು ಇಲ್ಲ: ದೂರು

ಹಾಸನ: ಅಶ್ಲೀಲ ದೃಶ್ಯಾವಳಿಯುಳ್ಳ ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ರಾಜಕೀಯ ಪಿತೂರಿ, ಸರ್ಕಾರದ ಆಣತಿಯಂತೆ, ತನಿಖಾ ತಂಡ ಎಸ್‌ಐಟಿ ನಿಜವಾಗಿಯೂ ವಿಡಿಯೋ ಹಂಚಿರುವ ಪ್ರಭಾವಿಗಳ ಹೆಸರನ್ನು ಕೈ ಬಿಟ್ಟು, ಏನೂ ತಪ್ಪು ಮಾಡದವರನ್ನು ಸೇರಿಸಿದೆ ಎಂದು ಸ್ಥಳೀಯ ಶಾಸಕ ಎಚ್.ಪಿ.ಸ್ವರೂಪ್ ಸಮಾಧಾನ ವ್ಯಕ್ತ ಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜಕೀಯ ದುರುದ್ದೇಶದಿಂದ ಕೆಲ ಅಮಾಯಕರ ಹೆಸರನ್ನು ಸೇರಿಸಲಾಗಿದೆ ಪ್ರಕಾಶ್ ಗಂಭೀರ ಆರೋಪ ಮಾಡಿದರು. ನಮ್ಮ ಚಿಕ್ಕಪ್ಪ ಅವರ ಪುತ್ರ ಹಾಗೂ ಕೆಲ ಜೆಡಿಎಸ್ ಕಾರ್ಯಕರ್ತರು ಪೆನ್‌ಡ್ರೈವ್ ಹಂಚಿಕೆ ಮಾಡಿದ್ದಾರೆ ಎಂಬುದು ಸತ್ಯಕ್ಕೆ ದೂರ. ಇದೊಂದು ರಾಜಕೀಯ ಪಿತೂರಿ, ಸರ್ಕಾರದ ಆಣತಿಯಂತೆ, ತನಿಖಾ ತಂಡ ಎಸ್‌ಐಟಿ ನಿಜವಾಗಿಯೂ ವಿಡಿಯೋ ಹಂಚಿರುವ ಪ್ರಭಾವಿಗಳ ಹೆಸರನ್ನು ಕೈ ಬಿಟ್ಟು, ಏನೂ ತಪ್ಪು ಮಾಡದವರನ್ನು ಸೇರಿಸಿದೆ ಎಂದು ಸಮಾಧಾನ ಹೊರ ಹಾಕಿದರು.

ವಿಶೇಷತನಿಖಾ ತಂಡ (ಎಸ್‌ಐಟಿ) ನಿಷ್ಪಕ್ಷಪಾತವಾಗಿ ತನಿಖೆ ಮಾಡಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದ ಶಾಸಕರು, ಎ1 ಆರೋಪಿ, ನವೀನ್‌ನ್ನು ಮಂಪರು ಪರೀಕ್ಷೆಗೆ ಒಳ ಪಡಿಸಿದರೆ ನಿಜವಾದ ಹಂಚಿಕೆದಾರರ ಹೆಸರು ಹೊರ ಬರಲಿದೆ, ಆ ಕೆಲಸವನ್ನು ತುರ್ತಾಗಿ ಎಸ್‌ಐಟಿ ಆ ಕೆಲಸ ಮಾಡಬೇಕು ಎಂದು ಒತ್ತಾಯಿಸಿದರು. ಕಳೆದ ಎಂಪಿ ಚುನಾವಣೆಯನ್ನು ವಾಮಮಾರ್ಗದಲ್ಲಿ ಗೆಲ್ಲಲು ಯಾರೆಲ್ಲ ಪೆನ್‌ಡ್ರೈವ್ ಹಂಚಿದರು ಎಂಬುದು ಜಗಜ್ಜಾಹೀರವಾಗಿದೆ. ಆದರೀಗ ಶಾಸಕರ ಸಂಬಂಧಿಕರು, ಜೆಡಿಎಸ್ ಕಾರ್ಯಕರ್ತರು ಹಂಚಿದ್ದಾರೆ ಎಂದು ಚಾರ್ಜ್‌ಶೀಟ್ ಹಾಕಿರುವುದು ತನಿಖೆ ಹಾದಿ ತಪ್ಪಿಸುವ ಹುನ್ನಾರ.



ರೇವಣ್ಣಗೂ ಸತ್ಯಾಸತ್ಯತೆ ಗೊತ್ತಿದೆ

ದೋಷಾರೋಪಣಾ ಪಟ್ಟಿಯಲ್ಲಿ ಎ1,ಎ2 ಸೇರಿಸಿ, ಎ3,ಎ4 ಕೈಬಿಡಲಾಗಿದೆ. ಹಾಗೆಯೇ ಎ8 ರಿಂದ 17,ಎ17 ರಿಂದ ಎ21 ರ ವರೆಗೆ ಹೆಸರಿಲ್ಲದೇ ಇರುವುದು ಹಲವು ರೀತಿಯ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಈ ರೀತಿಯ ಕುತಂತ್ರದ ಮೂಲಕ ನಮ್ಮ ಹಾಗೂ ರೇವಣ್ಣ ಅವರ ಕುಟುಂಬದ ಸಂಬಂಧ ಹಾಳು ಮಾಡಲು ಸಾಧ್ಯವೇ ಇಲ್ಲ. ರೇವಣ್ಣ ಅವರಿಗೂ ಸತ್ಯಾಸತ್ಯತೆ ಗೊತ್ತಿದೆ. ನಮ್ಮ ತಂದೆಯ ಕಾಲದಿಂದಲೂ ನಾವು ದೇವೇಗೌಡರ ಕುಟುಂಬಕ್ಕೆ ನಿಷ್ಠರಾಗಿದ್ದೇವೆ. ಕೀಳುಮಟ್ಟದ ರಾಜಕಾರಣ ಎಂದೂ ಮಾಡಿಲ್ಲ, ಮುಂದೆಯೂ ಮಾಡಿಲ್ಲ. ದೊಡ್ಡ ಮನೆಯವರ ಕುಟುಂಬಕ್ಕೆ ನಾವೆಲ್ಲರೂ ಸದಾ ಋಣಿಯಾಗಿರುತ್ತೇವೆ. ಸಂಬಂಧ ಕೆಡಿಸುವವರ ದುರಾಸೆ ಎಂದೂ ಫಲಿಸುವುದಿಲ್ಲ ಎಂದು ಶಾಸಕರು ತಿರುಗೇಟು ನೀಡಿದರು.

10-12 ಜೆಡಿಎಸ್ ಕಾರ್ಯಕರ್ತರು ಹಂಚಿದ್ದಾರೆ ಎಂದಿರುವುದನ್ನು ತೀವ್ರವಾಗಿ ಖಂಡಿಸುವೆ ಎಂದರು.

ನಿಜವಾದ ಆರೋಪಿಗಳು ಯಾರೆಂಬುದು ಹೊರ ಬರಲು ಡಿಸಿಎಂ ಹಾಗೂ ಗೃಹ ಸಚಿವರು ಉನ್ನತ ಮಟ್ಟದ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು. ಜಾರ್ಜ್‌ಶೀಟ್‌ನಲ್ಲಿ ಸಂಬಂಧವೇ ಇಲ್ಲದ ನಮ್ಮ ಪಕ್ಷದ ಕೆಲವರ ಹೆಸರು ಸೇರಿಸಿರುವುದನ್ನು ಖಂಡಿಸಿ, ಕೆಲವರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಕೈ ಬಿಟ್ಟಿರುವುದನ್ನು ವಿರೋಧಿಸಿ ಕಾನೂನು ಹೋರಾಟ ಮಾಡುವುದಾಗಿ ತಿಳಿಸಿದ ಸ್ವರೂಪ್, ನಮ್ಮ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಎದೆಗುಂದುವುದು ಬೇಡ ಎಂದರು.

ಪೆನ್‌ಡ್ರೈವ್ ಹಂಚಿಕೆಯಲ್ಲಿ ನಮ್ಮ ಪಕ್ಷದ ಯಾವುದೇ ಕಾರ್ಯಕರ್ತರು ಭಾಗಿಯಾಗಿಲ್ಲ. ತನಿಖೆ ದಿಕ್ಕು ತಪ್ಪಿಸಲು ಹಾಗೂ ಜೆಡಿಎಸ್ ಪಕ್ಷದ ಮೇಲೆಯೇ ಗೂಬೆ ಕೂರಿಸುವ ದುರುದ್ದೇಶದಿಂದ ಹೀಗೆ ಮಾಡಲಾಗಿದೆ.

ಅದಕ್ಕಾಗಿಯೇ ನವೀನ್‌ನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು. ಅಮಾಯಕರ ಹೆಸರು ಸೇರ್ಪಡೆ, ನಿಜ ಆರೋಪಿಗಳ ಹೆಸರು ಕೈ ಬಿಟ್ಟಿರುವುದರ ವಿರುದ್ಧ ಕಾನೂನು ಹೋರಾಟ ಮಾಡಲು ನಿರ್ಧರಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ಮಾಧ್ಯಮ ವಕ್ತಾರ ಹೊಂಗೆರೆ ರಘು, ಮುಖಂಡರಾದ ಸಮೀರ್, ಶಿವಣ್ಣ, ಮಧುಪಟೇಲ್, ವಿಜಯಕುಮಾರ್ ಇದ್ದರು.

ವೀರಭದ್ರಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಗುದ್ದಲಿಪೂಜೆ

ಚನ್ನರಾಯಪಟ್ಟಣ: ತಾಲೂಕಿನ ಕಸಬಾ ಹೋಬಳಿ ಮಳ್ಳೇನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರೆಲ್ಲ ಕೂಡಿ 14 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಹಾಗೂ ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್ ಗುದ್ದಲಿಪೂಜೆ ನೆರವೇರಿಸಿ ಶೀಘ್ರ ದೇವಸ್ಥಾನ ನಿರ್ಮಾಣವಾಗಿ ಗ್ರಾಮಸ್ಥರಿಗೆ ಸ್ವಾಮಿ ದರ್ಶನ ಭಾಗ್ಯ ಸಿಗಲಿ ಎಂದು ಹಾರೈಸಿದರು.

ಗ್ರಾಮದ ಮಧ್ಯಭಾಗದಲ್ಲಿ ನಿರ್ಮಾಣ ಮಾಡಲಾಗುತ್ತಿರುವಶ್ರೀವೀರಭದ್ರಸ್ವಾಮಿ ದೇವಸ್ಥಾನದ ಶಂಕುಸ್ಥಾಪನಾ ಕಾರ್ಯದಲ್ಲಿ ಗುಡಿಭಟ್ಟರ ಕುಟುಂಬಸ್ಥರಿಂದ ಶಾಸ್ತ್ರಕವಾಗಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು. ಮಾಜಿ ಶಾಸಕ ಸಿ.ಎಸ್. ಪುಟ್ಟೇಗೌಡರು, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿಆನಂದ್, ಮತ್ತು ಕಾಂಗ್ರೆಸ್ ಯುವಮುಖಂಡ ವಿನೋದ್ ಮಕಾನ್ ಪೂಜಾಕಾರ್ಯದಲ್ಲಿ ಭಾಗಿಯಾಗಿ ದೇವಸ್ಥಾನಕ್ಕೆ ಅಡಿಗಲ್ಲು ಇಟ್ಟು ಪೂಜೆ ಸಲ್ಲಿಸಿದರು.

ಮಾಜಿ ಶಾಸಕ ಪುಟ್ಟೇಗೌಡ ಮಾತನಾಡಿ, ದೇವಸ್ಥಾನ ನಿರ್ಮಾಣದ ಸಂಕಲ್ಪ ಮಾಡಿರುವ ನಿಮಗೆ ಯಾವುದೇ ಅಡೆತಡೆ ಆಗದೇ ಶೀಘ್ರ ದೇವಸ್ಥಾನ ನಿರ್ಮಾಣವಾಗಿ ನಿಮ್ಮೆಲ್ಲರಿಗೂ ಭಗವಂತನ ದರ್ಶನ ಸಿಕ್ಕಿ ನಿಮ್ಮೆಲ್ಲ ಕಷ್ಟಗಳೆಲ್ಲಾ ದೂರವಾಗುವಂತಾಗಲಿ ಎಂದು ಶುಭ ಹಾರೈಸಿದರು.



ನಂತರ ಮಾತನಾಡಿದ ಗ್ರಾಮದ ಮುಖಂಡ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹರೀಶ್ ಮಾತನಾಡಿ, ನಮ್ಮ ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಪ್ರಮುಖವಾಗಿ ಗ್ರಾಮದ ಪರಿಶಿಷ್ಟ ಸಮುದಾಯದ ಜನರು ಅತಿ ಹೆಚ್ಚಿನ ಹಣವನ್ನು ಪ್ರತಿ ಮನೆಗಿಷ್ಟು ಎಂಬುದಾಗಿ ಕ್ರೋಡಿಕರಿಸಿದ್ದಾರೆ. ಇದರೊಂದಿಗೆ ಗ್ರಾಮದ ಹಿರಿಯರು, ಇತರೆ ಸಮುದಾಯದವರು ಸೇರಿ 13.5 ಲಕ್ಷ ಹಣ ಕ್ರೋಡಿಕರಿಸಲಾಗಿದೆ.

ಮುಜರಾಯಿ ಇಲಾಖೆಯಡಿ ತಹಶೀಲ್ದಾರ್‌ರವರು ಅನುದಾನ ಕೊಡಿಸುವ ಭರವಸೆ ನೀಡಿದ್ದಾರೆ. ಇನ್ನೊಂದು ವರ್ಷದಲ್ಲಿ ದೇವಸ್ಥಾನ ನಿರ್ಮಿಸಿಕೊಡುವ ಭರವಸೆಯನ್ನು ಗುತ್ತಿಗೆದಾರ ರವಿಕುಮಾರ್ ಹೇಳಿದ್ದು ಇದಕ್ಕೆ ಪೂರಕವಾಗಿ ಗ್ರಾಮಸ್ಥರು ಹೆಚ್ಚಿನ ಸಹಕಾರ ನೀಡಿ ದೇವಸ್ಥಾನದ ಉದ್ಘಾಟನೆಗೆ ಮುಂದಾಗುವಂತೆ ಮನವಿ ನೀಡಿದರು. ಗ್ರಾಮದ ಮುಖಂಡರಾದ ಸುಬ್ಬಣ್ಣ, ಜಯರಾಮ್, ಕುಶಣ್ಣ, ರಾಜು, ರಂಗಸ್ವಾಮಿ, ಸುರೇಶ್, ಶಿವು ಇದ್ದರು.

ಏ.11ರಿಂದ ಪತ್ರಕರ್ತರ ಮಹಾಸಮ್ಮೇಳನ

ಹಾಸನ: ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ರಾಜ್ಯಮಟ್ಟದ ಮಹಾಸಮ್ಮೇಳನವು ಏ.11 ಮತ್ತು 12ರಂದು ಬೀದರ್‌ನಲ್ಲಿ ನಡೆಯಲಿದೆ ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನ್ ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮ್ಮೇಳನಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಪತ್ರಕರ್ತರು ಒಂದೇ ವೇದಿಕೆಯಲ್ಲಿ ಸೇರಿ ಸಂಘದ ಬಲವರ್ಧನೆ, ವೃತ್ತಿಪರ ಸವಾಲುಗಳು, ಪತ್ರಕರ್ತರ ಹಕ್ಕುಗಳು ಹಾಗೂ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಚರ್ಚಿಸುವ ಮಹತ್ವದ ವೇದಿಕೆಯಾಗಿದೆ. ಪತ್ರಕರ್ತರ ಏಕತೆ ಮತ್ತು ಶಕ್ತಿಯ ಪ್ರದರ್ಶನವಾಗುವ ಈ ಮಹಾಸಮ್ಮೇಳನದಲ್ಲಿ ರಾಜ್ಯದ ಎಲ್ಲಾ ಕಾರ್ಯನಿರತ ಪತ್ರಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು. ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು, ಜನಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ. ಪತ್ರಕರ್ತರು ಎದುರಿಸುತ್ತಿರುವ ಸಮಸ್ಯೆಗಳು, ಭದ್ರತೆ, ವೇತನ, ಸಾಮಾಜಿಕ ಭದ್ರತಾ ಯೋಜನೆಗಳು ಸೇರಿದಂತೆ ಹಲವು ನ್ಯಾಯಸಮ್ಮತ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಇದೇ ವೇಳೆ ಮಾಧ್ಯಮ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದ ಹಿರಿಯ ಹಾಗೂ ಯುವ ಪತ್ರಕರ್ತರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ಬಾಗಿವಾಳು: ರಾಮೇಶ್ವರಸ್ವಾಮಿ ಕರಗ ಮಹೋತ್ಸವ

ಹೊಳೆನರಸೀಪುರ: ತಾಲೂಕಿನ ಬಾಗಿವಾಳು ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಶ್ರೀ ರಾಮೇಶ್ವರ ಸ್ವಾಮಿಯ ಕರಗ ಮಹೋತ್ಸವ ಅಥವಾ ಬಿಂದಿಗೆ ಜಾತ್ರೆಯು ಅತ್ಯಂತ ವೈಭವ ಮತ್ತು ಸೌಹಾರ್ದತೆಯಿಂದ ಜರುಗಿತು.

ಯುಗಾದಿ ಹಬ್ಬದ ದಿನವಾದ ಗುರುವಾರ ಬ್ರಾಹ್ಮೀ ಮುಹೂರ್ತದಲ್ಲಿ ಪೂಜಾ ಕಾರ್ಯಕ್ರಮಗಳು ಆರಂಭಗೊಂಡವು. ಗ್ರಾಮದ ಶ್ರೀ ರಾಮೇಶ್ವರ ದೇವಾಲಯ ಹಾಗೂ ಹೇಮಾವತಿ ನದಿತೀರದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ನಂತರ ಬಿಂದಿಗೆ ಅಥವಾ ಕರಗವನ್ನು ಹೊತ್ತ ಬಸವರಾಜು ಅವರು ಗ್ರಾಮದ ವಿವಿಧ ದೇವಾಲಯಗಳಲ್ಲಿ ಪ್ರದಕ್ಷಿಣೆ ಹಾಕಿ ಭಕ್ತಿ ಭಾವದಿಂದ ನೃತ್ಯ ಪ್ರದರ್ಶಿಸಿದರು.



ವೀರಶೈವ ಲಿಂಗಾಯತ ಜನಾಂಗದ ಜಂಗಮ ಪಂಗಡಕ್ಕೆ ಸೇರಿದ ಬಸವರಾಜು ಅವರು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈ ಹಬ್ಬದ ಅಂಗವಾಗಿ ಅವರು ಶಿವರಾತ್ರಿ ಹಬ್ಬದಿಂದಲೇ ಆಚರಣೆಗಳನ್ನು ಕೈಗೊಂಡು, ಕಳೆದ ಐದು ದಿನಗಳಿಂದ ಕಟ್ಟುನಿಟ್ಟಿನ ಉಪವಾಸ ವ್ರತವನ್ನು ಪಾಲಿಸಿದ್ದರು.

ಜಾತ್ರೆಯ ವೇಳೆ ಭಕ್ತಾದಿಗಳು ಕರಗ ಹರಿವಾಣಕ್ಕೆ ನಾಣ್ಯಗಳನ್ನು ಹಾಕಿ ತಮ್ಮ ಹರಕೆಗಳನ್ನು ತೀರಿಸುವ ಸಂಪ್ರದಾಯವನ್ನು ಶ್ರದ್ಧಾ ಭಕ್ತಿಯಿಂದ ಪಾಲಿಸಿದರು.

ಸುತ್ತಮುತ್ತಲ ಗ್ರಾಮಗಳ ನೂರಾರು ಭಕ್ತರು ಈ ವಿಶಿಷ್ಟ ಆಚರಣೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.



ಹಾಸನ ನಗರದ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಶೈಕ್ಷಣಿಕ ಅಧ್ಯಯನದ ಭಾಗವಾಗಿ ನಗರದ ಹೊರ ವಲಯದ ಚೈತನ್ಯ ವೃದ್ಧಾಶ್ರಮಕ್ಕೆ ವಿದ್ಯಾರ್ಥಿನಿಯರು ಭೇಟಿ ನೀಡಿದರು.

ಮಾ.23ಕ್ಕೆ ವಿಶ್ವ ಗ್ರಾಹಕರ ದಿನಾಚರಣೆ

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಾಸನ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಸಹಯೋಗದಲ್ಲಿ ಮಾ.23 ರಂದು ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೆಳಿಗ್ಗೆ 11 ಗಂಟೆಗೆ ವಿಶ್ವ ಗ್ರಾಹಕರ ದಿನಾಚರಣೆ ಆಯೋಜಿಸಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಸಿ.ಎಂ. ಚಂಚಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ, ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ., ಎಂ.ಕೃಷ್ಣ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ ಹೇಮಂತ್ ಕುಮಾರ್ ಹೆಚ್.ಎಸ್ ಹಾಗೂ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಕಾರ್ಯಾಧ್ಯಕ್ಷರಾದ ವೈ.ಎಸ್ ಸಿದ್ದಯ್ಯ ಅವರು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲಿದ್ದಾರೆ.

ನಾಳೆಯಿಂದ ವಾರ್ಷಿಕ ವಿಶೇಷ ಶಿಬಿರ

ಆಲೂರು: ಸರ್ಕಾರಿ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ 2024-25 ನೆ ಶೈಕ್ಷಣಿಕ ಸಾಲಿನ ವಾರ್ಷಿಕ ವಿಶೇಷ ಶಿಬಿರವು ಮಾ.22ರಿಂದ 28ರವರೆಗೆ ಕಸಬಾ ಧರ್ಮಪುರಿ ಗ್ರಾಮದಲ್ಲಿ ನಡೆಯಲಿದೆ ಎಂದು ಶಿಬಿರದ ನಿರ್ದೇಶಕ ಹಾಗೂ ಪ್ರಾಂಶುಪಾಲ ಟಿ.ಪಿ. ಪುಟ್ಟರಾಜು ತಿಳಿಸಿದ್ದಾರೆ.

ಮಾ. 22 ರಂದು ಸಂಜೆ 5 ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಶಾಸಕ ಸಿಮೆಂಟ್ ಮಂಜು, ಪ್ರಾಂಶುಪಾಲ ಟಿ. ಪಿ. ಪುಟ್ಟರಾಜು, ನಾಗೇಂದ್ರ ಸೇವಾ ಪ್ರತಿಷ್ಠಾನ ಸಂಸ್ಥಾಪಕ ಸಿದ್ದೇಶ್ ನಾಗೇಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಕೆ. ಎಸ್. ಮಂಜೇಗೌಡ ಭಾಗವಹಿಲಿದ್ದಾರೆ. 21 ರಂದು ಸಂಜೆ 6.30 ಕ್ಕೆ ಸಾಮಾಜಿಕ ಪಿಡುಗುಗಳು ಕುರಿತು ಡಾ. ಕೆ. ಎಸ್. ಮೋಹನ್‌ಕುಮಾರ್ ಉಪನ್ಯಾಸ ನೀಡಲಿದ್ದಾರೆ. ಆಂಗ್ಲ ಭಾಷ ವಿಭಾಗ ಮುಖ್ಯಸ್ಥ ಕೆ. ಎನ್. ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 7 ಕ್ಕೆ ಶಿಕ್ಷಕಿ ಎಚ್. ವೇದಾವತಿ ರವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. 24 ರಂದು ಸಂಜೆ 6.30 ಕ್ಕೆ ಅಗ್ನಿ ಅವಘಡಗಳ ಅರಿವು ಹಾಗೂ ಮುಂಜಾಗ್ರತಾ ಕ್ರಮ ಕುರಿತು ಅಗ್ನಿಶಾಮಕ ಪ್ರಬಾರ ಠಾಣಾಧಿಕಾರಿ ಡಿ. ಜಿ. ಮಂಜೇಗೌಡ ಮತ್ತು ಜನಪದ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ಕುರಿತು ಜಿ. ಟಿ. ದೇವರಾಜು ಉಪನ್ಯಾಸ ನೀಲಿದ್ದಾರೆ. ಇತಿಹಾಸ ಮುಖ್ಯಸ್ಥ ಜೆ. ಜಿ. ನಟರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. 25 ರಂದು ಬೆಳಗ್ಗೆ 11 ಕ್ಕೆ ಉಚಿತ ಆರೋಗ್ಯ ಶಿಬಿರ ನಡೆಯಲಿದೆ.

ಗ್ರಾಮಲೆಕ್ಕಾಧಿಕಾರಿಗಳಿಗೆ ಕಂದಾಯ ಇಲಾಖೆಯಿಂದ ಲ್ಯಾಪ್‌ಟಾಪ್ ವಿತರಣೆ

ವಿಳಂಬವಿಲ್ಲದೆ ಸಾರ್ವಜನಿಕರ ಅರ್ಜಿ ವಿಲೇವಾರಿಯಾಗಲಿ

ಬೇಲೂರು: ಕರ್ನಾಟಕ ಸರ್ಕಾರ ಹಾಗೂ ಕಂದಾಯ ಇಲಾಖೆ ವತಿಯಿಂದ ಸಾರ್ವಜನಿಕರ ಅರ್ಜಿಗಳು ಯಾವುದೇ ವಿಳಂಬವಿಲ್ಲದೆ ವಿಲೇವಾರಿಯಾಗಬೇಕು ಎಂಬ ಹಿನ್ನಲೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುತ್ತದೆ. ಅಂತಯೇ ಬೇಲೂರು ತಾಲ್ಲೂಕಿನ ಎಲ್ಲಾ ವೃತ್ತದ ಗ್ರಾಮಲೆಕ್ಕಾಧಿಕಾರಿಗಳಿಗೆ ಸಕಲೇಶ ಪುರ ಉಪ ವಿಭಾಗಾಧಿ ಕಾರಿ ಮಂಜುನಾಥ್ ಮತ್ತು ಬೇಲೂರು ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಲ್ಯಾಪ್‌ಟಾಪ್ ವಿತರಿಸಿದರು.

ಈ ಸಂದರ್ಭದಲ್ಲಿ ಸುದ್ದಿ ಗಾರರೊಂದಿಗೆ ಮಾತನಾ ಡಿದ ಸಕಲೇಶಪುರ ಉಪ ವಿಭಾಗಾಧಿಕಾರಿ ಮಂಜು ನಾಥ್,ಕರ್ನಾಟಕ ಸರ್ಕಾರ ಹಾಗೂ ಕಂದಾಯ ಇಲಾಖೆ ಸಾರ್ವಜನಿಕರ ಅರ್ಜಿಗಳು ಸೇರಿದಂತೆ ಇನ್ನಿತರ ಕೆಲಸಗಳು ಯಾವುದೇ ವಿಳಂಭವಿ ಲ್ಲದೆ ತ್ವರಿತ ವಿಲೇವಾರಿಗೆ ಗ್ರಾಮ ಲೆಕ್ಕಾದಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡುವ ಕಾರ್ಯಕ್ಕೆ ಮುಂದಾಗಿದೆ. ಇದರಿಂದ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾ ಗಲಿದೆ ಎಂದ ಅವರು ವಿಶೇಷವಾಗಿ ಗ್ರಾಮಲೆಕ್ಕಾ ಧಿಕಾರಿಗಳು ವಿನಾಃಕಾರಣ ಸಬೂಬು ಹೇಳದೆ ಕೆಲಸ ಮಾಡಬೇಕಿದೆ. ಲ್ಯಾಪ್ ಟಾಪ್ ಡಿಜಿಟಲೀಕರಣ ಗೊಂಡ ಹಿನ್ನಲೆಯಲ್ಲಿ ಸೇವೆಗಳನ್ನು ಪಾರದರ್ಶಕ ವಾಗಿ ಒದಗಿಸಲು ಕಂದಾಯ ಇಲಾಖೆ ದಿಟ್ಟ ಕ್ರಮವನ್ನು ಕೈಗೊಂಡಿದೆ.

ಪ್ರತಿನಿತ್ಯ ಅರ್ಜಿಗಳ ವಿಲೇವಾರಿ ಮತ್ತು ಸೇವೆಗಳ



ಅಂಕಿಅಂಶಗಳು ತಿಳಿಯುವ ಹಿನ್ನಲೆಯಲ್ಲಿ ಇಲಾಖೆ ಗ್ರಾಮ ಮಟ್ಟದ ಅಧಿಕಾರಿಗಳಿಗೆ ತಂತ್ರಜ್ಞಾನ ವನ್ನು ಒದಗಿಸುವ ಮೂಲಕ ಆಡಳಿತವನ್ನು ಸುಗಮಗೊಳಿಸುವ ಮಹತ್ವಪೂರ್ಣ ಯೋಜನೆ ಯಾಗಿದೆ ಎಂದರು.

ಬೇಲೂರು ತಹಸೀಲ್ದಾರ್ ಶ್ರೀಧರ್ ಕಂಕಣ ವಾಡಿ ಮಾತನಾಡಿ, ಕಂದಾಯ ಇಲಾಖೆ ಇತ್ತೀಚಿನ ದಿನದಲ್ಲಿ ಕಂದಾಯ ಸಚಿವರಾದ ಕೃಷ್ಣಬೈರೇಗೌಡರ ಅವಿರತ ಶ್ರಮದಿಂದ ಪಾದದರ್ಶಕ ವಾಗಿ ಆಡಳಿತ ಸೇವೆಗ ಳನ್ನು ವೇಗ ಹೆಚ್ಚಿಸಲು ಮತ್ತು ತ್ವರಿತಗತಿಯಲ್ಲಿ ಜನರಿಗೆ ನೀಡಲು ಲ್ಯಾಪ್ ಟಾಪ್ ವಿತರಣೆಯನ್ನು ಸರ್ಕಾರ ನೀಡಿದೆ. ಇಂದು ಸಕಲೇಶಪುರ ವಿಭಾಗಾಧಿ ಕಾರಿಗಳು ತಾಲ್ಲೂಕಿನ ವೃತ್ತದ ಗ್ರಾಮಲೆಕ್ಕಾಧಿ ಕಾರಿಗಳಿಗೆ ವಿತರಣೆ ಮಾಡಿದ್ದಾರೆ ಎಂದ ಅವರು ಕಂದಾಯ ಇಲಾಖೆ ಆಸ್ತಿ ಭೂದಾಖಲೆ ಗಳ ನಿರ್ವಹಣೆ ಸಂಬಂಧಿ ಸಿದ ಸಾರ್ವಜನಿಕರ ಸೇವೆ ಗಳನ್ನು ಪಾರದರ್ಶಕವಾಗಿ ನೀಡುವುದು ಮತ್ತುಗ್ರಾಮ ಲೆಕ್ಕಾಧಿಕಾರಿಗಳು ಹಳ್ಳಿಗ ಳಲ್ಲಿ ಕುಳಿತು ಆನ್‌ಲೈನ್ ಮೂಲಕ ದಾಖಲೆಗಳ ಸವೀಕರಣ ಮತ್ತು ಪರಿಶೀ ಲನೆಗೆ ಯೋಜನೆ ಪೂರಕ ವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಿರಸ್ತೇದಾರ್ ರಂಗಸ್ವಾಮಿ, ಪ್ರಕಾಶ್, ಯೋಗೀಶ್ ಸೇರಿದಂತೆ ಇನ್ನು ಮುಂತಾದವರು ಹಾಜರಿದ್ದರು.

ಗರಿಷ್ಠ 32° | ಕನಿಷ್ಠ 22°
ಹೊಸ ದಿಗಂತ
ಶನಿವಾರ
21 ಮಾರ್ಚ್ 2026

ತುಮಕೂರು



ಯುಗಾದಿ ಕಿಟ್ ವಿತರಣೆ ಕೊಡಿಗೇನಹಳ್ಳಿ: ಯುಗಾದಿ ಹಬ್ಬದ ಅಂಗವಾಗಿ ಹೋಬಳಿಯ ಸೂರನಾಗೇನಹಳ್ಳಿ ಮಹಿಳೆಯರು ಹಾಗೂ ವೃದ್ಧರಿಗೆ ಯುಗಾದಿ ಹಬ್ಬದ ಪ್ರಯುಕ್ತ ಹಬ್ಬಕ್ಕೆ ಬೇಕಾಗುವ ದಿನಸಿ ಕಿಟ್ ಅನ್ನು ಬೆಂಗಳೂರಿನ ಜೈ ಮಾರುತಿ ಟ್ರಾವೆಲ್ಸ್ ಮಾಲೀಕ ಮಿಣ್ಣಾಪುರ ರಂಗಸ್ವಾಮಿ ವಿತರಿಸಿದರು.

ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ: ಸಿಇಒ | ೨
ಕೋಲಾರ ಬೆಸ್ಕಾಂ ಕಚೇರಿ ಮೇಲ್ದರ್ಜೆಗೆ | ೩
ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿ: ಜಿಲ್ಲಾಧಿಕಾರಿ | ೪

ಕಿರುಸುದ್ದಿ

ಅಭಿನಂದನೆ ಕಾರ್ಯಕ್ರಮ

ಮಧುಗಿರಿ: ವಿಧಾನಸಭಾ ಕ್ಷೇತ್ರಕ್ಕೆ ಕೆಎಸ್‌ಆರ್‌ಟಿಸಿ ವಿಭಾಗೀಯ ಕಚೇರಿಯನ್ನು ಮಂಜೂರು ಮಾಡಿರುವುದಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿರನ್ನು ಹಾಗೂ ವಿಭಾಗೀಯ ಕಚೇರಿ ಮುಂಜೂರಾತಿಗೆ ಶ್ರಮಿಸಿದ ಮಾಜಿ ಸಚಿವರು ಹಾಗೂ ಶಾಸಕ ಕೆ.ಎನ್.ರಾಜಣ್ಣ ಹಾಗೂ ವಿಧಾನಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣರನ್ನು ಅಭಿನಂದಿಸುವುದಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ಮಾದರ ಮಹಾಸಭಾ ಅಧ್ಯಕ್ಷ ಗೋಪಾಲಯ್ಯ ತಿಳಿಸಿದ್ದಾರೆ.



ಕೆ.ಎನ್.ರಾಜಣ್ಣ ಅವಿರತ ಶ್ರಮದಿಂದಾಗಿ ವಿಭಾಗೀಯ ಕಚೇರಿ ಮುಂಜೂರಾಗಿದ್ದು, ಇದು ಮಧುಗಿರಿಯನ್ನು ಜಿಲ್ಲಾ ಕೇಂದ್ರ ಮಾಡುವ ಕಾರ್ಯಕ್ಕೆ ಮುನ್ನುಡಿ ಎಂದು ಅವರು ಮದುಗಿರಿಯಲ್ಲಿ ಈಗಾಗಲೇ ಡಿಸಿ ಮತ್ತು ಎಸ್‌ಪಿ ಕಚೇರಿ ಹೊರತುಪಡಿಸಿ ಜಿಲ್ಲಾ ಕೇಂದ್ರದಲ್ಲಿರುವ ಬಹುತೇಕ ಎಲ್ಲಾ ಕಚೇರಿಗಳು ಮಧುಗಿರಿಯಲ್ಲಿ ಪ್ರಾರಂಭಿಸಲಾಗಿದೆ. ಇದಕ್ಕೆ ಕಾರಣ ಕೆ.ಎನ್.ರಾಜಣ್ಣ ಮತ್ತು ರಾಜೇಂದ್ರ ಇಚ್ಛಾಶಕ್ತಿಯೇ ಕಾರಣ ಮುಂದಿನ ದಿನಗಳಲ್ಲಿ ಮಧುಗಿರಿ ಜಿಲ್ಲಾ ಕೇಂದ್ರ ಮತ್ತು ರೂಪ್ ವೇ ಆಗಲಿದ್ದು, ಅಭಿವೃದ್ಧಿಯಲ್ಲಿ ಪ್ರಥಮ ಸ್ಥಾನದಲ್ಲಿ ಇರಲಿದೆ ಎಂದರು.

ದೈವಿಕ ಭಾವನೆಗಳಿಂದ ಮನುಷ್ಯನ ಅಜ್ಞಾನ ನಾಶ



ಮಧುಗಿರಿ: ಪ್ರತಿಯೊಬ್ಬ ಮನುಷ್ಯರು ದೈವಿಕ ಭಾವನೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಮನುಷ್ಯ ಅಜ್ಞಾನ ಮತ್ತು ಅಂಧಕಾರವನ್ನು ಹೋಗಲಾಡಿಸಲು ಸಾಧ್ಯ ಎಂದು ಎಲೆರಾಂಪುರದ ಕುಂಚಿಟಿಗ ಮಠದ ಪೀಠಾಧ್ಯಕ್ಷ ಶ್ರೀ ಶ್ರೀ ಹನುಮಂತನಾಥ ಸ್ವಾಮೀಜಿ ತಿಳಿಸಿದ್ದಾರೆ. ತಾಲೂಕಿನ ಐಡಿ ಹಳ್ಳಿ ಹೋಬಳಿ ತಾಡಿ ಗ್ರಾಮದ ಶ್ರೀ ವೀರ ನಾಗಮ್ಮ ದೇವರ ಜಾತ್ರಾ ಮಹೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಪ್ರತಿಯೊಬ್ಬರ ಧರ್ಮದ ಹಾದಿಯಲ್ಲಿ ನಡೆಯಬೇಕಾಗಿದೆ. ಧಾರ್ಮಿಕ ಕಾರ್ಯಗಳಿಂದ ಮಾತ್ರ ಮನುಷ್ಯನಿಗೆ ಶಾಂತಿ ನೆಮ್ಮದಿ ದೊರಕುತ್ತದೆ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ಸ್ವಾರ್ಥ ಬಿಟ್ಟು ಎಲ್ಲರೂ ತಮ್ಮವರೇ ಎಂದು ಅರ್ಥೈಸಿಕೊಂಡು ಬದುಕು ಸಾಗಿಸಬೇಕು ಅದೇ ರೀತಿ ರಾಗ ದ್ವೇಷ ಅಸೂಯೆ ಬಿಟ್ಟು ಸಹ ಬಾಳುವೆ ನಡೆಸುವಂತಾಗಬೇಕು ಪ್ರತಿ ಗ್ರಾಮಗಳಲ್ಲಿ ಶಾಲೆ ದೇವಸ್ಥಾನಗಳು ಅತ್ಯವಶ್ಯಕ ಎಂದು ತಿಳಿಸಿದರು. ಆಂಧ್ರಪ್ರದೇಶದ ಮಾಜಿ ಸಚಿವರಾದ ನರಸೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ನಾಗೇಶ್ ಬಾಬು, ಬಿ.ವಿ. ನಾಗರಾಜು, ಬಿ.ಎನ್.ನಾಗಾರ್ಜುನ, ಪಿ.ಟಿ. ಗೋವಿಂದಪ್ಪ ಮತ್ತೆ ಇತರರು ಹಾಜರಿದ್ದರು.

ಗುರಿಕಾರರ ಜ್ಯೋತಿ ಉತ್ಸವ



ವೈ.ಎನ್.ಹೊಸಕೋಟೆ: ಗ್ರಾಮದ ಇತಿಹಾಸಕ್ಕೆ ನಂಟು ಹೊಂದಿರುವ ಗುರಿಕಾರರ ಜ್ಯೋತಿ ಉತ್ಸವವು ಪ್ರತಿವರ್ಷದ ಸಂಪ್ರದಾಯದಂತೆ ಯುಗಾದಿಯ ಮರುದಿನವಾದ ಶುಕ್ರವಾರ ನಡೆಯಿತು. ಯಲ್ಲಪ್ಪನಾಯಕನ ಹೊಸಕೋಟೆ ಸಂಸ್ಥಾನದ ಗುರಿಕಾರರಾದ ದೊಡ್ಡಲಿಂಗಮಯ್ಯ ಮತ್ತು ಸಣ್ಣಲಿಂಗಮಯ್ಯ ವಂಶಸ್ಥರು ಜ್ಯೋತಿಗಳನ್ನು ಹೊತ್ತು ಪುರಮೆರವಣಿಗೆ ನಡೆಸಿದರು. ಸಾಂಪ್ರದಾಯಿಕ ಉಡುಗೆಯಲ್ಲಿ ಗ್ರಾಮದ ನಿಡಗಲ್ಲುಮಾರಮ್ಮ ದೇವಾಲಯದಿಂದ ಪ್ರಾರಂಭವಾದ ಮೆರವಣಿಗೆ ಬೆಸ್ತರಹಳ್ಳಿ ರಸ್ತೆಯ ಮೂಲಕ ಸಾಗಿ ಗ್ರಾಮದೇವತೆ ಗೌರಸಮುದ್ರ ಮಾರಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ನಡೆಸಲಾಯಿತು.

ಮಹಿಳಾ ಮೀಸಲಾತಿ ಮಸೂದೆ ಸಂಸತ್ತಿನಲ್ಲಿ ಅನುಮೋದಿಸಲಿ: ಸಚಿವ

ಮಹಿಳೆಯರಿಗೆ ಪ್ರಾಧಾನ್ಯತೆ

ತುಮಕೂರು: ಸಂಸತ್ತಿನಲ್ಲೂ ಮಹಿಳಾ ಮೀಸಲಾತಿ ಮಸೂದೆ ಅನುಮೋದನೆ ಆಗಬೇಕು. ಇದರಿಂದ ಸಂಸತ್ತು ಮತ್ತು ವಿಧಾನಮಂಡಲದಲ್ಲಿ ಮಹಿಳೆಯರಿಗೆ ಶೇ.50 ಸ್ಥಾನಗಳ ಅವಕಾಶ ಸಿಗಲಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ನಂತರ ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿ ಇದ್ದಾಗ ಸಂಸತ್ತಿನಲ್ಲೂ ಶೇ.50 ಅವಕಾಶ ಕಲ್ಪಿಸುವ ಮಹಿಳಾ ಮಸೂದೆಯನ್ನು ಮಂಡಿಸ ಲಾಯಿತು.

ಆ ದಿನಗಳಲ್ಲಿ ರಾಜ್ಯಸಭೆಯಲ್ಲಿ ಅದು ಅನುಮೋದನೆ ಆಗಲಿಲ್ಲ. ಈಗಲಾದರೂ ಕೇಂದ್ರ ಸರ್ಕಾರ ಈ ಮಸೂದೆಯನ್ನು ಅನುಮೋದಿಸಿ ಮಹಿಳೆಗೆ ಶಕ್ತಿ ನೀಡಬೇಕು ಎಂದರು. ಇಡೀ ವಿಶ್ವದಲ್ಲಿ ಭಾರತ ದಲ್ಲಿಯೇ ಮಹಿಳೆಯರಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಿ ಸಬಲೀಕರಣಗೊಳಿಸಲಾಗಿದೆ. ಇಂದು ಮಹಿಳೆ ಎಲ್ಲ ಕ್ಷೇತ್ರದಲ್ಲೂ ಪುರುಷರನ್ನು ಹಿಂದಿಕ್ಕಿ ಸಾಧನೆ ಮಾಡುತ್ತಿದ್ದಾರೆ ಎಂದರು. ನಮ್ಮ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿಯೇ ಘೋಷಿಸಿದಂತೆ ಮಹಿಳೆಯರ ಸಬಲೀಕರಣಕ್ಕೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು.

ಜಿಲ್ಲಾಧಿಕಾರಿ ಶುಭಾಕಲ್ಯಾಣ್ ಮಾತನಾಡಿ, ಯಾರೂ ಅವಕಾಶಗಳನ್ನು ಕಾದು ಕೂರುವುದು ಸರಿಯಲ್ಲ, ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು ಎಂದರು. ವಿಶೇಷವಾಗಿ ಮಹಿಳೆಯವರು ಅತಿ ದೊಡ್ಡ ಜವಾಬ್ದಾರಿ ಹೊಂದಿರುತ್ತಾರೆ. ಮನೆಯ ಒಳಗೆ ಮತ್ತು ಹೊರಗೆ ದುಡಿಯಬೇಕಾಗುತ್ತದೆ. ಈ ನಡುವೆ ತಮ್ಮ ಆರೋಗ್ಯವನ್ನೂ ನೋಡಿಕೊಳ್ಳಬೇಕು ಎಂದರು.



> ಈ ಹಿಂದೆ ರಾಜೀವಗಾಂಧಿ ಅವರು ಪ್ರಧಾನಮಂತ್ರಿ ಆಗಿದ್ದಾಗ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50 ಸ್ಥಾನಮಾನಗಳನ್ನು ಕೊಡುವ ನಿಟ್ಟಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಅವಕಾಶಗಳನ್ನು ನೀಡಲಾಯಿತು. ಅದರಿಂದ ಇದೀಗ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ಸಿಕ್ಕಿದೆ.
> ■ ಡಾ.ಜಿ.ಪರಮೇಶ್ವರ,ಸಚಿವ

ಜಿಲ್ಲೆಯಲ್ಲಿ 2ವರ್ಷಗಳು ಜಿಲ್ಲಾಧಿಕಾರಿಯಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಈ ಅವಧಿಯಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದು, ಜಿಲ್ಲೆಯಲ್ಲಿ 1160 ಕಂದಾಯ ಗ್ರಾಮಗಳನ್ನು ಗುರುತಿಸಿದ್ದು, ಸದ್ಯದಲ್ಲೇ 22 ಸಾವಿರ ಹಕ್ಕುಪತ್ರಗಳನ್ನು ನೀಡಲಿದ್ದೇವೆ. ಇದನ್ನು ನಾವು ಸೃಷ್ಟಿಕೊಂಡಿದ್ದೇವೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ.ನೂರುನ್ನಿಸಾ ಮಾತನಾಡಿ, ಮಹಿಳೆ ಪುರುಷರಿಗೆ ಸ್ಪರ್ಧಿಯಾಗುವುದು ಬೇಡ, ಮಹಿಳೆಯೇ ತಮ್ಮ ಆತ್ಮಸಂತೋಷಕ್ಕಾಗಿ ಕೆಲವು ಜವಾಬ್ದಾರಿಗಳನ್ನು ನಿಭಾಯಿಸಬೇಕಿದೆ ಎಂದರು ಇಂದಿನ ದಿನಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲರಾಗಿದ್ದಾರೆ, ಆದರೆ ಆರ್ಥಿಕ ಸ್ವಾವಲಂಬನೆಯನ್ನು ಅನುಭವಿಸುವ ಹಕ್ಕನ್ನು ಜಯಿಸಿಕೊಳ್ಳಬೇಕಿದೆ ಎಂದರು.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಅಶ್ವಿಜ, ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ.ಅಶೋಕ್, ತುಮಕೂರು ಮಹಾನಗರ ಪಾಲಿಕೆ ಆಯುಕ್ತೆ ಶುಭಾ ಸಿ., ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ಶಾರದಮ್ಮ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕಿ ಸೌಮ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಡಾ.ಸಿದ್ದರಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ಕಾಂಕ್ರೀಟ್ ಕಾಮಗಾರಿ ಕಳಪೆ: ತನಿಖೆಗೆ ಒತ್ತಾಯ

ಚಿಕ್ಕನಾಯಕನಹಳ್ಳಿ: ತಾಲೂಕಿನಲ್ಲಿ ಸುಮಾರು 600 ಕೋಟಿ ರು.ಗಳ ಗಣಿಬಾಧಿತ ಪ್ರದೇಶಾಭಿವೃದ್ಧಿಯಲ್ಲಿ ನಡೆದಿರುವ ಕಾಂಕ್ರಿಟ್ ಕಾಮಗಾರಿಗಳು ಸಂಪೂರ್ಣ ಕಲಪೆಯಿಂದ ಕೂಡಿದ್ದು ತನಿಖೆಯಾಗಲಿ ಎಂದು ಕೆಆರ್‌ಎಸ್ ಪಕ್ಷದ ಮುಖಂಡ ಭಟ್ಟರಹಳ್ಳಿ ಮಲ್ಲಿಕಾರ್ಜುನ್ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಜಿಲ್ಲಾಧಿಕಾರಿ ಶುಭಾಕಲ್ಯಾಣ್ ಅಧ್ಯಕ್ಷತೆಯಲ್ಲಿ ನಡೆದ ಬೃಹತ್ ಜನಸಂಪರ್ಕ ಸಭೆಯಲ್ಲಿ ಭಟ್ಟರಹಳ್ಳಿ ಮಲ್ಲಿಕಾರ್ಜುನ್ ಜಿಲ್ಲಾಧಿಕಾರಿಯವರಿಗೆ ಗಣಿಭಾದಿತ ಪ್ರದೇಶಾಭಿವೃದ್ಧಿಯಲ್ಲಿ ತಾಲೂಕಿನಾದ್ಯಂತ ನಡೆದಿರುವ ಕಳಪೆ ಕಾಮಗಾರಿಗಳ ವಿವರ ಹಾಗೂ ಪೋಟೋಗಳೊಂದಿಗೆ ಮನವಿ ನೀಡಿ ಮಾತ ನಾಡಿ ಸುಪ್ರೀಂಕೋರ್ಟ್ ಆದೇಶದಂತೆ ಗಣಿ ಭಾದಿತ ಪ್ರದೇಶಾಅಭಿವೃದ್ಧಿಯಲ್ಲಿ ಗಣಿ ಭಾದಿತ ಪ್ರದೇಶಗಳಲ್ಲಿ ಹಾಳಾಗಿರುವ ಪರಿಸರವನ್ನು ಸರಿಪಡಿಸುವುದು ಹಾಗೂ ಆ ಪ್ರದೇಶದಲ್ಲಿ ಜೀವಿಸುವ ಜನ-ಜಾನುವಾರುಗಳ ಆರೋಗ್ಯ ಹಾಗೂ ಸುಸ್ಥಿರ ಅಭಿವೃದ್ಧಿಗೆ ಬಳಕೆಯಾಗಬೇಕೆಂಬ ನಿರ್ದೇಶನವಿದ್ದರೂ ಅವೆಲ್ಲವನ್ನೂ ಬದಿಗಿಟ್ಟು ಈಗ ಸುಮಾರು 600 ಕೋಟಿರೂ.ಗಳಲ್ಲಿ ಬರೀ ಕಾಂಕ್ರೀಟ್ ರಸ್ತೆ ಹಾಗೂ ಕಟ್ಟಡಕ್ಕೆ ಉಪಯೋಗಿಸಲಾಗುತ್ತಿದೆ.

ಈಗಾಗಲೇ ಹುಳಿಯಾರು ಹೋಬಳಿಯಲ್ಲಿ ನಡೆದಿರುವ ರಸ್ತೆಗಳು ಆರೇತಿಂಗಳಲ್ಲಿ ಬಿರುಕು ಬಿಟ್ಟಿವೆ, ರಸ್ತೆಯ ಮೇಲಿನ ಸಿಮೆಂಟ್ ಧೂಳು ಮಾಯವಾಗಿ ಜಲ್ಲಿಯೊಂದಿಗೆ ಅಸ್ಥಿಪಂಜರದಂತಾಗಿ ಕಿತ್ತುಹೋಗುತ್ತಿದೆ. ಈಗ ಚಿಕ್ಕನಾಯಕನಹಳ್ಳಿ ಭಾಗದ ಸುತ್ತ,ಮುತ್ತಲಿನಲ್ಲಿ ಇದೇ ಕಳಪೆ ಕಾಮಗಾರಿ ನಡೆದಿದೆ, ಸಂಬಂಧಿಸಿದ ಇಲಾ ಖೆಯ ಯಾವೊಬ್ಬ ಅಧಿಕಾರಿಯೂ ಈಬಗ್ಗೆ ಗಮನ ಹರಿಸುತ್ತಿಲ್ಲವೆಂದರು. ತಾಲ್ಲೂಕಿನಲ್ಲಿ ನಡೆದಿರುವ ಹೇಮಾವತಿ ನಾಲೆ ಯಿಂದ ಕೆರೆಗಳಿಗೆ ನೀರುಣಿಸುವ ಕಾಮಗಾರಿ ವೇಗವಾಗಿ ಸಾಗುವಂತೆ ಜಿಲ್ಲಾಡಳಿತ ಆದೇಶ ನೀಡ ಬೇಕು, ನಾಲೆಗೆ ಕಟ್ ಅಂಡ್ ಕವರ್ ಮಾಡುವ ಮೂಲಕ ಶಾಶ್ವತ ಪರಿಹಾರ ಕಲ್ಪಿಸುವ ಸುವಾಗಿ ಗಣಿನಿಧಿಯಲ್ಲಿ ಅನುದಾನ ಬಿಡುಗಡೆ ಮಾಡುವಂತೆ ರೈತಸಂಘ ಹಾಗೂ ಹೋರಾಟಗಾರರು ಮನವಿ ಮಾಡಿದರು.

ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರು ಸರತಿಯ ಸಾಲಿನಲ್ಲಿ ನಿಂತು ಅಹವಾಲುಗಳನ್ನು ಜಿಲ್ಲಾಧಿಕಾರಿಯವರಿಗೆ ನೀಡಿದರು. ಶಾಸಕ ಸಿ.ಬಿ. ಸುರೇಶ್‌ಬಾಬು, ಉಪವಿಭಾಗಾಧಿಕಾರಿ ಸಪ್ತಶ್ರೀ, ತಹಸೀಲ್ದಾರ್ ಮಮತಾ ಮುಂತಾದವರಿದ್ದರು. ಸಭೆಗೂ ಮುನ್ನ ಜಿಲ್ಲಾಧಿಕಾರಿಯವರು ತಾಲ್ಲೂಕು ಕಚೇರಿ ಆವರಣದಲ್ಲಿ ಅರಣ್ಯಸಸಿ ನೆಡುವ ಮೂಲಕ ಚಾಲನೆ ನೀಡಿದರು.



ಪ್ರಥಮ ದರ್ಜೆ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಂದ ಕೈಗಾರಿಕಾ ಭೇಟಿ

ಮಧುಗಿರಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು ಬೆಂಗಳೂರಿನ ರಾಜಾಜಿನಗರದಲ್ಲಿರುವ ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯದ ಸಂಸ್ಥೆಯಾದ ಕರ್ನಾಟಕ ಸಾಬೂನು ಮತ್ತು ಡಿಟರ್ಜೆಟ್ಸ್ ಲಿಮಿಟೆಡ್ (ಕೆಎಸ್ ಡಿಎಲ್)ಗೆ ಕೈಗಾರಿಕಾ ಭೇಟಿ ನೀಡಿದರು.

ಕೆಎಸ್‌ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಶಾಂತ್ ಪಿ.ಕೆ.ವಿದ್ಯಾರ್ಥಿಗಳನ್ನು ಉದ್ದೇ ಶಿಸಿ ಮಾತನಾಡಿ, ಸಂಸ್ಥೆಯು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಅಗ್ರಮಾನ್ಯ ಸ್ಥಾನ ಪಡೆದಿದ್ದು, ಸಾಬೂನು ಡಿಟರ್ಜೆಂಟ್ಸ್ ಮತ್ತು ವೈಯುಕ್ತಿಕ ಬಳಕೆಯ ಉತ್ಪನ್ನಗಳನ್ನು ತಯಾರಿಸುತ್ತಿದ್ದು, ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಕೃಷ್ಣರಾಜ ಒಡೆಯರ್ ಮಾರ್ಗದರ್ಶನದಲ್ಲಿ ಅಭಿವೃದ್ಧಿಯಾಯಿತು.

ಪ್ರಸ್ತುತ ಸಾಬೂನು, ಚಂದನ ಎಣ್ಣೆ, ಡಿಟರ್ಜೆಂಟ್ಸ್, ಟಾಲ್ಕಂ ಪೌಡರ್ , ಹ್ಯಾಂಡ್ ವಾಶ್ ಹಾಗೂ ಅಗರಬತ್ತಿ ಮುಂತಾದ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿದ್ದು, ಮೈಸೂರು ಸ್ಯಾಂಡಲ್ ಸಾಬೂನಿಗೆ ಭೌಗೋಳಿಕ ಸೂಚಕ ಟ್ಯಾಗ್ ದೊರೆತ್ತಿದ್ದು, ಸಂಸ್ಥೆಗೆ ನೂರು ವರ್ಷಕ್ಕಿಂತ ಹೆಚ್ಚು ಇತಿಹಾಸವಿದ್ದು, ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗದಲ್ಲಿ ಉತ್ಪಾದನಾ ಘಟಕಗಳನ್ನು ಹೊಂದಿದ್ದು, ಕರ್ನಾಟಕದ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿಗೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದರು. ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ರಂಜಿತಾ ಬಿ.ಆರ್. ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಲೀಲಾವತಿ ಎಚ್. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕುಮಾರ್ ಕೆ.ಎಸ್,ಪ್ರಾಧ್ಯಾಪಕರಾದ ಮಂಜುನಾಥ್ ಬಿ.ಡಾ.ದುರ್ಗಪ್ಪ, ರಾಮಮೂರ್ತಿ, ಡಾ.ನಾಗರಾಜು, ಸಂಜೀವ ಮೂರ್ತಿ, ಡಾ.ಲತಾ, ಮುರಳೀಧರ್, ಡಾ.ಮಂಜುನಾಥ್ ಬುಡಸನಹಳ್ಳಿ, ವ್ಯವಸ್ಥಾಪಕಿ ಚಂದ್ರಕಲಾ, ರಂಗಸ್ವಾಮಯ್ಯ ಹಾಜರಿದ್ದರು.



ಸರ್ಕಾರಿ ಶಾಲೆ ಬಲವರ್ಧನೆಗೆ ಪೋಷಕರ ಸಹಕಾರ ಅಗತ್ಯ

ಹುಳಿಯಾರು: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರ ಮತ್ತು ಶಿಕ್ಷಣ ಇಲಾಖೆ ಜಾರಿಗೆ ತರುತ್ತಿರುವ ಹತ್ತಾರು ಯೋಜನೆಗಳ ಸದುಪಯೋಗವನ್ನು ಪೋಷಕರು ಪಡೆದುಕೊಳ್ಳಬೇಕು. ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುವ ಮೂಲಕ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಕೆ.ಕಾಂತರಾಜು ಕರೆ ನೀಡಿದರು.

ಹೋಬಳಿಯ ಹೊಯ್ಸಳಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಶಾರದಾ ಪೂಜೆ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಾಲೆಯ ಮೂಲಸೌಕರ್ಯಗಳ ಬಗ್ಗೆ ಮಾಹಿತಿ ನೀಡಿದ ಬಿಇಒ ಅವರು, ಶಾಸಕ ಸಿ.ಬಿ.ಸುರೇಶ್‌ಬಾಬು ಅವರ ಅನುದಾನದಲ್ಲಿ ಶಾಲಾ ಕೊಠಡಿಗಳ ದುರಸ್ತಿಗೆ ಕ್ರಮ ವಾಗಿ 3.5 ಲಕ್ಷ ಹಾಗೂ 4 ಲಕ್ಷ ನೀಡಲಾಗಿದೆ. ಪ್ರಸಕ್ತ ಸಾಲಿನಿಂದ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ಹಾಗೂ 1ನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮವನ್ನು ಆರಂಭಿಸ ಲಾಗಿದೆ ಎಂದರು.



ನಿವೃತ್ತ ಶಿಕ್ಷಕ ಗಂಗಾಧರಯ್ಯ, ರಾಮಕೃಷ್ಣಯ್ಯ, ವಿಜಯಕುಮಾರಿ, ವಿಜಯಲಕ್ಷ್ಮಮ್ಮ, ಜಯಮ್ಮ, ಬುಳ್ಳಯ್ಯ ಹಾಗೂ ವರ್ಗಾವಣೆಗೊಂಡ ಶಿಕ್ಷಕರಾದ ನಾಗರತ್ನಮ್ಮ, ಚೌಡೇಗೌಡ, ಚಂದ್ರಯ್ಯ ಮತ್ತು ಬೇಬಿಕಲಾ ಅವರನ್ನು ಆತ್ಮೀಯವಾಗಿ ಸನ್ಮಾನಿಸ ಲಾಯಿತು. ಮುಖ್ಯಶಿಕ್ಷಕ ಪರಶಿವಮೂರ್ತಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಗವಿರಂಗಯ್ಯ, ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಶಿವಕುಮಾರ್, ವೆಂಕಟರಮಣ, ಗಿರೀಶ್, ರಾಜಶೇಖರ್, ರಂಗಪ್ಪ, ಗ್ರಾಮದ ಮುಖಂಡರು, ಎಸ್‌ಡಿಎಂಸಿ ಸದಸ್ಯರು ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಜಿಲ್ಲೆಯಾದ್ಯಂತ ಸಂಭ್ರಮದ ಯುಗಾದಿ

ತುಮಕೂರು: ಪರಭವ ನಾಮ ಸಂವತ್ಸರ ಯುಗಾದಿ ಹಬ್ಬವನ್ನು ನಗರ, ಗ್ರಾಮೀಣ ಪ್ರದೇಶ ಸೇರಿದಂತೆ ಜಿಲ್ಲೆಯಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಹಿಂದೆಂದಿಗಿಂತಲೂ ಬೆಲೆ ಏರಿಕೆ ದುಪ್ಪಟ ವಾಗಿದ್ದರೂ ಸಹ ಜನಸಾಮಾನ್ಯರು ಕಂಗೆಡದೆ ಯುಗಾದಿ ಹಬ್ಬವನ್ನು ಖುಷಿಯಿಂದ ಆಚರಿಸಿದ್ದು ಎಲ್ಲೆಡೆ ಕಂಡು ಬಂತು.

ನಿನ್ನೆ ಮುಂಜಾನೆಯೇ ಸುಮಂಗಲಿಯರು, ಯುವತಿಯರು, ಯುವಕರು, ಮಕ್ಕಳು ಸೇರಿ ದಂತೆ ಮನೆ ಮಂದಿ ಯೆಲ್ಲ ಎದ್ದು ಮನೆಯ ಬಾಗಿಲಿಗೆ ಹಸಿರು ತೋರಣ ಕಟ್ಟಿ ದೇವರ ಪೂಜೆ ನೆರವೇರಿಸಿ, ಬೇವು-ಬೆಲ್ಲದೊಂದಿಗೆ ಹೊಸ ಉಡುಪುಗಳನ್ನು ಧರಿಸಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ನಂತರ ಪರಸ್ಪರ ಬೇವು-ಬೆಲ್ಲ ಹಂಚಿ ಹಬ್ಬದ ಶುಭಾಶಯ ವಿನಿಮಯ ಮಾಡಿ ಕೊಂಡರು.

ಯುಗಾದಿ ಎಂದರೆ ಮಕ್ಕಳು, ಯುವಕ ರಿಗೆ ಎಲ್ಲಿಲ್ಲದ ಸಂತಸ. ಹಬ್ಬದಂದು ಮೈಯಿಗೆಲ್ಲ ಎಣ್ಣೆ ಹಚ್ಚಿಕೊಂಡು ಬೇವಿನ ಎಲೆಯನ್ನು ಮೆತ್ತಿಕೊಂಡು ಬಿಸಿಲಿನ ಝಳದಲ್ಲಿ ಓಡಾಡಿ, ನಂತರ ಸ್ನಾನ ಮಾಡಿ ದೇವರಿಗೆ ಪೂಜೆ ಸಲ್ಲಿಸಿ ಹೊಸ ಉಡುಪುಗಳನ್ನು ಧರಿಸಿ ಹಬ್ಬದ ಸಂಭ್ರಮ ವನ್ನು ಸವಿದರು. ಹಬ್ಬದ ವಿಶೇಷವಾಗಿ ಹೋಳಿಗೆ, ಹೆಸರು ಬೇಳೆ, ಚಿತ್ರಾನ್ನ ಸೇರಿದಂತೆ ಇನ್ನಿತರೆ ವಿಶೇಷ ಖಾದ್ಯಗಳನ್ನು ಮನೆಯಲ್ಲಿ ಮಾಡಿಕೊಂಡು ಸವಿಯುವ ಮೂಲಕ ಹಬ್ಬದ ಸೊಬಗನ್ನು ಸಂಭ್ರಮಿಸಿದರು.



ಮನೆ ನಿರ್ಮಾಣ ಸ್ಥಗಿತಗೊಳಿಸಿದ ಕಂದಾಯ ನಿರೀಕ್ಷಕ, ಗ್ರಾಮ ಲೆಕ್ಕಾಧಿಕಾರಿಗಳು

ಭವನದ ಜಾಗದಲ್ಲಿ ಅಕ್ರಮ ಮನೆ ನಿರ್ಮಾಣ

ಕುಣಿಗಲ್: ಡಾ.ಬಾಬು ಜಗಜೀವನ್ ರಾಂ ಮತ್ತು ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಮತ್ತು ಅಲೆಮಾರಿ ಶಿಳ್ಳೆ ಖ್ಯಾತ ಜನಾಂಗದವರಿಗೆ ವಿಶೇಷ ವಸತಿ ಯೋಜನೆಯಲ್ಲಿ ನಿವೇಶನಗಳನ್ನು ನೀಡಲು ಕಾಯ್ದಿರಿಸಿರುವ ಜಾಗದಲ್ಲಿ ಅಕ್ಕಪಕ್ಕದ ಜನರು ಅಕ್ರಮವಾಗಿ ಮನೆಗಳನ್ನು ನಿರ್ಮಾಣ ಮಾಡುತ್ತಿರುವ ಸ್ಥಳಕ್ಕೆ ಕಂದಾಯ ನಿರೀಕ್ಷಕ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಭೇಟಿ ನೀಡಿ ಮನೆ ನಿರ್ಮಾಣ ಸ್ಥಗಿತಗೊಳಿಸಿ, ತೆರವುಗೊಳಿಸಿಕೊಳ್ಳುವಂತೆ ಸೂಚಿಸಿದ್ದಾರೆ.

ಪಟ್ಟಣದ ಕಸಬಾ ಹೋಬಳಿ ಕಸಬಾ ಗ್ರಾಮದ ಸರ್ವೆ ನಂಬರ್ 31ರ ಸರ್ಕಾರಿ ಕರೆಕಲ್ಲ ಕರಾಬು ಜಮೀನಿನಲ್ಲಿ ಡಾ ಬಾಬು ಜಗಜೀವನ್ ರಾಂ ಸಮುದಾಯ ಭವನ ನಿರ್ಮಾಣ ಮಾಡಲು 10ಗುಂಟೆ ಜಮೀನು ಮಂಜೂರಾಗಿರುತ್ತದೆ. ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ 5 ಗುಂಟೆ ಮತ್ತು ಅಲೆಮಾರಿ ಶಿಳ್ಳೆ ಖ್ಯಾತ ಜನಾಂಗದವರಿಗೆ ವಿಶೇಷ ವಸತಿ ಯೋಜನೆಯಲ್ಲಿ ನಿವೇಶನ ನೀಡಲು ಒಂದು ಎಕರೆ ಭೂಮಿಯನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.



ಸದರಿ ಜಾಗದಲ್ಲಿ ಅಕ್ಕ ಪಕ್ಕದ ನಿವಾಸಿಗಳು ಅಕ್ರಮವಾಗಿ ಮೂರು ಮನೆಗಳನ್ನು ನಿರ್ಮಾಣ ಮಾಡಿರುವುದರ ಜತೆಗೆ ಕೆಲವರು ಮನೆ ಕಟ್ಟಲು ತಳಪಾಯ ಹಾಕುತ್ತಿದ್ದರು, ವಿಷಯ ತಿಳಿದ ರಾಜಸ್ವ ನಿರೀಕ್ಷಕರ ರಘು, ಗ್ರಾಮ ಲೆಕ್ಕ ಅಧಿಕಾರಿಗಳಾದ ಮುರುಳಿ, ಚಂದ್ರಶೇಖರ್, ಮೂರು ದಿನಗಳ ಹಿಂದೆ ಸ್ಥಳಕ್ಕೆ ಭೇಟಿ ನೀಡಿ ಸಮುದಾಯ ಭವನಗಳ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸುತ್ತಿರುವ ಮನೆಗಳನ್ನು ತಡೆದು ನಿಲ್ಲಿಸಿ ತೆರವುಗೊಳಿಸಲು ಸೂಚಿಸಿದ್ದರೂ ತೆರವುಗೊಳಿಸಿಕೊಂಡಿರಲಿಲ್ಲ.

ಶುಕ್ರವಾರ ತಹಸೀಲ್ದಾರ್ ಸೂಚನೆಯಂತೆ ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶಿವಲಿಂಗಯ್ಯ, ರಾಜಸ್ವ ನಿರೀಕ್ಷಕ ರಘು, ಗ್ರಾಮ ಲೆಕ್ಕಾಧಿಕಾರಿಗಳಾದ ಮುರುಳಿ, ಚಂದ್ರಶೇಖರ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ಭವನದ ಜಾಗದಲ್ಲಿ ಮೂರು ಅಕ್ರಮ ಮನೆಗಳು ಮತ್ತು ಮೂರರಿಂದ ನಾಲ್ಕು ಮನೆ ನಿರ್ಮಾಣ ಮಾಡಲು ತಳಪಾಯ ಹಾಕಿರುವುದು ಕಂಡು ಬಂದಿದ್ದು ತಹಸೀಲ್ದಾರ್‌ಗೆ ವರದಿ ಸಲ್ಲಿಸಿ ಅಳತೆ ಮಾಡಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸಿ ಸಾಧ್ಯವಾದಲ್ಲಿ ಕಲ್ಲು ಕಂಬಗಳನ್ನು ನೆಡಲಾಗುವುದು ಎಂದರು. ವಾಲ್ಮೀಕಿ ಸಮುದಾಯ ಮುಖಂಡ ತಿಮ್ಮರಾಜು ಇದ್ದರು.

ಮಾ.26ಕ್ಕೆ 4 ದಿನಗಳ ಅಂತರ ಮಹಾವಿದ್ಯಾಲಯ ಕ್ರೀಡಾಕೂಟಕ್ಕೆ ವಿ.ಸೋಮಣ್ಣ ಚಾಲನೆ

ರಾಜ್ಯಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಕೆಐಟಿ ಸಜ್ಜು

ತಿಪಟೂರು: ಈ ಸಾಲಿನ ವಿಟಿಯು 27ನೇ ರಾಜ್ಯಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ತಿಪಟೂರಿನ ಕಲ್ಪತರು ತಾಂತ್ರಿಕ ಮಹಾವಿದ್ಯಾಲಯ ಆತಿಥ್ಯ ವಹಿಸಲಿದ್ದು ನಾಲ್ಕು ದಿನಗಳ ಕಾಲ ನಡೆಯಲಿರುವ ಅಂತರ ಮಹಾವಿದ್ಯಾಲಯ ಕ್ರೀಡಾಕೂಟಕ್ಕೆ ಮಾ.26ರಂದು ಕೇಂದ್ರ ಸಚಿವ ವಿ.ಸೋಮಣ್ಣ ಚಾಲನೆ ನೀಡಲಿದ್ದಾರೆ ಎಂದು ಕಲ್ಪತರು ವಿದ್ಯಾ ಸಂಸ್ಥೆಯ ಅಧ್ಯಕ್ಷ ಪಿ.ಕೆ. ತಿಪ್ಪೆರುದ್ರಪ್ಪ ತಿಳಿಸಿದರು.

ನಗರದ ಕಲ್ಪತರು ವಿದ್ಯಾಸಂಸ್ಥೆಯ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಮಾರ್ಚ್ 26 ರಿಂದ 29 ರವರೆಗೆ ನಾಲ್ಕು ದಿನಗಳ ಕಾಲ ನಡೆಯಲಿರುವ 'ಕ್ರೀಡಾಕಲ್ಪ-2.0' ಅಂತರ ವಿಟಿಯು ಕ್ರೀಡಾಕೂಟವು ರಾಜ್ಯದ ಕ್ರೀಡಾ ಚಟುವಟಿಕೆಗಳಿಗೆ ಹೊಸ ಚೈತನ್ಯ ತುಂಬಲಿದೆ. ಈ ಪ್ರತಿಷ್ಠಿತ ಕ್ರೀಡಾಕೂಟವನ್ನು ಆಯೋಜಿಸಲು ನಮ್ಮ ಸಂಸ್ಥೆ ಸಂಪೂರ್ಣ ತಯಾರಿ ನಡಸುತ್ತಿದೆ. ವಿದ್ಯಾರ್ಥಿಗಳ ಪ್ರತಿಭೆಗಳ ಪ್ರದರ್ಶನಕ್ಕೆ ಈ ಕ್ರೀಡಾಕೂಟ ಮಹತ್ವದ ವೇದಿಕೆಯಾಗಲಿದೆ ಎಂದರು.

ಸಂಸ್ಥೆಯ ಖಜಾಂಚಿ ಟಿ.ಎಸ್.ಶಿವಪ್ರಸಾದ್ ಮಾತನಾಡಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಸೇರಿದ ಕ್ರೀಡಾಪಟುಗಳು ಇಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲಿದ್ದಾರೆ.

ಕ್ರೀಡೆಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ವಿಶೇ?ವಾಗಿ ರೂಪಿಸಲಾಗಿದೆ. ನಾಲ್ಕು ದಿನಗಳ ಕಾಲ ನಡೆಯುವ ವಿವಿಧ ಅಥ್ಲೆಟಿಕ್ ಸ್ಪರ್ಧೆಗಳು ಕ್ರೀಡಾಭಿಮಾನಿಗಳಿಗೆ ರೋಚಕ ಅನುಭವ ನೀಡಲಿವೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಪಟುಗಳು ಹಾಜರಿದ್ದು ಕ್ರೀಡಾಪಟುಗಳನ್ನು ಉತ್ತೇಜಿಸಲಿದ್ದಾರೆ. ಮನೋರಂಜನಾ ಕಾರ್ಯಕ್ರಮದಲ್ಲಿ ಖ್ಯಾತ ಚಲನಚಿತ್ರನಟ ವಿನಯ್ ರಾಜ್‌ಕುಮಾರ್ ಭಾಗವಹಿಸುವುದು ವಿಶೇಷ ಆಕರ್ಷಣೆಯಾಗಿದೆ ಎಂದರು.



ಮಾ.26 ಮಧ್ಯಾಹ್ನ 3 ಗಂಟೆಗೆ ಶ್ರೀ ಕೆಂಪಮ್ಮ ದೇವಿ ದೇವಾಲಯದಿಂದ ಭವ್ಯ ಮೆರವಣಿಗೆ ನಡೆಯಲಿದ್ದು, ಕ್ರೀಡಾಪಟುಗಳು, ಸಾಂಸ್ಕೃತಿಕ ಕಲಾ ತಂಡಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 4ಗಂಟೆಗೆ ಕೇಂದ್ರ ಸಚಿವ ಸೋಮಣ್ಣ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಪಿ.ಕೆ.ತಿಪ್ಪೆರುದ್ರಪ್ಪ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಕೆ.ಷಡಕ್ಷರಿ, ಯುವಜನ ಸಬಲೀಕರಣ ಮತ್ತು ಕ್ರೀಡಾಇಲಾಖೆ ಆಯುಕ್ತ ಆರ್‌ಚೇತನ್, ಉಪ ವಿಭಾಗಾಧಿಕಾರಿ ಸಪ್ತಶ್ರೀ.ಬಿ.ಕೆ., ವಿಟಿಯು ಕುಲಪತಿ ಡಾ. ವಿದ್ಯಾಶಂಕರ್, ವಿಟಿಯು ಅಕಾಡೆಮಿಕ್ ಸೆನೆಟ್ ಮೆಂಬರ್ ಡಾ. ಹೆಚ್.ಬಿ.ಬಾಲಕೃಷ್ಣ, ಏಕಲವ್ಯ ಪ್ರಶಸ್ತಿ ವಿಜೇತ ಅಂತರ ರಾಷ್ಟ್ರೀಯ ಕ್ರೀಡಾಪಟು ವಿ.ನಿಹಾಲ್‌ಜೋಯಲ್ ಸೇರಿ ದಂತೆ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಬಾಗೇಪಲ್ಲಿ ನಟರಾಜು, ಟಿ.ಎಸ್.ಬಸವರಾಜು, ಜಿ.ಪಿ.ದೀಪಕ್, ಕಾರ್ಯದರ್ಶಿಗಳಾದ ಜಿ.ಎಸ್.ಉಮಾಶಂಕರ್, ಎಂ.ಆರ್. ಸಂಗಮೇಶ್, ಟಿ.ಯು.ಜಗದೀಶಮೂರ್ತಿ ಮತ್ತು ಎಚ್.ಜಿ.ಸುಧಾಕರ್, ಪ್ರಾಂಶುಪಾಲ ಡಾ.ಎಚ್.ಸಿ.ಸತೀಶ್ ಕುಮಾರ್, ಎಂ.ಎಸ್.ಜಯಂತ್ ಉಪಸ್ಥಿತರಿದ್ದರು.

ಕಿರುಸುದ್ದಿ

ಅರ್ಜಿ ಆಹ್ವಾನ

ರಾಮನಗರ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಕಂಪ್ಯೂಟರ್ ಡಿಟಿಪಿ ಕುರಿತು 45 ದಿನಗಳ ಉಚಿತ ತರಬೇತಿಯನ್ನು ಏ.2 ರಿಂದ ಹಮ್ಮಿಕೊಳ್ಳಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ-ಯುವತಿಯರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಆಸಕ್ತರು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಹೊಂದಿರಬೇಕು.ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿಯ ಅವಧಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ: 9380162042, 9481506564, 9481778047 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕನ ಪತ್ತೆಗೆ ಮನವಿ

ರಾಮನಗರ: ಚನ್ನಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಪ್ರಜ್ವಲ್ ಆರ್.(15 ವರ್ಷ) ಕಾಣೆಯಾಗಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ.



ಚಹರೆಯ ವಿವರ: 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ದುಂಡು ಮುಖ, ಕಪ್ಪು ಮೈಬಣ್ಣ, ಇವರು ಕಾಣೆಯಾಗುವಾಗ ಕಪ್ಪು ಬಣ್ಣದ ಶರ್ಟ್ ಹಾಗೂ ನೀಲಿ ಬಣ್ಣದ ಜೀನ್ಸ್ ಬರ್ಮುಡ ಚಡ್ಡಿ ಧರಿಸಿರುತ್ತಾರೆ. ಇವರು ಕಂಡು ಬಂದರೆ ಆರಕ್ಷಕ ಉಪ ನಿರೀಕ್ಷಕರು, ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ, ಚನ್ನಪಟ್ಟಣ, ಬೆಂಗಳೂರು ದಕ್ಷಿಣ ಜಿಲ್ಲೆ. ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಮಾದಕದ್ರವ್ಯ ಮಾರಾಟ: ಮೂವರ ಬಂಧನ

ಕನಕಪುರ: ರಸ್ತೆ ಬದಿಯ ಜಮೀನು ಒಂದರಲ್ಲಿ (ಡ್ರಗ್ಸ್) ಮಾದಕ ದ್ರವ್ಯ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಮೂವತ್ತು ಸಾವಿರ ಮೌಲ್ಯದ 15 ಗ್ರಾಂ ಡ್ರಗ್ಸ್‌ನ್ನು ಪೋಲಿಸರು ವಶಪಡಿಸಿಕೊಂಡಿದ್ದಾರೆ. ಶುಕ್ರವಾರ ನಗರದ ಮಹರಾಜರ ಕಟ್ಟೆ ಬೈಪಾಸ್ ರಸ್ತೆಯ ಜಮೀನೊಂದರಲ್ಲಿ ಆರು ಮಂದಿ ಆರೋಪಿಗಳು ಮಾದಕ ದ್ರವ್ಯ ಮಾರಾಟ ಮಾಡುತ್ತಿದ್ದಾರೆಂಬ ಖಚಿತ ಮಾಹಿತಿಯ ಆಧಾರದ ಮೇಲೆ ಡಿವೈಎಸ್‌ಪಿ ಗಿರಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಅನಂತ್‌ರಾಮ್ ಮತ್ತವರ ಸಿಬ್ಬಂಧಿ ಧಿಡೀರ್ ದಾಳಿ ಮಾಡಿದ್ದಾರೆ. ಈ ವೇಳೆ ಆರು ಮಂದಿ ಆರೋಪಿಗಳಲ್ಲಿ ಮೂವರು ಆರೋಪಿಗಳು ಪರಾರಿಯಾಗಿದ್ದಾರೆ. ಪಟ್ಟಣದ ಖಾಲಕ್‌ನಗರ ನಿವಾಸಿಗಳಾದ ಮುಬಾರಕ್(22), ಅಖಿಲ್(21), ಹಸನ್(21) ಬಂಧಿತ ಆರೋಪಿಗಳಾಗಿದ್ದಾರೆ. ಉಳಿದ ಆರೋಫಿಗಳ ಪತ್ತೆಗೆ ಪೋಲಿಸರು ಬಲೆ ಬೀಸಿದ್ದಾರೆ. ಬಂಧಿತ ಆರೋಪಿಗಳಿಂದ 15 ಗ್ರಾಂ ಮಾದಕ ದ್ರವ್ಯ ವಶಪಡಿಸಿಕೊಂಡು ನಗರ ಠಾಣಾ ಪೋಲಿಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ನಗರದಲ್ಲಿ ಕೆಲವು ವರ್ಷಗಳಿಂದ ಮಾದಕ ವಸ್ತುಗಳ ಸಾಗಾಟ ಮತ್ತು ಮಾರಾಟ ನಡೆಯುತ್ತಿದೆ ಎಂಬ ವ್ಯಾಪಕ ದೂರು ಕೇಳಿ ಬಂದಿದ್ದವು. ಡ್ರಗ್ಸ್ ಮುಕ್ತ ನಗರವನ್ನಾಗಿ ಮಾಡಲು ತೀವ್ರ ತಲೆ ಕೆಡೆಸಿಕೊಂಡಿದ್ದ ನಗರ ಪೋಲಿಸರು ಮೊದಲ ಪ್ರಕರಣದ ಪ್ರಯತ್ನದಲ್ಲಿ ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉಳಿದ ಆರೋಪಿಗಳನ್ನು ಪತ್ತೆ ಹಚ್ಚಿ ಡ್ರಗ್ಸ್ ಜಾಲವನ್ನು ಭೇಧಿಸಿ ಪ್ರಮುಖ ಆರೋಪಿಗಳನ್ನು ಬಂಧಿಸಬೇಕಿದೆ.

ಕುಡಿದು ಕಾರು ಚಾಲನೆ: ವಿದ್ಯುತ್ ಕಂಬಕ್ಕೆ ಡಿಕ್ಕಿ

ಚಿಕ್ಕನಾಯಕನಹಳ್ಳಿ: ಇನ್ನೋವಾ ಕಾರಿನ ಚಾಲಕನೊಬ್ಬ ಕುಡಿದ ಮತ್ತಿನಲ್ಲಿ ಅಡ್ಡಾದಿಡ್ಡಿ ಚಾಲನೆ ಮಾಡಿ ಸರಣಿ ಅಪಘಾತಗೈದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಘಟನೆ ಪಟ್ಟಣದ ಹೊಸಳ್ಳಿ ಬಳಿ ನಡೆದಿದೆ.ಹಬ್ಬದ ಮಾರನೆ ದಿನದಂದು ಶುಕ್ರವಾರ ಕುಡಿದ ಚಾಲಕ ತನ್ನ ಇನ್ನೋವಾ ಕಾರನ್ನು ಪಟ್ಟಣದ ಅರಳೆಪೇಟೆಯ ಮೂಲಕ ಅಡ್ಡಾದಿಡ್ಡಿ ಚಾಲನೆ ಮಾಡಿದ ಪರಿಣಾಮ, ಅಲ್ಲಿ ನಿಲ್ಲಿಸಿದ ಕೆಲವು ವಾಹನಗಳಿಗೆ ಜಖಂಮಾಡಿ ನಂತರ ಅತಿವೇಗ ಹಾಗೂ ಅಜಾಗರೂಕವಾಗಿ ಚಾಲನೆ ಮಾಡುತ್ತಾ ಸಮೀಪದಹೊಸಳ್ಳಿ ಬಳಿ ವಿದ್ಯುತ್ ಕಂಬಕ್ಕೆ ಡಿಕ್ಕಿಹೊಡೆದಿದ್ದಾನೆ, ಹೊಡೆದ ರಭಸಕ್ಕೆ ವಿದ್ಯುತ್‌ಕಂಬವೇ ರಸ್ತೆಗೆ ಉರುಳಿಬಿದ್ದಿದೆ. ತಕ್ಷಣ ಸ್ಥಳೀಯರು ಚಾಲಕನನ್ನು ಹಿಡಿದು ತರಾಟೆಗೆ ತೆಗೆದುಕೊಂಡು ಪೊಲಿಸರಿಗೆ ಒಪ್ಪಿಸಿದ್ದಾರೆ.



ತುಮಕೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಮಹಿಳೆಯರ ಖೋ-ಖೋ ಪಂದ್ಯಾವಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ತುಮಕೂರು ನಡೆಸಿದ್ದ ಪಂದ್ಯಾವಳಿ ಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಬ್ಬಿ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿದ್ದು ಶಾಲಾ ಆಡಳಿತ ಮಂಡಳಿ ಸನ್ಮಾನಿಸಿತು.

29ರಿಂದ ಕರಿಯಮ್ಮದೇವಿ ಜಾತ್ರೆ

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ಮಣಕೀಕೆರೆ ಗ್ರಾಮದ ಗ್ರಾಮದೇವತೆ ಕರಿಯಮ್ಮದೇವಿ, ಆಂಜನೇಯಸ್ವಾಮಿ, ಮಂಕಮ್ಮದೇವಿ ಜಾತ್ರಾ ಮಹೋತ್ಸವವು ಮಾ.29 ರಿಂದ ಏ.3ರವರೆಗೆ ನಡೆಯಲಿದೆ.

ಮಾ.29ರಂದು ಕರಿಯಮ್ಮದೇವಿಗೆ ಮದುವಣಗಿತ್ತಿ ಉತ್ಸವ, ಪುಷ್ಪಾಲಂಕಾರ. ಮಾ.30 ರಂದು ಮೊದಲೋತ್ಸವ. ಮಾ.31 ರಂದು ಆರತಿಬಾನ, ರಾತ್ರಿ ಶ್ರೀಅಮ್ಮನವರಿಗೆ ಹಾಗೂ ಶ್ರೀಸ್ವಾಮಿಗೆ ಭೂಕೈಲಾಸ ಉತ್ಸವ ನಡೆಯಲಿದೆ.

ಏ.1ರಂದು ಗಂಗಾಸ್ನಾನ, ರಾತ್ರಿ 10ಕ್ಕೆ ಶ್ರೀ ಅಮ್ಮನವರಿಗೆ ಹಾಗು ಶ್ರೀ ಸ್ವಾಮಿಗೆ ಶ್ರೀಕೃಷ್ಣ ಪಾರ್ಥಸಾರಥಿ ವೈಕುಂಠ ದರ್ಬಾರ್ ಉತ್ಸವ, ವಿಶೇಷ ಹೂವಿನ ಅಲಂಕಾರ, ದೇವಸ್ಥಾನ ಹಾಗೂ ಆವರಣಕ್ಕೆ ವಿಶೇಷ ಡೇಕೋರೇಷನ್, ವಿದ್ಯುತ್ ದೀಪಾಲಂಕಾರ, ಸಾಂಸ್ಕೃತಿಕ ಕಲಾತಂಡಗಳಾದ ಕೀಲುಕುದುರೆ, ತಮಟೆವಾದ್ಯ, ಮಹಿಳಾ ಡೊಳ್ಳುಕುಣಿತ, ನಗಾರಿವಾದ್ಯ, ನಾಸಿಕ್ ಡೋಲ್, ಚಂಡೆವಾದ್ಯ, ಭಜರಂಗಿ ವೇಷ, ಶ್ಯಾಡೋಸ್ ಡ್ಯಾನ್ಸ್ ಸ್ಟುಡಿಯೋ ನೃತ್ಯ ಪ್ರದರ್ಶನ, ಆರ್ಕೆಸ್ಟ್ರಾ ಹಾಗೂ ಅಮೋಘ ಮದ್ದಿನ ಪ್ರದರ್ಶನ ಕಾರ್ಯಕ್ರಮಗಳ ಉತ್ಸವ ನಡೆಯಲಿದೆ. ಏ.2ರಂದು ರಥೋತ್ಸವ ಮತ್ತು ಉಯ್ಯಾಲೋತ್ಸವ ನಡೆಯಲಿದ್ದು, ಅನ್ನಸಂತರ್ಪಣೆ, ಮಜ್ಜಿಗೆ, ಪಾನಕ ಫಲಹಾರ, ಸಿಹಿ ವಿತರಣೆ ನೆರವೇರಲಿದೆ. ರಾತ್ರಿ 8.30 ಕ್ಕೆ ಆರ್ಕೆಸ್ಟ್ರಾ ನಡೆಯಲಿದೆ.



ಮಧುಗಿರಿ ವಿಭಾಗೀಯ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಎತ್ತಿನಹೊಳೆ ಯೋಜನೆಯ ಕಾರ್ಯಪಾಲಕ ಇಂಜಿನಿಯರ್ ಆಗಿ ಡಿ.ಮುರಳಿ ಬಡ್ತಿ ಪಡೆದು ಅಧಿಕಾರ ಸ್ವೀಕರಿಸಿದರು.

ಮಹಿಳಾಸ್ನೇಹಿ ಶೌಚಾಲಯ, ವಿಶ್ರಾಂತಿ ಕೊಠಡಿ ವ್ಯವಸ್ಥೆಗೆ ಕ್ರಮ: ಸಿಇಒ

ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ

ರಾಮನಗರ: ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ಗಳಲ್ಲಿ ಮಹಿಳಾ ಸ್ನೇಹಿ ಶೌಚಾಲಯ ಹಾಗೂ ವಿಶ್ರಾಂತಿ ಕೊಠಡಿಗಳವ್ಯವಸ್ಥೆಮಾಡಲುಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಅನ್ಮೋಲ್ ಜೈನ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಪಂ ಮುಖ್ಯ ಯೋಜನಾಧಿಕಾರಿ ಚಿಕ್ಕ ಸುಬ್ಬಯ್ಯ ಮಾತನಾಡಿ, ಜೀವನದಲ್ಲಿ ತಾಯಿ, ಅಕ್ಕ, ತಂಗಿ, ಹೆಂಡತಿಯ ಪಾತ್ರ ಬಹಳ ಮುಖ್ಯವಾಗಿದೆ. ಮನೆಯಲ್ಲಿ ಮಹಿಳೆಯರು ನೆಮ್ಮದಿಯಾಗಿದ್ದರೆ ಆ ಮನೆ ನೆಮ್ಮದಿಯಾಗಿರುತ್ತದೆ. ಹೆಣ್ಣು ಕುಟುಂಬ ಹಾಗೂ ದೇಶದ ಅಭಿವೃದ್ಧಿಗೆ ತಳಪಾಯವಾಗಿದ್ದಾರೆ ಎಂದು ತಿಳಿಸಿದರು.

ಮಹಿಳೆಯರು ಬುದ್ಧಿವಂತರಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡುತ್ತಾರೆ. 1835ರಲ್ಲಿ ಸಾವಿತ್ರಿಬಾಯಿ ಫುಲೆ ಅವರು ಹೆಣ್ಣು ಮಕ್ಕಳಿಗೂ ಶಿಕ್ಷಣ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆದುಕೊಳ್ಳಲು ಶಿಕ್ಷಣ ಪ್ರಮುಖವಾಗಿದೆ. ಆದ್ದರಿಂದ ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಹೆಚ್ಚು ಒತ್ತು ನೀಡಬೇಕು ಎಂದು ತಿಳಿಸಿದರು.

ಚನ್ನಪಟ್ಟಣದ ಸರ್ಕಾರಿ ಉರ್ದು ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಕುಸುಮಲತಾ ಮಾತನಾಡಿ, ಜಿಲ್ಲೆ, ರಾಜ್ಯ, ದೇಶದಲ್ಲಿ ಮಹಿಳೆಯರು ಹಲವಾರು ಸಾಧನೆಗಳನ್ನು ಮಾಡುತ್ತಿದ್ದಾರೆ. ಕುಟುಂಬವನ್ನು ಸಮರ್ಥವಾಗಿ ನಿರ್ವಹಣೆ ಮಾಡುವಂತಹ ಶಕ್ತಿ, ಸಾಮರ್ಥ್ಯವಿರುವುದು ಮಹಿಳೆಯರಿಗೆ ಮಾತ್ರ, ಒಂದು ಕುಟುಂಬ ಚನ್ನಾಗಿದ್ದರೆ ಒಂದು ರಾಷ್ಟ್ರವೂ ಸಹ ಅಭ್ಯುದಯವಾಗಲು ಸಾಧ್ಯ.



> **ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ಗಳಲ್ಲಿ ಮಹಿಳೆಯರ ಆರೋಗ್ಯದ ಹಿತದೃಷ್ಟಿಯಿಂದ ಮಹಿಳಾ ಸ್ನೇಹಿ ಶೌಚಾಲಯ ಹಾಗೂ ವಿಶ್ರಾಂತಿ ಕೊಠಡಿಗಳ ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಲಾಗುವುದು. ಎನ್‌ಆರ್‌ಎಲ್‌ಎಂ ಸಂಜೀವಿನಿ ಯೋಜನೆಯಲ್ಲಿ ರೂಪುಗೊಂಡಿರುವ ಸ್ವಸಹಾಯ ಗುಂಪುಗಳ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಮುಂದಿನ ದಿನಗಳಲ್ಲಿ ಕೊಠಡಿ ಕಲ್ಪಿಸಲಾಗುವುದು.**
> ■ ಅನ್ಮೋಲ್ ಜೈನ್, ಜಿ.ಪಂ.ಸಿಇಒ

ಪ್ರತಿದಿನ ಮಹಿಳೆಯರು ತಮ್ಮ ಹಕ್ಕುಗಳು, ಸಮಾನ ಗೌರವ, ಸಾಮಾಜಿಕ ನ್ಯಾಯದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ಅವರಿಗೆ ಕುಟುಂಬದಿಂದ ಹಿಡಿದು ಅವರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹಾಗೂ ಸಮಾಜದಲ್ಲಿ ಯಾವ ರೀತಿ ಸ್ಥಾನಮಾನಗಳನ್ನು ಪುರುಷರು ನೀಡುತ್ತಿದ್ದಾರೆ ಎಂಬ ವಿಷಯದ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಾಗಬೇಕು ಎಂದು ತಿಳಿಸಿದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಎನ್‌ಆರ್‌ಎಲ್‌ಎಂ ಸಂಜೀವಿನಿ ಯೋಜನೆಯಲ್ಲಿ ರೂಪುಗೊಂಡಿರುವ ಸ್ವಸಹಾಯ ಗುಂಪುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಮಹಿಳೆಯರನ್ನು ಸನ್ಮಾನಿಸಲಾಯಿತು.ಜಿಪಂ ಸಹಾಯಕ ಕಾರ್ಯದರ್ಶಿ ಶಿವಕುಮಾರ್, ಉಪಕಾರ್ಯದರ್ಶಿ ಧನರಾಜ್, ಮುಖ್ಯ ಲೆಕ್ಕಾಧಿಕಾರಿ ನಂದೀಶ್, ರಾಮನಗರ ತಾಪಂ ಇಒ ಪೂರ್ಣಿಮಾ, ಹಾರೋಹಳ್ಳಿ ತಾಪಂ ಇಒ ಅಪೂರ್ವ, ಜಂಟಿ ಕೃಷಿ ನಿರ್ದೇಶಕರಾದ ಅಂಬಿಕಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿ ಲಕ್ಷ್ಮಿದೇವಿ ಹಾಗೂ ಇತರರು ಇದ್ದರು.

ಹಾಸ್ಯ, ಸಂಗೀತ ಉಳ್ಳ ವಿಶಿಷ್ಟ ಕಲೆಯೇ ಹರಿಕಥೆ

ತುಮಕೂರು: ಹರಿಕಥೆಯು ಸಂಗೀತ, ನೃತ್ಯ ಮತ್ತು ಹಾಸ್ಯವನ್ನು ಒಳಗೊಂಡ ಒಂದು ವಿಶಿಷ್ಟ ಪ್ರದರ್ಶನ ಕಲೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು.ಮಿರ್ಜಿ ತಿಳಿಸಿದ್ದಾರೆ. ಅವರು ತುಮಕೂರಿನ ಸೀತಾರಾಮ ದೇವಾಲಯದಲ್ಲಿ ಕೀರ್ತನಾ ರಂಗ ಬಳಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಸಾಂಸ್ಕೃತಿಕ ಸಂಭ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪುರಾಣದಕಥೆಗಳನ್ನು,ಭಕ್ತರಜೀವನ ಚರಿತ್ರೆಯನ್ನು ಮನಮುಟ್ಟುವಂತೆ ವಿವರಿಸುವುದು ಹರಿಕಥೆಯ ಮುಖ್ಯ ಉದ್ದೇಶ ಎಂದರು. ರಾಮಾಯಣ, ಮಹಾಭಾರತ, ಸತ್ಯಹರಿಶ್ಚಂದ್ರ, ಭಕ್ತ ಮಾರ್ಕಾಂಡೇಯ, ಶನಿ ಪ್ರಭಾವ, ಕೃಷ್ಣಾವತಾರ ಮುಂತಾದ ಕೀರ್ತನೆಗಳು ಜನಮನ ಗೆದ್ದಿವೆ ಎಂದರು. ಕೀರ್ತನಾ ರಂಗ ಬಳಗದ ನರಸಿಂಹದಾಸ್ ಅವರು ದಶಕಗಳಿಂದಲೂ ಹರಿಕಥಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಜನರಿಗೆ ಕಲೆಯನ್ನು ದೊಡ್ಡ ಮಟ್ಟದಲ್ಲಿ ಪರಿಚಯಿಸುತ್ತಿದ್ದಾರೆ ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಉಗಮ ಶ್ರೀನಿವಾಸ್ ಮಾತನಾಡಿ ಮೊದಲೆಲ್ಲಾ ಪುರಾಣ ಕಥೆಗಳನ್ನಷ್ಟೆ ಹರಿಕಥೆಗೆ ಅಳವಡಿಸಿಕೊಳ್ಳಲಾಗುತ್ತಿದ್ದು ಈಗ ಪಂಪ, ಅಂಬೇಡ್ಕರ್ ಸೇರಿದಂತೆ ಹಲವಾರು ಮಹನೀಯರ ಜೀವನ ಚರಿತ್ರೆಗಳನ್ನು ಕೂಡ ಕಥೆ ಮಾಡಲಾಗುತ್ತಿದೆಎಂದರು. ವಿಶಿಷ್ಟಕಲಾ ಪ್ರಕಾರವಾಗಿದ್ದು ಹರಿಕಥಾ ಪಿತಾಮಹ ಗುರುರಾಜಲು ನಾಯ್ಡು ಮತ್ತಿತರರೆ ದಿಗ್ಗಜರು ಅಸಾಧಾರಣ ಸಾಧನೆ ಮಾಡಿದ್ದಾರೆ ಎಂದರು. ಕೀರ್ತನಾ ರಂಗ ಬಳಗದ ನರಸಿಂಹದಾಸ್ ಮಾತನಾಡಿ ಹಲವಾರು ದಶಕಗಳಿಂದ ಹರಿಕಥಾ ಕಲಾ ಪ್ರಕಾರವನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ. ಜನರ ಪ್ರೋತ್ಸಾಹದಿಂದ ಮತ್ತಷ್ಟು ಕೆಲಸವನ್ನು ಮಾಡುವ ಇಂಗಿತವನ್ನು ವ್ಯಕ್ತಪಡಿಸಿದರು.



ಕುಣಿಗಲ್- ಮಾಗಡಿ ನೀರಿನ ವಿಚಾರದಲ್ಲಿ ಭಿನ್ನಾಭಿಪ್ರಾಯ ಬೇಡ

ಮಾಗಡಿ: ಹೇಮಾವತಿ ನದಿ ನೀರು ಹಂಚಿಕೆ ವಿಚಾರದಲ್ಲಿ ಮಾಗಡಿ ಮತ್ತು ಕುಣಿಗಲ್ ತಾಲೂಕುಗಳ ನಡುವೆ ಅನಗತ್ಯ ಗೊಂದಲ ಸೃಷ್ಟಿಸಬಾರದು ಎಂದು ಮಾಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪೂಜಾರಿಪಾಳ್ಯ ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗ ಮಾತನಾಡಿದರು. ಕುಣಿಗಲ್ ಕ್ಷೇತ್ರದ ಬಿಜೆಪಿ ಮುಖಂಡ ಡಿ.ಕೃಷ್ಣಕುಮಾರ್ ಅವರು ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ ಮಾಗಡಿ ತಾಲೂಕಿಗೆ ಅಕ್ರಮವಾಗಿ ಹೇಮಾವತಿ ನೀರು ಹರಿಸಲಾಗುತ್ತಿದೆ ಎಂದು ನೀಡಿದ್ದಾರೆ. ಇದು ಸರಿಯಲ್ಲ ಮಾಗಡಿ ಮತ್ತು ಕುಣಿಗಲ್ ತಾಲೂಕಿನ ಜನ ಅಣ್ಣ-ತಮ್ಮಂದಿರಂತೆ ಇದ್ದಾರೆ. ರಾಜಕೀಯ ಲಾಭಕ್ಕಾಗಿ ಜನರ ನಡುವೆ ವಿಷಬೀಜ ಬಿತ್ತಬೇಡಿ ಎಂದು ಅವರು ಎಚ್ಚರಿಸಿದರು.

ಕುದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ಜಿ. ವೆಂಕಟೇಶ್ ಮಾತನಾಡಿ, ತುಮಕೂರು ಜಿಲ್ಲೆಗೆ ಒಟ್ಟು 24.5 ಟಿಎಂಸಿ ನೀರು ಹಂಚಿಕೆಯಾಗಿದ್ದರೆ ಮಾಗಡಿ ತಾಲ್ಲೂಕಿಗೆ ಕೇವಲ 0.676 ಟಿಎಂಸಿ ನೀರು ಮಾತ್ರ ಹಂಚಿಕೆಯಾಗಿದೆ. ಲಿಂಕ್ ಕೆನಾಲ್ ಯೋಜನೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಗೆ ವೇಗ ನೀಡಲಾಗಿದೆ. ಇದರಿಂದ ನೀರು ಪೋಲಾಗುವುದು ಮತ್ತು ಕಳ್ಳತನವಾಗುವುದು ತಪ್ಪುತ್ತದೆ ಎರಡು ವರ್ಷದಲ್ಲಿ ಎತ್ತಿನಹೊಳೆ ಮತ್ತು ಹೇಮಾವತಿ ಯೋಜನೆಗಳ ಕಾಮಗಾರಿಗಳ ಪೂರ್ಣಗೊಂಡು ಮಾಗಡಿ ತಾಲ್ಲೂಕಿನ ಅಂತರ್ಜಲ ಮಟ್ಟ ಸುಧಾರಿಸಲಿದೆ ಕುಣಿಗಲ್ ಮುಖಂಡರು ಸಹಕಾರ ನೀಡಬೇಕೆಂದು ವಿನಂತಿಸಿದರು.


ಯುವ ಕಾಂಗ್ರೆಸ್ ಅಧ್ಯಕ್ಷ ಕುದೂರು ವಿನಯ್, ಆಗ್ರೋ ಪುರುಷೋತ್ತಮ್, ಪ್ರವೀಣ್, ಕಾಂಗ್ರೆಸ್ ಎಸ್‌ಸಿ/ಎಸ್‌ಟಿ ಘಟಕದ ಅಧ್ಯಕ್ಷ ಬ್ಯಾಲಕೆರೆ ಚಿಕ್ಕರಾಜು, ಜುಟ್ಟನಹಳ್ಳಿ ದಿನೇಶ್, ಟಿಎಪಿಸಿಎಂಎಸ್ ನಿರ್ದೇಶ ರಮೇಶ್, ಸಂಕೀಘಟ್ಟ ಚಂದ್ರಣ್ಣ, ರೆಹಮಾನ್, ಫರ್ವೀಜ್ ಸೇರಿದಂತೆ ಇತರರು ಭಾಗವಹಿಸಿದ್ದರು.



ಸ್ನೇಹಭಾವದಿಂದ ಪೊಲೀಸರು ವರ್ತಿಸಲು ಕರೆ

ರಾಮನಗರ: ಪೊಲೀಸರು ಯಾವುದೇ ಕಾರಣಕ್ಕೂ ಎದೆಗುಂದದೇ, ಯಾವಾಗಲೂ ಸ್ನೇಹ ಮನೋಭಾವದಿಂದ ಸಾರ್ವಜನಿಕರೊಂದಿಗೆ ವರ್ತಿಸಬೇಕು. ಪೊಲೀಸರ ಸಮವಸ್ತ್ರದ ಬಗ್ಗೆ ಸಾರ್ವಜನಿಕರು ಅಪಾರ ಗೌರವವನ್ನು ನಿರೀಕ್ಷಿಸುತ್ತಾರೆ, ಅದಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕು ಎಂದು ಉಪ ಪೊಲೀಸ್ ಮಹಾ ನಿರೀಕ್ಷಕ ಡಿ.ದೇವರಾಜ್ ಅವರು ಕಿವಿಮಾತು ಹೇಳಿದರು. ಚನ್ನಪಟ್ಟಣದ ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ಶಾಲೆಯಲ್ಲಿ ಆಯೋಜಿಸಲಾಗಿದ್ದ 69ನೇ ತಂಡದ ನಾಗರಿಕ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳು ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ವಂದನೇ ಸ್ವೀಕರಿಸಿ ಅವರು ಮಾತನಾಡಿದರು.

ಸ್ನೇಹಜೀವಿ ಪೋಲಿಸ್ ಎಂಬ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ರಾಜ್ಯದಲ್ಲಿ ಅತ್ಯಂತ ಹೆಸರುವಾಸಿಯಾಗಿರುವ ಚನ್ನಪಟ್ಟಣದ ಪೊಲೀಸ್ ತರಬೇತಿ ಶಾಲೆಯಲ್ಲಿ 110 ಮಂದಿಗಳು ತರಬೇತಿ ಪಡೆದು ನಿರ್ಗಮಿಸುತ್ತಿದ್ದಾರೆ. ಅವರು ಪ್ರದರ್ಶನ ನೀಡಿದ್ದು ತುಂಬಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ ಇದರಲ್ಲಿ ವಿಶೇಷ ಅಂದರೆ 18 ಜನ ಪದವಿಧರರು ಹಾಗೂ ಇಂಜಿನಿಯರ್‌ಗಳು ಪೊಲೀಸ್ ಇಲಾಖೆಗೆ ಸೇರಿರುವುದು ಗಮನಾರ್ಹ ಎಂದರು.



ಅತ್ಯುತ್ತಮವಾಗಿ ತರಬೇತಿ ಪಡೆದ ಕಾನ್ಸ್‌ಟೇಬಲ್ ಗಳಿಗೆ ಫಲಕ ನೀಡಿ ಗೌರವಿಸ ಲಾಯಿತು. ಬೆಂ.ದಕ್ಷಿಣ ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಆರ್.ಶ್ರೀನಿವಾಸ್ ಗೌಡ ಮತ್ತು ಪ್ರಭಾರ ಪ್ರಾಂಶುಪಾಲರಾದ ಟಿ. ಕುಮಾರ್ ಸೇರುದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು. ತರಬೇತಿ ಪಡೆದು ನಿರ್ಗಮಿಸುತ್ತಿರುವ ಕಾನ್ಸ್‌ಟೇಬಲ್ ಗಳ ಸಂಬಂಧಿಕರು ಭಾಗವಹಿಸಿದ್ದರು.

ಯುಗಾದಿ ಗುಡ್ಡೆ ಬಾಡುಗಾಗಿ ಮುಗಿಬಿದ್ದ ಜನ

ತುಮಕೂರು: ಯುಗಾದಿ ಹಬ್ಬದ ಮಾರನೇ ದಿನವಾದ ಇಂದು ವರ್ಷದ ತೊಡಕನ್ನು ಖುಷಿಯಿಂದ ಆಚರಿಸುತ್ತಿರುವ ಜನಸಾಮಾನ್ಯರು ಗ್ರಾಮೀಣ ಪ್ರದೇಶದ ಗುಡ್ಡೆ ಬಾಡಿಗಾಗಿ ಮುಗಿ ಬಿದ್ದಿದ್ದು, ಭಾರೀ ಬೇಡಿಕೆ ಉಂಟಾಗಿದೆ.

ವರ್ಷಕ್ಕೊಮ್ಮೆ ಯುಗಾದಿ ಹಬ್ಬದ ಮಾರನೇ ದಿನದ ವರ್ಷದ ತೊಡಕಿಗೆ ಜನಸಾಮಾನ್ಯರಲ್ಲಿ ಎಲ್ಲಿಲ್ಲದ ಆಸಕ್ತಿ. ಈ ವರ್ಷದ ತೊಡಕನ್ನು ದಿನಪೂರ್ತಿ ಯಾವುದೇ ಕೆಲಸ ಕಾರ್ಯ ಇದ್ದರೂ ಬದಿಗೊತ್ತಿ ಮಾಂಸಾಹಾರ ಸೇವನೆಯಲ್ಲಿ ಕಳೆಯುವುದು ಮೊದಲಿನಿಂದಲೂ ನಡೆದು ಬಂದಿರುವ ಪದ್ಧತಿ.

ಯುಗಾದಿ ಹಬ್ಬ ಮುಗಿದ ಬಳಿಕ ಮಧ್ಯರಾತ್ರಿಯಿಂದ ಹಳ್ಳಿಗಳಲ್ಲಿ ಶುರುವಾಗುವ ಮೇಕೆ, ಕುರಿಗಳ ಗುಡ್ಡೆ ಮಾಂಸ ಮಾರಾಟ ಇದೀಗ ನಗರ ಪ್ರದೇಶದ ಜನರನ್ನು ಆಕರ್ಷಿಸಿದೆ. ಹೀಗಾಗಿ ನಗರದ ಜನತೆಯೂ ಸಹ ತಮಗೆ ಪರಿಚಯಸ್ಥ ಹಳ್ಳಿಗಳ ಜನರೊಂದಿಗೆ ಗುಡ್ಡೆ ಬಾಡಿಗಾಗಿ ಬುಕ್ ಮಾಡಿಕೊಂಡು ಮಧ್ಯರಾತ್ರಿಯೇ ಹಳ್ಳಿಗಳೇ ಎಡತಾಕಿದ ದೃಶ್ಯಗಳು ಸಾಮಾನ್ಯವಾಗಿದ್ದವು.

ನಗರದ ಹುರುಳಿ ತೋಟ, ಹನುಮಂತಪುರ, ಹೊರವಲಯದ ಜಗನ್ನಾಥಪುರ, ಶೆಟ್ಟಿಹಳ್ಳಿ, ಗೂಳಹರಿವೆ, ಕೆಸರಡುಮುಡು, ಹೊನ್ನುಡಿಕೆ, ಕುಮಂಚಿಪಾಳ್ಯ, ಮಲ್ಲಸಂದ್ರ, ಹೆಗ್ಗೆರೆ, ಬುಗುಡನಹಳ್ಳಿ, ಚಿಕ್ಕಸಾರಂಗಿ ಸೇರಿದಂತೆ ಇನ್ನಿತರೆ ಹಳ್ಳಿಗಳಲ್ಲಿ ಗುಡ್ಡೆ ಬಾಡು ಸಿಗುವ ಸ್ಥಳಗಳಿಗೆ ನಗರ ಪ್ರದೇಶದ ಜನತೆ ಮುಗ್ಗಿ ಬಿದ್ದಿರುವ ದೃಶ್ಯಗಳು ಕಂಡು ಬಂದವು.

ಗುಡ್ಡೆ ಬಾಡಿನಲ್ಲಿ ಒಂದು ಮೇಕೆ ಅಥವಾ ಕುರಿಯ ಎಲ್ಲ ಭಾಗದ ಮಾಂಸ ಲಭ್ಯ ಇರುವುದು ಸಹ ಇದಕ್ಕೆ ಬೇಡಿಕೆ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಬೈಲರ್ ಕೋಳಿ ಕೆ.ಜಿ.ಗೆ 280, ಫಾರಂ ಕೋಳಿ ಕೆ.ಜಿ.ಗೆ 190, ಮಟನ್ ಕೆ.ಜಿಗೆ 900 ರೂ. ವರೆಗೆ ಮಾರಾಟ ಮಾಡಲಾಗುತ್ತಿದೆ ಎಂಬ ಮಾತುಗಳು ಸಹ ಸಾರ್ವಜನಿಕರಿಂದ ಕೇಳಿ ಬಂದಿವೆ.

ಸರ್ವೆ ನಂಬರ್ 127ರಲ್ಲಿ 1.13 ಎಕರೆ ಜಮೀನು ಆಶ್ರಯ ಯೋಜನೆಗೆ ಮೀಸಲು

ಫಲಾನುಭವಿಗಳಿಗೆ ನಿವೇಶನ ಒದಗಿಸಲು ಕ್ರಮ

ರಾಮನಗರ: ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಅವರು ವಾಸವಿದ್ದ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇಶನಗಳು ಹಾಗೂ ಹಕ್ಕುಪತ್ರಗಳನ್ನು ನೀಡುವ ಸಂಬಂಧ ಹುಲಿಕಲ್ ಗ್ರಾಮದ ಸರ್ವೆ ನಂಬರ್ 127 ರಲ್ಲಿ 1.13 ಎಕರೆ/ಗುಂಟೆ ಜಮೀನನ್ನು ಆಶ್ರಯ ಯೋಜನೆಯಲ್ಲಿಕಾಯ್ದಿರಿಸಲು ಮಾಗಡಿ ತಹಸೀಲ್ದಾರರು ಸಲ್ಲಿಸಿರುವ ಪ್ರಸ್ತಾವನೆಗೆ ಈಗಾಗಲೇ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ತಿಳಿಸಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ (ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ಕಾಯ್ದೆ-2015ರ ಅನುಷ್ಠಾನ ಸಂಬಂಧ) ಸಭೆಯಲ್ಲಿ ಅವರು ಮಾತನಾಡಿದರು.

ಹುಲಿಕಲ್ ಗ್ರಾಮದ ಸರ್ವೆ ನಂಬರ್ 127 ರಲ್ಲಿ 1.13 ಎ/ಗು ಜಮೀನನ್ನು ಆಶ್ರಯ ಯೋಜನೆಯಲ್ಲಿ ಮಂಜೂರು ಮಾಡುವ ಸಮಯದಲ್ಲಿ ಹುಲಿಕಲ್ ಗ್ರಾಮದ ಪರಿಶಿಷ್ಟ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ನಿವೇಶನ ಒದಗಿಸಲು ಈ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು. ರಾಮನಗರ ತಾಲೂಕಿನ ಕುಂಭಾಪುರ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿಯವರು ವಾಸಿಸುತ್ತಿದ್ದಾರೆ, ಅಲ್ಲಿ 2026-27ನೇ ಸಾಲಿನ ತಾಲೂಕು ಪಂಚಾಯತ್ ಅನುದಾನದಲ್ಲಿ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಚಿಕ್ಕಸುಬ್ಬಯ್ಯ ಅವರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.



ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ಇತರೆ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯುವ ಯೋಜನೆಯಲ್ಲಿ ಸಾರ್ವಜನಿಕರಿಂದ ವ್ಯಕ್ತವಾಗಿರುವ ಆಕ್ಷೇಪಣೆಗಳ ಕುರಿತಂತೆ ನಡೆದ ಚರ್ಚೆಯಲ್ಲಿ ಜಿಲ್ಲೆಗೆ ಬಿಡುಗಡೆಯಾದ ಅನುದಾನ, ಫಲಾನುಭವಿಗಳ ಆಯ್ಕೆ ಹಾಗೂ ಅರ್ಹತೆ ಮಾನದಂಡಗಳ ಬಗ್ಗೆ ಹಾಗೂ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರಿಗೆ ಲಿಖಿತವಾಗಿ ಮಾಹಿತಿ ನೀಡುವಂತೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಿಗೆ ಜಿಲ್ಲಾಧಿಕಾರಿಯವರು ಸೂಚನೆ ನೀಡಿದರು.

ಸಭೆಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಯಿತು. ಉಪ ವಿಭಾಗಾಧಿಕಾರಿ ಬಿನೋಯ್, ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಇತರರು ಇದ್ದರು.

ಅತ್ಯಾಧುನಿಕ ಪಾರ್ಕ್ ನಿರ್ಮಾಣ ಉದ್ದೇಶಕ್ಕಾಗಿ ಭೂಸ್ವಾಧೀನ ಅಸೂಚನೆ

ದೇವಾಲಯ, ದರ್ಗಾ ಸ್ವಾಧೀನಕ್ಕೆ ಆಕ್ಷೇಪ

ಎಸ್. ರುದ್ರೇಶ್ವರ

ರಾಮನಗರ: ನಗರದ ಮಧ್ಯ ಭಾಗದಲ್ಲಿ ಹರಿಯುವ ಅರ್ಕಾವತಿ ನದಿ ದಡದಲ್ಲಿ ಅತ್ಯಾಧುನಿಕ ಪಾರ್ಕ್ ನಿರ್ಮಾಣ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳು ಹೊರಡಿಸಿರುವ ಭೂಸ್ವಾಧೀನ ಅಸೂಚನೆಯಲ್ಲಿ ಐತಿಹಾಸಿಕ ಹಿನ್ನೆಲೆ ಇರುವ ಪುರಾತನ ಅರ್ಕೇಶ್ವರ ಸ್ವಾಮಿ ದೇವಾಲಯ ಹಾಗೂ ಪಿರನ್ ಷಾ ವಲಿ ದರ್ಗಾ ಸೇರಿದ್ದು, ಇವುಗಳ ಸ್ವಾಧೀನಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ನದಿಯ ಎರಡೂ ದಂಡೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಸೌಂದರ್ಯೀಕರಣ ಮಾಡುವ ಉದ್ದೇಶದ ಯೋಜನೆಗೆ ಅಗತ್ಯವಿರುವ ಭೂಮಿ ಸ್ವಾಧೀನಪಡಿಸಿಕೊಳ್ಳಲು ಜಿಲ್ಲಾಧಿಕಾರಿ ಜ. 20ರಂದು ಅಸೂಚನೆ ಹೊರಡಿಸಿದ್ದಾರೆ. ಅಧಿಸೂಚನೆಗೆ ಭೂಮಿ ಕಳೆದುಕೊಳ್ಳುವವರು 60 ದಿನದೊಳಗೆ ತಮ್ಮ ಆಕ್ಷೇಪಣೆ ಸಲ್ಲಿಸಬೇಕಿದೆ.

ರಾಮನಗರ ವ್ಯಾಪ್ತಿಯಲ್ಲಿ ನದಿಗೆ ಹೊಂದಿಕೊಂಡಿರುವ ಸರ್ವೆ ನಂ. 11ರಲ್ಲಿರುವ ಅರ್ಕೇಶ್ವರ ಸ್ವಾಮಿ ದೇವಸ್ಥಾನ ಹಾಗೂ ಸರ್ವೆ ನಂ. 113ರಲ್ಲಿರುವ ಮಹಮದ್ ಪೀರ್ ಬಾಬಾ ಸಾಬ್ ದರ್ಗಾ ಹಾಗೂ ನದಿ ಪಕ್ಕದಲ್ಲಿರುವ ರಾಘವೇಂದ್ರ ಕಾಲೊನಿಯ 40ಕ್ಕೂ ಹೆಚ್ಚು ಮನೆಗಳು ಸಹ ಭೂ ಸ್ವಾಧೀನಕ್ಕೆ ಒಳಗಾಗಲಿದೆ. ಯೋಜನೆಗಾಗಿ ಒಟ್ಟು 28 ಎಕರೆ 18 ಗುಂಟೆ ಜಮೀನು ಭೂ ಸ್ವಾಧೀನವಾಗಲಿದೆ. ಈ ಪೈಕಿ ರಾಮನಗರ ಗ್ರಾಮದ ವ್ಯಾಪ್ತಿಯಲ್ಲಿ 14 ಎಕರೆ 14 ಗುಂಟೆ, ಜಿಗೇನಹಳ್ಳಿಯಲ್ಲಿ 3 ಎಕರೆ 9 ಗುಂಟೆ, ಬೋಳಪ್ಪನಹಳ್ಳಿ ಅಮಾನಿಕೆರೆಯಲ್ಲಿ 3 ಎಕರೆ 7 ಗುಂಟೆ ಹಾಗೂ ಐಜೂರಿನಲ್ಲಿ 7 ಎಕರೆ 30 ಗುಂಟೆ ಜಮೀನು ಭೂ ಸ್ವಾಧೀನವಾಗಲಿದೆ. ಪ್ರಕ್ರಿಯೆಯಲ್ಲಿ ರಾಘವೇಂದ್ರ ಕಾಲೋನಿಯ ಮನೆಗಳು ಭೂ ಸ್ವಾಧೀನಕ್ಕೆ ಒಳಪಟ್ಟಿದೆ. ಇಲ್ಲಿನ ನಿವಾಸಿಗಳ ತೀವ್ರ ವಿರೋಧ ವ್ಯಕ್ತವಾಗಿದ್ದು, ಜಿಲ್ಲಾಧಿಕಾರಿಗಳ ಕಚೇರಿಗೆ ಆಕ್ಷೇಪಗಳನ್ನು ಸಲ್ಲಿಸುತ್ತಿದ್ದಾರೆ.

ರಾಮನಗರದಲ್ಲಿ ಸುಸಜ್ಜಿತ ಪಾರ್ಕ್ ನಿರ್ಮಾಣದ ಅಗತ್ಯವಿದೆ. ಆದರೆ ವಾಕಿಂಗ್ ಪಾರ್ಕ್ ನಿರ್ಮಾಣಕ್ಕೆ ಪುರಾನತ ದೇವಾಲಯ, ದರ್ಗಾ, ವಸತಿ ಬಡಾವಣೆಗಳು, ವಾಣಿಜ್ಯ ಮಳಿಗೆಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಪಾರ್ಕ್ ನಿರ್ಮಾಣ ಮಾಡುವ ಅನಿವಾರ್ಯತೆ ಏನಿದೆ? ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ. ನದಿಯ ಮತ್ತೊಂದು ಭಾಗದಲ್ಲಿರುವ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಮೀಸಲಿಟ್ಟಿರುವ ಜಾಗ, ಬಾಲಾಜಿ ಆಸ್ಪತ್ರೆ, ಷರೀಫ್ ಕಾಂಪ್ಲೆಕ್ಸ್, ಸಾಯಿಬಾಬಾ ದೇವಸ್ಥಾನದ ಜಾಗವನ್ನು ಸಹ ಭೂ ಸ್ವಾಧೀನಪಡಿಸಿಕೊಳ್ಳಲು ಗುರುತಿಸಲಾಗಿದೆ. ಅರ್ಕಾವತಿ ನದಿ ದಡದಲ್ಲಿ ಪಾರ್ಕ್ ಅಭಿವೃದ್ಧಿ ಮಾಡಲಾಗುತ್ತಿದೆ. ಇದರಿಂದ ಅರ್ಕೇಶ್ವರ ಸ್ವಾಮಿ, ದರ್ಗಾ, ಯಾರಿಗೂ ಸಮಸ್ಯೆ ಆಗುವುದಿಲ್ಲ. ಈ ಬಗ್ಗೆ ಸಾರ್ವಜನಿಕರಿಂದ ಅಹವಾಲುಗಳು ಬಂದಿವೆ. ಅತ್ಯುತ್ತಮವಾದ ಪ್ಲಾನ್ ಅನ್ನು ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಅವರು ಮಾಡಿದ್ದಾರೆ. ಯಾರಿಗೂ ತೊಂದರೆ ಆಗದಂತೆ ಪಾರ್ಕ್, ವಾಕಿಂಗ್ ಪಾಥ್ ನಿರ್ಮಾಣ ಮಾಡುತ್ತೇವೆ. ನನ್ನ ಜಮೀನು ಕೂಡ ಭೂ ಸ್ವಾಧೀನ ಆಗುತ್ತಿದೆ ಎಂದರು.



ಕಿರು ಸುದ್ದಿ

ಗಂಗಮ್ಮ ದೇವಿಗೆ ಮೇಲ್ ದೀಪ ಉತ್ಸವ

ಬಂಗಾರಪೇಟೆ: ಪಟ್ಟಣದ ಗಾಂಧಿನಗರದಲ್ಲಿ ನೆಲೆಸಿರುವ ಇತಿಹಾಸ ಪ್ರಸಿದ್ಧ ಶಕ್ತಿ ದೇವತೆ ಗಂಗಮ್ಮ ದೇವಾಲಯದಲ್ಲಿ ಮೇಲ್ ದೀಪ ಉತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು.



ಪಟ್ಟಣದ ಗಾಂಧಿನಗರದ ಊರು ಗಂಗಮ್ಮ ಎಂದೇ ಪ್ರಸಿದ್ಧಿ ಪಡೆದಿರುವ ಶಕ್ತಿ ದೇವಾಲಯದಲ್ಲಿ ಪ್ರತಿವರ್ಷ ಯುಗಾದಿ ಹಬ್ಬಕ್ಕೆ ಶ್ರೀ ಗಂಗಮ್ಮ ದೇವಿಗೆ ವಿಶೇಷ ಅಲಂಕಾರ ಮತ್ತು ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯುವುದು ವಾಡಿಕೆಯಂತೆ ಪೂಜಾ ಕೈಂಕರ್ಯಗಳು ನೇರವೇರಿತು. ಯುಗಾದಿ ಹಬ್ಬಕ್ಕೆ ಗಾಂಧಿನಗರ ಹಾಗೂ ಕುಂಬಾರ ಪಾಳ್ಯ ಗ್ರಾಮಸ್ಥರು ಗಂಗಮ್ಮ ದೇವರ ಮೇಲ್ ದೀಪ ಉತ್ಸವವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಿದರು. ದೇವಿಗೆ ಬಗೆ ಬಗೆಯ ವಿಶೇಷ ಹೂಗಳಿಂದ ಅಲಂಕಾರ ಮಾಡಲಾಗಿತ್ತು, ಈ ಪೂಜಾ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು. ಪೂಜೆಗೆ ಆಗಮಿಸಿದಂತಹ ಭಕ್ತರು ದೇವಾಲಯದ ವತಿಯಿಂದ ತೀರ್ಥ ಪ್ರಸಾದ ವಿನಿಯೋಗ ನಡೆಯಿತು.

ಯುಗಾದಿ ವಿಶೇಷ ಪೂಜೆ

ಕೋಲಾರ: ದೇವಾಲಯಗಳ ಊರು ಎಂದೇ ಖ್ಯಾತಿಯಾಗಿರುವ ಅರಾಭಿಕೊತ್ತನೂರು ಗ್ರಾಮದಲ್ಲಿ ಯುಗಾದಿ ಅಂಗವಾಗಿ ಶ್ರೀ ಪ್ರಸನ್ನ ಸೋಮನಾಥೇಶ್ವರ ಸ್ವಾಮಿ ಮೆರವಣಿಗೆ ಅದ್ದೂರಿಯಿಂದ ನಡೆಯಿತು.

ಪುರಾತನ ಕಾಲದಿಂದ ಪ್ರತಿವರ್ಷದಂತೆ ಯುಗಾದಿಯಂದು ಪಲ್ಲಕ್ಕಿ ಉತ್ಸವವನ್ನು ನೆರವೇರಿಸಿಕೊಂಡು ಬಂದಿದ್ದು, ಗ್ರಾಮದ ಎಲ್ಲಾ ದೇವರಿಗೆ ಅಭಿಷೇಕ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಪ್ರತಿವರ್ಷ ಈ ಕಾರ್ಯಕ್ರಮ ಮಾಡುವ ಸೋಮಪ್ಪ ಮಾಸ್ಟರ್ ಮತ್ತು ರಾಮಕೃಷ್ಣಪ್ಪ ನಾರಾಯಣಸ್ವಾಮಿ ವೆಂಕಟಸ್ವಾಮಿ ಈಶ್ವರ್ ಅನಂತನಾಗ್ ನವೀನ್ ಕುಮಾರ್ ಹರಿ ಕಿಶನ್ ಅರುಣ್ ಕುಮಾರ್ ಮತ್ತಿತರರು ನೇತೃತ್ವ ವಹಿಸಿದ್ದರು.

ಮಲ್ಲಹಳ್ಳಿ ಎಂಪಿಸಿಎಸ್‌ಗೆ ಏ.5ರಂದು ಚುನಾವಣೆ

ಕೋಲಾರ: ಜಿಲ್ಲೆಯ ಕೆಜಿಎಫ್ ತಾಲೂಕಿನ ಮಲ್ಲಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಮುಂದಿನ ಐದು ವರ್ಷಗಳ ಆಡಳಿತ ಮಂಡಳಿಗೆ ಏಪ್ರಿಲ್-5 ರಂದು ಚುನಾವಣೆ ನಿಗಧಿಯಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾರ್ಚ್-29 ಕಡೆದಿನಾಂಕವಾಗಿದೆ ಎಂದು ಚುನಾವಣಾಧಿಕಾರಿ ವೇಣುಗೋಪಾಲ್ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು, ಮಾ.30 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಉಮೇದುವಾರಿಕೆ ಹಿಂಪಡೆಯಲು ಮಾರ್ಚ್-31 ಕಡೆ ದಿನವಾಗಿದೆ ಎಂದು ತಿಳಿಸಿದ್ದಾರೆ. ಏಪ್ರಿಲ್-5 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೂ ಮಲ್ಲಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಚುನಾವಣೆ ನಡೆಯಲಿದ್ದು, ಮತದಾನದ ನಂತರ ಅದೇ ದಿನ ಮತ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಬಂಗಾರಪೇಟೆ: ಪಟ್ಟಣದ ಬಾಲಚಂದ್ರ ಟಾಕೀಸ್ ಎದರು ಸಂದಿಯಲ್ಲಿ ಸುಮಾರು 40-45 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾನೆ. ಬಾಲಚಂದ್ರ ಟಾಕೀಸ್ ಎದರಿಗೆ ಇರುವ ಸಂದಿಯಲ್ಲಿ ಯಾರೋ ಒಬ್ಬ ಆಸಾಮಿ ಮೃತಪಟ್ಟಿದ್ದು, ಯಾರೋ ಒಬ್ಬ ಗಂಡಸು ವಯಸ್ಸು ಸುಮಾರು 40 ರಿಂದ 45 ವರ್ಷ ವಯಸ್ಸಿನವನಾಗಿದ್ದು, ಭಿಕ್ಷೆ ಬೇಡುವನ ತರಹ ಇದ್ದು, ಯಾವುದೋ ಖಾಯಿಲೆಯಿಂದ ಹಾಗೂ ಊಟ ಆಹಾರವಿಲ್ಲದೇ, ಮಧ್ಯ ಸೇವನೆ ಮಾಡುವನತರಹ ಇದ್ದು, ಆಕಸ್ಮಿಕವಾಗಿ ಮೃತಪಟ್ಟಿರಬಹುದು, ಈತನ ಚಹರೆ ಗುರ್ತುಗಳು ಕಪ್ಪು ಬಣ್ಣ, ಕೋಲು ಮುಖ, ಬೋಡು ತಲೆ, ಅಗಲವಾದ ಹಣೆ, ಎದೆಯ ಮೇಲೆ ಲವ್ ಸಿಂಬಲ್ ಮತ್ತು ಪ್ಲಾಸ್ಟರ್ ಗಳನ್ನು ಅಂಟಿಸಿಕೊಂಡಿರುತ್ತಾನೆ, ಕತ್ತಿನಲ್ಲಿ ಯಾವುದೋ ಮಣಿಗಳ ದಾರ ಇರುತ್ತದೆ, ಒಂದು ಕಪ್ಪು ಬಿಳಿ ಬಣ್ಣದ ಚೌಕಳಿ ತುಂಬು ತೋಳಿನ ಶರ್ಟ್, ಒಂದು ಹರಿದಿರುವ ಜೀನ್ಸ್ ಪ್ಯಾಂಟ್ ಇರುತ್ತದೆ, ಈತನ ಹೆಸರು ವಿಳಾಸ ಗೊತ್ತಿರುವುದಿಲ್ಲ, ಈತನು ಊಟ ಆಹಾರವಿಲ್ಲದೇಯೋ, ಮಧ್ಯಸೇವನೆ ಮಾಡಿಕೊಂಡು ಹಾಗೂ ಯಾವುದೋ ಖಾಯಿಲೆಯಿಂದ ನರಳಿ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ಪಟ್ಟಣದ ಪೋಲೀಸ್ ಠಾಣೆಯನ್ನು ಸಂಪರ್ಕಿಸಲು ಕೋರಿದ್ದಾರೆ.

ಡೇರಿ ಅಧ್ಯಕ್ಷ ನಿಧನ: ನೆರವು

ಕೋಲಾರ: ತಾಲೂಕಿನ ತುರಾಂಡಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಟಿ.ಎಂ ವೆಂಕಟೇಶ್ ರವರ ಅಕಾಲಿಕ ಮರಣ ಹಿನ್ನೆಲೆಯಲ್ಲಿ ಅವರ ಕುಟುಂಬಕ್ಕೆ ಕೋಮುಲ್ ವತಿಯಿಂದ ನಿರ್ದೇಶಕ ಚಂಜಿಮಲೆ ರಮೇಶ್ ಅವರು 50 ಸಾವಿರ ಧನ ಸಹಾಯ ಮಾಡಿದರು. ಕೋಮುಲ್ ಉಪ ವ್ಯವಸ್ಥಾಪಕ ಡಾ.ಮಹೇಶ್, ವಿಸ್ತರಣಾಧಿಕಾರಿ ನಾಗೇಂದ್ರ, ಮುಖಂಡರಾದ ಮುಳ್ಳಹಳ್ಳಿ ಚಂದ್ರೇಗೌಡ, ನುಕ್ಕನಹಳ್ಳಿ ಶ್ರೀನಿವಾಸ್ ಇದ್ದರು.



ರಂಜಾನ್ ಹಬ್ಬದ ಪ್ರಯುಕ್ತ ನಗರದ ಕೆಜಿಎಫ್ ನಾಲ್ಕನೇ ಬ್ಲಾಕ್‌ನಲ್ಲಿ 400 ಮುಸ್ಲಿಂ ಕುಟುಂಬಗಳಿಗೆ ಆರ್ ಕೆ ಫೌಂಡೇಶನ್ ಅಧ್ಯಕ್ಷ ಮೋಹನ್ ಕೃಷ್ಣ ಉಚಿತ ಫುಡ್ ಕಿಟ್ ವಿತರಿಸಿದರು.

ಫುಡ್ ಕಿಟ್‌ಗಳ ಉಚಿತ ವಿತರಣೆ

ಕೆಜಿಎಫ್: ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಶಾಸಕಿ ರೂಪಕಲಾ ಎಂ.ಶಶಿಧರ್ ವೈಯಕ್ತಿಕವಾಗಿ ಏನು ಕೊಡುಗೆ ನೀಡಿದ್ದಾರೆ ಎಂಬುದನ್ನು ಸಾರ್ವಜನಿಕವಾಗಿ ತಿಳಿಸಬೇಕು ಎಂದು ಆರ್.ಕೆ.ಫೌಂಡೇಶನ್ ಅಧ್ಯಕ್ಷ ಮೋಹನ್ ಕೃಷ್ಣ ಪ್ರಶ್ನಿಸಿದರು. ರಂಜಾನ್ ಹಬ್ಬದ ಪ್ರಯುಕ್ತ ನಗರದ ನಾಲ್ಕನೇ ಬ್ಲಾಕ್‌ನಲ್ಲಿ 400 ಮುಸ್ಲಿಂ ಕುಟುಂಬಗಳಿಗೆ ಉಚಿತವಾಗಿ ಫುಡ್ ಕಿಟ್‌ಗಳ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಸಂದರ್ಭದಲ್ಲಷ್ಟೇ ಮುಸ್ಲಿಂ ಸಮುದಾಯವನ್ನು ನೆನಪಿಸಿಕೊಳ್ಳಲಾಗುತ್ತದೆ. ಸರ್ಕಾರದ ಸೌಲಭ್ಯಗಳ ಬಗ್ಗೆ ಮಾತ್ರ ಮಾತನಾಡುವುದು ಬಿಟ್ಟರೆ ಬೇರೆ ಯಾವುದೇ ಕಾರ್ಯಕ್ರಮ ಕಾಣಿಸುತ್ತಿಲ್ಲ ಎಂದು ಆರೋಪಿಸಿದರು.

ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿನ ಅವ್ಯವಸ್ಥೆಯಿಂದ ಮುಸ್ಲಿಂ ಸಮುದಾಯ ಹೆಚ್ಚು ತೊಂದರೆ ಅನುಭವಿಸುತ್ತಿದೆ ಎಂದು ಅವರು ಹೇಳಿದರು. ಶಾಸಕಿ ರೂಪಕಲಾ ಎಂ.ಶಶಿಧರ್ ಮುಸ್ಲಿಂ ಸಮುದಾಯವನ್ನು ಕೇವಲ ವೋಟ್ ಬ್ಯಾಂಕ್ ಆಗಿ ಬಳಸುತ್ತಿದ್ದಾರೆ ಎಂಬುದು ನೋವು ತಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಂದಿನ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ನಿರ್ಧಾರ ಮಾಡಿರುವುದಾಗಿ ತಿಳಿಸಿದ ಮೋಹನ್



ಕೋಲಾರದಲ್ಲಿ ಡಿ.ಎಂ.ಆರ್ ಪೌಂಢೇಷನ್, ಪತ್ರಕರ್ತರ ಸಂಘ ಕೋಲಾರ ಇವರ ಸಹಯೋಗದಲ್ಲಿ ನಡೆದ ಕೋಲಾರ ಯುಗಾದಿ ಉತ್ಸವದಲ್ಲಿ ನಟ ಯುವರಾಜ ಕುಮಾರ್‌ಗೆ ಹಾಗೂ ನಟಿ ಸಂಜನಾ ಆನಂದ್‌ಗೆ ಡಿಐಜಿಪಿ ದೇವರಾಜ್ ಡಿಎಂಆರ್ ಫೌಂಡೇಷನ್‌ನಿಂದ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮನವಿಗೆ ಸರ್ಕಾರದ ಸ್ಪಂದನೆ

ಬೆಸ್ಕಾಂ ಕಚೇರಿ ಮೇಲ್ದರ್ಜೆಗೆ

ಕೋಲಾರ: ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಅವರ ಮನವಿಗೆ ಸ್ಪಂದಿಸಿರುವ ರಾಜ್ಯ ಇಂಧನ ಸಚಿವ ಕೆ.ಜೆ.ಜಾರ್ಜ್, ಬೆಸ್ಕಾಂ ಕೋಲಾರ ಗ್ರಾಮೀಣ ಉಪವಿಭಾಗವನ್ನು ವಿಭಜಿಸಿ ವೇಮಗಲ್‌ಗೆ ಬೆಸ್ಕಾಂ ಉಪ ವಿಭಾಗವನ್ನು ಮಂಜೂರು ಮಾಡುವ ಮೂಲಕ ಇಲ್ಲಿನ ಕಾರ್ಯಪಾಲನಾ ಘಟಕವನ್ನು ಮೇಲ್ದರ್ಜೆಗೇರಿಸಿ ಆದೇಶಿಸಿದ್ದಾರೆ.

ವೇಮಗಲ್,ನರಸಾಪುರ ಕೈಗಾರಿಕಾ ಪ್ರದೇಶವು ಬೆಳೆಯುತ್ತಿರುವ ಕೈಗಾರಿಕಾ ಸಮೂಹ ಪ್ರದೇಶದಲ್ಲಿ ಕೆಐಡಿಬಿ ಕೈಗಾರಿಕಾ ವಿನ್ಯಾಸ ಸ್ಥಾಪಿಸಿದೆ, ಹಲವಾರು ಜಾಗತೀಕ, ಭಾರತೀಯ ಪ್ರಮುಖ ಉತ್ಪಾದನಾ ಕಂಪನಿಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಗ್ರಾಹರಿಗೆ ಗುಣಮಟ್ಟದ, ವಿಶ್ವಾಸಾರ್ಹ ವಿದ್ಯುತ್ ಸರಬರಾಜು ಕಾಪಾಡಿಕೊಳ್ಳಲು ಪ್ರತ್ಯೇಕ ಕಾರ್ಯನಿರ್ವಹಣೆಗೆ ಉಪ ವಿಭಾಗದ ಅಗತ್ಯತೆ ಕುರಿತು ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಸಚಿವ ಜಾರ್ಜ್ ಹಾಗೂ ಬೆಸ್ಕಾಂ ಎಂಡಿ ಶಿವಶಂಕರ್ ಅವರಿಗೆ ಮನವಿ ಮಾಡಿ ಮನವರಿಕೆ ಮಾಡಿಕೊಟ್ಟಿದ್ದರು.

ಈಹಿನ್ನೆಲೆಯಲ್ಲಿ ಸಚಿವರ ಆದೇಶದಂತೆ ಹಾಗೂ ಬೆಸ್ಕಾಂನ 140ನೇ ನಿರ್ದೇಶಕ ಮಂಡಳಿ ಸಭೆಯ ನಿರ್ಣಯದಂತೆ ಬೆಸ್ಕಾಂ ಪ್ರಧಾನ ವ್ಯವಸ್ಥಾಪಕ ಡಾ.ಬಿ.ಆರ್.ದಯಾನಂದ್ ಆದೇಶ ಹೊರಡಿಸಿ, ಬೆಸ್ಕಾಂ ಕೋಲಾರ ಗ್ರಾಮೀಣ ಉಪವಿಭಾಗವನ್ನು ವಿಭಜಿಸಿ ವೇಮಗಲ್ ನೂತನ ಉಪವಿಭಾಗವನ್ನು ರಚಿಸಿದ್ದು, ಕಾರ್ಯ ಮತ್ತು ಪಾಲನ ಘಟಕ ಕ್ಯಾಲನೂರು, ನರಸಾಪುರ, ವೇಮಗಲ್ ಈ ಮೂರು ಘಟಕಗಳನ್ನು ಇದರ ವ್ಯಾಪ್ತಿಗೆ ತಂದು ಆದೇಶ ಹೊರಡಿಸಿದ್ದಾರೆ.



ಆದೇಶದಲ್ಲಿ ಚರ್ಚೆ

ಈವರೆಗೂ ಸಹಾಯಕ ಇಂಜಿನಿಯರ್ ಹುದ್ದೆ ಹೊಂದಿದ್ದ ವೇಮಗಲ್ ಇನ್ನು ಮುಂದೆ ತಾಲೂಕು ಕೇಂದ್ರದಲ್ಲಿರುವಂತೆ ಕಾರ್ಯಪಾಲಕ ಅಭಿಯಂತರರ ಕಚೇರಿಯನ್ನು ಹೊಂದಲಿದ್ದು, ಮೇಲ್ದರ್ಜೆಗೆ ಏರಿಸಲಾಗಿದೆ. ನೂತನವಾಗಿ ರಚಿಸಿರುವ ವೇಮಗಲ್ ಉಪವಿಭಾಗಕ್ಕೆ ವಿವಿಧ ದರ್ಜೆಯ ಹುದ್ದೆಗಳ ವಿವರಗಳನ್ನು ಮಂಜೂರಾತಿ, ಸ್ಥಳಾತರಿಸುವ ಕುರಿತು ಮುಂದಿನ ಆದೇಶದಲ್ಲಿ ಪ್ರತ್ಯೇಕವಾಗಿ ತಿಳಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸರ್ಕಾರಕ್ಕೆ ಧನ್ಯವಾದ: ತಮ್ಮ ಮನವಿಗೆ ಸ್ಪಂದಿಸಿ ವೇಮಗಲ್‌ನ ಬೆಸ್ಕಾಂ ಸಹಾಯಕ ಇಂಜಿನಿಯರ್ ಕಚೇರಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿಯಾಗಿ ಮೇಲ್ದರ್ಜೆಗೇರಿಸಲು ಸಹಕರಿಸಿದ್ದಕ್ಕಾಗಿ ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶೇಷವಾಗಿ ಮಂಜೂರಾತಿಗೆ ಕಾರಣರಾದ ಇಂಧನ ಸಚಿವ ಕೆ.ಜೆ.ಜಾರ್ಜ್, ಬೆಸ್ಕಾಂ ಎಂಡಿ ಶಿವಶಂಕರ್ ಅವರಿಗೆ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಧನ್ಯವಾದ ಸಲ್ಲಿಸಿದ್ದಾರೆ.

ವೇಮಗಲ್,ನರಸಾಪುರ ಕೈಗಾರಿಕಾ ವಲಯಗಳು ಅತಿ ವೇಗವಾಗಿ ಬೆಳೆಯುತ್ತಿದ್ದು, ಜನಸಂದಣಿ, ವಿದ್ಯುತ್ ಅಗತ್ಯತೆಯೂ ಹೆಚ್ಚಿದೆ, ಈ ಹಿನ್ನಲೆಯಲ್ಲಿ ಈ ಭಾಗದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ವೇಮಗಲ್ ಗೆ ಉಪ ವಿಭಾಗ ಮಂಜೂರು ಮಾಡಿದ್ದು, ಇದು ಈ ಭಾಗದ ವಿದ್ಯುತ್ ಸರಬರಾಜಿನಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸುಲಭವಾಗಲಿದೆ ಎಂದು ಸುದರ್ಶನ್ ಅಭಿಪ್ರಾಯಪಟ್ಟಿದ್ದಾರೆ.

ತೋಟಗಾರಿಕಾ ಶಿಬಿರಾರ್ಥಿಗಳಿಂದ ಮಹಿಳಾ ದಿನಾಚರಣೆ

ಮಹಿಳಾ ಸಬಲೀಕರಣಕ್ಕೆ ಶಿಕ್ಷಣವೇ ಅಡಿಪಾಯ

ಕೋಲಾರ: ನಾರಿಯೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ಣುಡಿಯಂತೆ ಶಿಕ್ಷಣದಿಂದ ಮಾತ್ರ ಮಹಿಳೆಯರ ಸಬಲೀಕರಣ ಸಾಧ್ಯ ಎಂದು ತೋಟಗಾರಿಕಾ ಮಹಾವಿದ್ಯಾಲಯ ಕೋಲಾರದ ಕೃಷಿ ವಿಸ್ತರಣಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಜಯಲಕ್ಷ್ಮಿ ಬಿ. ಪವಾರ ಅಭಿಪ್ರಾಯಪಟ್ಟರು.

ತೋಟಗಾರಿಕಾ ಮಹಾವಿದ್ಯಾಲಯ ಕೋಲಾರದ ವತಿಯಿಂದ ತಾಲೂಕಿನ ಉಪ್ಪುಕುಂಟೆ ಗ್ರಾಮದಲ್ಲಿ ಗ್ರಾಮೀಣ ತೋಟಗಾರಿಕಾ ಕಾರ್ಯಾನುಭವ ಶಿಬಿರದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ ಕೋಲಾರದ ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಆಯೋಜಿಸ ಲಾದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಈ ಆಧುನಿಕ ಯುಗದಲ್ಲಿ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆದು ಸ್ವಾವಲಂಬಿಗಳಾಗಿ ಬದುಕುವುದರಿಂದ ಸಮಾನಹಕ್ಕು, ಅವಕಾಶ ಹಾಗೂ ಗೌರವ ಪಡೆಯುವುದರ ಜೊತೆಗೆ ದೇಶದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆ ತರಬಹುದಾಗಿದೆ ಎಂದರು.

ತೋಟಗಾರಿಕಾ ಮಹಾವಿದ್ಯಾಲಯ ಕೋಲಾರದ ಕೀಟಶಾಸ್ತ್ರದ ಸಹ-ಪ್ರಾಧ್ಯಾಪಕರಾದ ಡಾ. ಗಂಗಾಧರ ನರಬೆಂಚಿ ಯವರು ಮಾತನಾಡಿ, ದೇಶದ ಹಲವು ಕ್ಷೇತ್ರಗಳಲ್ಲಿ ಮಹಿಳೆಯ ಪಾತ್ರ ಅವಿಸ್ಮರಣೀಯವಾಗಿದ್ದು, ಕುಟುಂಬ ನಿರ್ವಹಣೆಯಷ್ಟೇಯಲ್ಲದೆ ದೇಶದ ಅಭಿವೃದ್ಧಿಯಲ್ಲೂ ಮಹಿಳೆಯ ಪಾಲು ಗಮನಾರ್ಹ ಎಂದರು.

ತೋಟಗಾರಿಕಾ ಮಹಾವಿದ್ಯಾಲಯ ಕೋಲಾ ರದ ಕೃಷಿ ಹವಾಮಾನ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಗದೀಶ ನಾಯ್ಕ ರವರು ಮಾತನಾಡಿ, ಸೃಜನಶೀಲತೆ, ಕೌಶಲ್ಯ ಮತ್ತು ಉತ್ಸಾಹಕ್ಕೆ ಮಹಿಳೆಗೆ ಸರಿಸಾಟಿ ಯಾರಿಲ್ಲ ಎಂದರು. ಕಾರ್ಯಕ್ರಮದ ಪ್ರಯುಕ್ತ ರಂಗೋಲಿ ಸ್ಪರ್ಧೆ, ಮ್ಯೂಸಿಕಲ್ ಚೇರ್ ಇನ್ನಿತರ ಸ್ಪರ್ಧೆ ಹಮ್ಮಿಕೊಳ್ಳಲಾಗಿದ್ದು, ಉಪ್ಪುಕುಂಟೆ ಗ್ರಾಮದ ಮಹಿಳೆಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತಂದರು. ಮಕ್ಕಳು ಓಬವ್ವ, ಸಾವಿತ್ರಿ ಬಾ ಫುಲೆ, ಚೆನ್ನಮ್ಮ ಇನ್ನಿತರ ಮಹನೀಯ ಮಹಿಳೆಯರ ವಸ್ತ್ರ ಧರಿಸಿ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಉರಗಲಿ ಗ್ರಾಮಪಂಚಾಯಿತಿ ಕಾರ್ಯದರ್ಶಿ ವೇದಾವತಿ ಮತ್ತು ಮುನಿರತ್ನ ಭಾಗವಹಿಸಿದ್ದರು.



ಯುಗಾದಿಗೆ ಗಾಂಧಿನಗರದಲ್ಲಿ ರೇಣುಕಾ ಯಲ್ಲಮ್ಮ ಕರಗ

ಕೋಲಾರ: ಇಲ್ಲಿನ ಗಾಂಧಿನಗರದ ರೇಣುಕಾ ಯಲ್ಲಮ್ಮ ದೇವಾಲಯದಲ್ಲಿ ಯುಗಾದಿ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಕರಗ ಮಹೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಕರಗ ಮಹೋತ್ಸವವನ್ನು ಕೋಲಾರ ಜಿಲ್ಲೆಯಾದ್ಯಂತ ಆಚರಿಸಲಾಗುತ್ತಿದ್ದು, ಗಾಂಧಿನಗರ ಕರಗ ಮಹೋತ್ಸವ ಯುಗಾದಿಯಂದು ಆಚರಿಸುವ ಸಂಪ್ರದಾಯ ಹೊಂದಿದ್ದು, ಆನಂತರ ಚೈತ್ರ ಹುಣ್ಣಿಮೆಯಿಂದ ಆರಂಭವಾಗಿ ವಿವಿಧ ಗ್ರಾಮಗಳಲ್ಲಿ ಸಾಲಾಗಿ ಕರಗ ಮಹೋತ್ಸವ ಜರುಗುತ್ತದೆ.

ಕರಗ ಮಹೋತ್ಸವ ಅಂಗವಾಗಿ ಗಾಂಧಿನಗರ ಭಾಗದ ರೇಣುಕಾ ಯಲ್ಲಮ್ಮ ದೇವಾಲಯ ಸೇರಿದಂತೆ ಎಲ್ಲಾ ದೇವಾಲಯಗಳನ್ನು ಬಣ್ಣದ ದೀಪಗಳಿಂದ ಅಲಂಕರಿಸಲಾಗಿತ್ತು. ಯುಗಾದಿ ರಾತ್ರಿ ವಾದ್ಯಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಮಧ್ಯರಾತ್ರಿ ಕರಗ ಪೂಜಾರಿ ಬಂಗಾರಪೇಟೆ ಚರಣ್ ಈ ಬಾರಿ ಕರಗ ಹೊತ್ತು ದೇವಾಲಯ ಸುತ್ತಿ ನಂತರ ಗಾಂಧಿನಗರ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಭೇಟಿ ಕೊಟ್ಟಿತು. ವಸ್ತೊಡಕು ದಿನ ಮಧ್ಯಾಹ್ನದ ವೇಳೆಗೆ ಕರಗ ಅಗ್ನಿಕುಂಡ ಪ್ರವೇಶ ಏರ್ಪಡಿಸಲಾಗಿತ್ತು. ಕರಗ ಮಹೋತ್ಸವ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪಲ್ಲಕ್ಕಿ ಉತ್ಸವಗಳನ್ನು ಹಮ್ಮಿಕೊಳ್ಳಲಾಗಿತ್ತು. ಶಾಸಕ ಕೊತ್ತೂರು ಮಂಜುನಾಥ್, ಎಂಎಲ್‌ಸಿ ಅನಿಲ್‌ಕುಮಾರ್, ಸಿಎಂಆರ್ ಶ್ರೀನಾಥ್, ಮಾಜಿ ಶಾಸಕ ವೈ. ಸಂಪಂಗಿ, ಜಿಲ್ಲಾ ಕಾಂಗ್ರೆಸ್ ಎಸ್ಸಿಘಟಕದ ಅಧ್ಯಕ್ಷ ಕೆ.ಜಯದೇವ್, ನಗರಸಭಾ ಮಾಜಿ ಸದಸ್ಯ ಪ್ರವೀಣ್ ಗೌಡ, ವಿ.ಕೆ.ರಾಜೇಶ್, ನಿವೃತ್ತ ಇಂಜಿನಿಯರ್ ಮಂಜುನಾಥ್, ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್, ಮುನಿ ವೆಂಕಟಯಾದವ್, ಮಲ್ಲಿವಿನಯ್, ಅನಂತಕೀರ್ತಿ, ದಲಿತ ನಾರಾಯಣಸ್ವಾಮಿ ಮತ್ತಿತರರು ಇದ್ದರು.



ಕೋಲಾರ ನಗರದ ಗಾಂಧಿನಗರದಲ್ಲಿ ರೇಣುಕಾ ಯಲ್ಲಮ್ಮ ಕರಗ ಮಹೋತ್ಸವವನ್ನು ಕರಗದ ಪೂಜಾರಿ ಚರಣ್ ಹೊತ್ತಿದ್ದು,ಅಪಾರ ಸಂಖ್ಯೆಯಲ್ಲಿ ಜನ ವೀಕ್ಷಿಸಿದರು.

ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರಿಂದ ಸಾಧನೆ

ಕೋಲಾರ: ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿದ್ದು, ಇಂದು ಶೈಕ್ಷಣಿಕವಾಗಿಯೂ ಸಾಧಕಿಯಾಗಿ ಹೊರಹೊಮ್ಮಿದ್ದಾಳೆ ಎಂದು ಕೋಲಾರ ತಾಲೂಕಿನ ತಹಸೀಲ್ದಾರ್ ನಯನ ತಿಳಿಸಿದರು.



ತಾಲೂಕಿನ ನರಸಾಪುರ ಗ್ರಾಮದ ಪಂಚಾಯ್ತಿಯಲ್ಲಿ ನರಸಾಪುರ ಗ್ರಾಮ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಭಾಗವಹಿಸಿ ತಮ್ಮ ಶಕ್ತಿ ಪ್ರದರ್ಶನವನ್ನು ಮಾಡಬೇಕು.

ಮಹಿಳೆಯರು ಎಂದರೆ ಕೇವಲ ದುಡಿಮೆಯ ಯಂತ್ರವಲ್ಲ ಆಕೆಯೂ ಸಹ ಒಂದು ಕುಟುಂಬದ ಮತ್ತು ಒಂದು ಸಮಾಜದ ಏಳಿಗೆಗಾಗಿ ಕ್ಷಮಿಸುವ ತಾಯಿ ಎಂದರೆ ತಪ್ಪಾಗಲಾರದು. ಸೃಷ್ಟಿಯ ಮೂಲವೇ ಹೆಣ್ಣು ಹೆಣ್ಣಿಲ್ಲದೆ ಸೃಷ್ಟಿ ಇಲ್ಲ ಸೃಷ್ಟಿ ಇಲ್ಲದೆ ಜಗತ್ತು ಇಲ್ಲ, ಪ್ರತಿಯೊಬ್ಬರು ಹೆಣ್ಣಿನ ಮಹತ್ವವನ್ನು ತಿಳಿದುಕೊಂಡು ಅವರನ್ನು ಪೂಜಿಸಬೇಕು ಮತ್ತು ಗೌರವಿಸಬೇಕು ಎಂದರು.

ಕೋಲಾರ ಜಿಲ್ಲಾ ಕುಷ್ಟರೋಗ ನಿವಾರಣಾ ವಿಭಾಗದ ನಿವೃತ್ತ ಅಧಿಕಾರಿ ಡಾ.ಎನ್.ಸಿ. ನಾರಾಯಣಸ್ವಾಮಿ , ನರಸಾಪುರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ, ಪಿಡಿಒ ಮುನಿರಾಜು ಗ್ರೂಪ್ ಡಿ ಸಿಬ್ಬಂದಿ ವರ್ಗದವರನ್ನು ಸನ್ಮಾನಿಸಲಾಯಿತು. ನರಸಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ, ವಿದ್ಯಾಶ್ರೀ, ಡಾ. ಫಾತಿಮಾ, ವೇಮಗಲ್ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರವಿಕಿರಣ್, ಬೆಳ್ಳೂರಿನ ಬಿಕೆಎಸ್ ರಾಮಮಣಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಛಾಯಾದೇವಿ, ನರಸಾಪುರ ಪಂಚಾಯಿತಿ ಪಿಡಿಒ ಮುನಿರಾಜು, ನರಸಾಪುರ ಕಂದಾಯ ವೃತ ನಿರೀಕ್ಷಕ ಲೋಕೇಶ್, ಆರೋಗ್ಯ ನಿರೀಕ್ಷಕ ರಾಘವೇಂದ್ರ, ಸಿಬ್ಬಂದಿ ವರ್ಗ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ರೈತರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ತೊಂದರೆ: ಶಾಸಕ

ಕೋಲಾರ: ಅರಣ್ಯ ಇಲಾಖೆ ಸೇರಿದ ಜಮೀನು ವಶಪಡಿಸಿಕೊಳ್ಳಲು ನಮ್ಮ ವಿರೋದಿಲ್ಲ ಅದರೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಹಾಗುತ್ತಿದೆ ಎಂದು ಶಾಸಕ ಕೊತ್ತೂರು ಮಂಜುನಾಥ್ ವಿಧಾನಸಭೆ ಕಲಾಪದಲ್ಲಿ ಧ್ವನಿ ಎತ್ತಿ ಅರಣ್ಯ ಇಲಾಖೆ ಮಂತ್ರಿಗಳ ಗಮನ ಸೆಳೆದರು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನಲ್ಲಿ ರೈತರಿಂದ ಅರಣ್ಯ ಇಲಾಖೆ ಒತ್ತುವರಿ ತೆರವುಗೊಳಿಸಿ ವಶಕ್ಕೆ ಪಡೆದುಕೊಳ್ಳಲಾಗಿದೆ.

ಅದರೆ ರೈತರು ನ್ಯಾಯಾಲಯದ ಮೊರೆ ಹೋಗಿದ್ದು ನ್ಯಾಯಾ ಲಯದಿಂದ ರೈತರ ಪರವಾಗಿ ಯಥಾಸ್ಥಿತಿ ಕಾಯ್ದುಗೊಳ್ಳಬೇಕು ಎಂದು ಆದೇಶವಿದೆ ಇದನ್ನು ಇತ್ತೀಚೆಗೆ ಉಸ್ತುವಾರಿ ಸಚಿವ ಭೈರತಿ ಸುರೇಶ್ ಅವರ ನೇತೃತ್ವದಲ್ಲಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲೂ ಪ್ರಸ್ತಾಪಿಸಲಾಗಿದೆ ಎಂದು ವಿವರಿಸಿದರು.

ಈ ಬಗ್ಗೆ ಡಿಎಫ್ ಅವರಿಗೆ ತಿಳಿಸಿದ ಕೂಡಲೇ ಕೆಡಿಪಿ ಸಭೆಯಲ್ಲಿ ಪ್ರತಿಕ್ರಿಯೆ ನೀಡಿದ ಅವರು ನ್ಯಾಯಾಲಯದಿಂದ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶವಿದೆ ಹೌದು ಆದರೆ ಇಂದು ಆ ಜಮೀನಿನಲ್ಲಿ ಅರಣ್ಯ ಇಲಾಖೆಯೆ ಸ್ವಾದಿನದಲ್ಲಿದ್ದೇವೆ ಎನ್ನುತ್ತಾರೆ ಎಂದು ಸ್ಪಷ್ಟಪಡಿಸಿದರು.

ಅರಣ್ಯ ಇಲಾಖೆ ಮಂತ್ರಿ ಈಶ್ವರ್ ಬೀಮಣ್ಣ ಖಂಡ್ರೆ ಅವರು ಕೋಲಾರ ಜಿಲ್ಲೆಯೊಂದರದ್ದೆ ಹೈಕೋರ್ಟಿನಲ್ಲಿ 150 ಪ್ರಕರಣಗಳಿವೆ ಉಳಿದ 50 ಪ್ರಕರಣ ಸ್ಥಳಿಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿವೆ.

ಆದರೆ ನ್ಯಾಯಲಯದ ಆದೇಶವನ್ನು ಪ್ರತಿಯೊಬ್ಬರು ಪಾಲನೇ ಮಾಡಬೇಕಾಗಿದೆ ಹಾಗಾಗಿ ಅಧಿಕಾರಿಗಳಿಗೆ ಕಟ್ಟು ನಿಟ್ಟಾಗಿ ನ್ಯಾಯಾಲದ ಅದೇಶವನ್ನು ಪಾಲನೇಮಾಡಬೇಕು ಎಂದು ಸೂಚಿಸುವುದಾಗಿ ಭರವಸೆ ನೀಡಿದರು.

ಜನಪ್ರತಿನಿಧಿಗಳ ಬೇಡಿಕೆಯಂತೆ ಇಲಾಖೆ ಹಿರಿಯ ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಮಂತ್ರಿ ಸೇರಿದಂತೆ ಸ್ಥಳಿಯ ಶಾಸಕರ ಜೊತೆಗೆ ಸಭೆ ಮಾಡಿ ಚರ್ಚಿಸಿ ತೀರ್ಮಾನ ಕೈಗೊಂಡು ಶಂಕೆಗಳನ್ನು ದೂರ ಮಾಡವುದಾಗಿ ಪ್ರತಿಕ್ರಿಯೆ ನೀಡಿದರು.

ಶಿಕ್ಷಕ ಆಂಜನೇಯಗೌಡ ಬೀಳ್ಕೊಡುಗೆ ಸಮಾರಂಭದಲ್ಲಿ ಬಿಇಒ ಶಶಿಕಲಾ

ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸಿ

ಬಂಗಾರಪೇಟೆ: ಮಕ್ಕಳಿಗೆ ಪೋಷಕರು ಟಿವಿ ಮೊಬೈಲ್‌ಗಳನ್ನು ನೀಡಬೇಡಿ, ಮೊಬೈಲ್‌ನಿಂದ ತಾಯಿ ಮಗುವಿನ ಸಂಬಂಧ ಅಳಿಸಿರುವ ನಿದರ್ಶನಗಳಿವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೆ.ಶಶಿಕಲಾ ಹೇಳಿದರು.



ತಾಲೂಕಿನ ಮಾರುತಿ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಾರುತಿ ಯುವಕರ ಬಳಗ ಮತ್ತು ಗ್ರಾಮಸ್ಥರು ಶಿಕ್ಷಕಎಂ.ಆರ್.ಆಂಜನೇಯಗೌಡವರ್ಗಾವಣೆಗೊಂಡ ಕಾರಣ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಟಿವಿ ಮೊಬೈಲ್‌ಗಳನ್ನು ಬಿಟ್ಟು ಅವರ ಗಮನವನ್ನು ಪೋಷಕರು ಬೇರೆ ಕಡೆ ಸೆಳೆಯಬೇಕು ಹಳೆಯ ಆಟಗಳನ್ನು ಕಲಿಸಬೇಕು, ಮಕ್ಕಳ ಬಗ್ಗೆ ಕಾಳಜಿ ವಹಿಸಬೇಕು. ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿ ರುವ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಬೇಕು, ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕೆಂದರು, ಜಿಲ್ಲಾ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ ಮಾತನಾಡಿ ಒಗ್ಗಟ್ಟು ಇರುವ ಕಡೆ ಅಭಿವೃದ್ಧಿ ಸಾಧ್ಯ, ಒಗ್ಗಟ್ಟಿನಿಂದ ಏನು ಬೇಕಾ ದರೂ ಸಾಧಿಸಬಹುದು, 20 ಪುಸ್ತಕದಿಂದ ಪ್ರಾರಂಭಿಸಿದ ಸಮಾಜ ಸೇವೆ ಇಂದು ಸಾವಿರಾರು ಮಕ್ಕಳಿಗೆ ದಾರಿದೀಪವಾಗಿದೆ ಎಂದರು. ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಆರ್.ಆಂಜನೇಯಗೌಡ ಸನ್ಮಾನ ಸ್ವೀಕರಿಸಿ ಮಾತನಾಡಿದ ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳ ಹಾವಳಿ ಹೆಚ್ಚಾದ್ದರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಗೆ ಕಾರಣವಾಗಿದೆ ಎಂದರು. ವರ್ಗಾವಣೆಗೊಂಡ ಶಿಕ್ಷಕರಾದ ಎಂ.ಆರ್. ಆಂಜನೇಯ ಗೌಡ ಹಾಗೂ ಅವರ ಧರ್ಮಪತ್ನಿ ಶಿಕ್ಷಕಿ ನಾಗರತ್ನ ರವರನ್ನು ಆತ್ಮೀಯವಾಗಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಶಿಕ್ಷಕರ ಮುಖಂಡ ಸಂಜೀವಪ್ಪ, ಗನ್ನೇರಹಳ್ಳಿ ಶ್ರೀನಿವಾಸ್, ನಿವೃತ್ತ ಶಿಕ್ಷಕರಾದ ಬಿ.ಎಂ.ಚಂದ್ರಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ರಾಮಚಂದ್ರಪ್ಪ, ಟಿ.ಆರ್. ಮುನಿನಾರಾಯಣಪ್ಪ ಹಾಜರಿದ್ದರು.

ಮುನೇಶ್ವರನಿಗೆ ಸಸ್ಯಾಹಾರಿಗಳ ನಮನ, ವರ್ಷ ತೊಡಕಿಗೆ ಕುರಿ, ಕೋಳಿ ಬಲಿ

ಭೂತಮ್ಮನಿಗೆ ಯುಗಾದಿ ವಿಶೇಷ ಪೂಜೆ

ಕೋಲಾರ: ಸಾಮಾನ್ಯವಾಗಿ ಹಬ್ಬಹರಿದಿನಗಳಲ್ಲಿ ಎಲ್ಲೆಡೆ ದೇವರಿಗೆ ಪೂಜೆ ಸಲ್ಲಿಸುವುದು ಸಾಮಾನ್ಯ, ಆದರೆ ಕೋಲಾರದ ಗಾಂಧಿನಗರದಲ್ಲೊಂದು ಅಚ್ಚರಿ ಮೂಡಿಸುವ ಸಂಪ್ರದಾಯವಿದೆ, ಯುಗಾದಿಯ ಮಾರನೇ ದಿನ ಮಾಂಸಹಾರಿಗಳು ಭೂತಕ್ಕೆ ಪೂಜೆ ಸಲ್ಲಿಸುವ ವಿಶಿಷ್ಟ ಆಚರಣೆ ನಡೆಸಿದರೆ ಸಸ್ಯಹಾರಿಗಳು ಮಾತ್ರ ಇಂದೇ ಭೂತಮ್ಮ ಹಾಗೂ ಮುನೇಶ್ವರನಿಗೆ ಪುರಿ ಚೆಲ್ಲಿ ಪೂಜೆ ಸಲ್ಲಿಸಿದರು.



ಭೂತಮ್ಮ ದೇವಿ ಹಾಗೂ ಮುನೇಶ್ವರನಿಗೆ ಪೂಜೆ ಸಲ್ಲಿಸುವ ಸಂಪ್ರದಾಯ ಅನಾದಿಕಾಲದಿಂದಲೂ ಬಂದಿದ್ದು, ಯುಗಾದಿ ಮಾರನೇ ದಿನ ಮಾಂಸಹಾರಿಗಳು ಭೂತಮ್ಮನಿಗೆ ಪೂಜೆ ಸಲ್ಲಿಸಿ ನಂತರ ಮಾಂಸಹಾರ ಸೇವಿಸುತ್ತಿದ್ದರು. ಆದರೆ ಈ ಬಾರಿ ಕೆಲವು ಮಂದಿ ಶುಕ್ರವಾರವೇ ವರ್ಷತೊಡಕು ಮಾಡಿದ್ದು, ಮತ್ತೆ ಕೆಲವರು ಭಾನುವಾರ ಆಚರಿಸುತ್ತಿದ್ದಾರೆ.

ಹಾಗೆಯೇ ನಗರದ ವೈಶ್ಯ ಸಮುದಾಯ ಹಾಗೂ ಸಸ್ಯಹಾರಿಗಳು ಯುಗಾದಿ ಮಾರನೇ ದಿನದಂದು ಭೂತಮ್ಮನಿಗೆ ಪೂಜೆ ಸಲ್ಲಿಸಿ ಪಕ್ಕದಲ್ಲೇ ಇದ್ದ ಮುನೇಶ್ವರನಿಗೆ ಪುರಿ ಚೆಲ್ಲಿ ಭಕ್ತಿ ತೋರುವ ಸಂಪ್ರದಾಯ ನಡೆಸಿದರು.

ಯುಗಾದಿಯ ನಂತರದ ದಿನ ಮಾಂಸದೂಟಕ್ಕೆ ಪ್ರಾಶಸ್ತ್ಯವೆಂಬಂತೆ ಜನ ಆಚರಿಸಿಕೊಂಡು ಬಂದಿರುವುದು ವಿಶೇಷವಾಗಿದ್ದು, ಮಾಂಸದೂಟದ ವರ್ಷ ತೊಡಕಿಗೆ ಮುನ್ನಾ ಗಾಂಧಿ ನಗರ ಬಡಾವಣೆಯ ಜನತೆ ಇಲ್ಲಿನ ಭೂತಮ್ಮನಿಗೆ ಪೂಜೆ ಸಲ್ಲಿಸಿದ ನಂತರವೇ ತಮ್ಮ ಮಾಂಸದೂಟದ ಅಡಿಗೆ ಮಾಡಲು ಮುಂದಾಗುತ್ತಾರೆ.

ವರ್ಷಕ್ಕೊಮ್ಮೆ ಇಲ್ಲಿ ಪೂಜೆ ಮಾಡುವುದರಿಂದ ತಮ್ಮ ಮಕ್ಕಳು ಭೂತ ಚೇಷ್ಟೆ, ತೊಂದರೆಗಳಿಂದ ದೂರವಾಗುತ್ತಾರೆ ಎಂಬುದು ಇಲ್ಲಿನ ಜನರ ಅಚಲ ನಂಬಿಕೆಯಾಗಿದೆ. ಮಾಂಸಹಾರಿಗಳು ಭೂತಮ್ಮನಿಗೆ ಕುರಿ, ಕೋಳಿ ಬಲಿ ನೀಡಿದರೆ, ಸಂಜೆ ಸಸ್ಯಹಾರಿಗಳಾದ ನಗರದ ವೈಶ್ಯ ಜನಾಂಗದವರು ಸಹಾ ಬಂದು ಮುನೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ ಪುರಿ ಚೆಲ್ಲುವ ಮೂಲಕ ವಿಶಿಷ್ಟ ರೀತಿಯಲ್ಲಿ ಪೂಜಿಸುತ್ತಾ ಬಂದಿದ್ದಾರೆ.

ನಗರದ ಪ್ರತಿ ವೈಶ್ಯ ಜನಾಂಗದ ಕುಟುಂಬದವರು ಇಲ್ಲಿಗೆ ಬರುವುದರಿಂದ ಇಲ್ಲಿ ಜಾತ್ರೆಯಂತೆ ಜನ ನೆರೆದು ಸಾಂಪ್ರದಾಯಿಕ ಪೂಜೆ ಸಲ್ಲಿಸುವ ವಾಡಿಕೆಯನ್ನು ನಾಗರೀಕತೆ ಬೆಳೆದರೂ ಮುಂದುವರೆಸಿಕೊಂಡು ಬಂದಿದ್ದಾರೆ. ಇದು ಭಾರತೀಯ ಸಂಸ್ಕೃತಿಯ ಒಂದು ಪ್ರಮುಖ ಲಕ್ಷಣವೂ ಹೌದು.

ಒಟ್ಟಾರೆ ಕೋಲಾರದ ಗಾಂಧಿನಗರದ ಜನ ಮಾಂಸದೂಟಕ್ಕೆ ಮುನ್ನಾ ಭೂತಕ್ಕ ಪೂಜೆ ಮಾಡಿದರೆ ನಗರದ ಇತರೆ ಬಡಾವಣೆಯ ಜನ ಭೂತದ ಮೇಲೆ ಪುರಿ ಚೆಲ್ಲುವ ಮೂಲಕ ಮುಂದಿನ ದಿನಗಳಲ್ಲಿ ಯಾವುದೇ ಭೂತಚೇಷ್ಟೆಗಳು ಬಾರದಂತೆ ತಡೆಯುವಂತೆ ಕೋರಿಕೆ ಮಂಡಿಸುತ್ತಾರೆ.ಇದು ಇಲ್ಲಿನ ವೈಶಿಷ್ಟ್ಯ.

ಕಿರುಸುದ್ದಿ

ರಂಜಾನ್ ಹಿನ್ನೆಲೆ ಕಾನೂನು ಸುವ್ಯವಸ್ಥೆಗೆ ಕ್ರಮ

ಚೇಳೂರು: ಶನಿವಾರ ರಂಜಾನ್ ಹಬ್ಬಗಳು ನಡೆಯಲಿದ್ದು ಶಾಂತಿ, ಸೌಹಾರ್ದತೆಯಿಂದ ಆಚರಿಸಿಕೊಳ್ಳಬೇಕು ರಂಜಾನ್ ಹಬ್ಬಗಳಲ್ಲಿ ಕಾನೂನು ಬಾಹಿರ ಕೃತ್ಯಗಳು ಮಾಡಿದರೆ ಲಾಠಿ ಏಟು ಖಚಿತ ಎಂದು ಚೇಳೂರು ಸರ್ಕಲ್ ಇನ್‌ಸ್ಪೆಕ್ಟರ್ ಎಂ.ಶ್ರೀನಿವಾಸ್ ಹೇಳಿದರು. ಅವರು ಸುದ್ದಿಗಾರರೊಂದಿಗೆ ಮಾತನಾಡಿ ಚೇಳೂರು ಜನ ಶಾಂತಿ ಸೌಹಾರ್ದತೆಗೆ ವಿಶೇಷವಾದ ಒತ್ತನ್ನು ಕೊಡುತ್ತಿರುವುದು ಶ್ಲಾಘನೀಯ ಪೊಲೀಸ್ ಇಲಾಖೆಯೊಂದಿಗೆ ಅತ್ಯುತ್ತಮವಾದ ಸಂಬಂಧವನ್ನು ಇಲ್ಲಿನ ಜನತೆ ಇಟ್ಟುಕೊಂಡಿದ್ದಾರೆ. ಈ ಎರಡು ಹಬ್ಬಗಳನ್ನು ಅತ್ಯಂತ ಶಿಸ್ತು ಬದ್ಧವಾಗಿ ಮತ್ತು ಶಾಂತಿ, ಸೌಹಾರ್ದತೆಯಿಂದ ಆಚರಿಸುವಂತೆ ವಿನಂತಿಸಿದರು. ಹಬ್ಬಗಳ ಸಮಯದಲ್ಲಿ ಜೂಜಾಟ ಮಟ್ಕಾ ಇತರೆ ಕಾನೂನುಬಾಹಿರ ಕೆಲಸಗಳು ಮಾಡಿದರೆ ಲಾಠಿ ರುಚಿ ತೋರಿಸಿ ಕಾನೂನು ಕ್ರಮ ಜರುಗಿಸಲಾಗುವುದೆಂದು ಸರ್ಕಲ್ ಇನ್‌ಸ್ಪೆಕ್ಟರ್ ಎಚ್ಚರಿಸಿದರು. ಸಭೆಯಲ್ಲಿ ಠಾಣಾ ಲೇಖಕ ನಂದೀಶ್, ಕೃಷ್ಣಪ್ಪ, ಮುಸ್ತಾಕ್, ದೇವರಾಜ್ ಪಿ.ವಿ, ಚೌಕತ್ ಉಪಸ್ಥಿತರಿದ್ದರು.

ವಾರದ ಸಂತೆ ಮೀರಿಸಿದ ಹಬ್ಬದ ಸಂತೆ

ಚೇಳೂರು: ಹಿಂದುಗಳಿಗೆ ಮುಖ್ಯವಾದ ಹೊಸ ಹಬ್ಬವಾದ ಯುಗಾದಿ ಮತ್ತು ಮುಸ್ಲಿಂ ರ ರಂಜಾನ್ ಹಬ್ಬಗಳನ್ನು ಆಚರಿಸಲು ಬುಧವಾರ-ಗುರುವಾರ ಎರಡು ದಿನಗಳ ಕಾಲ ಚೇಳೂರು ಬಸ್‌ನಿಲ್ದಾಣದ ನಾಲ್ಕು ರಸ್ತೆಗಳಲ್ಲಿ ಸಾಮಾಗ್ರಿಗಳನ್ನು ಖರೀದಿಸುತ್ತಿದ್ದರು. ಈ ವರ್ಷ ತರಕಾರಿಗಳ ಬೆಲೆಗಳಲ್ಲಿ ಇಳಿಕೆ ಕಂಡರೂ ವಿವಿಧ ರೀತಿಯ ಹೂವು ಹಣ್ಣುಗಳು ಹೆಚ್ಚಾಗಿದೆ. ಚೇಳೂರು ಪಟ್ಟಣದ ಬಸ್ ನಿಲ್ದಾಣ ಸೇರಿದಂತೆ. ವಿವಿಧ ಬಡಾವಣೆಗಳ ಬೀದಿಗಳಲ್ಲಿ ಎರಡು ದಿನಗಳಿಂದಲೇ ವ್ಯಾಪಾರದ ಭರಾಟೆ ಆರಂಭವಾದರೂ ಇಂದು ಬಸ್ ನಿಲ್ದಾಣದಲ್ಲಿ ಖರೀದಿದಾರರು ಸಾಮಾಗ್ರಿಗಳನ್ನು ಖರೀದಿಸಲು ಮುಗಿ ಬಿದ್ದಿದ್ದರು. ಚೇಳೂರು ಪಟ್ಟಣದಲ್ಲಿ ಯುಗಾದಿ-ರಂಜಾನ್ ಹಬ್ಬಗಳ ಪ್ರಯುಕ್ತ ದೂರದ ಊರುಗಳಿಂದ ತನ್ನ ಸ್ವಗ್ರಾಮಗಳಿಗೆ ಬರುವ ಹಾಗೂ ಹೋಗುವ ಜನತೆ ಬಸ್ ನಿಲ್ದಾಣದಲ್ಲಿ ಹಾಗೂ ಎಂ.ಜಿ. ವೃತ್ತದಲ್ಲಿ ಹಣ್ಣು ಹೂ ತರಕಾರಿಗಳನ್ನು ಖರೀದಿಸುತ್ತಿದ್ದರು.

ಪತ್ರಕರ್ತರ ನೈತಿಕತೆಗೆ ಡಿವಿಜಿ ಆದರ್ಶಗಳೇ ಪ್ರೇರಣೆ

ಶಿಡ್ಲಘಟ್ಟ: ಕನ್ನಡ ಸಾಹಿತ್ಯ, ಸಮಾಜ ಸೇವೆ ಹಾಗೂ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ ಮಹಾನ್ ಚಿಂತಕರಾದ ದಿವಂಗತ ಡಿ.ವಿ. ಗುಂಡಪ್ಪ ಅವರ ಜನ್ಮದಿನಾಚರಣೆಯನ್ನು ಈ ದಿವಸ ಶಿಡ್ಲಘಟ್ಟ ನಗರದಲ್ಲಿ ಗೌರವಪೂರ್ವಕವಾಗಿ ಆಚರಿಸಲಾಯಿತು.

ನಗರದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಕಾರ್ಯಕ್ರಮಕ್ಕೆ ಸಂಘದ ಅಧ್ಯಕ್ಷ ಎ. ಶಶಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಡಿ.ವಿ.ಗುಂಡಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಅವರ ಸೇವೆಗಳನ್ನು ಸ್ಮರಿಸಲಾಯಿತು. ಅಧ್ಯಕ್ಷ ಶಶಿಕುಮಾರ್ ಅವರು, ಡಿ.ವಿ.ಗುಂಡಪ್ಪ ಅವರು ಕನ್ನಡ ಸಾಹಿತ್ಯ ಲೋಕದ ದಿಗ್ಗಜರಾಗಿದ್ದು, ಸಮಾಜಮುಖಿ ಚಿಂತನೆಗಳ ಮೂಲಕ ಜನಜಾಗೃತಿ ಮೂಡಿಸಿದ ಮಹಾನ್ ವ್ಯಕ್ತಿತ್ವ ಎಂದು ಹೇಳಿದರು.ಪತ್ರಿಕೋದ್ಯಮ ಕ್ಷೇತ್ರದಲ್ಲಿ ನೈತಿಕತೆ, ಪ್ರಾಮಾಣಿಕತೆ ಮತ್ತು ಜವಾಬ್ದಾರಿತನವನ್ನು ಉಳಿಸಿಕೊಳ್ಳುವುದು ಅತ್ಯಂತ ಅಗತ್ಯವೆಂಬ ಸಂದೇಶವನ್ನು ಡಿವಿಜಿ ತಮ್ಮ ಜೀವನಾಚರಣೆಯ ಮೂಲಕ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು. ಉಪಾಧ್ಯಕ್ಷ ಜಗದೀಶ್ ಬಾಬು, ಕೆ.ವಿ. ಮುನೇಗೌಡ,ಡಿ.ಜಿ .ಮಲ್ಲಿಕಾರ್ಜುನ, ಛಾಯಾ ರಮೇಶ್, ಕರಗಪ್ಪ, ನಂದಿ ರಾಜೇಶ್, ಮಿಥುನ್, ಲೋಕೇಶ್, ನಾರಾಯಣಸ್ವಾಮಿ, ರಾಮ್‌ದಾಸ್ ಹಾಗೂ ನಯನ್ ಮಹೇಶ್ ಭಾಗವಹಿಸಿದ್ದರು.

ದಿಢೀರ್ ದಾಳಿ: ಗೃಹಬಳಕೆ ಅನಿಲ ಸಿಲಿಂಡರ್ ವಶ

ಚಿಕ್ಕಬಳ್ಳಾಪುರ: ಜಿಲ್ಲೆಯಾದ್ಯಂತ ಆಹಾರ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಜಂಟಿ ಕಾರ್ಯಾಚರಣೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆಗಾಗಿ ಅಕ್ರಮವಾಗಿ ಉಪಯೋಗಿಸುತ್ತಿದ್ದ ಹೋಟೆಲ್, ರೆಸ್ಟೋರೆಂಟ್, ಚಿಕನ್ ಸೆಂಟರ್, ಟೀ ಅಂಗಡಿಗಳಿಗೆ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ ಅಕ್ರಮವಾಗಿ ಬಳಸುತ್ತಿದ್ದ 15 ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಗಳನ್ನು ವಶಪಡಿಸಿಕೊಂಡು ಅಗತ್ಯ ವಸ್ತುಗಳ ಕಾಯ್ದೆ-1955ರಡಿ 2000 ರನ್ವಯ ಪ್ರಕರಣ ದಾಖಲಿಸಲಾಗಿರುತ್ತದೆ. ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆಗೆ ಉಪಯೋಗಿಸಬಾರದೆಂದು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ. ನಿಯಮ ಮೀರಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆಗೆ ಉಪಯೋಗಿಸುತ್ತಿದ್ದಲ್ಲಿ, ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದೆಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಾಗೇಪಲ್ಲಿ ಪಟ್ಟಣದ ಪತ್ರಕರ್ತರ ಭವನದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಯುಗಾದಿ: ಸಿಹಿ ಹಂಚಿ ಸಂಭ್ರಮ

ಬಾಗೇಪಲ್ಲಿ: ಪಟ್ಟಣದಪತ್ರಕರ್ತರಭವನದಲ್ಲಿತಾಲೂಕುಕಾರ್ಯನಿರತಪತ್ರಕರ್ತರಸಂಘದ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸಂಘದ ಅಧ್ಯಕ್ಷ ಡಿ.ಎನ್.ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪದಾಧಿಕಾರಿಗಳು ಹಾಗೂ ಪತ್ರಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಎಲ್ಲರಿಗೂ ಬೇವು-ಬೆಲ್ಲ, ಸಿಹಿ ವಿತರಿಸಿ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಸಂಘದ ಅಧ್ಯಕ್ಷರಾದ ಡಿ.ಎನ್.ಕೃಷ್ಣಾರೆಡ್ಡಿ ಅವರು, ಯುಗಾದಿ ಹಬ್ಬವು ಹೊಸ ವರ್ಷದ ಆರಂಭವನ್ನು ಸೂಚಿಸುವುದಷ್ಟೇ ಅಲ್ಲದೆ, ಜೀವನದಲ್ಲಿ ಸುಖ-ದುಃಖಗಳನ್ನು ಸಮನಾಗಿ ಸ್ವೀಕರಿಸುವ ಸಂದೇಶವನ್ನು ನೀಡುತ್ತದೆ. ಬೇವು-ಬೆಲ್ಲದಂತೆಯೇ ಜೀವನದಲ್ಲಿಯೂ ಸಿಹಿ-ಕಹಿ ಅನುಭವಗಳು ಸಹಜ. ಪತ್ರಕರ್ತರು ಸಮಾಜದ ಕನ್ನಡಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸತ್ಯವನ್ನು ನಿಷ್ಠೆಯಿಂದ ಜನರಿಗೆ ತಲುಪಿಸುವ ಮಹತ್ವದ ಹೊಣೆಗಾರಿಕೆಯನ್ನು ಹೊಂದಿದ್ದಾರೆ. ಇಂತಹ ಹಬ್ಬಗಳು ಪರಸ್ಪರ ಏಕತೆ ಮತ್ತು ಸಹೋದರತ್ವವನ್ನು ಹೆಚ್ಚಿಸುತ್ತವೆ, ಪತ್ರಕರ್ತರ ನಡುವೆ ಸಹಕಾರ, ಒಗ್ಗಟ್ಟು ಹಾಗೂ ವೃತ್ತಿಪರ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು ಅತ್ಯಂತ ಅಗತ್ಯವೆಂದು ಅವರು ತಿಳಿಸಿದರು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಬಿ.ಎಸ್. ಸುರೇಶ್, ಅಶ್ವತ್ಥನಾರಾಯಣ(ಮಣಿಕಂಠ), ಪ್ರಧಾನ ಕಾರ್ಯದರ್ಶಿ ಸೈಯದ್ ಸಿದ್ದೀಕ್, ಕಾರ್ಯದರ್ಶಿ ಎಸ್.ಎಸ್.ಶ್ರೀನಿವಾಸ್, ಪತ್ರಕರ್ತರಾದ ಅಬ್ದುಲ್ ಕರೀಂಸಾಬ್, ಬಿ.ಆರ್. ಕೃಷ್ಣಾ, ಎ.ಜಿ. ನಾರಾಯಣಸ್ವಾಮಿ ಮತ್ತಿತರರಿದ್ದರು.


ಚಿಂತಾಮಣಿ ನಗರದ ಪ್ರಭಾಕರ ಬಡಾವಣೆಯಲ್ಲಿರುವ ಪೊಲೀಸ್ ಇಲಾಖೆ ಆರ್.ಪ್ರಕಾಶ್‌ರ ನಿವಾಸದಲ್ಲಿ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಡಾ.ವರುಣ್‌ಗೌಡರನ್ನು ಸನ್ಮಾನಿಸಿದರು.

ಎಚ್‌ಪಿವಿ ವೈರಸ್ ಚುಚ್ಚುಮದ್ದು ಕಾರ್ಯಕ್ರಮಕ್ಕೆ ಡಿಸಿ ಚಾಲನೆ

ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿ



ಬೆಡ್‌ಗಳ ಸಂಖ್ಯೆ 100ಕ್ಕೆ ಏರಿಕೆ

ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮದಲ್ಲಿ 0-18 ವರ್ಷ ಮಕ್ಕಳಿಗೆ 0-6ವರ್ಷದ ಮಕ್ಕಳಿಗೆ ವರ್ಷಕ್ಕೆ ಒಂದು ಬಾರಿ ತಪಾಸಣೆ, ವರ್ಷದೊಳಗಿನ ಮಗುವಿಗೆ ವರ್ಷದಲ್ಲಿ 4 ಬಾರಿ ತಪಾಸಣೆ ಮಾಡಲಾಗಿದೆ. ಚಿಂತಾಮಣಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ 200 ಬೆಡ್ ವ್ಯವಸ್ಥೆ, ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಬೆಡ್‌ಗಳ ಸಂಖ್ಯೆ 100ಕ್ಕೆ ಹೆಚ್ಚಿಸಲಾಗಿದೆ.

ಚಿಂತಾಮಣಿ: ಕಳೆದ ವರ್ಷದಲ್ಲಿ ಜಿಲ್ಲೆಯಲ್ಲಿ 32 ತೆರೆದ ಹೃದಯ ಶಸ್ತ್ರಚಿಕಿತ್ಸೆಯನ್ನು ಟ್ರಾನ್ಸ್ ಫ್ಲಾಂಟೇಷನ್ ಮಾಡಲಾಯಿತು. ಹೊರಗಡೆ ಇದನ್ನು ಮಾಡಿಸಬೇಕಾದರೆ 5-10ಲಕ್ಷ ವೆಚ್ಚವಾಗುತ್ತದೆ ಅದನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಕಡಿಮೆ ವೆಚ್ಚದಲ್ಲಿ ಮಾಡಲಾಗುತ್ತಿದ್ದು,ಈಎಲ್ಲಾವೈದ್ಯಕೀಯಚಿಕಿತ್ಸೆಗಳನ್ನು ನೀಡಬೇಕಾದರೆ ಪೋಷಕರು ಮತ್ತು ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿರುತ್ತದೆಯೆಂದು ಡಿಎಚ್‌ಒ ಡಾ.ಮಹೇಶ್ ನುಡಿದರು.

ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಚ್ ಪಿವಿ ವೈರಸ್ ಚುಚ್ಚುಮದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಜಿ.ಪ್ರಭು ಮತ್ತು ಡಿಎಚ್‌ಒ ಡಾ.ಮಹೇಶ್ ಮತ್ತಿತ್ತರರು ನೆರವೇರಿಸಿದರು.

ಡಾ.ಮಹೇಶ್ ಮಾತನಾಡಿ 14 ಖಾಯಿಲೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಮನೆ ಬಾಗಿಲಿಗೆ ಹೋಗಿ ತಪಾಸಣೆ ಮಾಡುವುದು ಸೇರಿದಂತೆ ಅವುಗಳನ್ನು ನಿಯಂತ್ರಣದಲ್ಲಿರಿಸುವಂತಹ ಕಾರ್ಯಗಳನ್ನು ಮಾಡಲಾಗುತ್ತಿದೆ. ನಿಯಂತ್ರಣಕ್ಕೆ ಸಿಗದ ಖಾಯಿಲೆಗಳಿಗೆ ಮತ್ತು ಹೆಚ್ಚಿನ ಚಿಕಿತ್ಸೆ ಅವಶ್ಯಕವಿರುವ ಚಿಕಿತ್ಸೆಗಳಿಗೆ ತಾಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಚಿಕಿತ್ಸೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ. ತುರ್ತು ನಿಗಾ ಘಟಕದಲ್ಲಿ 50 ಬೆಡ್ ವ್ಯವಸ್ಥೆಯನ್ನು ಕಲ್ಪಿಸಲಾಗುವ ನಿಟ್ಟಿನಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ ಯೆಂದರು.

ಉನ್ನತ ಶಿಕ್ಷಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್‌ರ ಕನಸಿನ ಕೂಸಾದ 350 ಬೆಡ್ ವ್ಯವಸ್ಥೆಯ ಆಸ್ಪತ್ರೆಯನ್ನು ನಿರ್ಮಾಣ ಮಾಡುವ ಕೆಲಸ ಶೀಘ್ರವೇ ಪೂರ್ಣಗೊಳ್ಳಲಿದ್ದು ಅವರ ಚಿಂತಾಮಣಿ ನಗರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಬೇಕೆಂಬ ಕನಸು ಸಕಾರಗೊಳ್ಳಲಿದೆಯೆಂದರು. ಮೆಡಿಕಲ್ ಕಾಲೇಜು ಸ್ಥಾಪನೆಗೆ ಸಚಿವರು ಪ್ರಾಮಾಣಿಕ ಪ್ರಯತ್ನವನ್ನು ಕೈಗೊಳ್ಳುತ್ತಿದ್ದು ಇದು ಪೂರ್ಣಗೊಳ್ಳಲಿದೆಯೆಂದರು. ಸಚಿವ ಡಾ.ಎಂ.ಸಿ.ಸುಧಾಕರ್‌ರ ಹುಟ್ಟುಹಬ್ಬವಾಗಿದ್ದು ಅವರಿಗೆ ಶುಭಾಶಯಗಳನ್ನು ಕೋರಿದರು. ಕೈಗೊಳ್ಳಲಿದ್ದಾರೆಂದರು.

ತಹಸೀಲ್ದಾರ್‌ಸುದರ್ಶನ್‌ಯಾದವ್,ಪೌರಾಯುಕ್ತ ಜಿ.ಎನ್.ಚಲಪತಿ, ಟಿಹೆಚ್‌ಒ ಡಾ.ರಾಮಚಂದ್ರಾರೆಡ್ಡಿ, ಶ್ರೀನಿವಾಸರೆಡ್ಡಿ, ಡಾ.ಸಂತೋಷ್, ವೈದ್ಯರು ಸಿಬ್ಬಂದಿ ಉಪಸ್ಥಿತರಿದ್ದರು.

ಸೈಬರ್ ಸೆಂಟರ್‌ನಲ್ಲಿ ಸುಲಿಗೆ ಚೇಳೂರು ಜನರ ಆರೋಪ



ಚೇಳೂರು: ಪಟ್ಟಣ ಮತ್ತು ತಾಲೂಕು ಕಚೇರಿ ಹತ್ತಿರ ಇರುವ ಸೈಬರ್ ಸೆಂಟರ್ ಮತ್ತು ಗ್ರಾಮ-ಓನ್ ಸೇರದಂತೆ ಸಿಎಸ್‌ಸಿ ಗಳಲ್ಲಿ ಜನರಿಗೆ ಬೇಕಾದ ಜಾತಿ ಪತ್ರ, ಸಣ್ಣ ರೈತ, ಛಾಪ ಕಾಗದಗಳಿಗೆ ನಿಗದಿತ ಹಣಕ್ಕಿಂತ ಹೆಚ್ಚಾಗಿ ಹಣ ವಸೂಲಾತಿ ದಂಧೆ ಮಾಡುತ್ತಿದ್ದಾರೆ ಇವರನ್ನ ಕೇಳುವ ಅಧಿಕಾರಿಗಳು ಇಲ್ಲವಾಗಿದ್ದಾರೆ ಇವರ ಮೇಲೆ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಗಮನ ನೀಡಬೇಕೆಂದು ದಲಿತಪರ ಸಂಘಟನೆಗಳ ಪ್ರತಿನಿಧಿಗಳು ತೀವ್ರ ಆರೋಪ ಮಾಡಿದರು. ಪಟ್ಟಣದ ಸರಕಲ್ ಕಚೇರಿಯ ಆವರಣದಲ್ಲಿ ಪೊಲಿಸ್ ಇಲಾಖೆಯಿಂದ ಏರ್ಪಾಡಿಸಿದ್ದ ದಲಿತರ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದರು.

ಪಟ್ಟಣದ ಖಾಸಗಿ ಶಾಲೆಗಳಲ್ಲಿ ಹೆಚ್ಚು ಹಣಪೋಷಕರಿಂದವಸೂಲಿಮಾಡುತ್ತಿದ್ದಾರೆ ಮಕ್ಕಳನ್ನು ವ್ಯಾನಗಳಲ್ಲಿ ಕುರಿಗಳಂತೆ ತುಂಬಿಸಿಕೊಂಡು ಹೋಗುತ್ತಿದ್ದಾರೆ ಕೇಳುವ ಶಿಕ್ಷಣಾ ಇಲಾಖೆ ಅಧಿಕಾರಿಗಳಿಲ್ಲ ಚೇಳೂರು ಕಡೆ ಅಧಿಕಾರಿಗಳೇ ಬರುವುದಿಲ್ಲ ಗ್ರಾ.ಪಂ. ಮಟ್ಟದಲ್ಲಿ ಜನರಿಗೆ ಕಾನೂನು ಅರಿವು ಮೂಡಿಸಬೇಕೆಂದು ಎಂದು ಜಿಲ್ಲಾ ದಸಂಸ ಸಂಚಾಲಕ ಕಡೀಲು ವೆಂಕಟರವಣಪ್ಪ ಆರೋಪಿಸಿದರು.

ಸರಕಲ್ ಇನ್‌ಸ್ಪೆಕ್ಟರ್ ಎಂ.ಶ್ರೀನಿವಾಸ್ ಮಾತನಾಡಿ ಚೇಳೂರು ಪಾತಪಾಳ್ಯ ಠಾಣೆಗಳ ವ್ಯಾಪ್ತಿಯಲ್ಲಿ ಕಾನೂನು ಸುವ್ಯಸ್ಥೆ ಚೆನ್ನಾಗಿದೆ ಜನರು ಸಹಕಾರ ಕೊಡುತ್ತಿದ್ದಾರೆ. ಗಡಿಭಾಗದ ಚೇಳೂರು ಪ್ರಾಂತ್ಯದಲ್ಲಿ ಹೊಸಬರು ಕಾಣಿಸಿದರೆ ಅಂತಹ ವ್ಯಕ್ತಿಗಳ ಬಗ್ಗೆ ಪೋಲೀಸರಿಗೆ ಮಾಹಿತಿ ನೀಡಲು ಮನವಿ ಮಾಡಿದರು. ಸಭೆಯಲ್ಲಿ ಪಾತಪಾಳ್ಯ ಎಸ್.ಐ ಸಯ್ಯದ್ ಅನ್ಸರ್, ಎಎಸ್‌ಐ ವೆಂಕಟೇಶ್, ರಾಜು, ದಲಿತ ಪರ ಸಂಘಟನೆಗಳ ಮುಖಂಡರುಗಳಾದ ದಸಂಸ ಸಂಚಾಲಕರಾದ ಜಿ.ನರಸಿಂಹಪ್ಪ, ಬಿ. ಪಿ.ಮಂಜುನಾಥ್, ಹರೀಶ, ಅಜಾರುದ್ದೀನ್ ವೆಂಕಟೇಶ್, ಚಂದ್ರ, ಊದವಾರಪಲ್ಲಿ ಗಂಗುಲಪ್ಪ. ನಗುರ್ಲು ನರಸಿಂಹಪ್ಪ. ಇತರರು ಭಾಗವಹಿಸಿದ್ದರು.

ಸಹನೆ, ತ್ಯಾಗ, ಸಮರ್ಪಣೆ ಮಹಿಳೆಯರ ಸೊತ್ತು: ಡಾ.ರತ್ನ

ಗೌರಿಬಿದನೂರು: ಒಂದು ದೇಶ ಅಥವಾ ಕುಟುಂಬ ಅಭಿವೃದ್ಧಿ ಪಥದಲ್ಲಿ ಸಾಗಲು ಮಹಿಳೆಯರ ಸಹನೆ, ತ್ಯಾಗ, ಸಮರ್ಪಣಾ ಮನೋಭಾವನೆ ಹೆಚ್ಚು ಉಪಕಾರಿಯಾಗಿರುತ್ತೆ ಎಂದು ಮಾನಸ ಆಸ್ಪತ್ರೆಯ ವೈದ್ಯ ಡಾ.ರತ್ನಶಶಿಧರ್ ಅಭಿಪ್ರಾಯಪಟ್ಟರು. ಅವರು ನಗರದ ನ್ಯಾಷನಲ್ ಕಾಲೇಜಿನಲ್ಲಿ ನ್ಯಾಷನಲ್ ಪದವಿ ಕಾಲೇಜು, ಪದವಿ ಪೂರ್ವ ಕಾಲೇಜು, ನ್ಯಾಷನಲ್ ಪ್ರೌಢಶಾಲೆ, ಹೊಸೂರಿನ ಡಾ.ಎಚ್.ಎನ್. ಹೈಸ್ಕೂಲ್ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಶಿಕ್ಷಕಿಯರು, ಮಹಿಳಾ ಉಪನ್ಯಾಸಕರ ಸಹಯೋಗದೊಂದಿಗೆ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಇಂದು ಮಹಿಳೆಯರು ಬಾಹ್ಯಾಕಾಶ, ಸೇನೆ,ಪೊಲಿಸ್ ಇಲಾಕೆ,ಆಡಳಿತ, ಕ್ರೀಡೆ, ವೈದ್ಯಕೀಯ ಹಾಗೂ ಇನ್ನಿತರೆಯ ಎಲ್ಲಾ ರಂಗಗಳಲ್ಲೂ ಪುರುಷರಿಗೆ ಸಮಾನರಾಗಿ ಸೇವೆ ಸಲ್ಲಿಸುತ್ತಿದ್ದಾರೆ.ಮಹಿಳೆಯರಿಗೆ ಪೂಜ್ಯನೀಯ ಸ್ಥಾನವನ್ನು ಅನಾದಿಕಾಲದಿಂದಲೂ ನಮ್ಮದೇಶದಲ್ಲಿ ಜನರು ನೀಡುತ್ತಿರುವುದನ್ನು ನಾವು ಕಾಣಬಹುದು ಎಂದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಡಾ.ಗೀತಾ ಬಲರಾಂ ಮಾತನಾಡುತ್ತಾ ದೈಹಿಕವಾಗಿ ಮಹಿಳೆ,ಪುರುಷರು ಬೇರೇಯಾದರೂ ಮಾನಸಿಕವಾಗಿ ಮಹಿಳೆಯರು ಹೆಚ್ಚು ದೃಢ ಚಿತ್ತರು ಎಂದ ಅವರು ಮಹಿಳೆಯರ ಬಗ್ಗೆ ಇನ್ಫೋಸಿಸ್ ಅಧ್ಯಕ್ಷೆ ಡಾ ಸುಧಾ ನಾರಾಯಣ ಮೂರ್ತಿ ಇತಿಹಾಸ ಪುಟಗಳಲ್ಲಿನ ವಿಷಯಗಳನ್ನು ಉದಾಹರಿಸಿದರು.

ನ್ಯಾಷನಲ್ ಎಜುಕೇಷನಲ್ ಸೊಸೈಟಿ ಗೌರವ ಕಾರ್ಯದರ್ಶಿ ವೆಂಕಟಶಿವಾರೆಡ್ಡಿ ಆಶಯದಂತೆ ನಡೆದ ಈ ಕಾರ್ಯಕ್ರಮದಲ್ಲಿ ನ್ಯಾಷನಲ್ ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಶೈಲಜಾ ಸಪ್ತಗಿರಿ,ಕಾಲೇಜಿನ ಹಲವು ವಿಭಾಗಗಳ ಮಹಿಳಾ ಮುಖ್ಯಸ್ಥರು,ಮಹಿಳಾ ಉಪನ್ಯಾಸಕರು,ಮಹಿಳಾ ಶಿಕ್ಷಕ ವರ್ಗದವರು ಭಾಗವಹಿಸಿದ್ದರು.


ಮಹಿಳಾ ಶಿಕ್ಷಕಿಯರು, ಮಹಿಳಾ ಉಪನ್ಯಾಸಕರ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟನೆ.

ಪರವಾನಗಿ ಭೂಮಾಪಕರ ಮುಷ್ಕರ

ಶಿಡ್ಲಘಟ್ಟ: ರಾಜ್ಯದ ಕಂದಾಯ ಇಲಾಖೆಯ ಬೆನ್ನೆಲುಬಿನಂತೆ ಕೆಲಸ ಮಾಡುತ್ತಿರುವ ಪರವಾನಗಿ ಭೂಮಾಪಕರು ತಮ್ಮ ದಶಕಗಳ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಫೆಬ್ರವರಿ 28 ರಿಂದಲೇ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆಯ ಹಾದಿ ಹಿಡಿದಿರುವ ಇವರಿಂದಾಗಿ, ರಾಜ್ಯದ ಸಾವಿರಾರು ರೈತರ ಭೂ-ಸಂಬಂಧಿತ ಕೆಲಸಗಳು ವಿಳಂಬವಾಗುತ್ತಿದ್ದು, ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಆದಾಯ ನಷ್ಟವಾಗುವ ಭೀತಿ ಎದುರಾಗಿದೆ ಎಂದರು.ಶಿಡ್ಲಘಟ್ಟ ತಾಲೂಕಿನ ಭೂಮಾಪಕರು ಮೇಲೂರಿನ ಶಾಸಕ ಬಿ. ಎನ್. ರವಿಕುಮಾರ್ ಅವರ ಗೃಹ ಕಚೇರಿಯಲ್ಲಿ ಭೇಟಿ ನೀಡಿ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಕಳೆದ 2002 ರಿಂದಲೂ ಸೇವೆಯಲ್ಲಿರುವ ಈ ಭೂಮಾಪಕರು, ಸರ್ಕಾರದ ಬಹುತೇಕ ಎಲ್ಲ ಪ್ರಮುಖ ಯೋಜನೆಗಳನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನಾವು ಕೇವಲ ಖಾಸಗಿ ಸರ್ವೆ ಕೆಲಸಗಳಿಗಷ್ಟೇ ಸೀಮಿತವಾಗಿಲ್ಲ.11ಇ ನಕ್ಷೆ ಸಿದ್ಧಪಡಿಸುವುದು, ತತ್ಕಾಲ್ ಪೋಡಿ, ಕೆರೆ ಮತ್ತು ಕಾಲುವೆಗಳ ಅಳತೆ ಹಾಗೂ ಅಕ್ರಮ-ಸಕ್ರಮದಂತಹ ಜವಾಬ್ದಾರಿಯುತ ಸರ್ಕಾರಿ ಕೆಲಸಗಳನ್ನು ನಿರಂತರವಾಗಿ ಮಾಡುತ್ತಿದ್ದೇವೆ. ಆದರೆ, ಇಷ್ಟೆಲ್ಲಾ ಕೆಲಸ ಮಾಡಿದರೂ ನಮಗೆ ಕನಿಷ್ಠ ವೇತನವಾಗಲಿ ಅಥವಾ ಸೇವಾ ಭದ್ರತೆಯಾಗಲಿ ಇಲ್ಲದಿರುವುದು ಶೋಚನೀಯ ಎಂದು ಪರವಾನಿಗೆ ಭೂಮಾಪನ ತಾಲೂಕು ಅಧ್ಯಕ್ಷ ಬಿಟಿ ವೆಂಕಟೇಶ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಇವರ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದ್ದಾರೆ. ಈಗಾಗಲೇ ರಾಜ್ಯದ ವಿವಿಧ ಶಾಸಕರಿಗೆ ಮನವಿ ಸಲ್ಲಿಸಿರುವ ಸಂಘವು, ನ್ಯಾಯ ಸಿಗುವವರೆಗೂ ಮುಷ್ಕರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದೆ. ಪರವಾನಿಗೆ ಭೂಮಾಪನ ತಾಲೂಕು ಅಧ್ಯಕ್ಷ ಬಿಟಿ ವೆಂಕಟೇಶ್, ಶಿವರಾಮರೆಡ್ಡಿ, ದ್ವಾರಕೇಶ್, ರವಿ, ನಾಗರಾಜ್, ವೆಂಕಟೇಶ್, ನಾರಾಯಣಪ್ಪ, ಹರಿಲಾಲ್ ನಾಯಕ್, ಶ್ರೀನಾಥ್, ಮಂಜುಳಾ,ಚಂದ್ರಶೇಖರ್, ತಾದೂರು ರಘು ಇತರರಿದ್ದರು.

ತಾರತಮ್ಯವಿಲ್ಲದೆ ಸರ್ಕಾರದಿಂದ ಅನುದಾನ: ಶಾಸಕ

ಶಿಡ್ಲಘಟ್ಟ: ಸಂವಿಧಾನದ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ನೀಡಿರುವ ಸಂವಿಧಾನದಲ್ಲಿ ಈ ಕ್ಷೇತ್ರಕ್ಕೆ ರಾಜ್ಯ ಸರ್ಕಾರದಿಂದ ಅನುದಾನಗಳನ್ನು ತರುತ್ತಿದ್ದೇನೆ ಎಂದು ಶಾಸಕ ಬಿ.ಎನ್.ರವಿಕುಮಾರ್ ತಿಳಿಸಿದರು. ತಮ್ಮ ಸ್ವಗೃಹ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದರು. ಯಾವುದೇ ರೀತಿ ತಾರತಮ್ಯವಿಲ್ಲದೆ ನಮ್ಮ ಕ್ಷೇತ್ರಕ್ಕೆ ಅನುದಾನವನ್ನು ತರುತ್ತಿದ್ದೇನೆ. ಈ ಹಿಂದೆ 16 ಬಾರಿ ವಿಧಾನಸಭಾ ಕ್ಷೇತ್ರದಲ್ಲಿ ಮತದಾರು ಕಾಂಗ್ರೆಸ್ ಶಾಸಕರನ್ನು 11 ಬಾರಿ ಗಳಿಸಿ ಮತದಾನಕ್ಕೆ ಕಳಿಸಿದ್ದಾರೆ.ಆದರೆ ನಾನು ಮುಖ್ಯಮಂತ್ರಿ, ಹಾಗೂ ಸಚಿವರ ಮನವೊಲಿಸಿ, ನಮ್ಮ ಅಧಿಕಾರ ಅವಧಿಯಲ್ಲಿ ಶಾಶ್ವತವಾಗಿ ಉಳಿಯಲು ಅಂತಹ ಕೆಲಸಗಳನ್ನು ಮಾಡಬೇಕಾಗಿರುವುದರಿಂದ ಈ ಕ್ಷೇತ್ರಕ್ಕೆ ಹೆಚ್ಚು ಹೊತ್ತು ನೀಡುತ್ತಿದ್ದೇನೆ ಎಂದು ತಿಳಿಸಿದರು.



ಈಗಾಗಲೇ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಸತಿ ಸಚಿವರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಗ್ರಾಮ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರನ್ನು ಭೇಟಿ ಮಾಡಿ ನಮ್ಮ ಕ್ಷೇತ್ರಕ್ಕೆ ವಿಶೇಷವಾದ ಅನುದಾನ ನೀಡುವಂತೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು. ಕಳೆದ ಬಾರಿ ನಡೆದ ಶಿಡ್ಲಘಟ್ಟ ಚೇತ್ರದ ಬೃಹತ್ ರೇಷ್ಮೆ ಮಾರುಕಟ್ಟೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳನ್ನು ಹೆಚ್ಚಿನ ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ.

ಅದರಂತೆ ನಮ್ಮ ಕ್ಷೇತ್ರಕ್ಕೆ ಅನುದಾನ ಸಿಗುತ್ತದೆ ಎಂದು ನಂಬಿಕೆ ನಮಗೆ ಇದೆ ಎಂದರು, ಅದು ಖಂಡಿತ ಈ ಕ್ಷೇತ್ರಕ್ಕೆ ಒದಗಿಸುವ ಮೂಲಕ ಆ ಕೆಲಸಗಳಿಂದ ಸೇವೆ ಸಲ್ಲಿಸುತ್ತೇನೆ ಎಂದು ಭರವಸೆಯನ್ನು ನೀಡಿದರು. ಚೀಮುಲ್ ನಿರ್ದೇಶಕರಾದ ಉಜುಗೂರು ರಾಮಯ್ಯ, ಬಂಕಮುನಿಯಪ್ಪ, ಹಾಗೂ ಮೇಲೂರು ಮಂಜುನಾಥ್, ಡಾ.ಧನಂಜಯ್ ರೆಡ್ಡಿ, ಜೆಡಿಎಸ್ ಮುಖಂಡ ರಘು ಮತ್ತಿತರರಿದ್ದರು.

ಯುಗಾದಿ ಹಬ್ಬದ ಪ್ರಯುಕ್ತ 2 ಸಾವಿರ ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ

ಏಕಾಂಗಿಯಾಗಿ ಸ್ಪರ್ಧೆಗೆ ಸಿದ್ಧ: ರಾಮಚಂದ್ರಗೌಡ

ಶಿಡ್ಲಘಟ್ಟ: ಎತ್ತಿನ ಹೊಳೆ ನೀರು ತರಲೆಂದು ಶಾಶ್ವತ ನೀರಾವರಿ ಹೋರಾಟ ಆರಂಭವಾಗಿ 15 ವರ್ಷಗಳೇ ಕಳೆದರೂ ಇನ್ನೂ ಕೂಡ ನಮ್ಮ ಭಾಗಕ್ಕೆ ಶಾಶ್ವತ ನೀರಾವರಿ ಹರಿಯಲಿಲ್ಲ. ಹರಿಯುತ್ತಿರುವ ನೀರು ಕೂಡ ವಿಷಕಾರಿ ಆಗಿರುವುದು ಆತಂಕಕಾರಿ ಹಾಗೂ ನಮ್ಮ ದುರಂತ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ಆತಂಕ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಸೇವಾ ಸೌಧ ಕಚೇರಿ ಆವರಣದಲ್ಲಿ ಈ ದಿವಸ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಬಿಜೆಪಿ, ಟ್ರೈಲೈಫ್ ಆಸ್ಪತ್ರೆಯಿಂದ ಯುಗಾದಿ ಹಬ್ಬದ ಅಂಗವಾಗಿ ಮಹಿಳೆಯರಿಗೆ ಸೀರೆ ಅರಿಶಿಣ ಕುಂಕುಮ ಹಾಗೂ ದಿನಸಿ ಕಿಟ್ ವಿತರಿಸಿ ಮಾತನಾಡಿದರು.

ಇದೀಗ ನಮ್ಮ ಭಾಗದಲ್ಲಿ ಹರಿಯುತ್ತಿರುವ ಎಚ್‌ಎನ್ ವ್ಯಾಲಿ ಮತ್ತು ಕೆಸಿ ವ್ಯಾಲಿ ನೀರು ಕಲುಷಿತಗೊಂಡಿದ್ದು ವಿಷಕಾರಿಯಾಗಿದೆ. ಇದು ಅಂತರ್ಜಲಕ್ಕೆ ಸೇರುತ್ತಿದೆ. ಇಂದಲ್ಲ ಮುಂದೊಂದು ದಿನ ನಮಗೆ ಇದರಿಂದ ತೊಂದರೆ ಕಟ್ಟಿಟ್ಟ ಬುತ್ತಿ ಎಂದರು. ಈ ಬಗ್ಗೆ ವಿಧಾನಸೌಧ, ಸಂಸತ್ತಿನಲ್ಲಿ ನಮ್ಮ ಎನ್ಡಿಎ ಮೈತ್ರಿ ಮುಖಂಡರು ಧ್ವನಿ ಎತ್ತುತ್ತಿದ್ದಾರೆ.



ಆದರೂ ರಾಜ್ಯ ಸರಕಾರ ಕ್ರಮ ಕೈಗೊಂಡಿಲ್ಲ.

ಇದು ಇಡೀ ಬಯಲು ಸೀಮೆ ಭಾಗದ ರೈತರ, ಕೃಷಿಕರ ಭವಿಷ್ಯ, ಬದುಕಿನ ಪ್ರಶ್ನೆಯಾಗಿದೆ ಎಂದು ತಿಳಿಸಿದರು. ರಾಜ್ಯ ಸರಕಾರವು ಈ ಬಗ್ಗೆ ಎಚ್ಚೆತ್ತು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಈ ಬಯಲು ಸೀಮೆ ಭಾಗದ ರೈತರು ರಾಜ್ಯ ಸರಕಾರದ ವಿರುದ್ಧ ಬೀದಿಗೆ ಇಳಿಯುವುದರಲ್ಲಿ ಅನುಮಾನವಿಲ್ಲ ಎಂದು ಹೇಳಿದರು.

ಅವರು ಪತ್ರಕರ್ತರೊಂದಿಗೆ ಮಾತನಾಡಿ, ಸಂಸತ್ ಚುನಾವಣೆಯಲ್ಲಿ ಬಿಜೆಪಿಯು ಜೆಡಿಎಸ್ನೊಂದಿಗೆ ಮೈತ್ರಿ ಮಾಡಿಕೊಂಡಿತ್ತು. ಆದರೆ ಹಲವು ದಿನಗಳ ಹಿಂದೆ ಮಾಜಿ ಪ್ರಧಾನಿ ದೇವೇಗೌಡರು ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ನಮ್ಮ ಪಕ್ಷವು ಏಕಾಂಗಿಯಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಎದುರಿಸುವಷ್ಟು ಬಲಿಷ್ಠವಾಗಿ ಪಕ್ಷದ ಬೆಳೆದಿದೆ.ಆದರೆ ನಮ್ಮ ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ.ಅವರ ತೀರ್ಮಾನದಂತೆ ನಾವು ನಡೆದುಕೊಳ್ಳುತ್ತೇವೆ ಎಂದು ತಿಳಿಸಿದರು.ಈ ಕಾರ್ಯಕ್ರಮದಲ್ಲಿ ತಾಲೂಕು ಮಂಡಲ ಅಧ್ಯಕ್ಷ ಸೀಕಲ್ ಆನಂದೇಗೌಡ, ನಗರ ಮಂಡಲ ಅಧ್ಯಕ್ಷ ನರೇಶ್.ಮುಖಂಡರಾದ ಕಮ್ಮದಳ್ಳಿ ಸುರೇಂದ್ರ ಗೌಡ, ನಗರಸಭೆ ಮಾಜಿ ಸದಸ್ಯರು ಹಾಗೂ ಬಿಜೆಪಿ ಮುಖಂಡರು ನಾರಾಯಣಸ್ವಾಮಿ ನೂತನ ಬಿಜೆಪಿ ಯುವ ಮುಖಂಡ ದೇವರಾಜ್ ಇನ್ನು ಎಲ್ಲಾ ಘಟಕದ ಪದಾಧಿಕಾರಿಗಳು ಮುಂತಾದವರು ಭಾಗವಹಿಸಿದ್ದರು.

ಯುವಕರಲ್ಲಿ ಕ್ರೀಡೆಗಳು ಶಿಸ್ತು, ಸಹನೆ, ಒಗ್ಗಟ್ಟನ್ನು ಬೆಳೆಸುವ ಮಾಧ್ಯಮ

ಕ್ರೀಡೆಯಿಂದ ದೈಹಿಕ ಮಾನಸಿಕ ಆರೋಗ್ಯ ವೃದ್ಧಿ

ಬಾಗೇಪಲ್ಲಿ: ಯುವಕರಲ್ಲಿ ಕ್ರೀಡೆಗಳು ಶಿಸ್ತು, ಸಹನೆ ಮತ್ತು ಒಗ್ಗಟ್ಟನ್ನು ಬೆಳೆಸುವ ಮಹತ್ವದ ಮಾಧ್ಯಮವಾಗಿವೆಎಂದುಹಿಂದೂಸ್ತಾನ್‌ಬ್ರಿಗೇಡ್ ಭಾರತ ಅಧ್ಯಕ್ಷ ಡಾ.ಸಿ.ಕೆ. ಮೌಲಾಶರೀಫ್ ತಿಳಿಸಿದರು. ತಾಲೂಕಿನ ಜೂಲಪಾಳ್ಯ ಗ್ರಾಮದಲ್ಲಿ ಝೂನ್ಸಿ ಕ್ರಿಕೆಟ್ ಕ್ಲಬ್‌ನಿಂದ ಹಿರಿಯ ಕ್ರಿಕೆಟ್ ಆಟಗಾರರಾದ ಜಾನಿ ಅವರ ಸವಿನೆನಪಿಗಾಗಿ ಆಯೋಜಿಸಿದ್ದ ಜಾನಿ ಮೆಮೋರಿಯಲ್ ಕಪ್ ಸೀಜನ್ 2 ಕ್ರಿಕೆಟ್ ಟೂರ್ನಿಯ ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ವಿಜೇತ ಮತ್ತು ರನ್ನರ್‌ಅಪ್ ತಂಡಗಳಿಗೆ ಟ್ರೋಫಿ ಹಾಗೂ ಬಹುಮಾನಗಳನ್ನು ವಿತರಿಸಿ ಮಾತನಾಡಿದರು.

ಗ್ರಾಮೀಣ ಭಾಗಗಳಲ್ಲಿ ಇಂತಹ ಕ್ರೀಡಾ ಸ್ಪರ್ಧೆಗಳು ಆಯೋಜನೆಯಾಗುವುದರಿಂದ ಯುವಕರಲ್ಲಿ ಕ್ರೀಡಾ ಆಸಕ್ತಿ ಹೆಚ್ಚುವುದರ ಜೊತೆಗೆ ಹೊಸ ಪ್ರತಿಭೆಗಳು ಹೊರಹೊಮ್ಮಲು ವೇದಿಕೆ ಸಿಗುತ್ತದೆ. ಇಂದಿನ ಯುವಕರು ಕ್ರೀಡೆಗಳ ಮೂಲಕ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜತೆಗೆ ಸಮಾಜದಲ್ಲಿ ಉತ್ತಮ ನಾಗರಿಕರಾಗಬೇಕು. ಹಿರಿಯ ಕ್ರಿಕೆಟ್ ಆಟಗಾರ ಜಾನಿ ಅವರ ಸ್ಮರಣಾರ್ಥವಾಗಿ ಗ್ರಾಮದಲ್ಲೇ ಈ ರೀತಿಯ ಕ್ರಿಕೆಟ್ ಟೂರ್ನಿ ಆಯೋಜಿಸಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಕ್ರೀಡಾ ಚಟುವಟಿಕೆಗಳ ಮೂಲಕ ಯುವಕರನ್ನು ಒಗ್ಗೂಡಿಸುವಲ್ಲಿ ಸಂಘಟಕರ ಪ್ರಯತ್ನ ಗಮನಾರ್ಹವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.



ಟೂರ್ನಿಯಲ್ಲಿ ತಾಲೂಕಿನ ವಿವಿಧ ಗ್ರಾಮಗಳಿಂದ ಅನೇಕ ತಂಡಗಳು ಭಾಗವಹಿಸಿ ಕ್ರೀಡಾಭಿಮಾನಿಗಳಿಗೆ ರೋಚಕ ಪಂದ್ಯಗಳನ್ನು ನೀಡಿದವು. ಅಂತಿಮವಾಗಿ ಉತ್ತಮ ಪ್ರದರ್ಶನ ನೀಡಿದ ತಂಡಗಳು ಪ್ರಶಸ್ತಿ ಮುಡಿಗೇರಿಸಿಕೊಂಡವು. ಹಿಂದೂಸ್ತಾನ್ ಗೋಲ್ಡ್ ಕಂಪನಿಯ ಸಂಪಸ್ಥಾಪಕ ಸಿ.ಕೆ. ಮಹಮ್ಮದ್ ಷರೀಫ್, ಮುಖಂಡರಾದ ಪ್ರಶಾಂತ್, ಕೃಷ್ಣಮೂರ್ತಿ, ಕೇಶವ, ಈರಪ್ಪ ಸೇರಿದಂತೆ ಝೂನ್ಸಿ ಕ್ರಿಕೆಟ್ ಕ್ಲಬ್ ಪದಾಧಿಕಾರಿಗಳು, ಸ್ಥಳೀಯ ಮುಖಂಡರು, ಕ್ರೀಡಾಭಿಮಾನಿಗಳು, ಯುವಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.